ಹುಬ್ಬಳ್ಳಿ
ಗುರುವಾರ, 16 ಏಪ್ರಿಲ್ 2026
ಸಂಪುಟ 16, ಸಂಚಿಕೆ 22, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ನೂತನ ಸಿಎಂ ಸಾಮ್ರಾಟ್ ಬಳಿ 30 ಖಾತೆ | ೦೨
ಇಂದಿನಿಂದ 3 ದಿನ ವಿಶೇಷ ಅಧಿವೇಶನ | ೦೨
ರಾಷ್ಟ್ರೀಯ ಭೌಗೋಳಿಕ ಪಟ್ಟಿಗೆ ಯಾಣ | ೦೪

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಉತ್ತರಭಾದ್ರ

ದಿನದ ಮಾತು

ಸತ್ಯವೇ ತಾಯಿ, ಜ್ಞಾನವೇ ತಂದೆ, ಧೈರ್ಯವೇ ಸೋದರ, ದಯೆಯೇ ಸ್ನೇಹಿತ, ಕ್ಷೇಮವೇ ಮಗ.
▲ನೀತಿಸಾರ

ಕಿರುಸುದ್ದಿ

ಉಪ ಚುನಾವಣೆ ಪರಿಣಾಮ: ಕಾಂಗ್ರೆಸ್‌ನಿಂದ ಜಬ್ಬಾರ್ ವಜಾ

◆**ಬೆಂಗಳೂರು:** ದಾವಣಗೆರೆ ದಕ್ಷಿಣ ಉಪಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ್ದಾರೆಂದು ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವ ಸ್ಥಾನದಿಂದ ವಿಧಾನಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಅವರನ್ನು ವಜಾ ಮಾಡಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆದೇಶ ಹೊರಡಿಸಿದ್ದಾರೆ. ➡ಪುಟ ೪

ಸಿಎಂ ಸಿದ್ದರಾಮಯ್ಯ ಸ್ಥಾನ ಸುಭದ್ರ: ಡಾ.ಯತೀಂದ್ರ

◆**ಮೈಸೂರು:** ಶಾಸಕರ ದೆಹಲಿ ಪ್ರವಾಸಕ್ಕೂ, ಸಿಎಂ ಸ್ಥಾನ ಬದಲಾವಣೆಗೂ ಯಾವುದೇ ಸಂಬಂಧವಿಲ್ಲ, ಸರ್ಕಾರವೂ ಭದ್ರವಾಗಿದೆ. ಅದೇ ರೀತಿ ಸಿದ್ದರಾಮಯ್ಯನವರ ಸಿಎಂ ಸ್ಥಾನವೂ ಭದ್ರವಾಗಿದೆ ಎಂದು ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಹೇಳಿದರು. ➡ಪುಟ ೪

ಸಿಬಿಎಸ್‌ಇ ಫಲಿತಾಂಶ ಪ್ರಕಟ: ಶೇ.93 ವಿದ್ಯಾರ್ಥಿ ಉತ್ತೀರ್ಣ

◆ಪುಟ ೭

180 ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ!

◆ಪುಟ ೭

ಮೇ 15ರವರೆಗೂ ರಾಜ್ಯದಲ್ಲಿ ಗರಿಷ್ಠ ತಾಪಮಾನ

◆ಪುಟ ೫

ಆದಿಚುಂಚನಗಿರಿಯಲ್ಲಿ ಭೈರವೈಕ್ಯ ಮಂದಿರ ಲೋಕಾರ್ಪಣೆ
ವಿಕಸಿತ ಭಾರತ ಸಾಕಾರಕ್ಕೆ 9 ಸಂಕಲ್ಪ ಕೈಗೊಳ್ಳಿ: ಪ್ರಧಾನಿ ಕರೆ

ನವ ಸಂಕಲ್ಪಕ್ಕೆ ಸಲಹೆ





◆**ಮಂಡ್ಯ:** ವಿಕಸಿತ ಭಾರತ ಸಾಕಾರಕ್ಕಾಗಿ ದೇಶದ ಜನರು ಒಂಬತ್ತು ಸಂಕಲ್ಪಗಳನ್ನು ಮಾಡುವುದು ಅಗತ್ಯವಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪ್ರತಿಪಾದಿಸಿದರು.

ನಾಗಮಂಗಲ ತಾಲೂಕಿನ ಆದಿಚುಂಚನಗಿರಿಯಲ್ಲಿ ಶ್ರೀ ಗುರು ಭೈರವೈಕ್ಯ ಮಂದಿರ ಉದ್ಘಾಟಿಸಿದ ಬಳಿಕ ಬೃಹತ್ ವೇದಿಕೆಯಲ್ಲಿ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದ



ಮೋದಿ, ಜಗತ್ತಿನಲ್ಲಿ ಎಲ್ಲೂ ನಮ್ಮ ತರಹದ ದೊಡ್ಡ ಪರಂಪರೆ ಇಲ್ಲ. ಈ ಮಠದಲ್ಲಿ ನಿರಂತರತೆಯ ರೂಪದಲ್ಲಿ ಪರಂಪರೆ ಮುಂದುವರಿದಿದೆ. ಶಿಕ್ಷಣ ಕ್ಷೇತ್ರದಲ್ಲಿ ಸಾವಿರಾರು ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಆರೋಗ್ಯ ಕ್ಷೇತ್ರದಲ್ಲಿ ದೂರದೃಷ್ಟಿಯ ಹೆಜ್ಜೆ ಇಟ್ಟಿದ್ದಾರೆ. ಭೈರವೈಕ್ಯ ಸ್ವಾಮೀಜಿಯವರು ಕೇವಲ ಮನುಷ್ಯರನ್ನು ಉದ್ಧಾರ ಮಾಡಿಲ್ಲ, ಜೀವ ಸಂಕುಲದ ರಕ್ಷಣೆ ಮಾಡಿದ್ದಾರೆ ಎಂದು ಸ್ಮರಿಸಿದರು. ಮಂಡ್ಯದ ಜನರಿಗೆ ನೀರಿನ ಮಹತ್ವ ಗೊತ್ತಿದೆ. ನಾವು ನೀರನ್ನು ಉಳಿಸುವ ಕೆಲಸ ಮಾಡಬೇಕು. ನೀರು ನಮಗೆ ಬಹಳ ಅಮೂಲ್ಯವಾದದು. ➡ಪುಟ ೪

ನವ ಸಂಕಲ್ಪಗಳು

1. ನೀರು ಅತ್ಯಮೂಲ್ಯವಾದದ್ದು, ನೀರಿನ ಸಂರಕ್ಷಣೆ ಮಾಡಿ
2. ಧಾರ್ಮಿಕ, ಆಧ್ಯಾತ್ಮಿಕ ಕೇಂದ್ರಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಿ
3. ಪರಿಸರ ಸಂರಕ್ಷಣೆಗಾಗಿ ತಾಯಿ ಹೆಸರಿನಲ್ಲಿ ಗಿಡ ನೆಡಿ
4. ಆತ್ಮನಿರ್ಭರ ಭಾರತ ಹೆಸರಿನಲ್ಲಿ ಸ್ವದೇಶಿ ವಸ್ತುಗಳ ಉತ್ಪನ್ನಗಳಿಗೆ ಆದ್ಯತೆ
5. ರಾಸಾಯನಿಕ ಮುಕ್ತ ಕೃಷಿ ಅಳವಡಿಕೆ
6. ಯೋಗ, ಕ್ರೀಡೆ-ಫಿಟ್‌ನೆಸ್ ಮೂಲಕ ಆರೋಗ್ಯಕ್ಕೆ ಮನ್ನಣೆ ನೀಡಬೇಕು
7. ಸೇವಾ ಮನೋಭಾವ ಅಳವಡಿಸಿಕೊಳ್ಳಿ
8. ಪ್ರವಾಸೋದ್ಯಮಕ್ಕೆ ಹೆಚ್ಚಿನ ಆದ್ಯತೆ
9. ರಾಗಿ, ಮಿಲೆಟ್‌ನಂತಹ ಆಹಾರ ಉತ್ಪನ್ನಗಳನ್ನು ಬಳಸಬೇಕು

ಮೇಕೆದಾಟು, ಮಹದಾಯಿಗೆ ಅನುಮತಿ ನೀಡಿ: ಸಿಎಂ



ಮೋದಿ ಬಳಿ 18 ಬೇಡಿಕೆ ಇಟ್ಟ ಮುಖ್ಯಮಂತ್ರಿ ಸಿದ್ದರಾಮಯ್ಯ

◆**ಬೆಂಗಳೂರು:** ಮಹದಾಯಿ, ಮೇಕೆದಾಟು ಯೋಜನೆಗಳಿಗೆ ಅನುಮತಿ ಮತ್ತು ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಿ ಅನುದಾನ ನೀಡುವುದು ಸೇರಿದಂತೆ ರಾಜ್ಯದ 18 ವಿವಿಧ ಬೇಡಿಕೆಗಳಿಗೆ ಪ್ರಧಾನಿ ಮೋದಿ ಅವರಿಗೆ ಸಿಎಂ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ. ➡ಪುಟ ೪

ಯೋಗೇಶ್ ಗೌಡ ಕೊಲೆ ಪ್ರಕರಣ
ಜನಪ್ರತಿನಿಧಿಗಳ ಕೋರ್ಟ್ ತೀರ್ಪು

ವಿನಯ್ ದೋಷಿ

◆**ಬೆಂಗಳೂರು:** ರಾಜ್ಯದಲ್ಲಿ ಸಂಚಲನ ಮೂಡಿಸಿದ್ದ ಧಾರವಾಡದ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಮಾಜಿ ಸಚಿವ, ಶಾಸಕ ವಿನಯ್ ಕುಲಕರ್ಣಿ ಅಪರಾಧಿ



ಕೊಲೆಯಾದ ಯೋಗೇಶ್‌ಗೌಡ

ಎಂದು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತೀರ್ಪು ನೀಡಿದೆ.

ಕಳೆದ ಹತ್ತು ವರ್ಷಗಳಿಂದ ನಡೆದ ಸುದೀರ್ಘ ಕಾನೂನು ಹೋರಾಟವು ಬುಧವಾರ ಒಂದು ಮಹತ್ವದ ಘಟ್ಟ ತಲುಪಿದ್ದು, ಪ್ರಕರಣದ ಸುದೀರ್ಘ ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಅವರು, ಈ ಪ್ರಕರಣದಲ್ಲಿ ಒಟ್ಟು 21 ಆರೋಪಿಗಳ ಪೈಕಿ ಮಾಜಿ ಸಚಿವ ಹಾಗೂ ಹಾಲಿ ಶಾಸಕ ವಿನಯ್ ಕುಲಕರ್ಣಿ ಸೇರಿದಂತೆ 17 ಮಂದಿಯನ್ನು ದೋಷಿಗಳೆಂದು ತೀರ್ಪು ನೀಡಿದ್ದಾರೆ. ಶಿಕ್ಷೆಯ ಪ್ರಮಾಣವನ್ನು ಗುರುವಾರ(ಏ.16) ಪ್ರಕಟಿಸುವುದಾಗಿ ತಿಳಿಸಿ, ವಿಚಾರಣೆ ಮುಂದೂಡಿದ್ದಾರೆ.

21ಆರೋಪಿಗಳಲ್ಲಿ 17 ಅಪರಾಧಿಗಳು: 21 ಆರೋಪಿಗಳ ಪೈಕಿ ಇಬ್ಬರು ಮಾಫಿ ಸಾಕ್ಷಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಕೋರ್ಟ್, 19 ಆರೋಪಿಗಳನ್ನು ದೋಷಿ ಎಂದು ತೀರ್ಪು ನೀಡಿದೆ. ಎ-1 ಬಸವರಾಜ ಮುತ್ತಗಿ ಮಾಫಿ ಸಾಕ್ಷಿಯಾಗಿ ಹೇಳಿಕೆ ನೀಡಿದ್ದರೆ, ಎ-17 ಶಿವಾನಂದ ಮಾಫಿ ಸಾಕ್ಷಿಯಾದ ಬಳಿಕವೂ ಪ್ರತಿಕೂಲ ಹೇಳಿಕೆ ನೀಡಿದ್ದಾರೆ. ಹೀಗಾಗಿ ಮತ್ತೆ ಎ-17 ಆರೋಪಿಯನ್ನಾಗಿಸುವಂತೆ ಸಿಬಿಐ ಅರ್ಜಿ ಸಲ್ಲಿಸಿದೆ. ಇನ್ನು ಪ್ರಕರಣದ ಎ-20 ವಾಸುದೇವ ನಿಲೇಕಣಿ, ಎ-21 ಸೋಮಶೇಖರ ಅವರನ್ನು ಬಿಡುಗಡೆಗೆ ಕೋರ್ಟ್ ಆದೇಶಿಸಿದೆ. ➡ಪುಟ ೪

ಹತ್ಯೆ ಪ್ರಕರಣದ ಘಟನಾವಳಿಗಳು

◆ಪುಟ ೪



ಸಿಬಿಐ ತನಿಖೆಯಿಂದ ಪ್ರಕರಣದ ತಿರುವು ಬಯಲು

2019ರಲ್ಲಿ ರಾಜ್ಯ ಸರ್ಕಾರ ಈ ಪ್ರಕರಣವನ್ನು ಸಿಬಿಐಗೆ ಹಸ್ತಾಂತರಿಸಿದ ನಂತರ ತನಿಖೆಯ ದಿಕ್ಕು ಸಂಪೂರ್ಣವಾಗಿ ಬದಲಾಯಿತು. ಇದು ವಿನಯ್ ಕುಲಕರ್ಣಿ ಅವರ ನೇತೃತ್ವದಲ್ಲಿ ನಡೆದ ಸುಪಾರಿ ಕೊಲೆ ಎಂಬುದು ಸಿಬಿಐ ತನಿಖೆಯಿಂದ ಬಹಿರಂಗಗೊಂಡಿತ್ತು. ಸಿಬಿಐ ಅಧಿಕಾರಿಗಳು ತನಿಖೆ ಚುರುಕುಗೊಳಿಸಿ 2020ರ ನವೆಂಬರ್‌ನಲ್ಲಿ ವಿನಯ್ ಕುಲಕರ್ಣಿ ಅವರನ್ನು ಬಂಧಿಸಿದ್ದರು. ನಂತರ ಹಲವು ಬಾರಿ ಜಾಮೀನು ಅರ್ಜಿಗಳು ವಜಾಗೊಂಡಿದ್ದರೂ, ಅಂತಿಮವಾಗಿ ಸುಪ್ರೀಂ ಕೋರ್ಟ್‌ನಿಂದ ಷರತ್ತುಬದ್ಧ ಜಾಮೀನು ಪಡೆದು ಅವರು ಹೊರಬಂದಿದ್ದರು.

ಸಾಕ್ಷಿಗಳ ಮೇಲೆ ಪ್ರಭಾವ ಬೀರಿದ ಆರೋಪ

◆ಪುಟ ೪

ರಾಜ್ಯದಲ್ಲಿ ಹೆಚ್ಚಲಿದೆ 14 ಲೋಕಸಭಾ ಕ್ಷೇತ್ರ

◆**ಬೆಂಗಳೂರು:** ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ನಂತರ ರಾಜ್ಯದಲ್ಲಿಯೂ ಲೋಕಸಭಾ ಕ್ಷೇತ್ರಗಳ ಸಂಖ್ಯೆ ಹೆಚ್ಚಾಗಲಿದ್ದು, ಸುಮಾರು 14 ಕ್ಷೇತ್ರಗಳು ಹೆಚ್ಚಾಗಲಿವೆ ಎಂದು ಅಂದಾಜಿಸಲಾಗಿದೆ.

ಗುರುವಾರ (ಏ.16) ಪ್ರಾರಂಭವಾಗುವ ಮೂರು ದಿನಗಳ ಸಂಸತ್ ವಿಶೇಷ ಅಧಿವೇಶನದಲ್ಲಿ ತಿದ್ದುಪಡಿ ವಿಧೇಯಕ ಮಂಡನೆಯಾಗಲಿದ್ದು, ಈ ವಿಧೇಯಕದಿಂದ ಪ್ರಸ್ತುತ 543 ಸೀಟುಗಳ ಸಂಖ್ಯೆ 850ಕ್ಕೆ ಏರಿಕೆಯಾಗುವ ಸಾಧ್ಯತೆಯಿದೆ. ಅದರಂತೆ ರಾಜ್ಯದಲ್ಲಿಯೂ ಲೋಕಸಭಾ ಕೇತ್ರಗಳ ಸಂಖ್ಯೆ ಹೆಚ್ಚಾಗಲಿದ್ದು, ಪ್ರಸ್ತುತ ಇರುವ 28 ಕ್ಷೇತ್ರಗಳಿಗೆ 14 ಹೆಚ್ಚುವರಿ ಕ್ಷೇತ್ರಗಳು ಸೇರಲಿದ್ದು, ಒಟ್ಟು ಲೋಕಸಭಾ ಕ್ಷೇತ್ರಗಳ ಸಂಖ್ಯೆ 42ಕ್ಕೆ ಏರಲಿದೆ ಎನ್ನಲಾಗಿದೆ. ಜನಸಂಖ್ಯೆಯ ಆಧಾರದ ಮೇಲೆ ಈ ಪ್ರಕ್ರಿಯೆ ನಡೆಯಲಿದ್ದು, ದಕ್ಷಿಣದ ರಾಜ್ಯಗಳು ಸೀಟು ಕಳೆದುಕೊಳ್ಳುವ ಭೀತಿಯಿಂದ ತೀವ್ರ ವಿರೋಧ ವ್ಯಕ್ತಪಡಿಸುತ್ತಿವೆ. ಆದರೆ ಕೇಂದ್ರ ಸರ್ಕಾರವು ಇದನ್ನು ಅಭಿವೃದ್ಧಿ ದೃಷ್ಟಿಯಿಂದ ಸಮರ್ಥಿಸಿಕೊಳ್ಳುತ್ತಿದೆ. ➡ಪುಟ ೪

ಒಟ್ಟು ಕ್ಷೇತ್ರ 42ಕ್ಕೇರಿಕೆ



ಚರ್ಚೆಗೆ ಗ್ರಾಸವಾದ ಲೆನ್ಸ್‌ಕಾರ್ಟ್ ವಸ್ತ್ರಸಂಹಿತೆ

ಬಿಂದಿ, ಮೂಗುತಿ ಬೇಡ, ಹಿಜಾಬ್ ಧರಿಸಬಹುದು

◆**ಹೊಸದಿಲ್ಲಿ:** ಲೆನ್ಸ್‌ಕಾರ್ಟ್ ಕಂಪನಿಯ ಹೊಸ ವಸ್ತ್ರಸಂಹಿತೆ ನಿಯಮಗಳು ವಿವಾದಕ್ಕೆ ಕಾರಣವಾಗಿವೆ. ನಾಸಿಕ್‌ನ ಟಿಸಿಎಸ್ ಕಂಪನಿಯಲ್ಲಿ ಮತಾಂತರ ವಿಚಾರ ಚರ್ಚೆಯಾಗುತ್ತಿರುವ ಸಮಯದಲ್ಲೇ, ಲೆನ್ಸ್‌ಕಾರ್ಟ್ ತನ್ನ ಸಿಬ್ಬಂದಿಗೆ ಕಟ್ಟುನಿಟ್ಟಿನ ವಸ್ತ್ರಸಂಹಿತೆ ಜಾರಿ ಮಾಡಿರುವುದು ಭಾರೀ ಚರ್ಚೆಗೆ ಕಾರಣವಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವರದಿಗಳ ಪ್ರಕಾರ, ಲೆನ್ಸ್‌ಕಾರ್ಟ್ ಕಂಪನಿಯು ಉದ್ಯೋಗಿಗಳಿಗಾಗಿ ವಸ್ತ್ರ ಸಂಹಿತೆ ಜಾರಿಗೊಳಿಸಿದೆ. ಮಹಿಳಾ ಉದ್ಯೋಗಿಗಳು ಬಿಂದಿ ಇಡಬಾರದು ಎಂದು ಹೇಳಲಾಗಿದೆ. ಸಿಂಧೂರ ಇಡಲು ಅವಕಾಶ ಇದ್ದರೂ, ಅದು ಬಹಳ ಕಡಿಮೆ ಇರಬೇಕು ಮತ್ತು ಹೊರಗೆ ಕಾಣಿಸಬಾರದು ಎಂದು ಸೂಚಿಸಲಾಗಿದೆ. ಜತೆಗೆ ಕೈಗೆ ಕಟ್ಟುವ ಧಾರ್ಮಿಕ ದಾರಗಳನ್ನು ತೆಗೆದುಹಾಕಬೇಕು ಎಂದು ತಿಳಿಸಲಾಗಿದೆ. ಹಿಜಾಬ್ ಅಥವಾ ಟರ್ಬನ್ ಧರಿಸಲು ಅವಕಾಶ ನೀಡಲಾಗಿದೆ. ಆದರೆ, ಅವು ಕಪ್ಪು ಬಣ್ಣದಲ್ಲಿರಬೇಕು, ಕಂಪನಿ ಲಾಂಛನ ಮುಚ್ಚದಂತೆ ಇರಬೇಕು ಎಂದು ನಿಯಮ ಜಾರಿ ಮಾಡಲಾಗಿದೆ. ➡ಪುಟ ೪

ಜಾಲತಾಣದಲ್ಲಿ ಜನಾಕ್ರೋಶ

◆ಪುಟ ೪

ಕಿರುಸುದ್ದಿ



ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಾರ್ಡ್ ನಂಬರ್ 36 ಉಣಕಲ್ ದರದಲ್ಲಿರುವ ಒಳಚರಂಡಿ ಹಾಗೂ ರಸ್ತೆ 2 ಕೋಟಿ ರೂ. ಕಾಮಗಾರಿಗಳಿಗೆ ಶಾಸಕ ಮಹೇಶ ಟೆಂಗಿನಕಾಯಿ ಭೂಮಿಪೂಜೆ ನೆರವೇರಿಸಿ ಚಾಲನೆ ನೀಡಿದರು.



ಹುಬ್ಬಳ್ಳಿ: ಗೋಕುಲ ರಸ್ತೆಯ ನಾನಕಿ ಕನ್ವೆನ್ಷನ್ ಸಭಾಂಗಣದಲ್ಲಿ ಆರ್ಟ್ ಆಫ್ ಲಿವಿಂಗ್ ಸಂಸ್ಥೆ ವತಿಯಿಂದ ಸೋಮನಾಥ ಜ್ಯೋತಿರ್ಲಿಂಗ ಪೂಜೆ ಹಾಗೂ ದರ್ಶನ ಕಾರ್ಯಕ್ರಮ ನಡೆಯಿತು.



ಧಾರವಾಡ: ಮುರುಘಾಮಠದಲ್ಲಿ ಮೃತ್ಯುಂಜಯ ಅಪ್ಪಗಳ 138ನೇ ವರ್ಧಂತಿ ಉತ್ಸವ ಬುಧವಾರ ಜರುಗಿತು. ಶ್ರೀಗಳ ಕರ್ತೃಗದ್ದುಗೆಗೆ ಪೂಜೆ ನಡೆಯಿತು. ಶ್ರೀಮಠದ ಪೀಠಾಧ್ಯಕ್ಷ ಮಲ್ಲಿಕಾರ್ಜುನ ಶ್ರೀ ಪಲ್ಲಕ್ಕಿ ಉತ್ಸವಕ್ಕೆ ಚಾಲನೆ ನೀಡಿದರು. ಬಸವಲಿಂಗ ಶ್ರೀಗಳು, ಗುರುಸಿದ್ಧ ಶ್ರೀಗಳು, ಶ್ರೀಮಠದ ಆಡಳಿತ ಮಂಡಳಿ ಉಪಾಧ್ಯಕ್ಷ ನಾಗರಾಜ ಪಟ್ಟಣಶೆಟ್ಟಿ, ಕಾರ್ಯದರ್ಶಿ ಡಿ.ಬಿ.ಲಕಮನಹಳ್ಳಿ ಇತರರಿದ್ದರು.

ಶೇ.92.16ರಷ್ಟು ಫಲಿತಾಂಶ



ಉಪ್ಪಿನಬೆಟಗೇರಿ: ಇತ್ತೀಚೆಗೆ ಪ್ರಕಟಣೆಗೊಂಡ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಧಾರವಾಡ ನಗರದ ಪ್ರಜೇಂಟೇಷನ ಕಾಲೇಜಿನ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗ ಪರೀಕ್ಷೆಯಲ್ಲಿ ಉಪ್ಪಿನಬೆಟಗೇರಿ ಗ್ರಾಮದ ನವ್ಯಾ ನಿಜಗುಣಿ ಹೂಲಿ ಶೇ.92.16 ಅಂಕ ಗಳಿಸಿದ್ದಾಳೆ.

ವಿಸ್ತರಣೆಗೆ ಆಗ್ರಹ

ಹುಬ್ಬಳ್ಳಿ: ವಾಣಿಜ್ಯ ರಾಜಧಾನಿ ಹುಬ್ಬಳ್ಳಿಯಿಂದ ವಿವಿಧ ನಗರಗಳಿಗೆ ವಿಮಾನ ಸೇವೆಗಳ ವಿಸ್ತರಣೆಯಾಗಬೇಕೆಂದು ಅಖಿಲ ಕರ್ನಾಟಕ ಟ್ರೇಡರ್ಸ್ ಅಸೋಸಿಯೇಷನ್‌ನ ರಾಜ್ಯ ಕಾರ್ಯದರ್ಶಿ ಹಾಗೂ ಸಮಾಜ ಸೇವಕ ಸುಭಾಷ್ ಡಂಕ ಭಾರತ ಸರ್ಕಾರದ ನಾಗರಿಕ ವಿಮಾನಯಾನ ಸಚಿವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ. ರಾಜ್ಯದ ಎರಡನೇ ಅತಿ ದೊಡ್ಡ ವಾಣಿಜ್ಯ ನಗರವಾಗಿರುವ ಹುಬ್ಬಳ್ಳಿ, ಚೋಟಾ ಮುಂಬೈ ಎಂದೇ ಪ್ರಸಿದ್ಧವಾಗಿದ್ದು, ಕಳೆದ ಹಲವು ವರ್ಷಗಳಿಂದ ಸಮರ್ಪಕ ವಿಮಾನ ಸೇವೆಗಳ ಕೊರತೆಯಿಂದ ಬಳಲುತ್ತಿದೆ. ಹಿಂದೆ ಇಂಡಿಗೋ ವಿಮಾನ ಸಂಸ್ಥೆ ಹುಬ್ಬಳ್ಳಿಯಿಂದ ಅಹಮದಾಬಾದ್‌ಗೆ ನಿಯಮಿತ ವಿಮಾನ ಸೇವೆಗಳನ್ನು ನಡೆಸುತ್ತಿದ್ದು, ಅವು ಸದಾ ಪ್ರಯಾಣಿಕರಿಂದ ತುಂಬಿಕೊಂಡಿರುತ್ತಿತ್ತು. ಆದರೆ ಕೊರೋನಾ ಎರಡನೇ ಅಲೆಯಲ್ಲಿ ಈ ಸೇವೆಗಳು ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದು, ಇಂದಿಗೂ ಪುನಃ ಪ್ರಾರಂಭವಾಗಿಲ್ಲ. ಇದರಿಂದ ಜನರಿಗೆ ಸಾಕಷ್ಟು ತೊಂದರೆ ಉಂಟಾಗಿದೆ ಎಂದಿದ್ದಾರೆ.

ಚುಟುಕು ತಪಸ್ವಿ ಗೌರವಕ್ಕೆ ಆಯ್ಕೆ





ಹುಬ್ಬಳ್ಳಿ: ಶಿರಸಿ ರುದ್ರದೇವರ ಮಠದ ಜಗದ್ಗುರು ಮಲ್ಲಿಕಾರ್ಜುನ ಸ್ವಾಮೀಜಿ, ಕಸಾಪ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಡಾ.ಹರಿಕೃಷ್ಣ ಮನರೂರ, ಹುಬ್ಬಳ್ಳಿಯ ಯುವ ಉದ್ಯಮಿ ರಮೇಶ್ ಮಹಾದೇವಪ್ಪ ಅವರನ್ನು ಚುಟುಕು ತಪಸ್ವಿ ಗೌರವಕ್ಕೆ ಆಯ್ಕೆ ಮಾಡಲಾಯಿತು ಎಂದು ಕಚುಸಾಪ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ತಿಳಿಸಿದ್ದಾರೆ.

ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ 18ನೆಯ ಸಂಸ್ಥಾಪನಾ ದಿನಾಚರಣೆ ಸಂದರ್ಭದಲ್ಲಿ ಪರಿಷತ್ತಿನ ಸಾಧನೆಗೆ ಶ್ರಮಿಸಿದವರಲ್ಲಿ ಈ ಮೂರು ಜನ ಗಣ್ಯರನ್ನು ಗುರುತಿಸಿದೆ. ಏಪ್ರಿಲ್ 18ರ ಬೆಳಗ್ಗೆ 10. 30 ಗಂಟೆಗೆ ಹುಬ್ಬಳ್ಳಿ ವಿದ್ಯಾನಗರದ ಕನಕದಾಸ ಕಾಲೇಜು ಸಭಾಂಗಣದಲ್ಲಿ ಜರುಗುವ ಧಾರವಾಡ ಜಿಲ್ಲಾಮಟ್ಟದ 14ನೇ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು ಎಂದು ಪ್ರಸಾರಾಂಗ ನಿರ್ದೇಶಕ ಚನ್ನಬಸಪ್ಪ ಧಾರವಾಡಶೆಟ್ರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹುಬ್ಬಳ್ಳಿ: ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಜನ್ಮದಿನದ ಅಂಗವಾಗಿ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಪದಾಧಿಕಾರಿಗಳು ಅವರಿಗೆ ಶುಭಕೋರಿ ಸನ್ಮಾನಿಸಿದರು. ಸಂಸ್ಥೆಯ ಅಧ್ಯಕ್ಷ ಜಿ. ಕೆ. ಆದಪ್ಪಗೌಡರ, ಉಪಾಧ್ಯಕ್ಷ ವೀರಣ್ಣ ಕಲ್ಲೂರ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಡಾ. ಬಿ.ಆರ್. ಅಂಬೇಡ್ಕರ್ ದಿನಾಚರಣೆ



ಹುಬ್ಬಳ್ಳಿ: ಇಲ್ಲಿಯ ಗದಗ ರಸ್ತೆ ರೈಲು ಸೌಧದಲ್ಲಿ ನೈರುತ್ಯ ರೈಲ್ವೆ ವತಿಯಿಂದ ಡಾ. ಬಿ.ಆರ್. ಅಂಬೇಡ್ಕರ್ ದಿನ ಆಚರಿಸಲಾಯಿತು. ಪ್ರಧಾನ ವ್ಯವಸ್ಥಾಪಕ ಪಿ. ಅನಂತ್ ಅವರು ಬಾಬಾಸಾಹೇಬ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಪುಷ್ಪ ನಮನ ಸಲ್ಲಿಸಿದರು. ಬಳಿಕ ಮಾತನಾಡಿದ ಅವರು, ಭಾರತದ ಸಂವಿಧಾನದ ಮುಖ್ಯ ಶಿಲ್ಪಿಯಾಗಿ ಹಾಗೂ ಅಂಚಿನಲ್ಲಿರುವ ಸಮುದಾಯಗಳನ್ನು ಮೇಲೆತ್ತುವಲ್ಲಿ ಡಾ. ಅಂಬೇಡ್ಕರ್ ಅವರು ಮಹತ್ತರ ಹಾಗೂ ಪರಿವರ್ತನಾತ್ಮಕ ಪಾತ್ರವನ್ನು ವಹಿಸಿದ್ದರು ಎಂದರು. ರೈಲ್ವೆಯ ಹೆಚ್ಚುವರಿ ಪ್ರಧಾನ ವ್ಯವಸ್ಥಾಪಕ ಬಿ. ರಾಮ ಮೋಹನ ರೆಡ್ಡಿ ಹಾಗೂ ವಿವಿಧ ಇಲಾಖೆಗಳ ಪ್ರಧಾನ ಅಧಿಕಾರಿಗಳು, ಸಂಘಗಳು ಮತ್ತು ಸಂಘಟನೆಯ ಪ್ರತಿನಿಧಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಜಯಂತ್ಯುತ್ಸವ: ನೈರುತ್ಯ ರೈಲ್ವೆ ಹುಬ್ಬಳ್ಳಿ ವಿಭಾಗೀಯ ರೈಲ್ವೆಯಲ್ಲಿ ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಹುಬ್ಬಳ್ಳಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಟಿ.ಪಿ. ಭೂಷಣ ಮಾತನಾಡಿ, ಸಮಾನತೆ, ನ್ಯಾಯ ಮತ್ತು ಮಾನವೀಯ ಮೌಲ್ಯಗಳಿಗಾಗಿ ಹೋರಾಡಿದ ಡಾ. ಅಂಬೇಡ್ಕರ ಅವರ ಜೀವನವು ಪ್ರತಿಯೊಬ್ಬರಿಗೂ ಪ್ರೇರಣೆಯಾಗಿದೆ ಎಂದರು. ವಿಭಾಗೀಯ ರೈಲ್ವೆಯ ಹಿರಿಯ ಸಿಬ್ಬಂದಿ ಕಲ್ಯಾಣಾಧಿಕಾರಿ ಪ್ರಸಾದ ಇಂಚಗಿಮಠ, ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಪ್ರೇಮ ಚಂದ್ರ ಇತರರಿದ್ದರು.



ಹುಬ್ಬಳ್ಳಿ : ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಜನ್ಮದಿನದ ಹಿನ್ನೆಲೆ ಅವರ ಅಭಿಮಾನಿ ಬಳಗದಿಂದ ಶುಭಾಶಯ ಕೋರಿ, ಸನ್ಮಾನಿಸಿದರು. ಮಾಜಿ ವಿಧಾನ ಪರಿಷತ್ ಸದಸ್ಯ ಮೋಹನ ಲಿಂಬಿಕಾಯಿ, ಮುಖಂಡ ರಾಜಶೇಖರ್ ಮೆಣಸಿನಕಾಯಿ, ಶಿಕ್ಷಕರಾದ ನಂದಕುಮಾರ್ ಪಾಟೀಲ ಮತ್ತು ಪಿ.ಸಿ. ಕಮ್ಮಾರ ಸೇರಿದಂತೆ ಇತರರಿದ್ದರು.

ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟನೆ | ಶಂಕರ ಹಲಗತ್ತಿ ಅಭಿಮತ

ಕನ್ನಡ ಹೃದಯದ ಭಾಷೆಯಾಗಲಿ



ಅಳ್ನಾವರ (ವೀರರಾಣಿ ಕಿತ್ತೂರು ಚೆನ್ನಮ್ಮ ವೇದಿಕೆ): ಭವ್ಯ ಇತಿಹಾಸ, ಪರಂಪರೆ ಹೊಂದಿದ ಸಮೃದ್ಧವಾದ ಕನ್ನಡ ಭಾಷೆ ನಾಡಿನ ಜನರ ಹೃದಯದ ಭಾಷೆಯಾಗಿ ವಿಜೃಂಭಿಸಬೇಕು. ಕನ್ನಡದ ಪ್ರಜ್ಞೆ, ಅಭಿಮಾನ ಎಲ್ಲರ ಮನವನ್ನು ಸ್ಫೂರ್ತಿದಾಯಕವಾಗಿ ತಣಿಸಬೇಕು ಎಂದು ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಹೇಳಿದರು.

ಇಲ್ಲಿನ ಉಮಾ ಭವನದಲ್ಲಿ ಬುಧವಾರ ನಡೆದ ತಾಲೂಕಿನ 5ನೇ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು. ಸಬಿಳಕಿ- ಅವರೊಳ್ಳಿಯ ಚನ್ನಬಸವ ದೇವರು ಸ್ವಾಮೀಜಿ ಆಶೀರ್ವಚನ ನೀಡಿದರು. ಬಿ.ಎಂ. ಕಾಮೋಲಕರ ಬರೆದ ಮೆಚ್ಚಿ ಬರೆದೆನು ಪುಸ್ತಕ ಬಿಡುಗಡೆಗೊಳಿಸಲಾಯಿತು. ಮುರಾರ್ಜಿದೇಸಾಯಿಶಾಲೆಗೆ ಆಯ್ಕೆಯಾದ ಪ್ರಣನ್ಯ ಬಾಗೇವಾಡಿ ವಿದ್ಯಾರ್ಥಿನಿಯನ್ನು ಸತ್ಕರಿಸಲಾಯಿತು. ಸಮ್ಮೇಳನಾಧ್ಯಕ್ಷ ಡಾ. ಬಸವರಾಜ ಮೂಡಬಾಗಿಲ್, ಅವರ ಪತ್ನಿ ಸರಸ್ವತಿ ಮೂಡಬಾಗಿಲ್, ಕಸಾಪ ತಾಲೂಕು ಘಟಕದ ಅಧ್ಯಕ್ಷ ಗುರುರಾಜ ಸಬನೀಸ್, ವಿಧಾನ ಪರಿಷತ್ ಮಾಜಿ ಸದಸ್ಯ ಮೋಹನ ಲಿಂಬಿಕಾಯಿಒ, ತಹಶೀಲ್ದಾರ್ ಎಚ್.ಎ.ಕೊಚರಗಿ, ಧಾರವಾಡ ತಹಶೀಲ್ದಾರ್ ಡಾ.ಡಿ.ಎಚ್.ಹೂಗಾರ ಇತರರಿದ್ದರು. ಅಳ್ನಾವರ ಪಟ್ಟಣದಲ್ಲಿ ಸಾಹಿತ್ಯ ಭವನದ ನಿರ್ಮಾಣ ಆಗಬೇಕು. ಗಡಿಭಾಗದ ಕನ್ನಡ ಶಾಲೆಗಳಿಗೆ ಮೂಲಭೂತ ಸೌಲಭ್ಯ ಒದಗಿಸಬೇಕು.ಅನ್ಯ ಭಾಷೀಕರು ಕನ್ನಡ ಕಲಿಯಲು ಪ್ರರೇಪಿಸಲು ಕನ್ನಡ ಕಲಿಕಾ ಕೇಂದ್ರ ತೆರೆಯಬೇಕು ಎಂದು ನಿರ್ಣಯಿಸಲಾಯಿತು.

> ಸರ್ಕಾರಿ ಶಾಲೆಗಳು ಮುಚ್ಚುವ ದುಸ್ಥಿತಿ ಬಂದಿದ್ದು, ಸರ್ಕಾರ ಮ್ಯಾಗ್ನೆಟ್ ಎಂಬ ಪಬ್ಲಿಕ್ ಶಾಲೆ ತೆರೆಯಲು ಹೊರಟಿರುವುದು ಸರ್ಕಾರಿ ಶಾಲೆಗಳನ್ನು ಮುಚ್ಚುವ ಹುನ್ನಾರ ಇದರಲ್ಲಿ ಅಡಗಿದೆ.
> ■ ಶಂಕರ ಹಲಗತ್ತಿ

ಶಾಲೆಗಳನ್ನು ಉಳಿಸಿ

ಗಡಿನಾಡ ಹಾಗೂ ಹೊರನಾಡ ಕನ್ನಡಿಗರ ಸಮಸ್ಯೆಗಳತ್ತ ಕರ್ನಾಟಕ ಸರ್ಕಾರ ವಿಶೇಷ ಗಮನ ಹರಿಸಬೇಕು. ಕನ್ನಡ ಶಾಲೆಗಳ ಉಳಿವು ಮತ್ತು ಅಭಿವೃದ್ಧಿಗೆ ಸ್ಥಳೀಯರ ಸಹಕಾರದ ಅಗತ್ಯವಿದೆ. ಯುವ ಕವಿಗಳು ಮತ್ತು ಸಾಹಿತ್ಯಿಕರು ನಾಡು-ನುಡಿ-ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಸೃಜನಾತ್ಮಕ ಕೃತಿಗಳನ್ನು ರಚಿಸಬೇಕು ಎಂದು ಡಾ. ಬಸವರಾಜ ಮೂಡಬಾಗಿಲ್ ಅಭಿಪ್ರಾಯಪಟ್ಟರು.

- ಶಾಸನ ಸಭೆಗಳಲ್ಲಿ ಮಹಿಳಾ ಮೀಸಲಾತಿ ತರಲಾಗುತ್ತಿದ್ದು ಮುಂದಿನ ದಿನಗಳಲ್ಲಿ ವಿಧಾನಸಭೆ ಮತ್ತು ಲೋಕಸಭೆಗಳಲ್ಲಿ ಮಹಿಳಾ ಸದಸ್ಯರ ಸಂಖ್ಯೆ ಹೆಚ್ಚಳವಾಗಲಿದೆ
- ಸಮಾಜದಲ್ಲಿ ಮಹಿಳೆಯರ ಪಾತ್ರ ಮುಖ್ಯವಾಗಿದ್ದು ಎಲ್ಲಾ ರಂಗಗಳಲ್ಲಿ ಮಹಿಳೆಯರೇ ಮುಖ್ಯ ಸ್ಥಾನದಲ್ಲಿದ್ದಾರೆ.
- ಸಾಮಾಜಿಕ ಸ್ವಾಸ್ಥ್ಯ, ಮಹಿಳಾ ಸಬಲೀಕರಣ, ಮಹಿಳೆಯರಿಗೆ ದೊರೆಯಬೇಕಾದ ಪ್ರಾತಿನಿಧ್ಯ ಕೊಡಬೇಕಿದೆ
- ಭಾರತೀಯ ಸಂಸ್ಕಾರ ಉಳಿಯಲು ಮಾತೆಯರು ಗಮನ ಹರಿಸಬೇಕು ಎಂದು ಹೇಳಿದ ವಿಧಾನ ಪರಿಷತ್ ಮಾಜಿ ಸದಸ್ಯ ಮೋಹನ ಲಿಂಬಿಕಾಯಿ



ಭವ್ಯ ಮೆರವಣಿಗೆ

ಅಳ್ನಾವರ ತಾಲೂಕಿನ 5ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾದ ಡಾ. ಬಸವರಾಜ ಮೂಡಬಾಗಿಲ್ ಹಾಗೂ ಅವರ ಪತ್ನಿ ಸರಸ್ವತಿ ಅವರನ್ನು ಸಾರೋಟನಲ್ಲಿ ಕೂಡ್ರಿಸಿ ಭವ್ಯ ಮೆರವಣಿಗೆ ಹೊರಟು ವೇದಿಕೆಗೆ ಕರೆ ತರಲಾಯಿತು. ಮಾಜಿ ಸೈನಿಕರ ಸಂಘದ ಪದಾಧಿಕಾರಿಗಳು ಬೈಕ್ ರ‍್ಯಾಲಿ ಮುಖೇನ ಮೆರವಣಿಗೆಯಲ್ಲಿ ಭಾಗಿಯಾದರು. ಮಾಜಿ ಸೈನಿಕರ ಸಂಘದ ಅಧ್ಯಕ್ಷ ಅಜ್ಜಪ್ಪ ಕುರುಬರ ರಾಷ್ಟ್ರ ಧ್ವಜಾರೋಹಣ ನೇರವೇರಿಸಿದರು. ನಾಡಧ್ವಜವನ್ನು ಕಸಾಪ ಜಿಲ್ಲಾಧ್ಯಕ್ಷ ಡಾ. ಲಿಂಗರಾಜ ಅಂಗಡಿ, ಪರಿಷತ್ ಧ್ವಜವನ್ನು ಕಸಾಪ ತಾಲೂಕು ಘಟಕದ ಅಧ್ಯಕ್ಷ ಗುರುರಾಜ ಸಬನೀಸ್ ನೇರವೇರಿಸಿದರು.

ಅಧ್ಯಕ್ಷರಾಗಿ ಹುಣಸಿಮರದ ಮರು ಆಯ್ಕೆ

ಧಾರವಾಡ: ನಗರದ ಸರ್ಕ್ಯೂಟ್ ಹೌಸ್‌ನಲ್ಲಿ ಬುಧವಾರ ಕರೆಯಲಾದ ಹುಬ್ಬಳ್ಳಿ-ಧಾರವಾಡ ಮಹಾನಗರ ಜಿಲ್ಲಾ ಜನತಾ ದಳದ ಸಭೆಯಲ್ಲಿ ಕಾರ್ಯಕರ್ತರು, ಜಿಲ್ಲಾಧ್ಯಕ್ಷರನ್ನಾಗಿ ಎರಡನೇ ಅವಧಿಗೆ ಗುರುರಾಜ ಹುಣಸಿಮರದ ಪುನಃ ಆಯ್ಕೆ ಮಾಡಿದರು.

ನಂತರ ಮಾತನಾಡಿದ ಗುರುರಾಜ ಹುಣಸಿಮರದ, ಬರುವ ಜಿಲ್ಲಾ ಪಂಚಾಯತಿ, ತಾಲೂಕು, ಪಂಚಾಯತಿ, ವಿಧಾನಸಭೆ ಚುನಾವಣೆಗೆ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಿದ್ದು, ಕಾರ್ಯಕರ್ತರು ತಳಮಟ್ಟದಿಂದ ಪಕ್ಷ ಸಂಘಟಿಸಬೇಕು. ಅಭಿವೃದ್ಧಿ ಕಾರ್ಯಗಳಿಗೆ ಪಕ್ಷ ಸಂಘಟನೆ ಅಗತ್ಯ. ಮುಂದಿನ 2028ರ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಪಕ್ಷ ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಜೆಡಿಎಸ್ ಕಾರ್ಯಕರ್ತರು ಶ್ರಮಿಸುವ ಮೂಲಕ ಕುಮಾರಸ್ವಾಮಿ ಕೈ ಬಲಪಡಿಸಲು ಹೇಳಿದರು.

ರಾಜ್ಯದ ಮುಂದಿನ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿಯೇ ಆಗಲಿದ್ದಾರೆ. ಹೀಗಾಗಿ ಕಾರ್ಯಕರ್ತರು ಈ ನಿಟ್ಟಿನಲ್ಲಿ ಜನಪರ, ದಲಿಪರ, ರೈತಪರ ಹೋರಾಟ ಕಟ್ಟುವ ಜೊತೆಗೆ ಜಿಲ್ಲೆಯಲ್ಲಿ ಪಕ್ಷ ಸಂಘಟಿಸುವ ಮೂಲಕ ಕುಮಾರಸ್ವಾಮಿ ಕೈ ಬಲಪಡಿಸಬೇಕು. ಧಾರವಾಡ ಹೆಸರಿಗಷ್ಟೇ ವಿದ್ಯಾಕಾಶಿ. ಎಸ್ಸೆಸ್ಸೆಲ್ಸಿ- ಪಿಯುಸಿಯಲ್ಲಿ ಫಲಿತಾಂಶದಲ್ಲಿ ಹಿಂದುಳಿದೆ. ಆಶ್ರಯ ಮನೆಗಳು ಬಡವರಿಗೆ ಲಭಿಸುತ್ತಿಲ್ಲ. ರಸ್ತೆಗಳು ಹಾಳಾಗಿದ್ದು, ಈ ಬಗ್ಗೆ ಸರ್ಕಾರದ ಗಮನ ಸೆಳೆಯಲು ಚಳುವಳಿ ಕಟ್ಟಬೇಕಿದ್ದು, ಸಹಕಾರಿಸುವಂತೆ ಕೋರಿದರು. ಕೆಲಗೇರಿ, ಕೋಳಿಕೇರಿ, ನವಲೂರು ಕೇರೆಗೆ ಕೋಟ್ಯಾಂತರ ರೂಪಾಯಿ ಹಣ ಸುರಿದರೂ, ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಕಂಡಿಲ್ಲ ಎಂದರು.

ಸರ್ಕಾರ ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ಘೋಷಣೆ ಮಾಡಿದರೂ ಸಹ ಸ್ಥಳೀಯ ಜನಪ್ರತಿನಿಧಿಗಳ ನಿರ್ಲಕ್ಷ್ಯ ಹಾಗೂ ಸ್ವಾರ್ಥ ಧೋರಣೆಯಿಂದ ಅದು ಜಾರಿಗೆ ಬರುತ್ತಿಲ್ಲ. ಪ್ರತ್ಯೇಕ ಮಹಾನಗರ ಪಾಲಿಕೆಗೆ ಒಕ್ಕೊರಲಿನಿಂದ ಬೆಂಬಲಿಸಿದರು.

ಸಭೆಯಲ್ಲಿ ಮಾರುತಿ ಹಿಂಡಸಗೇರಿ, ಭೀಮರಾಯ ಗುಡೆಂಕಟ್ಟಿ, ತುಳಸಿಕಾಂತ ಖೋಡೆ, ದೇವರಾಜ ಕಂಬಳಿ, ಈಶ್ವರ ಕಿತ್ತೂರ, ಶಿವಾನಂದ ಹಿಟ್ನಾಳ, ಅಣ್ಣಪ್ಪ ಧರಣಿ, ಶರಣಪ್ಪ ತಲ್ಲೂರ, ಸುವರ್ಣ ಪಾರಪ್ಪಗೌಡರ ಮತ್ತು ಲಕ್ಷ್ಮೀ ಹಿಂಡಸಗೇರಿ ಇದ್ದರು.



ಶೇ.33ರಷ್ಟು ಮೀಸಲಾತಿಯಿಂದ ಸೂಕ್ತ ಸ್ಥಾನಮಾನ

ಹುಬ್ಬಳ್ಳಿ: ದೇಶದಲ್ಲಿ ಮಹಿಳೆಯರಿಗೆ ವಿಶೇಷವಾದ ಸ್ಥಾನಮಾನವಿದೆ. 12ನೇ ಶತಮಾನದಲ್ಲಿ ಬಸವಣ್ಣನವರ ಮಹಿಳೆಯರಿಗೆ ಸೂಕ್ತ ಸ್ಥಾನ ನೀಡಿದ್ದರು. ಈಗ ಪ್ರಧಾನಿ ಮೋದಿ ಅವರು ಮಹಿಳೆಯರಿಗೆ ರಾಜಕೀಯ ಕ್ಷೇತ್ರದಲ್ಲಿ ಸರಿಸಮಾನ ಸ್ಥಾನಮಾನ ದೊರೆಯಲಿ ಎಂಬ ಉದ್ದೇಶಕ್ಕೆ ಶೇ.33ರಷ್ಟು ಮೀಸಲಾತಿ ನೀಡುತ್ತಿದ್ದಾರೆ ಎಂದು ಶಾಸಕ ಮಹೇಶ ಟೆಂಗಿನಕಾಯಿ ಹೇಳಿದರು.

ನಗರದ ಸವಾಯಿ ಗಂಧರ್ವ ಭವನದಲ್ಲಿ ಹುಬ್ಬಳ್ಳಿ ಧಾರವಾಡ ಮಹಾನಗರ ಜಿಲ್ಲಾ ವತಿಯಿಂದ ಏರ್ಪಡಿಸಿದ್ದ ನಾರಿ ಶಕ್ತಿಗೆ ವಂದನೆ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದರು. ಇಂದು ನಾರಿ ಶಕ್ತಿಗೆ ಬಹಳ ದೊಡ್ಡ ಕೊಡುಗೆ ನೀಡಿದ ದಿನವಾಗಿದೆ. ಇಂತಹ ದೃಢ ನಿರ್ಧಾರ ಕೈಗೊಳ್ಳುವುದು ಸರಳ ವಿಚಾರವಲ್ಲ, ಆದರೆ ಮೋದಿ ಅವರು ಅಸಾಧ್ಯವಾಗುವುದನ್ನು ಸಾಧ್ಯ ಮಾಡಿ ತೋರಿಸುವ ಮಹಾನ ನಾಯಕ. ದೇಶದಲ್ಲಿರುವ ಎಲ್ಲ ನದಿಗಳಿಗೆ ಮಹಿಳೆಯರ ಹೆಸರು ಇಡಲಾಗಿದೆ. ಬಹುತೇಕ ಹಬ್ಬಗಳು ದೇಶದಲ್ಲಿ ಮಹಿಳೆಯರು ಆಚರಿಸುವಂತಾಗಿವೆ. ಶೇ.33ರಷ್ಟು ಮೀಸಲಾತಿಯಿಂದ ಲೋಕಸಭೆಯಲ್ಲಿ 234 ಮಹಿಳೆಯರು ಸಂಸದರಾಗುವ ಅವಕಾಶ ಒದಗಿ ಬರಲಿದೆ ಎಂದರು.

ಮಾಜಿ ಶಾಸಕ ಸೀಮಾ ಮಸೂತಿ, ಸ್ವಾತಂತ್ರ್ಯ ಕಿಚ್ಚು ಹಚ್ಚಿದ ರಾಣಿ ಚನ್ನಮ್ಮ, ಬೆಳವಡಿ ಮಲ್ಲಮ್ಮ, ಓಬ್ಬವ್ವ ಹಾಗೂ ಶಿಕ್ಷಣ ಜಾಗೃತಿ ಮೂಡಿಸಿದ ಸಾವಿತ್ರಿಬಾಯಿ ಪುಲೆ ನಮಗೆ ಸ್ಫೂರ್ತಿಯಾಗಿದ್ದಾರೆ. ಮಹಿಳೆಯರು ಎಲ್ಲ ಕ್ಷೇತ್ರದ ತನ್ನದೇ ಯಾದ ಸಾಧನೆ ಮಾಡಿದ್ದಾರೆ ಎಂದರು. ಕೆಸಿಡಿ ಕಾಲೇಜ್ ಪ್ರಾಧ್ಯಾಪಕಿ ಅರುಣಾ ಹಳ್ಳಿಕೇರಿ, ಜಾಗತಿಕ ಮಟ್ಟದಲ್ಲಿ ಸಾಧನೆ ಮಾಡಿ ಮಹಿಳೆಯರಿದ್ದಾರೆ. ಮೋದಿ ಸರ್ಕಾರ ಮಹಿಳೆಯರ ಅಭಿವೃದ್ಧಿ ಅನೇಕ ಯೋಜನೆ ಜಾರಿಗೆ ತಂದಿದೆ. ಈಗ ಮೀಸಲಾತಿ ನೀಡುತ್ತಿರುವುದು ಹೆಮ್ಮೆಯ ಸಂಗತಿ. ಮುಂದೆ ಮಹಿಳೆಯರು ಚುನಾವಣೆ ಸ್ಪರ್ಧಿಸಿದರೆ ಎಲ್ಲ ಮಹಿಳೆಯರು ಒಗ್ಗಟ್ಟಾಗಿ ಪಕ್ಷಾತೀತವಾಗಿ ಗೆಲವಿಗೆ ಶ್ರಮಿಸಬೇಕು. ಹಿಂದಿನ ಸರ್ಕಾರಗಳು ಭರವಸೆ ನೀಡಿದ್ದವು. ಈಗ ಬಿಜೆಪಿ ಮಾಡುತ್ತಿದ್ದು, ಪಕ್ಷಾತೀತವಾಗಿ ಎಲ್ಲರೂ ಸಹಕಾರ ನೀಡಬೇಕು ಎಂದರು.

ಹಿರಿಯ ವಕೀಲೆ ಜಯಶ್ರೀವಾಣಿ ಗ್ರಾಮಪುರೋಹಿತ್ ಮಾತನಾಡಿದರು. ಪ್ರಸೂತಿ ಸ್ತ್ರೀರೋಗ ತಜ್ಞೆ ಮಮತಾ ಪಾಟೀಲ, ಮಹಾನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ಸೀಮಾ ಲದ್ವಾ, ಬಿಜೆಪಿ ಮುಖಂಡ ಲಿಂಗರಾಜ ಪಾಟೀಲ, ಪಾಲಿಕೆ ಸದಸ್ಯ ಶಿವು ಮೆಣಸಿನಕಾಯಿ, ವಸಂತ ನಾಡಜೋಶಿ, ಶೋಭಾ ನಿಸಿಮ್ಮಗೌಡರ, ಕಲಾವಿದೆ ಪ್ರಾಚಿ ನಾಯಕ ಇದ್ದರು.



ಡಾ.ಅಂಬೇಡ್ಕರ್ ಜೀವನ ನಮಗೆ ಆದರ್ಶ



ಉಪ್ಪಿನಬೆಟಗೇರಿ: ಹಾರೋಬೇಳವಡಿ ಗ್ರಾಮದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಯುವಕ ಮಂಡಳ ಮತ್ತು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ವತಿಯಿಂದ ಮಹಾ ಮಾನವತಾವಾದಿ, ಭಾರತರತ್ನ, ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಸಾಹಿತಿ ಹಾಗೂ ನಿವೃತ್ತ ಶಿಕ್ಷಕ ವಾಸುದೇವ ದೊಡ್ಡಮನಿ ವಹಿಸಿ ಮಾತನಾಡಿ, ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ ಜೀವನವೇ ಒಂದು ಆದರ್ಶ. ಬಹಿಷ್ಕಾರದ ಸಮಾಜದಲ್ಲಿ ಶಿಕ್ಷಣ ಪಡೆದೇ ತೀರುತ್ತೇನೆ ಎಂಬ ಅವರ ಹಟ ಮತ್ತು ಛಲದಿಂದ ಹಗಲು ರಾತ್ರಿ ಕಷ್ಟಪಟ್ಟು ಓದಿ ಶಿಕ್ಷಣವನ್ನು ಪಡೆದು ಇಂದು ಸಂವಿಧಾನ ಶಿಲ್ಪಿಯಾಗಿ, ವಿಶ್ವಜ್ಞಾನಿಯಾಗಿ ನಾವೆಲ್ಲರೂ ಸಮಾಜದಲ್ಲಿ ಎಲ್ಲರಂತೆ ಬದುಕಲು ದಾರಿದೀಪವಾಗಿದ್ದಾರೆ ಎಂದರು.

ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ಬೆಳಗಾವಿ ವಿಭಾಗೀಯ ಸಂಚಾಲಕ ಡಾ. ಶ್ರೀಮಂತ ನಡುವಿನಕೇರಿ ಮಾತನಾಡಿ, ಅಂಬೇಡ್ಕರ್ ಅವರ ಜೀವನ ಚರಿತ್ರೆ ಮತ್ತು ಆದರ್ಶಗಳು ಎಲ್ಲರಿಗೂ ಮಾದರಿಯಾಗಿವೆ. ಅವರ ಶಿಕ್ಷಣ, ಸಂಘಟನೆ ಮತ್ತು ಹೋರಾಟಗಳ ತತ್ವಗಳು ಎಲ್ಲಾ ಕ್ಷೇತ್ರಗಳಲ್ಲಿ ಅರ್ಥಪೂರ್ಣವಾಗಿದೆ. ಅವರು ಕಾರ್ಮಿಕ ಸಚಿವರಿದ್ದಾಗ ತೆಗೆದುಕೊಂಡು ನಿರ್ಧಾರಗಳು ಜಾರಿಗೆ ತಂದ ಯೋಜನೆಗಳು ಮಹಿಳೆಯರಿಗೆ, ಕಾರ್ಮಿಕ ವರ್ಗದವರಿಗೆ ಮತ್ತು ಸಂವಿಧಾನದ ರಚನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸಲ್ಲಿಸಿದ ಸೇವೆಯೂ ದೇಶಕ್ಕೆ ಮತ್ತು ವಿಶ್ವಕ್ಕೆ ಅಪಾರವಾದ ಕೊಡುಗೆಯಾಗಿದೆ ಎಂದರು.

ಡಾ.ಬಿ.ಕೆ ಕರಿಗಾರ, ಧಾರವಾಡ ಜಿಲ್ಲಾ ಆರೋಗ್ಯ ರಕ್ಷಾ ಸಮಿತಿ ಸದಸ್ಯ ಭೀಮಪ್ಪ ತಳವಾರ, ಶಿಕ್ಷಕ ಈರಯ್ಯ ಹೊರಗಿನಮಠ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮನೋಜ ತೋರಣಗಟ್ಟಿ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ಧಾರವಾಡ ಜಿಲ್ಲಾ ಸಂ. ಸಂಚಾಲಕ ನಾಗರಾಜ ಕಾಳೆ, ಯೋಗೀಶ ಕನಾಜಿ, ಸಂಜೀವಿನಿ ಒಕ್ಕೂಟದ ಅಧ್ಯಕ್ಷ ವಿಜಯಕಲಾ ಬಡಿಗೇರ ಕಾರ್ಯಕ್ರಮದಲ್ಲಿ ಮಾತನಾಡಿದರು. ಅಶ್ವತ್ ಕೋಲಕಾರ, ವಿರೇಶ ದೊಡ್ಡಮನಿ ನಡೆಸಿಕೊಟ್ಟರು. ಉಪನ್ಯಾಸಕ ಉಲ್ಲಾಸ ದೊಡ್ಡಮನಿ ನಿರೂಪಿಸಿದರು.

ಬಸ್ ನಿಲ್ದಾಣ ಕಾಮಗಾರಿಗೆ ಭೂಮಿಪೂಜೆ

ನವಲಗುಂದ: ತಾಲೂಕಿನ ನಾಯಕನೂರ ಗ್ರಾಮದಲ್ಲಿ ಕೆಆರ್‌ಐಡಿಎಲ್ ಇಲಾಖೆಯಡಿಯಲ್ಲಿ ರೂ. 15 ಲಕ್ಷಗಳ ವೆಚ್ಚದಲ್ಲಿ ನಿರ್ಮಾಣವಾಗಲಿರುವ ನೂತನ ಬಸ್ ನಿಲ್ದಾಣ ಕಾಮಗಾರಿಗೆ ಶಾಸಕ ಎನ್. ಎಚ್. ಕೋನರಡ್ಡಿ ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು, ಗ್ರಾಮದ ಜನರಿಗೆ ಸುಲಭವಾದ ಸಂಚಾರ ವ್ಯವಸ್ಥೆ ಒದಗಿಸುವ ಈ ಯೋಜನೆ ದಿನನಿತ್ಯದ ಬದುಕಿಗೆ ಮತ್ತಷ್ಟು ಅನುಕೂಲವಾಗಲಿದೆ ಎಂಬ ನಂಬಿಕೆಯಿದೆ ಎಂದರು.

ಇದಕ್ಕೂ ಮುನ್ನಯುಜಿಡಿ ಕಾಮಗಾರಿಯನ್ನು ಅಧಿಕಾರಿಗಳೊಂದಿಗೆ ವೀಕ್ಷಿಸಿ ಈ ಕಾಮಗಾರಿಯು ನಗರ ಸ್ವಚ್ಛತೆ ಮತ್ತು ಆರೋಗ್ಯದ ದೃಷ್ಟಿಯಿಂದ ತುಂಬಾ ಮಹತ್ವದ್ದಾಗಿದ್ದು, ಜನರ ದೈನಂದಿನ ಜೀವನಕ್ಕೆ ನೇರವಾಗಿ ಪ್ರಯೋಜನವಾಗಲಿದೆ. ಜನರ ನಿರೀಕ್ಷೆಗೆ ತಕ್ಕಂತೆ ಕೆಲಸಗಳು ಗುಣಮಟ್ಟದಿಂದ ಮತ್ತು ವೇಗವಾಗಿ ಪೂರ್ಣಗೊಳ್ಳಲಿ ಎಂಬುದನ್ನು ಖಚಿತಪಡಿಸಿಕೊಳ್ಳಲು ಸ್ಥಳದಲ್ಲೇ ಪರಿಶೀಲನೆ ನಡೆಸಿದರು. ಕೆಪಿಸಿಸಿ ಸದಸ್ಯ ವಿಜಯ ಆರ್. ಕುಲಕರ್ಣಿ, ಕೆಆರ್‌ಐಡಿಎಲ್ ಇಲಾಖೆ ಅಧಿಕಾರಿ ಅನ್ನಪೂರ್ಣ, ಪುರಸಭೆ ಮುಖ್ಯಾಧಿಕಾರಿ ಶರಣು ಪೂಜಾರ, ಯುತ್ ಕಾಂಗ್ರೆಸ್ ಅಧ್ಯಕ್ಷ ವಿಕಾಸ ತದ್ದೇವಾಡಿ, ಗ್ರಾಂಪಂ. ಮಾಜಿ ಅಧ್ಯಕ್ಷ ರಾಜುಗೌಡ ಪಾಟೀಲ, ಉಪಾಧ್ಯಕ್ಷರಾದ ಕುಮಾರ ತುಮ್ಮನಮಟ್ಟಿ, ಪ್ರಕಾಶ ಶಿಗ್ಲಿ, ಜೀವನ ಪವಾರ, ಮದರಸಾಬ್ ಉಗರಗೋಳ, ಗೂಳಪ್ಪ ದೊಡ್ಡಮನಿ, ಬರ್ಮಪ್ಪ ಮಾದರ, ಕರೆಯಪ್ಪ ಮಾದರ, ಆನಂದ ಹವಳಕೋಡ, ಮಲ್ಲವ್ವ ದೊಡ್ಡಮನಿ, ಕರವೀರಪ್ಪ ದೊಡ್ಡವಾಡ, ಬಸವರಾಜ ಹುಬ್ಬಳ್ಳಿ, ಶಾಂತಪ್ಪ ಅಂಗಡಿ, ಚಾಂದುಸಾಬ್ ನದಾಫ್, ಬಸವರಾಜ ಕನ್ನೂರ, ಕರವೀರಪ್ಪ ತಳವಾರ, ನಿಜಲಿಂಗಯ್ಯ ಹಿರೇಮಠ, ರಾಜಣ್ಣ ಹಳ್ಯಾಳ್, ಅಂದಾನಿಗೌಡ ಪಾಟೀಲ್, ವೀರಸಂಗಪ್ಪ ಪೂಜಾರ, ಮಲ್ಲಪ್ಪ ಪೂಜಾರ, ವಿರೂಪಾಕ್ಷಪ್ಪ ಪೂಜಾರ, ಶಾಂತಪ್ಪ ಕಾಳಗಿ, ಎಸ್.ವಿ. ಕ್ಯಾಲಕೊಂಡ, ಶಿವಲಿಂಗಪ್ಪ ದೇಸಾಯಿ, ಉಮೇಶ ಸಾತಣ್ಣವರ, ಗಂಗಪ್ಪ ಪತ್ತಾರ ಸೇರಿದಂತೆ ಅನೇಕ ಗ್ರಾಮಸ್ಥರು ಉಪಸ್ಥಿತರಿದ್ದರು.



ವಾಂತಿ ಭೇದಿ: 19 ಪ್ರಕರಣ ದಾಖಲು



ಕುಂದಗೋಳ: ಪಟ್ಟಣ ಸೇರಿದಂತೆ ತಾಲೂಕಿನ ಹಲವು ಗ್ರಾಮಗಳಲ್ಲಿ ವಾಂತಿ ಭೇದಿಯಿಂದ ತಾಲೂಕು ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಾಗಿದ್ದಾರೆ.

ಕಳೆದ ಎರಡು ದಿನಗಳಲ್ಲಿ ಒಟ್ಟು 19 ಪ್ರಕರಣಗಳು ದಾಖಲಾಗಿದ್ದು, ಪಟ್ಟಣ, ಕಮಡೊಳ್ಳಿ, ದೇವನೂರ, ಪಶುಪತಿಹಾಳ, ಯರಿನಾರಾಯಣ, ಕುರಡಿಕೇರಿ, ತರ್ಲಘಟ್ಟ ಗ್ರಾಮಗಳ ಜನರು ಚಿಕಿತ್ಸೆಗೆ ದಾಖಲಾಗಿದ್ದಾರೆ.


ತಾಲೂಕು ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ಡಾ. ತಿಮ್ಮಯ್ಯ ಅವರು ಈ ಕುರಿತು ಮಾಹಿತಿ ನಿಡಿದ್ದು ನೀರಿನ ಸಮಸ್ಯೆಯಿಂದ ಮಾತ್ರ ಆಗಿದೆ ಎನ್ನುವಂತಿಲ್ಲ, ಅತಿಯಾದ ಬಿಸಿ ವಾತಾವರಣ, ಆಹಾರ ಮುಂತಾದ ಕಾರಣಗಳಿದ್ದು, ಪಟ್ಟಣದ ಮಂಜುನಾಥ ಎಂಬುವವರಿಗೆ ರಕ್ತ ಹೀನತೆಯಿಂದ ಹೀಗಾಗಿದ್ದು ಚಿಕಿತ್ಸೆಗೆ ಹುಬ್ಬಳ್ಳಿ ಕಿಮ್ಸ್‌ಗೆ ಸೂಚಿಸಲಾಗಿದೆ. ಉಳಿದ ಎಲ್ಲ ರೋಗಿಗಳ ಸಾಮಾನ್ಯವಾಗಿದ್ದು ಯಾವುದೇ ಗಂಭೀರತೆಯಿಲ್ಲ ಎಂದರು.

ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸಿ.ವಿ.ಕುಲಕರ್ಣಿ ಅವರು ನಾವು ನೀರಿನ ಪರಿಕ್ಷೆ ಮಾಡಿ ಸರಬುರಾಜು ಮಾಡುತ್ತಿದ್ದು ಯಾವುದೆ ಸಮಸ್ಯೆಯಿಲ್ಲ ಎಂದು ಹೇಳಿದರು. ತಹಶೀಲ್ದಾರ್ ರಾಜು ಮಾವರಕರ ಬುಧವಾರ ಆಸ್ಪತ್ರೆಗೆ ಭೇಟಿ ನಿಡಿ ರೋಗಿಗಳ ವಿಚಾರಿಸಿ ನಂತರ ಅಧಿಕಾರಿಗಳ ಸಭೆ ನಡೆಸಿ ಮಾಹಿತಿ ಪಡೆದು ಸರಿಯಾಗಿ ಚಿಕಿತ್ಸೆ ಹಾಗೂ ಯಾವುದೆ ತೊಂದರೆಯಾಗದಂತೆ ಮತ್ತು ಜಾಗೃತಿ ಮೂಡಿಸುವಂತೆ ಸೂಚಿಸಿದರು.

ಡಾ. ಬಿ.ಆರ್.ಅಂಬೇಡ್ಕರ್ ಜಯಂತಿ

ಅಣ್ಣಿಗೇರಿ: ದೇಶಕ್ಕೆ ಅತ್ಯುತ್ತಮ ಸಂವಿಧಾನ ನೀಡುವ ಮೂಲಕ ಸಮಾನತೆ ಸಾರಿದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಜಯಂತಿಯ ದಿನವನ್ನು ಸಮಾಜದ ಬಡ ಹಾಗೂ ಪ್ರತಿಭಾವಂತ ಮಕ್ಕಳಿಗೆ ನೋಟ್ ಬುಕ್ ಹಾಗೂ ಹಣ್ಣು ತಂಪು ಪಾನೀಯ ವಿತರಿಸುವ ಮೂಲಕ ಸಮಾಜ ಮುಖಿಯಾಗಿ ಕರ್ನಾಟಕ ದಲಿತ ವಿಮೋಚನಾ ಸಮಿತಿ ಅಣ್ಣಿಗೇರಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ದಲಿತ ಮಹಾ ಒಕ್ಕೂಟ ಸಂಘಟನೆ ಆಚರಿಸುತ್ತಿರುವುದು ಉತ್ತಮ ಕಾರ್ಯ ಎಂದು ಅಣ್ಣಿಗೇರಿ ಪಿಎಲ್‌ಡಿ ಬ್ಯಾಂಕಿನ ಸಂಸ್ಥಾಪಕ ದೇವರಾಜ್ ದಾಡಿಬಾವಿ ಹೇಳಿದರು.

ಅವರು ನಗರದ ಪುರಸಭೆ ಕಾರ್ಯಾಲಯದ ಆವರಣದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಅರ್ಪಿಸಿ 135 ನೇ ಜಯಂತಿ ನಿಮಿತ್ತ ಕರ್ನಾಟಕ ದಲಿತ ವಿಮೋಚನಾ ಸಮಿತಿ ಅಣ್ಣಿಗೇರಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ದಲಿತ ಮಹಾ ಒಕ್ಕೂಟ ಸಂಘಟನೆಯ ರಾಘವೇಂದ್ರ ರಾಮಗೇರಿ ಮತ್ತು ರಾಜು ಹಳ್ಳಿಕೇರಿ ಅವರ ನೇತೃತ್ವದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಚಾಲನೆ ನೀಡಿ ಮಾತನಾಡಿದರು. ಶಿವಕುಮಾರ ಸ್ವಾಮೀಜಿ, ಶಾಸಕ ಎನ್.ಎಚ್. ಕೋನರಡ್ಡಿ, ಹಜರತ್ ಸೈಯದ್ ಸಜ್ಜಾದ ಶಾ ಖಾದ್ರಿ ಕಮಲಾಪುರ ದರ್ಗಾ ಅವರುಗಳ ಉಪಸ್ಥಿತಿಯಲ್ಲಿ ನಗರದ ರಾಜಬೀದಿಗಳಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರ ಮೆರವಣಿಗೆ ಮಾಡಲಾಯಿತು. ತಾಲೂಕು ದಂಡಾಧಿಕಾರಿ ಮಂಜುನಾಥ್ ದಾಸಪ್ಪನವರ, ಪುರಸಭೆ ಮುಖ್ಯಾಧಿಕಾರಿ ವೈ.ಜಿ. ಗದ್ದಿಗೌಡರ್, ಮಹಾಬಲೇಶ್ವರ ಹೆಬಸೂರ, ಮಹೇಶ್ ಅಂಗಡಿ, ಶಿವಾನಂದ ಬೆಳಾಹಾರ, ಚಂದ್ರಕಾಂತ್ ವೆರ್ನೇಕರ್,ನಾಗರಾಜ್ ದಳವಾಯಿ, ಷಣ್ಮುಖ ಗುರಿಕಾರ್, ಮಂಜುನಾಥ್ ಮಾಯಣ್ಣವರ,ಚಂಬಣ್ಣ ಹಾಳದೋಟರ, ರಾಜು ವೆರ್ನೇಕರ್ ,ದೇವಪ್ಪ ಬಿಷ್ಟಕ್ಕನವರ ಇದ್ದರು.



ವಿನಯ ಬೆಂಬಲಿಗರ ಬಂಧನ: ಬಿಡುಗಡೆ



ಧಾರವಾಡ: ಶಾಸಕ ವಿನಯ ಕುಲಕರ್ಣಿ ಅವರ ಹಲವು ಬೆಂಬಲಿಗರು ಜ್ಯುಬ್ಲಿ ವೃತ್ತದಲ್ಲಿ ಪ್ರತಿಭಟನೆ ನಡೆಸುವ ವೇಳೆಗೆ ಪೊಲೀಸರು ಬಂಧಿಸಿ, ಬಿಡುಗಡೆಗೊಳಿಸಿದ ಘಟನೆ ನಡೆದಿದೆ.

ನಗರದ ಕಲಾಭವನದಿಂದ ಮೆರವಣಿಗೆ ಕೈಗೊಂಡ ಪ್ರತಿಭಟನಾಕಾರರು, ವಿವಿಧ ಘೋಷಣೆ ಕೂಗುತ್ತಾ ಜ್ಯುಬ್ಲಿ ವೃತ್ತಕ್ಕೆ ಆಗಮಿಸುತ್ತಿದ್ದಂತೆ ಪರಿಸ್ಥಿತಿ ಉದ್ವಿಗ್ನಗೊಂಡ ಕಾರಣ ಪೊಲೀಸರು ಪ್ರತಿಭಟನಕಾರರನ್ನು ಬಂಧಿಸಿ, ಕರೆದೊಯ್ದು ಬಿಡುಗಡೆ ಮಾಡಿದ್ದಾರೆ. ನಮ್ಮ ನಾಯಕ ವಿನಯ ಕುಲಕರ್ಣಿ ಅವರ ಮೇಲೆ ನಿರಂತರವಾಗಿ ಅನ್ಯಾಯ ಆಗುತ್ತಿದೆ. ರಾಜಕೀಯ ಷಡ್ಯಂತ್ರ ಮತ್ತು ಕುತಂತ್ರದಿಂದಲೇ ಕೆಲವು ಪಟ್ಟಭದ್ರ ಹಿತಾಶಕ್ತಿಗಳು ಅವರನ್ನು ಕೊಲೆ ಪ್ರಕರಣದಲ್ಲಿ ಸಿಲುಕಿಸಿದ್ದಾರೆ ಎಂದು ಆರೋಪ ಮಾಡಿದರು. ಯೋಗೇಶಗೌಡರ ಕೊಲೆ ಪ್ರಕರಣದಲ್ಲಿ ದೋಷಿಯಾದ ವಿನಯ ಕುಲಕರ್ಣಿ ವಿರುದ್ಧ ವ್ಯವಸ್ಥಿತ ಪಿತೂರಿ ನಡೆದಿದೆ. ಅರವಿಂದ ಕೆಜ್ರಿವಾಲ್ ಅವರಂತೆ ನಮ್ಮ ನಾಯಕರು ನಿರ್ದೋಷಿಯಾಗಿ ಬರಲಿದ್ದು, ಅವರ ಬೆಂಬಲಕ್ಕೆ ತಾವಿರುವುದಾಗಿ ಹೇಳಿದರು. ಈಶ್ವರ ಶಿವಳ್ಳಿ, ಪರಮೇಶ ಕಾಳೆ, ಆನಂದ ಸಿಂಗನಾಥ್, ಬಸವರಾಜ ಜಾಧವ, ಪ್ರವೀಣ ನರೇಂದ್ರ, ಶಶಿ ಕೋಲ್ಕಾರ, ಬಸು ಧಾರವಾಡ, ಕಾರ್ತಿಕ ನಾಯಕ, ಮಾಳು ಪಾಟೀಲ, ಗೌರಮ್ಮ ಬಲೋಗಿ, ಭೀಮಪ್ಪ ಕಾಸಾಯಿ ಮತ್ತು ಸೌರಭ ಕ್ಯಾತಣ್ಣವರ ಇದ್ದರು.

ಹೈಕೋರ್ಟ್ ಆದೇಶಕ್ಕೆ ಸ್ವಾಗತ



ಹುಬ್ಬಳ್ಳಿ: ಕರ್ನಾಟಕದ ಉಚ್ಚ ನ್ಯಾಯಾಲಯವು 10ನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ತೃತೀಯ ಭಾಷೆಗಳ ಅಂಕಗಳಿಗೆ ಸಂಬಂಧಿಸಿದಂತೆ ಮೊದಲು (2024-25) ಇದ್ದಂತೆ 2025-26 ರಲ್ಲಿ ಅಂಕಗಳನ್ನು ನೀಡಲು ಮತ್ತು ಅಂಕಪಟ್ಟಿಯಲ್ಲಿ ಅಂಕಗಳನ್ನು ನಮೂದಿಸಿ ಫಲಿತಾಂಶ ಘೋಷಣೆ ಮಾಡಲು ಸರ್ಕಾರಕ್ಕೆ ಸೂಚಿಸಿರುವುದು ಸಂಸ್ಕೃತ, ಹಿಂದಿ, ಕನ್ನಡವನ್ನು ಸೇರಿದಂತೆ ತೃತೀಯ ಭಾಷಯಲ್ಲಿರುವ ಒಂಬತ್ತು ಭಾರತೀಯ ಭಾಷೆಗಳ ಬೆಳವಣಿಗೆಯ ದೃಷ್ಟಿಯಿಂದ ಆಶಾದಾಯಕವಾಗಿದೆ. ಅದಕ್ಕಾಗಿ ಹೈಕೋರ್ಟ್ ಆದೇಶವನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಸ್ವಾಗತಿಸಿದೆ.

ಸಂಘವು ದೇಶಿ ಭಾಷೆಗಳ ಉಳಿವು ಒಕ್ಕೂಟದ ಸಹಕಾರದೊಂದಿಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ತೃತೀಯ ಭಾಷೆ ಮತ್ತು ಎನ್‌ಎಸ್ ಕ್ಯೂಎಫ್ ವಿಷಯಗಳ ಮೌಲ್ಯಮಾಪನ ತಿದ್ದುಪಡಿ ಕರಡು ನಿಯಮಗಳಿಗೆ ಈಗಾಗಲೇ 5 ಲಕ್ಷಕ್ಕೂ ಹೆಚ್ಚು ಆಕ್ಷೇಪಣೆಗಳನ್ನು ಸರ್ಕಾರಕ್ಕೆ ಸಲ್ಲಿಸಿದೆ. ತೃತೀಯ ಭಾಷೆ ಮತ್ತು ಎನ್.ಎಸ್.ಕ್ಯೂಎಫ್ ವಿಷಯಗಳಲ್ಲಿ ಪಡೆದ ಅಂಕ ಶ್ರೇಣಿಗಳ (ಗ್ರೇಡ್) ರೂಪದಲ್ಲಿ ಅಂಕಗಳನ್ನೇ ಪ್ರಕಟಿಸಬೇಕು. ತೃತೀಯ ಭಾಷೆ ಮತ್ತು ಎನ್.ಎಸ್.ಕ್ಯೂ.ಎಫ್ ವಿಷಯಗಳನ್ನು ಅಂಕಪಟ್ಟಿಯಲ್ಲಿ ಹೆಚ್ಚುವರಿ ವಿಷಯಗಳಾಗಿ ನಮೂದಿಸಬಾರದು ಮತ್ತು ಉತ್ತೀರ್ಣರಾಗಲು ಪರಿಗಣಿಸಬೇಕು. ಎಲ್ಲಾ ವಿಷಯಗಳ ಅಂಕ ಪರಿಗಣಿಸುವಂತೆ ತೃತೀಯ ಭಾಷೆ ಮತ್ತು ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟಿ ವಿಷಯಗಳಲ್ಲಿ ಪಡೆದ ಅಂಕಗಳನ್ನು ಪರಿಗಣಿಸಿ ಫಲಿತಾಂಶ ಪ್ರಕಟಿಸಬೇಕು. ಅಂಕಪಟ್ಟಿಯಲ್ಲಿ ಹೆಚ್ಚುವರಿಯಾಗಿ ನಮೂದಿಸದೆ 2024-25ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆ ಅಂಕಪಟ್ಟಿಯ ನಮೂದಿಸಿದಂತೆ ಅಂಕ ನಮೂದಿಸಬೇಕು. ಅಭ್ಯರ್ಥಿಗಳು ಆಂತರಿಕ ಮೌಲ್ಯಮಾಪನ ಮತ್ತು ಬಾಹ್ಯ ಪರೀಕ್ಷೆ ಒಟ್ಟಾರೆಯಾಗಿ ಶೇಕಡಾ 33 ಅಂಕಗಳನ್ನು ಪಡೆದು ಒಟ್ಟು 625 ಅಂಕಗಳಲ್ಲಿ ಕನಿಷ್ಠ 206 ಅಂಕ ಗಳಿಸುವುದರೊಂದಿಗೆ ಆಯಾ ವಿಷಯದ ಒಟ್ಟು ಅಂಕಗಳಲ್ಲಿ ಪ್ರತಿ ವಿಷಯದಲ್ಲಿ ಕನಿಷ್ಠ 30 ಪ್ರತಿಶತ ಅಂಕ ಗಳಿಸಿದರೆ ಉತ್ತೀರ್ಣರೆಂದು ಘೋಷಿಸಬೇಕು ಎಂದು ರಾಜ್ಯಾಧ್ಯಕ್ಷ ಸಂದೀಪ ಬೂದಿಹಾಳ ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

ಕಿರುಸುದ್ದಿ

ಉಕ್ಕು ಸಚಿವಾಲಯ ಹಿಂದಿ ಸಲಹಾ ಸಮಿತಿಗೆ ರಮೇಶ ನೇಮಕ

ಬೀದರ್: ಕೇಂದ್ರ ಉಕ್ಕು ಸಚಿವಾಲಯದ ಹಿಂದಿ ಸಲಹಾ ಸಮಿತಿಯ ಸದಸ್ಯರಾಗಿ ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ರಮೇಶ ಪಾಟೀಲ ಸೋಲಪುರ ಅವರನ್ನು ನೇಮಕ ಮಾಡಲಾಗಿದೆ. ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಈ ಕುರಿತು ಆದೇಶ ಹೊರಡಿಸಿದ್ದಾರೆ.



ಎಚ್.ಡಿ. ಕುಮಾರಸ್ವಾಮಿ ಅವರು ಸಮಿತಿಯ ಅಧ್ಯಕ್ಷರಾಗಿದ್ದು, ಉಕ್ಕು ಖಾತೆ ರಾಜ್ಯ ಸಚಿವರು ಸಮಿತಿಯ ಉಪಾಧ್ಯಕ್ಷರಾಗಿದ್ದಾರೆ. ರಮೇಶ ಪಾಟೀಲ ಸೋಲಪುರ ಅವರ ಅಧಿಕಾರ ಅವಧಿ ಮೂರು ವರ್ಷ ಆಗಿದೆ. ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡರು, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ, ಎನ್‌ಡಿಎ ಮೈತ್ರಿ ಪಕ್ಷಗಳ ರಾಷ್ಟ್ರೀಯ, ರಾಜ್ಯ ವರಿಷ್ಠರು, ಮಾಜಿ ಸಚಿವ ಬಂಡೆಪ್ಪ ಕಾಶೆಂಪುರ, ಚುನಾಯಿತ ಪ್ರತಿನಿಧಿಗಳು ಹಾಗೂ ಮುಖಂಡರಿಗೆ ಕೃತಜ್ಞತೆ ತಿಳಿಸಿದ್ದಾರೆ.

ವಾಹನ ಅಪಘಾತ: ಮಹಿಳೆ ಸಾವು

ಚನ್ನಮ್ಮನ ಕಿತ್ತೂರು: ದ್ವಿಚಕ್ರ ವಾಹನ ಸವಾರರ ಮೇಲೆ ಕಂಟೇನರ್ ಹರಿದ ಪರಿಣಾಮ ಓರ್ವ ಮಹಿಳೆ ಸ್ಥಳದಲ್ಲಿಯೇ ಮೃತಪಟ್ಟು ಓರ್ವನಿಗೆ ಗಂಭೀರಗಾಯವಾದ ಘಟನೆ ಮಂಗಳವಾರ ಜರುಗಿದೆ.



ದೇವರಶೀಗಿಹಳ್ಳಿ ಗ್ರಾಮದ ಶಾಂತವ್ವ ಶಿವಪ್ಪ ದೊಡಮನಿ(50) ಮೃತ ಪಟ್ಟ ಮಹಿಳೆ. ಮಗ ಮಂಜುನಾಥ ಶಿವಪ್ಪ ದೊಡಮನಿ(31) ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಕಿತ್ತೂರು ಕಡೆಯಿಂದ ದೇವರಶೀಗಿಹಳ್ಳಿ ಗ್ರಾಮಕ್ಕೆ ತೆರಳುತ್ತಿದ್ದಾಗ ರಾಷ್ಟ್ರೀಯ ಹೆದ್ದಾರಿ ಅಂಬಡಗಟ್ಟಿ ಕ್ರಾಸ್ ಹತ್ತಿರ ಹೆದ್ದಾರಿಯಲ್ಲಿ ಮುಂದೆ ಸಂಚರಿಸುತ್ತಿದ್ದ ಕಂಟೇನರ್ ಬಡಿದು ಅಪಘಾತ ಸಂಭವಿಸಿದೆ. ಅದೇ ಸಮಯಕ್ಕೆ ಮತ್ತೊಂದು ಕಂಟೇನರ್ ಚಾಲಕ ಸವಣೂರ ತಾಲೂಕಿನ ಪರಮವಾಡಿ ತಾಂಡಾ ಯಲವಗಿಯ ಚನ್ನಪ್ಪ ತಿಪ್ಪಣ್ಣ ಲಮಾಣಿ ತನ್ನ ಕಂಟೇನರ್ ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಬಂದು ಇವರ ಮೇಲೆ ಹರಿಸಿದ ಪರಿಣಾಮ ಸಾವು ಸಂಭವಿಸಿದೆ. ಸ್ಥಳಕ್ಕೆ ಸಿಪಿಐಯ್ ಶಿವಾನಂದ ಗುಡಗನಟ್ಟಿ, ಪಿ ಎಸ್ ಆಯ್ ಪ್ರವೀಣ ಗಂಗೋಳ ಬೇಟಿ ನೀಡಿ ಪರಿಶೀಲಿಸಿ ಪ್ರಕರಣ ದಾಖಲಿಸಿದ್ದಾರೆ.

ಹೊಲದಲ್ಲಿದ್ದ ರೈತನ ಮೇಲೆ ಕರಡಿ ದಾಳಿ

ವಿಜಯನಗರ: ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ರೈತನ ಮೇಲೆ ಕರಡಿ ದಾಳಿ ನಡೆಸಿದ್ದು, ಗಾಯಗೊಳಿಸಿರುವ ಘಟನೆ ಹೊಸಪೇಟೆ ತಾಲೂಕಿನ ಬುಕ್ಕಸಾಗರದಲ್ಲಿ ಬುಧವಾರ ಸಂಜೆ ನಡೆದಿದೆ. ಗ್ರಾಮದ ರಾಜಶೇಖರ್ ಗೌಡ(45) ಎಂಬ ರೈತ ಗಾಯಗೊಂಡಿದ್ದು, ಹೊಸಪೇಟೆ 100 ಬೆಡ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಬುಧವಾರ ಸಂಜೆ ಜಮೀನಿನಲ್ಲಿ ಕಬ್ಬಿನ ಬೆಳೆಗೆ ನೀರು ಹರಿಸುತ್ತಿದ್ದಾಗ ಏಕಾಏಕಿ ಕರಡಿ ದಾಳಿ ನಡೆಸಿದ್ದು, ರಾಜಶೇಖರ್ ಬಲ ಗೈ ಹಾಗೂ ಕಾಲಿಗೆ ಪರಚಿ ಗಾಯಪಡಿಸಿದೆ. ಜೀವಕ್ಕೆ ತೊಂದರೆಯಿಲ್ಲ ಎಂದು ವೈದ್ಯರು ಮಾಹಿತಿ ನೀಡಿದರು. ಹೊಸಪೇಟೆ ತಾಲೂಕಿನ ಮಲಪನಗುಡಿ ಹಾಗೂ ಕೊಂಡನಾಯಕನಹಳ್ಳಿ ಭಾಗದಲ್ಲಿ ಕೆಲದಿನಗಳಿಂದ ನಿರಂತವಾಗಿ ಕರಡಿ ಕಾಣಿಸಿಕೊಳ್ಳುತ್ತಿತ್ತು. ಈ ನಡುವೆ ಬುಕ್ಕಸಾಗರದಲ್ಲಿ ಕರಡಿ ದಾಳಿ ನಡೆಸಿದ್ದರಿಂದ ಈ ಭಾಗದ ರೈತರಲ್ಲಿ ಸಹಜವಾಗಿಯೇ ಆತಂಕ ಹೆಚ್ಚಿಸಿದೆ. ಕರಡಿಗಳ ಉಪಟಳ ತಪ್ಪಿಸಲು ತಕ್ಷಣ ಅರಣ್ಯ ಇಲಾಖೆ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ನಿವೃತ್ತ ಶಿಕ್ಷಕ ಆತ್ಮಹತ್ಯೆ

ಯಲ್ಲಾಪುರ: ಪಟ್ಟಣದ ಸಬಗೇರಿಯ ನಿವಾಸಿ ನಿವೃತ್ತ ಶಿಕ್ಷಕರೊಬ್ಬರೂ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ಪ್ರಕಾಶ ನಾಯಕ(58) ಬುಧವಾರ ಬೆಳಿಗ್ಗೆ ಮನೆಯ ಬಳಿಯೇ ನೇಣು ಬಿಗಿದುಕೊಂಡು ಮೃತಪಟ್ಟಿದ್ದಾರೆ.



ತಾಲೂಕಿನ ವಿವಿಧ ಸರಕಾರಿ ಶಾಲೆಗಳಲ್ಲಿ ಶಿಕ್ಷರಾಗಿ ಕಾರ್ಯ ನಿರ್ವಹಿಸಿದ ಪ್ರಕಾಶ ನಾಯಕ ಅವರು, ಕೆಲ ವರ್ಷಗಳ ಕಾಲ ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿಯೂ ಜವಾಬ್ದಾರಿ ವಹಿಸಿದ್ದರು. ಇತ್ತೀಚೆಗೆ ಕುಡಿತದ ಚಟಕ್ಕೆ ಒಳಗಾಗಿದ್ದರು. ಯಾವುದೋ ವಿಷಯವನ್ನು ಮನಸ್ಸಿಗೆ ಹಚ್ಚಿಕೊಂಡಿದ್ದ ಅವರು, ತಮ್ಮ ಹೊಸ ಮನೆ ಕಟ್ಟಡದ ಮುಂಭಾಗದ ಕೋಣೆಯ ಬಳಿ ನೇಣಿಗೆ ಶರಣಾಗಿದ್ದಾರೆ. ಈ ಕುರಿತು ಅವರ ಪತ್ನಿ ಸಿಕ್ಷಕಿ ಭಾರತಿ ನಾಯಕ ಪೊಲೀಸರಿಗೆ ದೂರು ನೀಡಿದ್ದಾರೆ.

ರಸಗೊಬ್ಬರ ಮಾರಾಟಗಾರರ ಸಭೆ | ಡಿಸಿ ಸ್ನೇಹಲ್ ಎಚ್ಚರಿಕೆ

ಕೃತಕ ಅಭಾವ; ಲೈಸೆನ್ಸ್ ರದ್ದು

ಧಾರವಾಡ: ಜಿಲ್ಲೆಯಲ್ಲಿ ಮೇ ಅಂತ್ಯಕ್ಕೆ ಕೃಷಿ ಚಟುವಟಿಕೆ ಪ್ರಾರಂಭಗೊಳ್ಳಲಿದ್ದು, ರೈತರಿಗೆ ಸಕಾಲಕ್ಕೆ ಬೇಡಿಕೆಗೆ ತಕ್ಕಂತೆ ಗೊಬ್ಬರ ವಿತರಿಸಬೇಕು. ಕೃತಕ ಅಭಾವ ಸೃಷ್ಟಿಸುವವರ ಲೈಸೆನ್ಸ್ ರದ್ದುಪಡಿಸುವುದಾಗಿಯೂ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಎಚ್ಚರಿಸಿದರು.

ಜಿಲ್ಲಾಧಿಕಾರಿ ಕಚೇರಿ ಭವನದಲ್ಲಿ ಬುಧವಾರ ರಸಗೊಬ್ಬರ ಮಾರಾಟಗಾರರ ಸಭೆ ನಡೆಸಿದ ಅವರು, ರಸಗೊಬ್ಬರ ಸಗಟು ಹಾಗೂ ಚಿಲ್ಲರೆ ಮಾರಾಟಗಾರರು ತಮ್ಮ ಅಂಗಡಿ ಮುಂಭಾಗದಲ್ಲಿ ರಸಗೊಬ್ಬರ ದರ ಮತ್ತು ದಾಸ್ತಾನು ಫಲಕ ಹಾಕುವಂತೆ ಸೂಚಿಸಿದರು.

ಜಿಲ್ಲೆಯಲ್ಲಿ ರಸಗೊಬ್ಬರ ಹೆಚ್ಚಿನ ದರಕ್ಕೆ ಮಾರಾಟ, ಅಕ್ರಮ ದಾಸ್ತಾನಿನ ಜೊತೆಗೆ ಕೃತಕ ಅಭಾವ ಸೃಷ್ಟಿಸುವ ಮಾರಾಟಗಾರರ ಲೈಸೆನ್ಸ್ ರದ್ದುಪಡಿಸಲಿದೆ. ಅಂತಹ ಮಾರಾಟಗಾರರ ವಿರುದ್ಧ ಕಠಿಣ ಕಾನೂನು ಕ್ರಮವೂ ಜರುಗಿಸುವುದಾಗಿ ಎಚ್ಚರಿಕೆ ನೀಡಿದರು.

ಗೊಬ್ಬರಕ್ಕೆ ಲಿಂಕ್ ಬೇಡ: ರಸಗೊಬ್ಬರ ಜೊತೆ ಸಾವಯವ ಉತ್ಪನ್ನ, ಕೀಟನಾಶಕ, ನ್ಯಾನೋ ಗೊಬ್ಬರ, ಸೂಕ್ಷ್ಮ ಪೋಷಕಾಂಶ, ಜೈವಿಕ ಉತ್ತೇಜಕಗಳು ಮತ್ತು ಇತರೆ ಉತ್ಪನ್ನಗಳನ್ನು ಸಗಟು ಹಾಗೂ ಚಿಲ್ಲರೆ ವ್ಯಾಪಾರಿಗಳಿಗೆ ಜೋಡಣೆ ಮಾಡದಂತೆ ಸೂಚನೆಯೂ ನೀಡಿದರು.

ಎಫ್‌ಐಆರ್ ದಾಖಲು: ರೈತರ ಬೇಡಿಕೆ ಅನುಸಾರ ಎಫ್‌ಐಡಿ ದಾಖಲಿಸಿ, ಗೊಬ್ಬರ ನೀಡಬೇಕು. ಸಂಸ್ಥೆಗಳ ಯಾವುದೇ ನಿರೀಕ್ಷಿತ ಕೊರತೆ ಇದ್ದಲ್ಲಿ ಜಿಲ್ಲಾಡಳಿತಕ್ಕೆ ಲಿಖಿತವಾಗಿ ತಿಳಿಸಬೇಕು. ಯೂರಿಯಾ ರಸಗೊಬ್ಬರ ವರ್ಗಾವಣೆ ವಿರುದ್ಧ ಎಫ್‌ಐಆರ್ ದಾಖಲಿಸುವುದಾಗಿ ಎಚ್ಚರಿಸಿದರು.



ಮಾರಾಟಗಾರರಿಗೆ ನೋಟಿಸ್!
ಕಳೆದ 2025ರ ಏಪ್ರೀಲ್‌ನಿಂದ 2026ರ ಏಪ್ರೀಲ್‌ವರೆಗೂ ಜಿಲ್ಲೆಯಲ್ಲಿ ಹೆಚ್ಚಿನ ದರಕ್ಕೆ ಯೂರಿಯಾ ಮಾರಾಟ ಮಾಡಿದ 103 ರಸಗೊಬ್ಬರ ಕೇಂದ್ರಗಳಿಗೆ ಕೃಷಿ ಇಲಾಖೆ ಅಧಿಕಾರಿಗಳು ಭೇಟಿ ನೀಡಿದ್ದು, 64 ಮಾರಾಟಗಾರರಿಗೆ ಯೂರಿಯಾ ಮಾರಾಟ ನಿಲ್ಲಿಸಲು ಸೂಚಿಸಿದ್ದು, 32 ಜನರಿಗೆ ನೋಟಿಸ್ ಜಾರಿಗೊಳಿಸಿದ್ದಾರೆ. ನಿಯಮ ಉಲ್ಲಂಘಿಸಿದ 5 ಮಾರಾಟಗಾರರ ಲೈಸೆನ್ಸ್ ರದ್ದುಗೊಳಿಸಿದ್ದು, ಕಠಿಣ ಕ್ರಮವೂ ಕೈಗೊಳ್ಳುವುದಾಗಿ ಜಿಲ್ಲಾಧಿಕಾರಿ ಸ್ನೇಹಲ್ ಸಭೆಯಲ್ಲಿ ಎಚ್ಚರಿಸಿದರು.

ಕಡ್ಡಾಯ ನಿಯಮ ಪಾಲನೆ: ಸಗಟು ಮತ್ತು ಚಿಲ್ಲರೆ ಮಾರಾಟಗಾರರು ಯೂರಿಯಾ ಗೊಬ್ಬರ ರೈತರ ಎಫ್‌ಐಡಿ ಆಧರಿಸಿ ಜಮೀನಿನ ವಿಸ್ತೀರ್ಣದ ಮೇಲೆ ಒಂದು ತಿಂಗಳಿಗೆ, ಒಂದು ಚೀಲದಂತೆ ಮಾರಾಟ ಮಾಡಬೇಕು. ಈ ನಿಯಮ ಕಡ್ಡಾಯವಾಗಿ ಪಾಲಿಸುವಂತೆ ಆದೇಶ ಮಾಡಿದರು.

ಪ್ರಸಕ್ತ 2026-27ನೇ ಸಾಲಿನ ಮುಂಗಾರಿಗೆ ಒಟ್ಟು 45,648 ಮೆಟ್ರಿಕ್ ಟನ್ ವಿವಿಧ ರಸಗೊಬ್ಬರ ಬೇಡಿಕೆ ಪೈಕಿ ಆಗಲೇ, ಏಪ್ರೀಲ್‌ವರೆಗೂ 3,593 ಮೆಟ್ರಿಕ್ ಟನ್ ರಸಗೊಬ್ಬರ ಮಾರಾಟವಾಗಿದೆ ಎಂದು ಜಂಟಿ ನಿರ್ದೇಶಕ ಮಂಜುನಾಥ ತಿಳಿಸಿದರು.

ಅಲ್ಲದೇ, ಮಾರಾಟ ಮಳಿಗೆಗಳಲ್ಲಿ 9,112 ಮೆಟ್ರಿಕ್ ಟನ್, ಕೆಎಸ್‌ಎಸ್‌ಸಿಯಲ್ಲಿ 212.46 ಮೆಟ್ರಿಕ್ ಟನ್ ಮತ್ತು ಕೆಎಸ್‌ಸಿಎಂಎಫ್‌ನಲ್ಲಿ 633.50 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನಿದೆ. ಬೇಡಿಕೆ ಅನುಸಾರ ವಿತರಿಸುವುದಾಗಿಯೂ ಮಾಹಿತಿ ನೀಡಿದರು.

ಸಭೆಯಲ್ಲಿ ಉಪನಿರ್ದೇಶಕ ಸಂದೀಪ ಆರ್.ಜಿ., ಪೂರ್ಣಿಮಾ ಮೇಘನ್ನವರ, ರಸಗೊಬ್ಬರ ಚಿಲ್ಲರೆ ಮತ್ತು ಸಗಟು ಮಾರಾಟಗಾರರು, ರಸಗೊಬ್ಬರ ಉತ್ಪಾದನೆ ಮತ್ತು ವಿತರಣಾ ಸಂಸ್ಥೆಗಳ ಪ್ರತಿನಿಧಿಗಳು ಇದ್ದರು.

ನಾರಿ ಶಕ್ತಿ ವಂದನ ಅಧಿನಿಯಮ ಬೆಂಬಲಿಸಿ ಸಹಿ ಸಂಗ್ರಹ ಅಭಿಯಾನ

ಹುಬ್ಬಳ್ಳಿ: ಬಿಜೆಪಿ ಮಹಿಳಾ ಮೋರ್ಚಾದಿಂದ ನಾರಿ ಶಕ್ತಿ ವಂದನ ಅಧಿನಿಯಮ ಬೆಂಬಲಿಸಿ ಸಹಿ ಸಂಗ್ರಹ ಹಾಗೂ ಮಿಸ್ಡ್‌ಕಾಲ್ ಅಭಿಯಾನ ಆರಂಭಿಸಲಾಗುವುದು ಎಂದು ಪಕ್ಷದ ರಾಜ್ಯ ಕಾರ್ಯಕಾರಿಣಿ ಸದಸ್ಯೆ ಪೂರ್ಣಿಮಾ ಪ್ರಕಾಶ ಹೇಳಿದರು.

ಪುರುಷರ ಅವಲಂಬನೆ ಇಲ್ಲದೆ ಮಹಿಳೆಯರೇ ಸಂಪೂರ್ಣ ಆಡಳಿತ ನಡೆಸಲು ಅಣಕು ಸಂಸತ್ ಸೇರಿದಂತೆ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ ಎಂದು ಬುಧವಾರ ಇಲ್ಲಿಯ ಅರವಿಂದ ನಗರದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಧಿನಿಯಮದ ಕುರಿತು ಚರ್ಚಿಸಲು ಏಪ್ರಿಲ್ 16ರಿಂದ 18ರವರೆಗೆ ಸಂಸತ್ ವಿಶೇಷ ಅಧಿವೇಶನ ಕರೆಯಲಾಗಿದೆ. ಇದು ಜಾರಿಯಾದರೆ 2047ರ 100ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆಗೆ ಹೊಸ ಮುನ್ನುಡಿ ಬರೆಯಲಿದೆ ಎಂದು ಹೇಳಿದರು.

ಮಹಿಳಾ ಸಮಾವೇಶ ಆಯೋಜಿಸಲಾಗುತ್ತಿದೆ. ವಿವಿಧ ಕ್ಷೇತ್ರಗಳ ಸಾಧಕಿಯರೊಂದಿಗೆ ಚರ್ಚೆ ನಡೆಸಲಾಗುತ್ತಿದೆ. ಈ ಕಾರ್ಯಕ್ರಮಗಳು ನಡೆಯುವಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಸಹಿ ಸಂಗ್ರಹಿಸಿ, ಅದರ ವಿಡಿಯೊವನ್ನು ಅವರವರ ಸಾಮಾಜಿಕ ಮಾಧ್ಯಮಗಳ ಖಾತೆಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ ಎಂದರು.

> **ಶಾಸನ ಸಭೆಗಳಲ್ಲಿ ಮಹಿಳೆಯರ ಪರ ಗಟ್ಟಿ ಧ್ವನಿ ಇರಲಿಲ್ಲ, ಅಧಿನಿಯಮ ಜಾರಿಯಾದರೆ ಅಧಿಕಾರ ಪಡೆದು, ಒಳ್ಳೆಯ ಆಡಳಿತ ನೀಡಲು ಸಾಧ್ಯವಾಗುತ್ತದೆ.**
> ■ ಶ್ಯಾಮಲಾ ಕುಂದರ್, ಬಿಜೆಪಿ ನಾಯಕಿ

ಮಹಿಳೆಯರು ಎಲ್ಲಾ ರಂಗಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ನಿರ್ಣಯ ಕೈಗೊಳ್ಳುವಿಕೆಯಲ್ಲೂ ಅವರಿಗೆ ಸೂಕ್ತ ಅವಕಾಶ ಕಲ್ಪಿಸಲು ಈ ಅಧಿನಿಯಮ ಅಗತ್ಯವಿದೆ. ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಕಲ್ಪಿಸುವುದು ವೈಜ್ಞಾನಿಕ ಕ್ರಮವೂ ಆಗಿದೆ ಎಂದು ಹೇಳಿದರು.

ವಿವಿಧ ರಂಗಗಳ ಮಹಿಳೆಯರು ಚುನಾಯಿತರಾದರೆ ಆಯಾ ಕ್ಷೇತ್ರಗಳಲ್ಲಿ ಮಹತ್ವದ ಬದಲಾವಣೆ ಸಾಧ್ಯವಾಗುತ್ತದೆ. ತಮ್ಮ ಕುಟುಂಬದಂತೆ ಸಮಾಜವನ್ನೂ ನೋಡಿಕೊಳ್ಳುತ್ತಾರೆ ಎಂದರು. ಮೋರ್ಚಾದ ಶೋಭಾ, ಸೀಮಾ ಮಸೂತಿ, ಭಾರತಿ ಮಲ್ಲಿಕಾರ್ಜುನ, ಸೀಮಾ ಲದವಾ ಇದ್ದರು.



ಪ್ರವಾಸಿ ವಿಸಾದಡಿ ವಿದೇಶಿಗನ ಅನಧಿಕೃತ ವಾಸ

15 ವರ್ಷದ ಉದ್ಯಮ ಕಂಡು ನ್ಯಾಯಾಧೀಶರಿಗೆ ಅಚ್ಚರಿ

ಗೋಕರ್ಣ: ಇಲ್ಲಿನ ಮುಖ್ಯ ಕಡಲತೀರದಲ್ಲಿ ಫ್ರೆಂಚ್ ಪ್ರಜೆಯಿಂದ ನಡೆಯುತ್ತಿದ್ದ 'ಫ್ರೆಂಚ್ ಕಫೆ' ರೆಸ್ಟೋರೆಂಟ್ ವಿಷಯ ಇದೀಗ ಹೈಕೋರ್ಟ್‌ವರೆಗೆ ತಲುಪಿದೆ. ದೇಶ ಬಿಟ್ಟು ಹೋಗುವಂತೆ ಬಂದ ನೋಟಿಸ್ ಪ್ರಶ್ನಿಸಿ ಕ್ರಿಸ್ಟೋಫ್ ಸ್ಟಿಫನ್ ಮಾನ್ಸಿಯನ್ ಹೈಕೋರ್ಟಿಗೆ ಅರ್ಜಿ ಸಲ್ಲಿಸಿದ್ದು, ಇದೇ ವೇಳೆ ಅವರು ಅನಧಿಕೃತವಾಗಿ ಗೋಕರ್ಣದಲ್ಲಿ ಹೊಟೇಲ್ ಉದ್ದಿಮೆ ನಡೆಸುತ್ತಿರುವುದು ಬಹಿರಂಗವಾಗಿದೆ.

ಏನಿದು ಪ್ರಕಣ: ಪ್ರವಾಸಿ ವೀಸಾದ ಅಡಿ ಭಾರತಕ್ಕೆ ಬಂದ ಕ್ರಿಸ್ಟೋಫ್ ಸ್ಟಿಫನ್ ಮಾನ್ಸಿಯನ್ ಅವರು ಇಲ್ಲಿನ ಮುಖ್ಯ ಕಡಲತೀರದ ಬಳಿ 'ಫ್ರೆಂಚ್ ಕಫೆ' ಎಂಬ ಹೆಸರಿಟ್ಟು ರೆಸ್ಟೋರೆಂಟ್ ನಡೆಸುತ್ತಿದ್ದರು.

ತಮ್ಮ ಉದ್ದಿಮೆ ಚನ್ನಾಗಿ ನಡೆಯುತ್ತಿರುವ ಕಾರಣ ಭಾರತ ಬಿಟ್ಟು ಹೋಗಲು ಕ್ರಿಸ್ಟೋಫ್ ಸ್ಟಿಫನ್ ಮನಸ್ಸು ಮಾಡಿರಲಿಲ್ಲ. ಪ್ರವಾಸಿ ವೀಸಾದ ಅಡಿಯಲ್ಲಿಯೇ ಇಲ್ಲಿ ಶಾಶ್ವತವಾಗಿ ನೆಲೆಸಲು ಪ್ರಯತ್ನಿಸುತ್ತಿದ್ದರು. ಈ ಎಲ್ಲದರ ನಡುವೆ ಕ್ರಿಸ್ಟೋಫ್ ಸ್ಟಿಫನ್ ಅವರಿಗೆ 'ಲೀವ್ ಇಂಡಿಯಾ' ನೋಟಿಸ್ ಬಂದಿತು. ಭಾರತ ಬಿಟ್ಟು ಹೊರಡಿ ಎಂಬ ನೋಟಿಸ್ ನೋಡಿದ ಕ್ರಿಸ್ಟೋಫ್ ಸ್ಟಿಫನ್ ಅವರು ಇದನ್ನು ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋದರು. ವಿಚಾರಣೆ ವೇಳೆ ಕ್ರಿಸ್ಟೋಫ್ ಸ್ಟಿಫನ್ ಅವರು 15 ವರ್ಷದಿಂದ ನಿರಂತರವಾಗಿ ಭಾರತದಲ್ಲಿರುವ ಬಗ್ಗೆ ಗೊತ್ತಾಯಿತು. ಗೋಕರ್ಣದಲ್ಲಿ ಅವರು ಅನಧಿಕೃತವಾಗಿ ರೆಸ್ಟೋರೆಂಟ್ ನಡೆಸುತ್ತಿರುವ ವಿಷಯ ತಿಳಿದು ನ್ಯಾಯಾಧೀಶರು ಸಹ ಅಚ್ಚರಿವ್ಯಕ್ತಪಡಿಸಿದರು. ಜೊತೆ ಪ್ರವಾಸಿ ವೀಸಾದ ಅಡಿ ಆಗಮಿಸಿ ಇಲ್ಲಿಯೇ ರೆಸ್ಟೋರೆಂಟ್ ತೆರೆದ ಬಗ್ಗೆ ಆಕ್ಷೇಪಿಸಿದರು.

ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರು ಏಕ ಸದಸ್ಯ ಪೀಠದಲ್ಲಿ ವಿಚಾರಣೆ ನಡೆದಿದ್ದು, ಡೆಪ್ಯೂಟಿ ಸಾಲಿಸಿಟರ್ ಜನರಲ್ ಎಚ್. ಶಾಂತಿ ಭೂಷಣ್ ಅವರು ಕ್ರಿಸ್ಟೋಫ್ ಸ್ಟಿಫನ್ ಅವರ ಬಗ್ಗೆ ನ್ಯಾಯಾಲಯಕ್ಕೆ ಮಾಹಿತಿ ನೀಡಿದರು. ಟೂರಿಸ್ಟ್ ವೀಸಾದಲ್ಲಿ 15 ವರ್ಷಗಳಿಂದ ಭಾರತದಲ್ಲಿದ್ದು, ರೆಸ್ಟೋರೆಂಟ್ ನಡೆಸುತ್ತಿರುವ ಬಗ್ಗೆ ಅರಿತ ನ್ಯಾಯಾಲಯ 'ಕ್ರಿಸ್ಟೋಫ್ ಸ್ಟಿಫನ್ ಅವರು ತಕ್ಷಣ ದೇಶ ಬಿಡುವುದೇ ಉತ್ತಮ' ಎಂದು ಹೇಳಿದೆ. ಈ ವೇಳೆ ಕ್ರಿಸ್ಟೋಫ್ ಸ್ಟಿಫನ್ ತಮ್ಮ ಟೂರಿಸ್ಟ್ ವೀಸಾ ನಿಯಮ ಉಲ್ಲಂಘಿಸಿರುವುದು ಗೊತ್ತಾಗಿದೆ. 'ಕ್ರಿಸ್ಟೋಫ್ ಸ್ಟಿಫನ್ ಅವರು ಭಾರತದಲ್ಲಿ ಒಂದು ದಿನವೂ ಉಳಿಯುವ ಅರ್ಹತೆ ಕಳೆದುಕೊಂಡಿದ್ದಾರೆ.' ಎಂದು ನ್ಯಾಯಾಲಯ ಹೇಳಿದೆ. ಈ ಎಲ್ಲಾ ಹಿನ್ನಲೆ ಕ್ರಿಸ್ಟೋಫ್ ಸ್ಟಿಫನ್ ಅವರ ರೆಸ್ಟೋರೆಂಟ್ ಬಾಗಿಲು ಮುಚ್ಚಿದ್ದು, ಅವರು ಸದ್ಯ ಗೋಕರ್ಣದಿಂದ ಪರಾರಿಯಾಗಿದ್ದಾರೆ.

ಗೋ ಹತ್ಯೆ ನಿಷೇಧ ಕಟ್ಟುನಿಟ್ಟಾಗಿ ಜಾರಿಗೆ ತನ್ನಿ

ಅಂಕೋಲಾ: ರಾಜ್ಯದಲ್ಲಿ ಗೋವುಗಳ ಕಳ್ಳತನ, ಗೋ ಮಾಂಸ ಸಾಗಾಣಿಕೆ ವಿಪರೀತವಾಗಿದ್ದು, ಗೋ ಹತ್ಯೆ ನಿಷೇಧ ಕಾನೂನು ಜಾರಿಯಲ್ಲಿದ್ದರೂ ಯಾವುದೇ ಭಯವಿಲ್ಲದೇ ಕೈಗಳಲ್ಲಿ ತಲವಾರ್ ಹಿಡಿದು ಹಳ್ಳಿಗಳಿಗೆ ಹೋಗಿ ಕೊಟ್ಟಿಗೆಗಳಿಗೆ ನುಗ್ಗಿ ದನ ಕರುಗಳ ಕಳ್ಳತನ ನಡೆಸಲಾಗುತ್ತಿದೆ. ಸರ್ಕಾರ, ಪೊಲೀಸ್ ಇಲಾಖೆ ಕಣ್ಣು ಮುಚ್ಚಿ ಕುಳಿತುಕೊಂಡಿದೆ ಎಂದು ಶ್ರೀರಾಮ ಸೇನೆಯ ಮುಖಂಡ ಪ್ರಮೋದ ಮುತಾಲಿಕ್ ಹೇಳಿದರು

ಪಟ್ಟಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ರೈತರ ಪರವಾಗಿ ಇದ್ದೇವೆ ಎಂದು ಬೊಬ್ಬೆ ಹಾಕುವ ಸರ್ಕಾರಕ್ಕೆ ರೈತರ ಜಾನುವಾರುಗಳು ಕಳ್ಳತನ ನಡೆಯುತ್ತಿರುವುದು ತಿಳಿದಿಲ್ಲವೇ ಎಂದು ಪ್ರಶ್ನಿಸಿದರು.

ಗೋವುಗಳ ಕಳ್ಳತನ ತಡೆಯುವ ಗೋರಕ್ಷಕರು, ಹಿಂದೂ ಕಾರ್ಯಕರ್ತರ ಮೇಲೆ ಪ್ರಕರಣ ದಾಖಲಿಸುವ ಮೂಲಕ ಅವರನ್ನು ಬೆದರಿಸುವ ಕೆಲಸ ಸರ್ಕಾರ ಮಾಡುತ್ತಿದೆ ಎಂದು ಆರೋಪಿಸಿದರು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಸಹ ಗೋವುಗಳ ಕಳ್ಳತನ ಹೆಚ್ಚುತ್ತಿದ್ದು ಆರೋಪಿತರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸುವ ಕೆಲಸ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠರು ಮಾಡದಿದ್ದರೆ ಸಮಾನ ಮನಸ್ಕ ಗೋ ಪ್ರೇಮಿಗಳು ಗೋವುಗಳ ರಕ್ಷಣೆಗೆ ಉಗ್ರ ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದರು.




ಗೋ ಹತ್ಯೆ ನಿಷೇಧವನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿ ದೇಶಾದ್ಯಂತ ಅಭಿಯಾನ ನಡೆಸಲಾಗುತ್ತಿದೆ ಮೂರು ಹಂತದಲ್ಲಿ ನಡೆಯುವ ಅಭಿಯಾನದಲ್ಲಿ ಏಪ್ರಿಲ್ 27 ರಂದು ಇಡೀ ದೇಶದ ಎಲ್ಲ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಗುತ್ತದೆ. ಗೋವನ್ನು ರಾಷ್ಟ್ರೀಯ ಪ್ರಾಣಿಯಾಗಿ ಘೋಷಣೆ ಮಾಡಬೇಕು, ಗೋ ಹತ್ಯೆ ನಿಷೇಧ ಕಾಯ್ದೆ ಕೇಂದ್ರದಿಂದ ಜಾರಿಯಾಗಬೇಕು, ದೇಶದಿಂದ 50 ಸಾವಿರ ಕೋಟಿ ರೂಪಾಯಿಗಳ ಗೋ ಮಾಂಸ ರಫ್ತು ಆಗುತ್ತಿದ್ದು ಗೋಮಾಂಸ ರಫ್ತು ಆಗುವುದನ್ನು ಕೇಂದ್ರ ಸರ್ಕಾರ ನಿಲ್ಲಿಸಬೇಕು. ಗೋಮಾಳಕ್ಕೆ ಮೀಸಲಾಗಿರುವ ಜಮೀನು ಅತಿಕ್ರಮಣ ಆಗದಂತೆ ಕಠಿಣ ಕಾನೂನು ಜಾರಿಗೆ ಅಭಿಯಾನದ ಮೂಲಕ ಒತ್ತಾಯಿಸಲಾಗುವುದು ಎಂದು ಅವರು ತಿಳಿಸಿದರು.

ಮೂರು ಹಂತಗಳಲ್ಲಿ ವಿವಿಧ ಹಂತದ ಅಧಿಕಾರಿಗಳ ಮೂಲಕ ಮನವಿ ಮಾಡಲಾಗುತ್ತಿದ್ದು ಸ್ಪಂದನೆ ಸಿಗದಿದ್ದರೆ ಸಾಧು ಸಂತರು, ಗೋ ಪ್ರೇಮಿಗಳು, ವಿವಿಧ ಸಂಘಟನೆಗಳ ಒಂದು ಲಕ್ಷಕ್ಕೂ ಹೆಚ್ಚಿನ ಜನ ದೆಹಲಿ ಚಲೋ ನಡೆಸಿ ಆಮರಣ ಉಪವಾಸ ಸತ್ಯಾಗ್ರಹ ನಡೆಸುವುದಾಗಿ ಪ್ರಮೋದ ಮುತಾಲಿಕ್ ತಿಳಿಸಿದರು.

ಶ್ರೀರಾಮ ಸೇನೆ, ವಿಶ್ವ ಹಿಂದೂ ಪರಿಷತ್ ಮೊದಲಾದ ಸಂಘಟನೆಗಳ ಪ್ರಮುಖರು ಉಪಸ್ಥಿತರಿದ್ದರು.

ನಾನೂ ಸಚಿವ ಸ್ಥಾನದ ಆಕಾಂಕ್ಷಿ

ಬೆಳಗಾವಿ: ಸಚಿವ ಸ್ಥಾನಕ್ಕಾಗಿ ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಪೈಪೋಟಿ ಜೋರಾಗಿ ಪ್ರಾರಂಭವಾಗಿದೆ. ಇದರ ಮಧ್ಯದಲಿಯೇ ಶಾಸಕ ಆಸಿಫ್ ಸೇಠ್ ನಾನು ಕೂಡ ಸಚಿವ ಸ್ಥಾನದ ಆಕಾಂಕ್ಷಿ ಎಂದು ಇಂಗಿತ ವ್ಯಕ್ತಪಡಿಸಿದ್ದಾರೆ.



ಬುಧವಾರ ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಶಾಸಕರು ಸಚಿವ ಸ್ಥಾನ ಪಡೆಯಲು ಹೈಕಮಾಂಡ್ ಭೇಟಿಯಾಗುವುದರಲ್ಲಿ ಯಾವುದೇ ತಪ್ಪಿಲ್ಲ ಎಂದು ತಿಳಸಿದರು. ಮೈಸೂರು, ಬೆಂಗಳೂರು ಮತ್ತು ಮಂಗಳೂರಿನಂತಹ ಪ್ರದೇಶಗಳ ಅಲ್ಪಸಂಖ್ಯಾತ ಸಮುದಾಯದ ಶಾಸಕರನ್ನು ಹಿಂದೆ ಸಂಪುಟದಲ್ಲಿ ಸೇರಿಸಲಾಗಿದ್ದರೂ, ಉತ್ತರ ಕರ್ನಾಟಕವನ್ನು ನಿರಂತರವಾಗಿ ಕಡೆಗಣಿಸಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬೆಳಗಾವಿ ರಾಜ್ಯದ ಎರಡನೇ ರಾಜಧಾನಿ ಎಂಬ ಸ್ಥಾನಮಾನ ಹೊಂದಿರುವುದರಿಂದ ಇಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ಸಚಿವ ಸಂಪುಟದಲ್ಲಿ ಪ್ರತಿನಿಧಿತ್ವ ನೀಡುವುದು ಅಗತ್ಯವಾಗಿದೆ ಎಂದು ಹೇಳಿದರು.

---

50 ಲಕ್ಷ ಮೌಲ್ಯದ ವೈದ್ಯಕೀಯ ತಪಾಸಣೆ ಯಂತ್ರಗಳ ವಿತರಣೆ

ಹುಬ್ಬಳ್ಳಿ: ನಗರದ ಕರ್ನಾಟಕ ವೈದ್ಯಕೀಯ ಕಾಲೇಜ್ ಹಾಗೂ ಸಂಶೋಧನ ಸಂಸ್ಥೆ (ಕೆಎಂಸಿಆರ್ಐ)ಯ ಮಹಿಳಾ ಹಾಗೂ ಪ್ರಸೂತಿ ವಿಭಾಗಕ್ಕೆ ರೋಟರಿ ಕ್ಲಬ್ ಆಫ್ ಹುಬ್ಬಳ್ಳಿ ಸೆಂಟ್ರಲ್ ಮಹಿಳಾ ವಿಭಾಗದಿಂದ 50 ಲಕ್ಷ ರೂ. ಮೌಲ್ಯ ಅಲ್ಟ್ರಾಸೌಂಡ್ ಸ್ಕ್ಯಾನ 3ಡಿ, 4ಡಿ, ಬಿ22 ಯಂತ್ರ ವಿತರಿಸಲಾಗಿದ್ದು, ಆಸ್ಪತ್ರೆ ಬರುವ ಜನರು ಇದರ ಸದುಪಯೋಗ ಪಡೆಯಬೇಕು ಎಂದು ಕ್ಲಬ್ ಮಾಜಿ ಅಧ್ಯಕ್ಷೆ ರಿತಾ ಹಾಂಡಾ ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಧುನಿಕ ಯಂತ್ರವಾಗಿದ್ದು, ತಾಯಿ ಹಾಗೂ ಭ್ರೂಣ ಆರೈಕೆಗೆ ಅನುಕೂಲವಾಗಲಿದೆ. ಇದು ಜನ್ಮತಃ ವೈಫಲ್ಯ ಪತ್ತೆ ಹಚ್ಚಲು, ವೈದ್ಯಕೀಯ ನಿರ್ಧಾರ ಕೈಗೊಳ್ಳಲು ಹಾಗೂ ತಾಯಿ ಹಾಗೂ ನವಜಾತ ಶಿಶುಗಳ ಆರೋಗ್ಯ ಫಲಿತಾಂಶಗಳ ಸುಧಾರಣೆ ಅನುಕೂಲವಾಗಲಿದೆ ಎಂದರು.

ಮಾ. 30 ರಂದು ಯಂತ್ರವನ್ನು ಕೆಎಂಸಿಆರ್ ಐ ವಿತರಿಸಲಾಗಿದ್ದು, ಈಗ ಪ್ರತಿದಿನ 10-15 ಜನ ಇದರ ಸದುಪಯೋಗ ಪಡೆದಿದ್ದಾರೆ. ಚಿಕಿತ್ಸೆ ಉಚಿತವಾಗಿದ್ದು, ರೋಗಿಗಳು ಸದುಪಯೋಗ ಪಡೆಯಬಹುದು. ಕ್ಲಬ್ ಸದಸ್ಯರಾದ ಹುಸಾವಿಕಾ, ಸೋಫಿಯಾ, ಡಾ. ರವಿ ವಡ್ಡಮಾನಿ, ಶೋಭಾ ಬೆಂಬಾಳಗಿ, ಸುರೇಂದ್ರ ಪೋರವಾಲ್, ವಾಸುಕೀ ಸಂಜಿ ಸಹಕಾರ ನೀಡಿದ್ದಾರೆ ಎಂದು ಹೇಳಿದರು. ಮಾಜಿ ಕಾರ್ಯದರ್ಶಿ ಸಿಂಚಿನಾ ಆಂಥೋನಿ, ಡಾ. ಕಸ್ತೂರಿ ದೋಣಿಮಠ, ಸುರೇಂದ್ರ ಪುರವಾಲ್, ಡಾ. ಶೋಭಾ, ಹೇಮಲತಾ, ಅಂಜನಾ ಬಸನಗೌಡರ ಇದ್ದರು.

ಬೈಲಾದಂತೆ ಶ್ರೀಗಳ ಉಚ್ಚಾಟನೆ

ಹಾವೇರಿ : ಹರಿಹರ ಪಂಚಮಸಾಲಿ ಪೀಠಕ್ಕೆ ವಚನಾನಂದ ಸ್ವಾಮೀಜಿ ಅವರನ್ನು ನಾವೇ ಕರೆದು ಪಟ್ಟಕ್ಕೆ ಏರಿಸಿ, ಈಗ ನಾವೇ ಉಚ್ಚಾಟನೆ ಮಾಡುವ ಪರಿಸ್ಥಿತಿ ಬಂದಿರುವುದು ಬೇಸರ ಮೂಡಿಸಿದೆ. ಪೀಠದ ಬೈಲಾದ ಪ್ರಕಾರವೇ ಅವರನ್ನು ಉಚ್ಚಾಟನೆ ಮಾಡಲಾಗಿದ್ದು, ಕಾನೂನು ಪ್ರಕಾರ ಮುಂದಿನ ಕ್ರಮ ಜರುಗಿಸಲಾಗುವುದು ಎಂದು ಹರಿಹರ ಪಂಚಮಸಾಲಿ ಪೀಠದ ಟ್ರಸ್ಟಿ ಮಹೇಶ ಹಾವೇರಿ ಹೇಳಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹರಿಹರ ಪಂಚಮಸಾಲಿ ಪೀಠದ ಉಚ್ಚಾಟಿತ ವಚನಾನಂದ ಸ್ವಾಮೀಜಿ ಸಮಾಜವನ್ನು ಸಂಘಟನೆ ಮಾಡದೇ ವೈಯಕ್ತಿಕ ಕೆಲಸಗಳಿಗೆ ಪೀಠವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದರು.

ಸಮಾಜದ ಅನೇಕ ಹಿರಿಯರು 2008ರಲ್ಲಿ ಹರಿಹರ ಪಂಚಮಸಾಲಿ ಪೀಠ ಸ್ಥಾಪಿಸಿದರು. ಯಾವುದೋ ಕಾರಣದಿಂದ ಸಿದ್ಧಲಿಂಗ ಸ್ವಾಮಿಗಳನ್ನು ಪೀಠದಿಂದ ವಿಮುಕ್ತಿಗೊಳಿಸಲಾಯಿತು. ಆಗ ಬಾಲೆಹೊಸೂರ ದಿಂಗಾಲೇಶ್ವರ ಸ್ವಾಮೀಜಿ ಸಲಹೆ ಮೇರೆಗೆ ವಚನಾನಂದ ಸ್ವಾಮೀಜಿ ಅವರನ್ನು ನೇಮಿಸಲಾಯಿತು. ಸ್ವಾಮೀಜಿಗಳು ಅದನ್ನು ಬಿಟ್ಟು ಭಕ್ತರಿಗೆ ಆಶೀರ್ವಾದ ಮಾಡುವುದನ್ನು ಮರೆತು ಐಷಾರಾಮಿ ಜೀವನಕ್ಕೆ ಮೊರೆ ಹೋದರು ಎಂದರು. ರಾಜಣ್ಣ ಪಾಟೀಲ ಮಾತನಾಡಿದರು.

> **ಬಹಿರಂಗವಾಗಿ ಲೆಕ್ಕ ಕೊಡಲು ಆಗದು..**
> ಸರ್ಕಾರದಿಂದ 25 ಕೋಟಿ ಅನುದಾನ ಪೀಠಕ್ಕೆ ಬಂದಿದೆ. ಪೀಠದ ಭಕ್ತರು 10 ರೂ.,ನಿಂದ ಹಿಡಿದು 50ಲಕ್ಷ ರೂ.,ವರೆಗೆ ದೇಣಿಗೆ ಕೊಟ್ಟಿದ್ದಾರೆ. ಕೆಲವರು ಗುಪ್ತದಾನ ಕೊಟ್ಟಿದ್ದಾರೆ. ಎಲ್ಲದಕ್ಕೂ ಲೆಕ್ಕ ಇದೆ. ಬಹಿರಂಗವಾಗಿ ಎಲ್ಲವನ್ನೂ ಲೆಕ್ಕ ಕೊಡಲು ಆಗದು. ಪೀಠದ ಪರಿಮಿತಿಯಲ್ಲಿ ಬಂದು ಭಕ್ತರು ಕೇಳಿದರೆ ಎಲ್ಲ ಲೆಕ್ಕ ಕೊಡಲು ಈಗಲೂ ಸಿದ್ಧವಿದ್ದೇವೆ ಎಂದು ಹರಿಹರ ಪಂಚಮಸಾಲಿ ಪೀಠದ ಹಿರಿಯ ಧರ್ಮದರ್ಶಿ ಪಿ.ಡಿ. ಶಿರೂರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಪಂಚಮಸಾಲಿ ಸಮಾಜದ ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ವಸಂತಮ್ಮ ಹುಲ್ಲತ್ತಿ, ರಾಜ್ಯ ಉಪಾಧ್ಯಕ್ಷ ಶಂಕರ ಬಿಸರಳ್ಳಿ, ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಅಗಡಿ, ಕಾನೂನು ಸಲಹೆಗಾರ ಸೋಮಶೇಖರ ಕೊತಂಬ್ರಿ, ರಾಜಣ್ಣ ಪಾಟೀಲ, ನಿಜಲಿಂಗಪ್ಪ ಮುದಿಯಣ್ಣವರ, ಜಗದೀಶ ಕನವಳ್ಳಿ, ಸದಾನಂದ ಹಾದಿಮನಿ, ಬಸವರಾಜ ಹಾವಕ್ಕನವರ, ಜಗದೀಶ ಕನವಳ್ಳಿ ಇತರ ಇತರರಿದ್ದರು.



ಸಾಂಸ್ಕೃತಿಕ-ತಾಂತ್ರಿಕ ಉತ್ಸವ ನಾಳೆ

ಧಾರವಾಡ: ರಾಷ್ಟ್ರಮಟ್ಟದ ಹದಿನೈದನೇ ತಾಂತ್ರಿಕ ಮತ್ತು ಸಾಂಸ್ಕೃತಿಕ ಉತ್ಸವ ಏ.17 ಮತ್ತು 18ರಂದು ಎರಡು ದಿನಗಳ ಕಾಲ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತಾಂತ್ರಿಕ ಮತ್ತು ಅಭಿಯಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ಜರುಗಲಿದೆ.



ಈ ಬಗ್ಗೆ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರಾಚಾರ್ಯ ಡಾ.ರಮೇಶ ಚಕ್ರಸಾಲಿ ಅವರು, ಏ.17ರ ಬೆಳಿಗ್ಗೆ 9.30ಕ್ಕೆ ಎಸ್ಡಿಎಂ ಸೊಸೈಟಿ ಕಾರ್ಯದರ್ಶಿ ವಿ.ಜೀವಂದರಕುಮಾರ್ ಈ ಸಾಂಸ್ಕೃತಿಕ ಉತ್ಸವಕ್ಕೆ ಚಾಲನೆ ನೀಡಲಿದ್ದಾರೆ ಎಂದು ಹೇಳಿದರು. ಏ.18ರ ಸಂಜೆ 7ಕ್ಕೆ ಎಸ್ಡಿಎಂ ಕ್ರೀಡಾ ಮೈದಾನದಲ್ಲಿ ನಡೆಯುವ ಈ ಉತ್ಸವದಲ್ಲಿ ಬಾಲಿವುಡ್‌ನ ಖ್ಯಾತ ಗಾಯಕಿ ಹನ್ಸಿಕಾ ಪರಿಖ್ ರಂಜಿಸಲಿದ್ದು, ಈ ಇನ್ಸಿಗ್ನಿಯಾ 15ನೇ ಆವೃತ್ತಿಯಲ್ಲಿ 70ಕ್ಕೂ ಅಧಿಕ ವೈವಿಧ್ಯಮಯ ಕಾರ್ಯಕ್ರಮ ಜರುಗಲಿವೆ ಎಂದರು.

ಉತ್ಸವದಲ್ಲಿ 25ಕ್ಕೂ ಅಧಿಕ ಪ್ರಬಂಧಗಳ ಮಂಡನೆ, ರಸಪ್ರಶ್ನೆ, ತಾಂತ್ರಿಕ ಗೋಷ್ಠಿ ಜರುಗಲಿದ್ದು, ಎಂಜನಿರಿಂಗ್ ಹಾಗೂ ಮೂಲ ವಿಜ್ಞಾನ ಒಳಗೊಂಡ ಚಟುವಟಿಕೆ ನಡೆಯಲಿವೆ. ದೇಶದ ಸಾವಿರಕ್ಕೆ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪೂರ್ವ-ಪಾಶ್ಚಾತ್ಯ ನೃತ್ಯ, ಸಂಗೀತ, ಸಾಹಿತ್ಯ, ನಾಟಕಶಾಸ್ತ್ರ ಲಲಿತಕಲೆಗಳು ಸೇರಿವೆ. ಎಎಸ್‌ಡಿಎಂ ವೈದ್ಯಕೀಯ ವಿಜ್ಞಾನ ಕಾಲೇಜು ಮತ್ತು ಆಸ್ಪತ್ರೆ ಸಹಯೋಗದಲ್ಲಿ ರಕ್ತದಾನ ಶಿಬಿರವೂ ಏರ್ಪಡಿಸಿದ್ದಾಗಿ ತಿಳಿಸಿದರು. ಪ್ರಸಕ್ತ ವರ್ಷದಲ್ಲಿ 75ಕ್ಕೂ ಹೆಚ್ಚು ಕಂಪನಿಗಳು 500 ಆಫರ್‌ಗಳನ್ನು ನೀಡಿವೆ. ಪ್ರತಿಭಾವಂತರಿಗೆ ವಿದ್ಯಾರ್ಥಿ ವೇತನ ಮತ್ತು ಶುಲ್ಕ ರಿಯಾಯಿತಿ ನೀಡಲಾಗಿದೆ. ಸಾಮಾಜಿಕ ಬದ್ಧತೆಯೊಂದಿಗೆ, ಕೊಡುಗೆ ನೀಡಲು ಸಂಸ್ಥೆ ಸಿದ್ಧವಾಗಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಎಸ್ಡಿಎಂ ಸೊಸೈಟಿ ಕಾರ್ಯದರ್ಶಿ ಜೀವಂಧರಕುಮಾರ್, ಪ್ರೊ. ಸತೀಶ್ ಕೆ.ಎ., ಪ್ರೊ. ಸುನೀಲ್ ಹೊನ್ನುಂಗಾರ್, ಪ್ರೊ. ಜೆ.ವಿ.ಒಡವಿ ಇದ್ದರು.

ಬಹುಕೋಟಿ ಹಗರಣ: ಆರೋಪಿ ಸಂತೋಷ ಬಂಧನ

ಬಳ್ಳಾರಿ: ಬಳ್ಳಾರಿಯ ಕೆಐಎಡಿಬಿ ಕಚೇರಿಯಲ್ಲಿ ಇತ್ತೀಚೆಗೆ ನಡೆದ ಬಹುಕೋಟಿ ಹಗರಣಕ್ಕೆ ಸಂಬಂಧಿಸಿ ಆರೋಪಿ ಸಂತೋಷ್ ಎಚ್ ಅವರನ್ನು ಬಂಧಿಸುವಲ್ಲಿ ಎಪಿಎಂಸಿ ಪೊಲೀಸರು ಯಶಸ್ವಿಯಾಗಿದ್ದಾರೆ.



ಬಳ್ಳಾರಿ ವಲಯದ ಕೆಐಎಡಿಬಿ ಕಚೇರಿಯಲ್ಲಿ ಗುತ್ತಿಗೆ ನೌಕರರಾಗಿ ಕೆಲಸ ನಿರ್ವಹಿಸುತ್ತಿದ್ದ ಆರೋಪಿ ಸಂತೋಷ್ 16.17 ಕೋಟಿ ವಂಚನೆ ಮಾಡಿದ ಆರೋಪ ಎದುರಿಸುತ್ತಿದ್ದರು. ಆರೋಪಿ ಪತ್ತೆಗಾಗಿ ಪೊಲೀಸರು ಬಲೆ ಬೀಸಿದ್ದರು. ತೆರೆಮರೆಯಲ್ಲಿ ಆರೋಪಿ ಸಂತೋಷ್ ಜಾಮೀನಿಗಾಗಿ ಪ್ರಯತ್ನಿಸುತ್ತಿದ್ದರು. ತಲೆ ಮರೆಸಿಕೊಂಡಿದ್ದ ಆರೋಪಿ ಸಂತೋಷ್ ಎಚ್ ಅವರನ್ನು ಬಂಧಿಸುವಲ್ಲಿ ಎಪಿಎಂಸಿ ಠಾಣೆ ಪೊಲೀಸರು ಮಂಗಳವಾರ ಯಶಸ್ವಿಯಾಗಿದ್ದಾರೆ. ಪ್ರಕರಣ ಬಯಲಿಗೆ ಬರುತ್ತಿದ್ದಂತೆ ಎಸ್ಪಿ ಡಾ.ಸುಮನ್ ಡಿ.ಪೆನ್ನೇಕರ್ ಅವರು, ಈ ಪ್ರಕರಣ 15 ಕೋಟಿಗೂ ಮೀರಿ ಇರುವುದರಿಂದ ಮೇಲಧಿಕಾರಿಗಳ ಗಮನಕ್ಕೆ ತರಲಾಗುವುದು, ಪ್ರಕರಣ ಸಿಐಡಿಗೆ ಹಸ್ತಾಂತರಿಸಲಾಗುವುದು ಎಂದಿದ್ದರು. ಸದ್ಯ ಎಪಿಎಂಸಿ ಠಾಣೆ ಪೊಲೀಸರು ಆರೋಪಿ ಸಂತೋಷ್ ಅವರನ್ನು ಬಂಧಿಸಿ, ನ್ಯಾಯಾಂಗ ವಶಕ್ಕೆ ನೀಡಿದ್ದಾರೆ. ಪ್ರಕರಣದ ವಿಚಾರಣೆ ಮುಂದುವರೆದಿದೆ. ಕಳೆದ 2022ರ ಅ.15 ರಿಂದ 2026 ಫೆ.20ರ ವರೆಗೆ ಇಲಾಖೆಗೆ ಸಂಬಂಧಿಸಿದ ಬ್ಯಾಂಕ್ ಖಾತೆ ಮೂಲಕ ಹಂತ ಹಂತವಾಗಿ ಇತರೆ ಖಾತೆಗಳಿಗೆ ಹಣ ವರ್ಗಾವಣೆ ಮಾಡಿಕೊಂಡಿದ್ದಾನೆ ಎಂದು ಕೆಐಎಡಿಬಿ ಬಳ್ಳಾರಿ ವಲಯ ಕಚೇರಿಯ ಮುಖ್ಯ ಇಂಜನೀಯರ್ ಎಸ್.ಎಂ.ಕೊಳಲಗಿ ಅವರು ಎಪಿಎಂಸಿ ಠಾಣೆಯಲ್ಲಿ ದೂರು ನೀಡಿದ್ದರು. ಈ ದೂರು ಆಧರಿಸಿ ಪೊಲೀಸರು ಆರೋಪಿ ಪತ್ತೆಗಾಗಿ ತಂಡವನ್ನು ರಚಿಸಿದ್ದರು.

ಮಾಲವಿ ಜಲಾಶಯ ಗೇಟ್ ದುರಸ್ತಿಗೆ ಆಗ್ರಹಿಸಿ ಏ.27ಕ್ಕೆ ಪ್ರತಿಭಟನೆ

ಹಗರಿಬೊಮ್ಮನಹಳ್ಳಿ: ಮಾಲವಿ ಜಲಾಶಯದ ಗೇಟ್ ದುರಸ್ತಿ ಕಾರ್ಯ ಏ.26ರೊಳಗಾಗಿ ಪೂರ್ಣಗೊಳಿಸಿ ಇಲ್ಲದಿದ್ದರೆ ಏ 27 ರಂದು ಪ್ರತಿಭಟನೆ ನಡೆಸಲಾಗುವುದು ಎಂದು ರಾಜ್ಯ ರೈತ ಸಂಘದ ಕಾರ್ಯಾಧ್ಯಕ್ಷ ಜೆ.ಎಂ. ವೀರಸಂಗಯ್ಯ ತಿಳಿಸಿದರು.

ಬುಧವಾರ ಮಾಲ್ವಿ ಜಲಾಶಯಕ್ಕೆ ಭೇಟಿ ನೀಡಿ ದುರಸ್ತಿ ಕಾರ್ಯ ವಿಳಂಬದ ಬಗ್ಗೆ ಪರಿಶೀಲಿಸಿ ಮಾತನಾಡಿದರು.

ತಾಲೂಕಿನ ಮಾಲವಿ ಜಲಾಶಯ ತುಂಬುವುದರಿಂದ ಬರೀ ರೈತರಿಗಷ್ಟೇ ಉಪಯೋಗವಾಗಲಾರದು ಬದಲಿಗೆ ತಾಲೂಕಿನ ಹಲವು ವ್ಯಾಪಾರಸ್ಥರಿಗೆ ಕೂಲಿ ಕಾರ್ಮಿಕರಿಗೆ ಬಡ ಜನರಿಗೆ ಅನುಕೂಲವಾಗಲಿದೆ ಎನ್ನುವ ಉದ್ದೇಶದಿಂದ ಬಾಚಿಗೊಂಡನಹಳ್ಳಿ ಕರಿಬಸವನ ಗೌಡ್ರು ಜಲಾಶಯ ನಿರ್ಮಾಣ ಮಾಡಿದರೂ ಬಳಿಕ 5-6 ವರ್ಷ ಜಲಾಶಯ ತುಂಬುತ್ತಿತ್ತು ಬಳಿಕ ಜಲಾಶಯ ತುಂಬುವುದು ಅಪರೂಪ ಎನಿಸಿತ್ತು. ಈ ಜಲಾಶಯಕ್ಕೆ ಶಾಶ್ವತ ನೀರಾವರಿ ಯೋಜನೆಗಾಗಿ ಹಲವು ಸಂಘಟನೆಗಳ ಹೋರಾಟದ ಫಲವಾಗಿ ಸಾಕಾರಗೊಂಡಿದೆ. ಆದರೆ ಜಲಾಶಯ ಗೇಟ್ ನೀರು ಸೋರಿಕೆಯಾಗಿ ಪ್ರತಿ ವರ್ಷ ವ್ಯರ್ಥವಾಗಿ ನೀರು ಹಳ್ಳಕ್ಕೆ ಹರಿಯುತ್ತಿತ್ತು. ಹಲವು ಮನವಿ ಬಳಿಕ ಗೇಟ್ ರಿಪೇರಿ ಕಾರ್ಯ ಕೈಗೆತ್ತಿಕೊಂಡಿದ್ದು ಹೀಗಾಗಲೇ ಎಂಟು ಗೇಟ್ ದುರಸ್ತಿಗೊಂಡಿದ್ದು ಇನ್ನೆರೆಡು ಗೇಟ್ ದುರಸ್ತಿ ಕಾರ್ಯ ಎರಡು ತಿಂಗಳಿಂದ ನಡೆಯುತ್ತಿಲ್ಲ. ಮಳೆಗಾಲ ಬಂದರು ಗೇಟ್ ದುರಸ್ತಿ ಕಾರ್ಯ ಮುಗಿಯುತ್ತಿಲ್ಲ. ಈ ಭಾಗದ ರೈತರಿಗೆ ಆತಂಕವನ್ನುಂಟು ಮಾಡಿದೆ ಆದ್ದರಿಂದ ಕೂಡಲೇ ಸಂಬಂಧ ಪಟ್ಟ ಜನಪ್ರತಿನಿಧಿಗಳು ಹಾಗೂ ಇಲಾಖೆಯ ಅಧಿಕಾರಿಗಳು ಮಾಲವಿ ಜಲಾಶಯದ ಕ್ರಸ್ಟ್ ಗೇಟ್ ಗಳ ದುರಸ್ತಿ ಕಾರ್ಯ ಪೂರ್ಣಗೊಳಿಸಬೇಕು ಎಂದು ಆಗ್ರಹಿಸಿದರು.



ಸಾಹಿತಿ ಹುರುಕಡ್ಲಿ ಶಿವಕುಮಾರ್ ರೈತ ಸಂಘದ ಜಿಲ್ಲಾ ಯುವ ಘಟಕದ ಅಧ್ಯಕ್ಷ ತಂಬ್ರಹಳ್ಳಿ ರವಿಕುಮಾರ್, ಮುಖಂಡರಾದ ಈ ಕೃಷ್ಣಮೂರ್ತಿ, ಕುಮಾರಸ್ವಾಮಿ ಇತರರು ಇದ್ದರು.

ಹೈಕೋರ್ಟ್ ಮಹತ್ವದ ತೀರ್ಪು ಮುಟ್ಟಿನ ರಜೆ ಮಹಿಳೆಯ ಹಕ್ಕು


ಧಾರವಾಡ: ಮಹಿಳೆಯರ ಮುಟ್ಟಿನ ರಜೆ ಸೌಲಭ್ಯವಲ್ಲ, ಅದು ಸಂವಿಧಾನದ ವಿಧಿ 21ರ ಅಡಿಯಲ್ಲಿ ಪ್ರತಿಯೊಬ್ಬ ಮಹಿಳೆಯು 'ಘನತೆಯಿಂದ ಬದುಕುವ ಹಕ್ಕಿನ' ಅವಿಭಾಜ್ಯ ಅಂಗ ಎಂದು ಧಾರವಾಡ ಪೀಠ ಹೈಕೋರ್ಟ್ ಐತಿಹಾಸಿಕ ತೀರ್ಪು ನೀಡಿದೆ.



ಬೆಳಗಾವಿ ಹೋಟೆಲ್‌ನ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದ ಮಹಿಳೆಯು, ತಮಗೆ ಮುಟ್ಟಿನ ಸಮಯದಲ್ಲಿ ವೇತನ ಸಹಿತ ರಜೆ ನೀಡಬೇಕು. ಮುಟ್ಟಿನ ರಜೆ ನೀತಿ ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಕೋರಿ ನ್ಯಾಯಾಲಯದ ಮೊರೆ ಹೋಗಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಏಕಸದಸ್ಯ ಪೀಠ ಮುಟ್ಟಿನ ರಜೆ ಮಹಿಳೆಯರ ಜೈವಿಕ ಪ್ರಕ್ರಿಯೆ ಗೌರವಿಸುವ ಮತ್ತು ಅವರಿಗೆ ಕೆಲಸದ ಸ್ಥಳದಲ್ಲಿ ಘನತೆ ಒದಗಿಸುವ ಸಂವಿಧಾನಿಕ ಭರವಸೆಯಾಗಿದೆ ಎಂದು ಅಭಿಪ್ರಾಯಪಟ್ಟಿದೆ. ಅಸಂಘಟಿತ ವಲಯಕ್ಕೂ ಅನ್ವಯ: ಕೇವಲ ಸರ್ಕಾರಿ ಅಥವಾ ದೊಡ್ಡ ಕಂಪನಿಗಳಲ್ಲದೆ, ಹೋಟೆಲ್ ಕಾರ್ಮಿಕರು, ದಿನಗೂಲಿ ನೌಕರರು ಸೇರಿದಂತೆ 'ಅಸಂಘಟಿತ ವಲಯದ ಎಲ್ಲಾ ಮಹಿಳಾ ಉದ್ಯೋಗಿಗಳಿಗೂ' ಈ ನೀತಿ ಅನ್ವಯವಾಗಬೇಕು ಎಂದು ಕೋರ್ಟ್ ಸ್ಪಷ್ಟಪಡಿಸಿದೆ.

ಕಟ್ಟುನಿಟ್ಟಿನ ಜಾರಿಗೆ ಸೂಚನೆ: ರಾಜ್ಯ ಸರ್ಕಾರವು 2025ರ ನವೆಂಬರ್‌ನಲ್ಲಿ ಹೊರಡಿಸಿರುವ 'ಮುಟ್ಟಿನ ರಜೆ ನೀತಿ'ಯನ್ನು (ತಿಂಗಳಿಗೆ ಒಂದು ದಿನದ ವೇತನ ಸಹಿತ ರಜೆ) ರಾಜ್ಯದ ಎಲ್ಲಾ ಸಂಸ್ಥೆಗಳಲ್ಲಿ ತಕ್ಷಣದಿಂದ ಜಾರಿಗೆ ತರುವಂತೆ ಹೈಕೋರ್ಟ್ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ರಾಜ್ಯದ ಖಾಸಗಿ ಕಂಪನಿಗಳು, ಕೈಗಾರಿಕೆಗಳು, ಸಣ್ಣಪುಟ್ಟ ಸಂಸ್ಥೆಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಮುಟ್ಟಿನ ವೇತನ ಸಹಿತ ರಜೆ ಹಾದಿ ಸುಗಮವಾಗಿದೆ. ಆದೇಶ ಉಲ್ಲಂಘಿಸುವ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ನ್ಯಾಯಾಲಯ ಸೂಚಿಸಿದೆ.

ರಾಮ ಬಾಣ



ರಾಷ್ಟ್ರೀಯ ಭೌಗೋಳಿಕ ಪಟ್ಟಿಗೆ ಯಾಣ

ಬೆಂಗಳೂರು: ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನಲ್ಲಿರುವ ಯಾಣ ದಟ್ಟವಾದ ಅರಣ್ಯದ ನಡುವೆ ಇರುವ ವಿಶಿಷ್ಟ ಶಿಲಾ ರಚನೆಗಳಿಗೆ ಮತ್ತು ಭೈರವೇಶ್ವರ, ಮೋಹಿನಿ ಶಿಖರಗಳೆಂಬ ಕಪ್ಪು ಕಲ್ಲಿನ ಬೆಟ್ಟಗಳಿಗೆ ಪ್ರಸಿದ್ಧವಾದ ಪ್ರವಾಸಿ ತಾಣವಾಗಿದೆ. ಇದು ಟ್ರೆಕ್ಕಿಂಗ್ ಮತ್ತು ಸಾಹಸ ಪ್ರವಾಸಕ್ಕೆ ಹೇಳಿಮಾಡಿಸಿದ ಸ್ಥಳವಾಗಿದ್ದು, ಸುಂದರವಾದ ನಿಸರ್ಗದ ಮಡಿಲಿನಲ್ಲಿದೆ.

ಇಂತಹ ಅದ್ಭುತವಾದ ಪ್ರಕೃತಿ ಸೌಂದರ್ಯವನ್ನು ಹೊಂದಿರುವ ವಿಶ್ವ ಪ್ರಸಿದ್ಧ ಯಾಣಕ್ಕೆ ಈಗ ಮತ್ತೊಂದು ಗರಿ ಮೂಡಿದ್ದು, ರಾಷ್ಟ್ರೀಯ ಭೌಗೋಳಿಕ ಪಾರಂಪರಿಕ ಪಟ್ಟಿಗೆ ಸೇರ್ಪಡೆಯಾಗಿದೆ. ದೇಶದ ಭೂ ವಿಜ್ಞಾನ ಮತ್ತು ನೈಸರ್ಗಿಕ ಸಂಪನ್ಮೂಲಗಳ ಪರಿಶೋಧನೆ ಕ್ಷೇತ್ರದಲ್ಲಿ ಸಂಶೋಧನೆಯನ್ನು ನಡೆಸುವ ಕೇಂದ್ರ ಗಣಿ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ಭಾರತೀಯ ಭೂವೈಜ್ಞಾನಿಕ ಸಮೀಕ್ಷೆ (ಜಿಎಸ್‌ಐ) ಸಂಸ್ಥೆಯ ಮಹಾನಿರ್ದೇಶಕರು ಈ ಕುರಿತು ರಾಜ್ಯ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿದ್ದಾರೆ. ಭಾರತೀಯ ಭೂವೈಜ್ಞಾನಿಕ ಸಮೀಕ್ಷೆ (ಜಿಎಸ್‌ಐ) ಸಂಸ್ಥೆ ದೇಶದ ಭೌಗೋಳಿಕ ಪರಂಪರೆಗಳ ಭೂ ಸಂರಕ್ಷಣೆಗಾಗಿ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತದೆ. ಇದು ಭೌಗೋಳಿಕ ಪರಂಪರೆ ತಾಣ ಎಂದು ಕರೆಯಲ್ಪಡುವ ಪ್ರದೇಶಗಳನ್ನು ಗುರುತಿಸುವುದು ಮತ್ತು ಇತಿಹಾಸದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವ ಕಾರ್ಯ ನಿರ್ವಹಿಸುತ್ತದೆ.

ಜಿಎಸ್‌ಐ ಸಂಸ್ಥೆ ಪರಿಗಣಿಸಿರುವ ಅಂಶಗಳು

ಪಶ್ಚಿಮ ಘಟ್ಟಗಳೊಳಗೆ ನೆಲೆಗೊಂಡಿರುವ ಯಾಣ ಶಿಲೆಗಳು, ಟೆಕ್ಟೋನಿಕ್ಸ್, ಹವಾಮಾನ ಮತ್ತು ಕಾರ್ಸ್ಟ್ ಪ್ರಕ್ರಿಯೆಗಳಿಂದ ರೂಪುಗೊಂಡ ಭೂದೃಶ್ಯ ವಿಕಾಸದ ವೈಶಿಷ್ಟ್ಯ ಹೊಂದಿದೆ ಎಂದು ಹೇಳಿದೆ. ಅಲ್ಲದೇ, ಯಾಣದಲ್ಲಿನ ಗಮನಾರ್ಹ ಶಿಲಾ ದ್ರವ್ಯರಾಶಿಗಳು ಸುಮಾರು 2,700 ಮಿಲಿಯನ್ ವರ್ಷಗಳ ಹಿಂದೆ ರೂಪುಗೊಂಡವು ಮತ್ತು ಪೂರ್ವ ಕ್ಯಾಂಬ್ರಿಯನ್ ಡೊಲೊಮಿಟಿಕ್ ಸುಣ್ಣದ ಕಲ್ಲಿನಿಂದ ಕೂಡಿದೆ. ಲಕ್ಷಾಂತರ ವರ್ಷಗಳಲ್ಲಿ, ತೀವ್ರವಾದ ಉಷ್ಣವಲಯದ ಹವಾಮಾನ, ರಾಸಾಯನಿಕ ಕರಗುವಿಕೆಯೊಂದಿಗೆ ಸೇರಿಕೊಂಡು ವಿಶಿಷ್ಟವಾದ ಕಾರ್ಸ್ಟ್ ವೈಶಿಷ್ಟ್ಯಗಳ ಬೆಳವಣಿಗೆಗೆ ಕಾರಣವಾಯಿತು ಎಂದು ಜಿಎಸ್‌ಐ ಸಂಸ್ಥೆ ಅಭಿಪ್ರಾಯಪಟ್ಟಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕನೇಜಿ

ಭಾರತ ಹಿಂದೂ ದೇಶವೇ ಆಗಿದೆ
– ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ
– ಹಾಗಾದರೆ ಉಳಿದವರ ಗತಿಯೇನು ಎಂದು ಕೆಲವರು ಗಾಬರಿಯಾಗುತ್ತಾರೆ, ಇನ್ನು ಕೆಲವರು ಗೊತ್ತಿದ್ದೂ ಗಾಬರಿ ಪಡಿಸುತ್ತಾರೆ. ಹಿಂದೂ ಎಂದರೆ ಯಾವುದೇ ಜಾತಿ, ಮತ, ಪಂಥ, ಪಂಗಡವಲ್ಲ, ಪೂಜಾ ಪದ್ಧತಿಯನ್ನೇ ಧರ್ಮ ಅಂತ ವಾದಿಸುವ ಧರ್ಮವೂ ಅಲ್ಲ, ಭಾರತ ನನ್ನ ದೇಶ ಎಂದು ಪ್ರಾಮಾಣಿಕವಾಗಿ ಭಾವಿಸುವ, ಜೀವಿಸುವವರೆಲ್ಲರೂ ಹಿಂದುಗಳು!

ದಿನ ಭವಿಷ್ಯ

ಮೇಷ ಪೂರ್ವೈಸಲಾಗದ ಆಶ್ವಾಸನೆ ನೀಡಿ ಇಕ್ಕಟ್ಟಿಗೆ ಸಿಲುಕುವಿರಿ. ವರ್ಚಸ್ಸಿಗೆ ಧಕ್ಕೆ ತರುವ ಕಾರ್ಯ ಎಸಗದಿರಿ. ಕೌಟುಂಬಿಕ ಸಮಸ್ಯೆ ಕಾಡುವುದು.

ವೃಷಭ ಸವಾಲಿನ ದಿನ. ವೃತ್ತಿಯಲ್ಲೂ, ವೈಯಕ್ತಿಕವಾಗಿಯೂ ಹೆಚ್ಚು ಹೊಣೆ. ಸಂಬಂಧಕ್ಕೆ ಧಕ್ಕೆ. ಆರ್ಥಿಕ ಹಿಂಜರಿಕೆ. ಖರ್ಚು ಹೆಚ್ಚಳ.

ಮಿಥುನ ಹೊಸತನಕ್ಕೆ ಯತ್ನಿಸುವಿರಿ. ಅದರಲ್ಲಿ ಆಂಶಿಕ ಯಶ. ಮನಸ್ಸು ಉಲ್ಲಸಿತ ಗೊಳಿಸುವ ಪ್ರಸಂಗ ಉಂಟಾದೀತು. ಪ್ರೀತಿಯಲ್ಲಿ ಸಫಲತೆ.

ಕಟಕ ವೃತ್ತಿಯಲ್ಲಿ ಸಫಲತೆ. ಪರಿಶ್ರಮಕ್ಕೆ ಅಧಿಕ ಫಲ ಪಡೆಯುವಿರಿ. ಹೊಟ್ಟೆ ಕೆಡಿಸುವ ಆಹಾರ ತಿನ್ನದಿರಿ. ಪ್ರೀತಿಯ ಸಂಬಂಧ ಇನ್ನಷ್ಟು ಗಟ್ಟಿಗೊಳ್ಳಲಿದೆ.

ಸಿಂಹ ಆತ್ಮೀಯ ಸಂಬಂಧಕ್ಕೆ ಹುಳಿ ಹಿಂಡಲು ಕೆಲವರ ಯತ್ನ ನಡೆದೀತು. ನೀವು ಎಚ್ಚರದಿಂದಿರಿ. ವೃತ್ತಿಯಲ್ಲಿ ಪ್ರತಿಕೂಲ ಪರಿಣಾಮ ಎದುರಿಸುವಿರಿ.

ಕನ್ಯಾ ಒಳಿತು, ಕೆಡಕು ಎರಡನ್ನೂ ಎದುರಿಸುವಿರಿ. ಉದ್ವಿಗ್ನ ಸ್ಥಿತಿ ಕಾಣುವಿರಿ. ಅದರ ಜತೆಗೇ ಪರಿಹಾರದ ನಿರಾಳತೆಯೂ. ಆರೋಗ್ಯ ಬಗ್ಗೆ ಕಾಳಜಿ ವಹಿಸಿ.

ತುಲಾ ದುಗುಡಕ್ಕೆ ಕಾರಣವಾಗಿದ್ದ ವಿಷಯ ಇಂದು ಇತ್ಯರ್ಥ. ಆದರೆ ಸ್ವಲ್ಪ ಮಟ್ಟಿನ ಹಿನ್ನಡೆಯೂ ಉಂಟಾದೀತು. ಭಾವುಕ ಸನ್ನಿವೇಶ ಎದುರಿಸುವಿರಿ.

ವೃಶ್ಚಿಕ ಪ್ರಗತಿಯ ದಿನ. ಉದ್ಯೋಗದಲ್ಲಿ ಹೊಸ ಅವಕಾಶ. ಏಕಾಂಗಿಗಳಿಗೆ ವೈವಾಹಿಕ ಬಂಧ ಏರ್ಪಡಬಹುದು. ತೃಪ್ತಿಕರ ಆರ್ಥಿಕ ಪ್ರಗತಿ.

ಧನು ವೃತ್ತಿಯಲ್ಲಿ ಸೃಷ್ಟಿಯಾಗಿದ್ದ ಸಮಸ್ಯೆ ಪರಿಹಾರ. ಪ್ರೀತಿಯಲ್ಲಿ ಒಡಕು. ಕ್ಷುಲ್ಲಕ ವಿಷಯ ಮನಸ್ಸು ಕೆಡಿಸಬಹುದು. ದೇವರ ಪ್ರಾರ್ಥನೆ ಮಾಡಿ.

ಮಕರ ಹೊಣೆಗಾರಿಕೆ, ಒತ್ತಡ ಕಡಿಮೆ. ಯಾವುದೋ ವಿಷಯದಲ್ಲಿ ಭಾವುಕರಾಗಿ ನಿರ್ಧಾರ ತಾಳದಿರಿ. ಅದರ ಪ್ರಾಕ್ಟಿಕಲ್ ಆಯಾಮ ಪರಿಶೀಲಿಸಿ, ನಿರ್ಧರಿಸಿ.

ಕುಂಭ ವೃತ್ತಿಯಲ್ಲಿ ನಿಮ್ಮ ಕಠಿಣ ದುಡಿಮೆಗೆ ತೃಪ್ತಿಕರ ಫಲಿತಾಂಶ. ಆದರೆ ಕೆಲವು ವಿಷಯಗಳು ಮನಸ್ಸು ಕದಡುತ್ತವೆ. ನಿಮ್ಮ ಮಾತು ತಪ್ಪರ್ಥ ಬಿಂಬಿಸಬಹುದು.

ಮೀನ ದಂಪತಿಗಳು ತಮ್ಮ ಸಂಬಂಧ ಬಲಪಡಿಸುವ ಕ್ರಮ ತೆಗೆದುಕೊಳ್ಳಬೇಕು. ಸಣ್ಣ ಭೇದವು ಸಂಬಂಧ ಕೆಡಿಸದಿರಲಿ. ಮುಖ್ಯ ಕಾರ್ಯ ಅಪೂರ್ಣ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ:1,7,4,6

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ತಿದ್ದುಪಡಿ

ಮತ ಪತ್ರ ಬಳಸಲು ರಾಜ್ಯಪಾಲರ ಒಪ್ಪಿಗೆ

ಬೆಂಗಳೂರು: ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತಯಂತ್ರಗಳ ಬದಲಿಗೆ ಮತ ಪತ್ರವನ್ನು ಬಳಸಲು ರಾಜ್ಯಪಾಲರ ಒಪ್ಪಿಗೆ ಲಭಿಸಿದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2026ಕ್ಕೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ.



ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಮಂಗಳವಾರ ತಿದ್ದುಪಡಿ ವಿಧೇಯಕಕ್ಕೆ ಅಂಕಿತ ಹಾಕಿದ್ದು, ವಿಧೇಯಕವು, ಕರ್ನಾಟಕ ಗ್ರಾಮ ಸ್ವರಾಜ್, ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2026 ಆಗಿ ಬದಲಾಗಿದೆ. ರಾಜ್ಯ ಸರ್ಕಾರವು ಬುಧವಾರ ಅಧಿಕೃತ ರಾಜ್ಯಪತ್ರದಲ್ಲಿ ಅದನ್ನು ಪ್ರಕಟಿಸಿದೆ.

ಗ್ರಾಮ ಪಂಚಾಯತ್ ಸೇರಿದಂತೆ ಇತರೆ ಚುನಾವಣೆ ಸಂದರ್ಭದಲ್ಲಿ ಮತದಾರ ಮೇಲಿನ ದಬ್ಬಾಳಿಕೆ, ಬೆದರಿಕೆ ಹಾಗೂ ಅನಗತ್ಯ ಪ್ರಭಾವ ಹಾಕುವವರ ವಿರುದ್ಧ ಕ್ರಮ ಕೈಗೊಳ್ಳುವ ಅಂಶ ಈ ಅಧಿನಿಯಮದಲ್ಲಿ ಸೇರ್ಪಡೆಗೊಂಡಿದೆ. ಸಂವಿಧಾನದ 326ನೇ ಅನುಚ್ಛೇದದಡಿ ಜನರ ಪ್ರಜಾಸತ್ತಾತ್ಮಕ ಇಚ್ಛೆಯನ್ನು ಪ್ರತಿಬಿಂಬಿಸುವ ಮುಕ್ತ, ನ್ಯಾಯಸಮ್ಮತ ಮತ್ತು ಪಾರದರ್ಶಕ ರೀತಿಯಲ್ಲಿ ಚುನಾವಣೆ ನಡೆಸುವ ಸಲುವಾಗಿ ಈ ಅಧಿನಿಯಮ ಜಾರಿಗೊಳಿಸಲಾಗುತ್ತಿದೆ.

ಮತದಾರರ ಪಟ್ಟಿ ಸಿದ್ಧಪಡಿಸಿ

ಅಧಿನಿಯಮದ ಪ್ರಕಾರ, ಜಿಲ್ಲಾ ಪಂಚಾಯತ್‌ನ ಪ್ರತಿಯೊಂದು ಮತಕ್ಷೇತ್ರಗಳಲ್ಲಿ ರಾಜ್ಯ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ಉಪವಿಭಾಗಾಧಿಕಾರಿ ಮತದಾರರ ಪಟ್ಟಿ ಸಿದ್ಧಪಡಿಸಬೇಕು. ಸಿದ್ಧಪಡಿಸಲಾದ ಮತದಾರರ ಪಟ್ಟಿಯನ್ನು ಈ ಅಧಿನಿಯಮದ ಅನುಸಾರವಾಗಿ ಪರಿಷ್ಕರಿಸಬೇಕು, ಮಾರ್ಪಡಿಸಬೇಕು ಹಾಗೂ ಪ್ರಕಟಿಸಬೇಕು. ಜಿ.ಪಂ. ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸಲಾಗಿರುವ ಯಾರೇ ವ್ಯಕ್ತಿ, ಆ ಮತಕ್ಷೇತ್ರದ ಚುನಾವಣೆಯಲ್ಲಿ ಮತದಾನಕ್ಕೆ ಹಕ್ಕುಳ್ಳವನಾಗಿರಲಿದ್ದಾನೆ.

ಮತದಾರರನ್ನು ದಬ್ಬಾಳಿಕೆ, ಬೆದರಿಕೆ ಮತ್ತು ಅನಗತ್ಯ ಪ್ರಭಾವದಿಂದ ರಕ್ಷಿಸಿ, ಆ ಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆಯ ಪಾವಿತ್ರ್ಯ ಸುರಕ್ಷಿತಗೊಳಿಸಲು ಈ ಅಧಿನಿಯಮದಲ್ಲಿ ಉಲ್ಲೇಖಿಸಲಾಗಿದೆ. ರಾಜ್ಯ ಕಾಗದ ಪತ್ರಗಳನ್ನು ಬಳಸಿಕೊಂಡು ರಹಸ್ಯ ಮತದಾನ ವ್ಯವಸ್ಥೆ ಅಳವಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲು ಸ್ಥಳೀಯ ಸಂಸ್ಥೆಗಳನ್ನು ನಿಯಂತ್ರಿಸುವ ಸಂಬಂಧ ಈ ತಿದ್ದುಪಡಿ ಮಾಡಲಾಗಿದೆ.

ಸಿಎಂ ಸಿದ್ದರಾಮಯ್ಯ ಸ್ಥಾನ ಸುಭದ್ರ: ಡಾ.ಯತೀಂದ್ರ

ಪುಟ ೧➡ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯ ಸರಕಾರಕ್ಕೆ ಎರಡೂವರೆ ವರ್ಷ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಸಂಪುಟ ಪುನಾರಚನೆ ಆಗಬೇಕೆಂದು ಕೆಲವು ಶಾಸಕರು ಕೇಳುತ್ತಿದ್ದಾರೆ. ಸಂಪುಟ ಪುನರ್ ರಚನೆ ಆಗಬೇಕಿದೆ. ಅದು ಯಾವಾಗ ಎಂಬುದನ್ನು ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಆದರೆ, ಸಚಿವ ಸ್ಥಾನದ ಆಕಾಂಕ್ಷಿ ನಾನಲ್ಲ, ನಮ್ಮ ತಂದೆ ಸಿಎಂ ಆಗಿರುವವರೆಗೂ ನಾನು ಸಚಿವ ಸ್ಥಾನ ಕೇಳುವುದಿಲ್ಲ ಎಂದರು.



ನಮ್ಮ ತಂದೆ ಸಿದ್ದರಾಮಯ್ಯನವರೇ ಐದು ವರ್ಷ ಮುಖ್ಯಮಂತ್ರಿಯಾಗಿರುತ್ತಾರೆ. ಖುದ್ದು ಸಿಎಂ ಅವರೇ ಈ ವಿಷಯವನ್ನು ಅಧಿವೇಶನದಲ್ಲಿ ಸ್ಪಷ್ಟಪಡಿಸಿದ್ದಾರೆ. ಅಂದಮೇಲೆ ಮತ್ತೆ ಚರ್ಚೆ ಇಲ್ಲ, ನಾನು ಎರಡೂವರೆ ವರ್ಷದಿಂದ ಇದನ್ನೇ ಹೇಳುತ್ತಿದ್ದೇನೆ. ಈಗಲೂ ಹೇಳುತ್ತಿದ್ದೇನೆ. ನನ್ನ ತಂದೆಯ ಮಾತೇ ನನ್ನ ಮಾತು ಕೂಡ ಎಂದು ಹೇಳಿದರು.

ಎಚ್‌ಡಿಕೆ ಸಾಕ್ಷಿ ಕೊಡಲಿ: ಸಿಎಂ ತಮ್ಮ ಪುತ್ರನನ್ನು ವಸೂಲಿಗೆ ಇಟ್ಟುಕೊಂಡಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮಾಡಿರುವ ಆರೋಪಕ್ಕೆ ತಿರುಗೇಟು ನೀಡಿದ ಡಾ. ಯತೀಂದ್ರ ಸಿದ್ದರಾಮಯ್ಯ, ನನ್ನ ಮೇಲಿನ ಆರೋಪಕ್ಕೆ ಒಂದೇ ಒಂದು ಸಾಕ್ಷಿ ಕೊಡಿ. ವರ್ಗಾವಣೆ ದಂಧೆ ಎನ್ನುತ್ತಾರೆ, ಇದಕ್ಕೆ ಸಾಕ್ಷಿ ಇದೆಯೆ? ಕಮಿಷನ್ ದಂಧೆ ಎನ್ನುತ್ತಾರೆ ಇದಕ್ಕೆ ಸಾಕ್ಷಿ ಇದೆಯೆ? ಎಂದು ಖಾರವಾಗಿ ಪ್ರಶ್ನಿಸಿದರು. ಸಾಕ್ಷಿ ಇಲ್ಲದೆ ಎರಡೂವರೆ ವರ್ಷದಿಂದ ಎಚ್.ಡಿ.ಕುಮಾರಸ್ವಾಮಿಯವರು ಕೇವಲ ಆರೋಪ ಮಾಡುತ್ತಿದ್ದಾರೆ. ಸಾಕ್ಷಿ ಕೊಟ್ಟು ಆರೋಪ ಮಾಡಲಿ, ಆಗ ಅದಕ್ಕೆ ಬೆಲೆ ಇರುತ್ತದೆ. ನಾನು ಈಗ ಕುಮಾರಸ್ವಾಮಿ ವಸೂಲಿ ಮಾಡುತ್ತಿದ್ದಾರೆ ಎಂದು ಹೇಳಬಹುದಾ? ಸಾಕ್ಷಿಯಿಲ್ಲದೆ ಆರೋಪ ಮಾಡೋದು ಸುಲಭ. ನಾನು ಅನಗತ್ಯವಾಗಿ ಸಾಕ್ಷಿಗಳಿಲ್ಲದೆ ಯಾರ ಮೇಲೂ ಆರೋಪ ಮಾಡುವುದಿಲ್ಲ ಎಂದು ಛೇಡಿಸಿದರು.

ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ವಿರೋಧ ಪಕ್ಷಗಳು ಇಲ್ಲಸಲ್ಲದ ಆರೋಪ ಮಾಡಿ, ಸಾರ್ವಜನಿಕರಲ್ಲಿ ನಮ್ಮ ಬಗ್ಗೆ ಕೆಟ್ಟ ಅಭಿಪ್ರಾಯ ಮೂಡಬೇಕೆಂದು ಪ್ರಯತ್ನಿಸುತ್ತಿದ್ದಾರೆ. ನನ್ನ ತಂದೆ ನನ್ನನ್ನ ವಸೂಲಿಗಾಗಿ ನೇಮಿಸಿಕೊಂಡಿಲ್ಲ. ನನ್ನ ತಂದೆಯ ಪರವಾಗಿ ನಮ್ಮ ಕ್ಷೇತ್ರದಲ್ಲಿ ನಾನು ಕೆಲಸ ಮಾಡುತ್ತಿದ್ದೇನೆ ಎಂದು ತಿರುಗೇಟು ನೀಡಿದರು. ನಮ್ಮ ತಂದೆಯ ರಾಜಕೀಯ ಜೀವನ ಮುಂದುವರಿಕೆ ಭಾಗವಾಗಿ ನಾನು ಶಾಸಕ-ಎಂಎಲ್ಸಿ ಆಗಿದ್ದೇನೆ. ನಮ್ಮ ಕ್ಷೇತ್ರದ ಜನರ ರಕ್ಷಣೆಗೆ ನಮ್ಮ ತಂದೆಯ ಅಭಿಮಾನಿಗಳ ರಕ್ಷಣೆಗಾಗಿ ನಾನು ರಾಜಕೀಯಕ್ಕೆ ಬಂದಿದ್ದೇನೆ. ನಮ್ಮ ಅಣ್ಣ ರಾಕೇಶ್ ಸಿದ್ದರಾಮಯ್ಯ ಇಲ್ಲದ ಕಾರಣಕ್ಕೆ ನಾನು ಬಂದೆ. ಮಕ್ಕಳನ್ನೇ ಪಕ್ಷದ ರಾಜ್ಯಾಧ್ಯಕ್ಷ, ಎಂಎಲ್‌ಎ, ಎಂಪಿ ಮಾಡುವುದು ಕುಟುಂಬ ರಾಜಕಾರಣ. ನಮ್ಮದಲ್ಲ ಎಂದು ಕುಟುಂಬ ರಾಜಕಾರಣಕ್ಕೆ ಹೊಸ ವ್ಯಾಖ್ಯಾನ ನೀಡುವ ಮೂಲಕ ಕುಮಾರಸ್ವಾಮಿಗೆ ತಿರುಗೇಟು ನೀಡಿದರು. ಮುಡಾದಲ್ಲಿ ನಡೆದಿರುವ ನಿವೇಶನ ಹಂಚಿಕೆ ಹಗರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸರಕಾರದ ಒತ್ತಡಕ್ಕೆ ಮಣಿದು ಮೇಲ್ಮನವಿ ಹಾಕಿದ್ದಾರೆ.

ವಿನಯ್ ದೋಷಿ

ಪುಟ ೧➡ ಎ-2 ವಿಕ್ರಮ್, ಎ-3 ಕೀರ್ತಿ ಕುಮಾರ್, ಎ-4 ಸಂದೀಪ್, ಎ-5 ವಿನಾಯಕ್, ಎ-6 ಮಹಾಬಲೇಶ್ವರ್ ಅಲಿಯಾಸ್ ಮುದಕ, ಎ-7 ಸಂತೋಷ್, ಎ-8 ದಿನೇಶ್, ಎ-9 ಅಶ್ವಥ್, ಎ-10 ಸುನಿಲ್, ಎ-11 ನಜೀರ್ ಅಹಮದ್, ಎ-12 ಷಾನವಾಜ್, ಎ-13 ನೂತನ್, ಎ-14 ಹರ್ಷಿತ್, ಎ-15 ವಿನಯ್ ಕುಲಕರ್ಣಿ, ಎ-16 ಚಂದ್ರು ಮಾಮ, ಎ-18 ವಿಕಾಸ್ ಕಲಬುರ್ಗಿ, ಎ-19 ಚನ್ನಕೇಶವ ಟಿಂಗರಿಕರ್.

ಸಿಬಿಐ ತನಿಖೆಗೆ ಕುಟುಂಬಸ್ಥರ ಆಗ್ರಹ: 2016ರ ಜೂ.15ರಂದು ಧಾರವಾಡದ ಸಪ್ತಾಪುರ ಬಡಾವಣೆಯ ಜಿಮ್‌ನಲ್ಲಿ ವ್ಯಾಯಾಮ ಮಾಡುತ್ತಿದ್ದ ಯೋಗೇಶ್ ಗೌಡ ಅವರನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಂದಿದ್ದರು. ಆರಂಭದಲ್ಲಿ ಸ್ಥಳೀಯ ಪೊಲೀಸರು ಇದೊಂದು ಆಸ್ತಿ ವಿವಾದದ ಕೊಲೆ ಎಂದು ಪ್ರಕರಣ ದಾಖಲಿಸಿ ಆರು ಮಂದಿ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಿದ್ದರು. ಆದರೆ, ಹತ್ಯೆಯ ಹಿಂದೆ ರಾಜಕೀಯ ಷಡ್ಯಂತ್ರವಿದೆ ಎಂದು ಸಂಶಯ ವ್ಯಕ್ತಪಡಿಸಿದ ಯೋಗೇಶ್ ಗೌಡ ಅವರ ಕುಟುಂಬಸ್ಥರು ನಿರಂತರವಾಗಿ ಸಿಬಿಐ ತನಿಖೆಗೆ ಆಗ್ರಹಿಸಿದ್ದರು.

ಸಾಕ್ಷಿಗಳ ಮೇಲೆ ಪ್ರಭಾವ ಬೀರಿದ ಆರೋಪ

ಸಾಕ್ಷಿಗಳ ಮೇಲೆ ಪ್ರಭಾವ ಬೀರಿದ ಆರೋಪದ ಮೇಲೆ ಒಮ್ಮೆ ಅವರ ಜಾಮೀನು ರದ್ದಾಗಿತ್ತು. ಈಗ ನ್ಯಾಯಾಲಯವು ಅವರನ್ನು ದೋಷಿ ಎಂದು ಘೋಷಿಸಿರುವುದರಿಂದ ಅವರು ಮತ್ತೆ ಜೈಲು ಪಾಲಾಗುವುದು ಅನಿವಾರ್ಯವಾಗಿದೆ. ಏ.16 (ಇಂದು) ರಂದು ಅಪರಾಧಿಗಳ ಶಿಕ್ಷೆಯ ಪ್ರಮಾಣವೂ ಹೊರಬೀಳಲಿದೆ. ಹತ್ತು ವರ್ಷಗಳ ಬಳಿಕ ಯೋಗೇಶ್ ಗೌಡ ಕುಟುಂಬಕ್ಕೆ ನ್ಯಾಯ ಸಿಕ್ಕಂತಾಗಿದೆ.

ಪ್ರಕರಣದ ಹಿನ್ನೆಲೆ

ಯೋಗೇಶ್ ಗೌಡ ಅವರನ್ನು 2016ರ ಜೂ.15ರಂದು ದುಷ್ಕರ್ಮಿಗಳು ಕೊಲೆ ಮಾಡಿದ್ದರು. ಪ್ರಕರಣದ ತನಿಖೆಯನ್ನು ಸ್ಥಳೀಯ ಪೊಲೀಸರ ಬಳಿಕ ಸಿಬಿಐ ಕೈಗೆತ್ತಿಕೊಂಡು ಶಾಸಕ ವಿನಯ್ ಕುಲಕರ್ಣಿ ಅವರನ್ನು ಆರೋಪಿಯನ್ನಾಗಿ ಪರಿಗಣಿಸಿ ಬಂಧಿಸಿತ್ತು. ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ವಿನಯ್ ಕುಲಕರ್ಣಿ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು 2026ರ ಜನವರಿಯಲ್ಲಿ ಹೈಕೋರ್ಟ್ ವಜಾಗೊಳಿಸಿ ಆದೇಶಿಸಿತ್ತು. ಬಳಿಕ ಇದನ್ನು ಪ್ರಶ್ನಿಸಿ ಅವರು ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರು. ಅವರಿಗೆ ಫೆಬ್ರವರಿ 27ರಂದು ಸುಪ್ರೀಂ ಕೋರ್ಟ್ ಜಾಮೀನು ಮಂಜೂರು ಮಾಡಿತ್ತು. ಇದರಿಂದ ಅವರು ಪರಪ್ಪನ ಅಗ್ರಹಾರ ಜೈಲಿನಿಂದ ಬಿಡುಗಡೆ ಆಗಿದ್ದರು.

ಹತ್ಯೆ ಪ್ರಕರಣದ ಘಟನಾವಳಿಗಳು

- 2016ರ ಜೂನ್ 15ರಂದು ಜಿ.ಪಂ. ಬಿಜೆಪಿ ಸದಸ್ಯ ಯೋಗೇಶಗೌಡ ಗೌಡ ಕೊಲೆ
- ಧಾರವಾಡದ ಸಪ್ತಾಪುರ ಬಡಾವಣೆಯಲ್ಲಿನ ವಿನಯ್ ಒಡೆತನದ ಜಿಮ್‌ನಲ್ಲಿ ಬೆಳಗ್ಗೆ 6.30ಕ್ಕೆ ಕೊಲೆ
- 2016ರ ಜೂ.20ರಂದು ಕೊಲೆ ಆರೋಪಿದ ಮೇರೆಗೆ ಬಸವರಾಜ ಮುತ್ತಗಿ, ವಿನಾಯಕ ಕಟಗಿ, ಸಂದೀಪ ಸವದತ್ತಿ, ವಿಕ್ರಂ ಬಳ್ಳಾರಿ, ಕೀರ್ತಿ ಕುರಹಟ್ಟಿ, ಮುದಕಪ್ಪ ಹೊಂಗಲ್ ಅವರನ್ನು ಬಂಧಿಸಿದ ಧಾರವಾಡ ಉಪನಗರ ಠಾಣೆ ಪೊಲೀಸರು
- ಇವರು ನಿಜವಾದ ಕೊಲೆಗಾರರಲ್ಲ ಎಂದು ಆರೋಪಿಸಿದ್ದ ಯೋಗೇಶಗೌಡ ಕುಟುಂಬಸ್ಥರಿಂದ ಸಿಬಿಐ ತನಿಖೆಗೆ ಆಗ್ರಹ
- 2017ರ ಡಿಸೆಂಬರ್‌ನಲ್ಲಿ ಕಮಲ ಬಿಟ್ಟು ಕೈ ಪಾಳಯ ಸೇರಿದ ಯೋಗೇಶ ಪತ್ನಿ ಮಲ್ಲಮ್ಮ ಗೌಡರ. ಇದರ ಹಿಂದೆ ಮಾಜಿ ಸಚಿವ ವಿನಯ ಕುಲಕರ್ಣಿ ಪಾತ್ರವಿದೆ ಎಂಬ ಆರೋಪ ಕೇಳಿಬಂದಿತ್ತು. ಮಲ್ಲಮ್ಮ ಅವರು ಕಾಂಗ್ರೆಸ್ ಸೇರಿದ್ದಕ್ಕೆ ಪ್ರಕರಣಕ್ಕೆ ಹಿನ್ನಡೆ. ಮೊದಲನೇ ದೂರುದಾರಳಾಗಿದ್ದ ಮಲ್ಲಮ್ಮಳೇ ಪ್ರಕರಣದಿಂದ ಹಿಂದೆ ಸರಿದ ಕಾರಣಕ್ಕೆ ಭಾರಿ ಹಿನ್ನಡೆ ಅನುಭವಿಸಿದ್ದ ಯೋಗೀಶ ಕುಟುಂಬ
- 2018ರಲ್ಲಿ ಹೈಕೋರ್ಟ್ ಮೆಟ್ಟಿಲೇರಿದ್ದ ಕುಟುಂಬಸ್ಥರು. ಪೊಲೀಸ್ ತನಿಖೆ ಹಿನ್ನೆಲೆಯಲ್ಲಿ ಅರ್ಜಿ ವಜಾಗೊಳಿಸಿದ್ದ ಹೈ

ಉಪ ಚುನಾವಣೆ ಪರಿಣಾಮ: ಕಾಂಗ್ರೆಸ್‌ನಿಂದ ಜಬ್ಬಾರ್ ವಜಾ

ಪುಟ ೧➡ ಈ ಹಿಂದೆ ಕೆಪಿಸಿಸಿ ಅಲ್ಪಸಂಖ್ಯಾತ ವಿಭಾಗದ ಅಧ್ಯಕ್ಷ ಸ್ಥಾನಕ್ಕೆ ಅಬ್ದುಲ್ ಜಬ್ಬಾರ್ ನೀಡಿದ್ದ ರಾಜೀನಾಮೆ ಅಂಗೀಕರಿಸಿ, ಜಬ್ಬಾರ್ ನೇತೃತ್ವದಲ್ಲಿ ರಚಿಸಲಾಗಿದ್ದ ಅಲ್ಪಸಂಖ್ಯಾತ ವಿಭಾಗದ ಸಮಿತಿಯನ್ನು ವಿಸರ್ಜಿಸಿದ್ದ ಡಿ.ಕೆ. ಶಿವಕುಮಾರ್ ಇದೀಗ ಅವರನ್ನು ಪಕ್ಷದಿಂದ ಹೊರಹಾಕಿದ್ದಾರೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಉಂಟಾದ ಬಂಡಾಯದಿಂದ ಅಲ್ಪಸಂಖ್ಯಾತ ನಾಯಕರ ಮೇಲೆ ಶಿಸ್ತುಕ್ರಮಕ್ಕೆ ಮುಂದಾಗಿರುವ ಕಾಂಗ್ರೆಸ್ ಈಗಾಗಲೇ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಸ್ಥಾನದಿಂದ ನಸೀರ್ ಅಹ್ಮದ್ ಅವರಿಗೆ ಕೊಕ್ ನೀಡಿದ್ದು, ಮುಂದಿನ ದಿನಗಳಲ್ಲಿ ಬೇರೆ ನಾಯಕ ತಲೆದಂಡವಾದರೂ ಅಚ್ಚರಿ ಪಡಬೇಕಾಗಿಲ್ಲ ಎಂಬ ಸ್ಥಿತಿ ನಿರ್ಮಾಣವಾಗಿದೆ.

ಉಚ್ಚಾಟನೆ ಬಗ್ಗೆ ಪ್ರತಿಕ್ರಿಯಿಸಿರುವ ಅಧಿಕೃತ ನೋಟಿಸ್ ಬಂದ ಬಳಿಕವಷ್ಟೇ ನಾನು ಉತ್ತರ ನೀಡುತ್ತೇನೆ. ನನ್ನ ವಿರುದ್ಧ ಯಾವುದೇ ಆಡಿಯೋ ಅಥವಾ ವಿಡಿಯೋ ದಾಖಲೆಗಳಿದ್ದರೆ ತೋರಿಸಲಿ. ಸುಮ್ಮನೆ ಆರೋಪ ಮಾಡುವುದು ಸರಿಯಲ್ಲ ಎಂದು ಅಬ್ದುಲ್ ಜಬ್ಬಾರ್ ಆಕ್ರೋಶ ಹೊರಹಾಕಿದ್ದಾರೆ.

ಬಿಂದಿ, ಮೂಗುತಿ ಬೇಡ, ಹಿಜಾಬ್ ಧರಿಸಬಹುದು

ಪುಟ ೧➡ ದೊಡ್ಡ ಕಿವಿಯೋಲೆಗಳು, ನೇತಾಡುವ ಓಲೆಗಳು ಮತ್ತು ಮೂಗುಬೊಟ್ಟುಗಳಿಗೆ ಅನುಮತಿ ಇಲ್ಲ, ಸಣ್ಣ ಓಲೆ, ಮೂಗುಬೊಟ್ಟುಗಳನ್ನು ಮಾತ್ರ ಧರಿಸಲು ಅವಕಾಶ ನೀಡಲಾಗಿದೆ. ಆದರೆ, ಈ ಬಗ್ಗೆ ಲೆನ್ಸ್‌ಕಾರ್ಟ್ ಕಂಪನಿಯಿಂದ ಇನ್ನೂ ಅಧಿಕೃತ ಸ್ಪಷ್ಟನೆ ಬಂದಿಲ್ಲ.

ಜಾಲತಾಣದಲ್ಲಿ ಜನಾಕ್ರೋಶ

ಈ ನಿಯಮಗಳು ಹೊರಬಂದ ಬಳಿಕ, ಸಾಮಾಜಿಕ ಜಾಲತಾಣಗಳಲ್ಲಿ ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೆಲವರು, ಒಂದು ಧರ್ಮದ ಆಚರಣೆಗಳಿಗೆ ನಿರ್ಬಂಧ ಹೇರಿ ಮತ್ತೊಂದು ಮತಕ್ಕೆ ಅವಕಾಶ ನೀಡುತ್ತಿರುವುದು ಸರಿಯಲ್ಲ ಎಂದು ಪ್ರಶ್ನಿಸಿದ್ದಾರೆ. ಇದು ಹಿಂದೂ ಮಹಿಳೆಯರ ಧಾರ್ಮಿಕ ಗುರುತುಗಳನ್ನು ಕಡಿಮೆ ಮಾಡುವ ಪ್ರಯತ್ನ ಎಂದು ಆರೋಪಿಸಲಾಗಿದೆ. ಇನ್ನೂ ಕೆಲವರು ಕಂಪನಿಯ ವಿರುದ್ಧ ಬಹಿಷ್ಕಾರ ಮಾಡುವಂತೆ ಕರೆನೀಡಿದ್ದಾರೆ. ಉದ್ಯೋಗ ಸ್ಥಳದಲ್ಲಿ ಸಮಾನತೆ ಇರಬೇಕು ಎಂಬ ಮಾತು ಕೇಳಿಬರುತ್ತಿರುವ ಈ ಸಂದರ್ಭದಲ್ಲಿ, ಈ ನಿಯಮಗಳು ವಿವಾದಕ್ಕೆ ಕಾರಣವಾಗಿವೆ.

ತ್ಯಾಜ್ಯ ಸಮರ್ಪಕವಾಗಿ ಸಂಸ್ಕರಿಸಿ

ಬೆಂಗಳೂರು: ನಗರದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಸಮರ್ಪಕವಾಗಿ ಸಂಸ್ಕರಿಸಿ, ಅದನ್ನು ಮೌಲ್ಯಯುತ ಸಂಪನ್ಮೂಲವಾಗಿ ಪರಿವರ್ತಿಸುವುದು ಈಗಿನ ಅವಶ್ಯಕತೆಯಾಗಿದೆ. ಕಾಂಪೋಸ್ಟ್ ಉತ್ಪಾದನೆ ಮತ್ತು ಬಳಕೆಯನ್ನು ಉತ್ತೇಜಿಸುವ ಮೂಲಕ ಪರಿಸರ ಸಂರಕ್ಷಣೆಗೂ, ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವುದಕ್ಕೂ ಸಹಕಾರಿ ಆಗಲಿದೆ ಎಂದು ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ(ಕೆಸಿಡಿಸಿಎಲ್) ಅಧ್ಯಕ್ಷ ನಟರಾಜ್ ಗೌಡ ಹೇಳಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಕೇಂದ್ರ ಕಚೇರಿಯಲ್ಲಿ ನಡೆದ ಕಾಂಪೋಸ್ಟ್ ಖರೀದಿ ಮತ್ತು ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ನಗರ ತ್ಯಾಜ್ಯ ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ರೂಪಾಂತರಗೊಳಿಸುವ ಉದ್ದೇಶದಿಂದ ಕೆಸಿಡಿಸಿಎಲ್ ಸಹಯೋಗದೊಂದಿಗೆ ಗ್ರೇಟರ್ ಬೆಂಗಳೂರು ಐಟಿ ಕಂಪನಿ ಇಂಡಸ್ಟ್ರೀಸ್ ಅಸೋಸಿಯೇಷನ್ (ಜಿಬಿಐಟಿಸಿಐಎ) ಸಂಸ್ಥೆಯು ತನ್ನ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ಚಟುವಟಿಕೆಯ ಭಾಗವಾಗಿ ಒಪ್ಪಂದ ಮಾಡಿಕೊಳ್ಳಲಾಗಿದೆ. ಇದರ ಪ್ರಕಾರ ಮೈತ್ರಿ ಸರ್ವ ಸೇವಾ ಸಮಿತಿಯ ಮೂಲಕ, ಬೆಂಗಳೂರಿನಲ್ಲಿ ಉತ್ಪಾದನೆಯಾಗುತ್ತಿರುವ ಸಾವಯವ ಗೊಬ್ಬರವನ್ನು ಖರೀದಿಸಿ ರೈತರಿಗೆ ಉಚಿತವಾಗಿ ವಿತರಿಸುವ ಕಾರ್ಯ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ರಾಜ್ಯದಲಿ ಹೆಚ್ಚಲಿದೆ 14 ಲೋಕಸಭಾ ಕ್ಷೇತ್ರ

ಪುಟ ೧➡ ಜನಸಂಖ್ಯೆಗನುಗುಣವಾಗಿ ಕ್ಷೇತ್ರಗಳನ್ನು ಪುನರ್ ವಿಂಗಡಿಸುವುದು, ಸೀಟುಗಳ ಸಂಖ್ಯೆಯನ್ನು 543ರಿಂದ 850ಕ್ಕೆ ಹೆಚ್ಚಿಸುವುದು. ಇದು 2021ರ ಜನಗಣತಿಯ ಆಧಾರದ ಮೇಲೆ ನಡೆಯಬೇಕಿತ್ತು, ಆದರೆ ವಿಳಂಬವಾದ್ದರಿಂದ ಮುಂದಿನ ಜನಗಣತಿಯನ್ನು ಪರಿಗಣಿಸುವ ಸಾಧ್ಯತೆಯಿದೆ. ಜನಸಂಖ್ಯೆ ನಿಯಂತ್ರಣದಲ್ಲಿ ಯಶಸ್ವಿಯಾದ ದಕ್ಷಿಣದ ರಾಜ್ಯಗಳಿಗಿಂತ, ಹೆಚ್ಚು ಜನಸಂಖ್ಯೆಯುಳ್ಳ ಉತ್ತರ ಭಾರತದ ರಾಜ್ಯಗಳಿಗೆ ಹೆಚ್ಚಿನ ಸೀಟುಗಳು ಸಿಗಲಿದ್ದು, ಇದು ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಎಂಬುದು ವಿಪಕ್ಷಗಳ ಆರೋಪ. ಆದರೆ, ಇದು ಕೇವಲ ಕ್ಷೇತ್ರಗಳ ಮರುವಿಂಗಡಣೆ ಮತ್ತು ಅಭಿವೃದ್ಧಿ ಆಧಾರಿತ ಪ್ರಕ್ರಿಯೆಯಾಗಿದ್ದು, ಯಾವುದೇ ರಾಜ್ಯಕ್ಕೆ ಅನ್ಯಾಯವಾಗುವುದಿಲ್ಲ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸ್ಪಷ್ಟಪಡಿಸಿದ್ದಾರೆ. ಈ ಪ್ರಕ್ರಿಯೆಯು ಭಾರತದ ಸಂಸದೀಯ ಇತಿಹಾಸದಲ್ಲೇ ಅತಿ ದೊಡ್ಡ ಬದಲಾವಣೆಯಾಗಲಿದೆ ಎಂದಿದ್ದಾರೆ.

ನವ ಸಂಕಲ್ಪಕ್ಕೆ ಸಲಹೆ

ಪುಟ ೧➡ ಅದನ್ನು ಮಿತವಾಗಿ ಬಳಸಿ ಸಂರಕ್ಷಣೆ ಮಾಡಲು ಆದ್ಯತೆ ನೀಡಬೇಕಿದೆ. ಪ್ರತಿಯೊಬ್ಬರೂ ತಮ್ಮ ತಾಯಿಯ ಹೆಸರಿನಲ್ಲಿ ಒಂದೊಂದು ಗಿಡ ನೆಟ್ಟು ಬೆಳೆಸಬೇಕು. ಉತ್ತಮ ಪರಿಸರ ನಿರ್ಮಾಣ ನಮ್ಮೆಲ್ಲರ ಆದ್ಯ ಕರ್ತವ್ಯ. ನಮ್ಮ ನಗರ-ಪಟ್ಟಣ, ಸಾಂಸ್ಕೃತಿಕ-ಧಾರ್ಮಿಕ ಕೇಂದ್ರಗಳಲ್ಲಿ ನಾವು ಸ್ವಚ್ಛತೆ ಕಾಪಾಡಿಕೊಳ್ಳುವುದು ಅಗತ್ಯವಾಗಿದೆ ಎಂದು ಹೇಳಿದರು.

ದೇಶದಲ್ಲಿ ಸ್ವದೇಶಿ ಉತ್ಪನ್ನಗಳ ಬಳಕೆ ಹೆಚ್ಚಾಗಬೇಕು. ವೋಕಲ್ ಫಾರ್ ಲೋಕಲ್ ಗಾಗಿ ಬದುಕಬೇಕು. ಸ್ವದೇಶಿ ಉತ್ಪನ್ನಗಳನ್ನು ಬೆಂಬಲಿಸಬೇಕು. ದೇಶೀಯ ಪ್ರವಾಸೋದ್ಯಮ ಅಭಿವೃದ್ಧಿಗೆ ಎಲ್ಲರೂ ಒತ್ತಾಸೆಯಾಗಿ ನಿಲ್ಲಬೇಕಿದೆ ಎಂದರು. ಮುಂದಿನ ಪೀಳಿಗೆಯ ದೃಷ್ಟಿಯಿಂದ ಎಲ್ಲರೂ ರಾಸಾಯನಿಕಮುಕ್ತ ಕೃಷಿ ಅನುಸರಿಸುವುದರೊಂದಿಗೆ ಉತ್ತಮ ಆರೋಗ್ಯಕ್ಕೆ ಒತ್ತು ನೀಡಬೇಕು. ಯೋಗ-ಕ್ರೀಡೆಗೆ ಉತ್ತೇಜನ ನೀಡುವುದರೊಂದಿಗೆ ದೇಹ-ಮನಸ್ಸನ್ನು ಸದೃಢವಾಗಿಟ್ಟುಕೊಳ್ಳುವುದು. ಸೇವಾ ಮನೋಭಾವದೊಂದಿಗೆ ಭಾರತವನ್ನು ಸದೃಢ, ಸುಂದರ ರಾಷ್ಟ್ರವನ್ನಾಗಿ ನಿರ್ಮಿಸಲು 9 ಸಂಕಲ್ಪಗಳು ಪ್ರೇರಕ ಶಕ್ತಿಯಾಗಿವೆ. ಇವೆಲ್ಲವನ್ನೂ ಪಾಲಿಸಿದರೆ ವಿಕಸಿತ ಕರ್ನಾಟಕದೊಂದಿಗೆ ವಿಕಸಿತ ಭಾರತ ಸಂಕಲ್ಪ ಆಗಲಿದೆ ಎಂದು ಹೇಳಿದರು. ಸಕ್ಕರೆ ನಗರ, ಮಧುರ ಮಂಡ್ಯ ಎಂದೆಲ್ಲಾ ಕರೆಸಿಕೊಳ್ಳುವ ಈ ಊರಿಗೆ ತಾಯಿ ಕಾವೇರಿಯ ಆಶೀರ್ವಾದವಿದೆ. ಇದು ಕಬ್ಬಿಗರ ನಾಡು. ಇಲ್ಲಿನ ಜನರ ಮಾತುಗಳು ಕಬ್ಬಿನಷ್ಟೇ ಸಿಹಿಯಾಗಿವೆ. ಈ ಪ್ರದೇಶದ ಜನರು ನೀಡಿದ ಸ್ವಾಗತ ನನ್ನ ಹೃದಯವನ್ನು ಗೆದ್ದಿದೆ ಎಂದು ಬಣ್ಣಿಸಿದರು.

ತತ್ವಜ್ಞಾನ, ತಂತ್ರಜ್ಞಾನದಲ್ಲಿ ಕರ್ನಾಟಕ ಮುಂಚೂಣಿ

ಕರ್ನಾಟಕದಲ್ಲಿ ಎರಡು ಶಕ್ತಿಗಳಿವೆ. ಒಂದು ತತ್ವಜ್ಞಾನ ಮತ್ತೊಂದು ತಂತ್ರಜ್ಞಾನ. ಈ ಎರಡೂ ಶಕ್ತಿಗಳು ಇಲ್ಲಿ ಸಮೃದ್ಧವಾಗಿವೆ. ಶ್ರೀಕ್ಷೇತ್ರ ಆಧ್ಯಾತ್ಮಿಕ, ನೈತಿಕ ಮೌಲ್ಯ, ತತ್ವಜ್ಞಾನದ ಮೂಲಕ ಸಮಾಜಕ್ಕೆ ಹೊಸ ದಿಕ್ಕನ್ನು ತೋರಿಸುತ್ತಿದೆ. ಎರಡು ಸಾವಿರ ವರ್ಷಗಳಷ್ಟು ಇತಿಹಾಸವನ್ನು ಹೊಂದಿರುವ ಆದಿಚುಂಚನಗಿರಿ ಮಠ ಗುರುಪರಂಪರೆ, ಆಧ್ಯಾತ್ಮಿಕ ದರ್ಶನ, ಸೇವೆಯ ಮೂಲಕ ಇಲ್ಲಿನ ಭೂಮಿ ಸಮೃದ್ಧವಾಗಿದೆ ಎಂದರು.

ಚುಂಚಶ್ರೀ ಮಹಾನ್ ಸಂತರು: ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಮಹಾನ್ ಸಂತರು. ಗುರುಗಳು ಹಾಕಿಕೊಟ್ಟ ಮಾರ್ಗದಲ್ಲಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ಸಮರ್ಪಣಾ ಭಾವದಿಂದ ಮಠವನ್ನು ಮುನ್ನಡೆಸುತ್ತಿದ್ದಾರೆ. ಬಾಲಗಂಗಾಧರನಾಥ ಶ್ರೀಗಳು ವಿಭೂತಿ ಪುರುಷರು. ಅವರ ಶರೀರ ನಮ್ಮೊಂದಿಗೆ ಇಲ್ಲವಾದರೂ ಅವರ ಆಧ್ಯಾತ್ಮಶಕ್ತಿ ಮತ್ತು ಸಾಧನೆ ನಮ್ಮ ಜತೆ ಶಾಶ್ವತವಾಗಿದೆ ಎಂದು ಹೇಳಿದರು. ಗ್ರಾಮೀಣ ಜನರ ಅಭಿವೃದ್ಧಿ ಮತ್ತು ಬಡ ಮಕ್ಕಳ ಶಿಕ್ಷಣಕ್ಕಾಗಿ ಶ್ರೀಗಳು ಶ್ರಮಿಸಿದ್ದಾರೆ. ಶೈಕ್ಷಣಿಕವಾಗಿ ಅಸಾಧಾರಣ ಸಾಧನೆ ಮಾಡಿದ್ದಾರೆ. ಪ್ರಾಥಮಿಕ ಶಿಕ್ಷಣದಿಂದ ಮೆಡಿಕಲ್, ಇಂಜಿನಿಯರಿಂಗ್ ಶಿಕ್ಷಣ ದೊರಕಿಸುವಲ್ಲಿ ಸಫಲರಾಗಿದ್ದಾರೆ. ಗುಣಮಟ್ಟದ ಆರೋಗ್ಯ ಸೇವೆ ನೀಡುವುದರಲ್ಲೂ ಮುಂದಿದೆ. ಇದೇ ನಿಟ್ಟಿನಲ್ಲಿ ನಮ್ಮ ಸರ್ಕಾರವೂ ಕೂಡ ಬಡಜನರಿಗೆ ಉತ್ತಮ ಆರೋಗ್ಯವನ್ನು ದೊರಕಿಸಲು ಆಯುಷ್ಮಾನ್ ಆರೋಗ್ಯ ಯೋಜನೆಯನ್ನು ರೂಪಿಸಿ ಜಾರಿಗೆ ತಂದಿದ್ದೇವೆ ಎಂದು ಹೇಳಿದರು.

ನೆನಪಿನ ಕಾಣಿಕೆ: ಪ್ರಧಾನಿ ನರೇಂದ್ರಮೋದಿ ಅವರು ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಪುತ್ಥಳಿಗೆ ಪುಷ್ಪಾರ್ಪಣೆ ಮಾಡಿದರು. ಶ್ರೀಮಠದ ವತಿಯಿಂದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ಆದಿಚುಂಚನಗಿರಿ ಸಂಕೇತದಂತಿರುವ ನವಿಲನ್ನು ಮೋದಿ ಅವರಿಗೆ ನೆನಪಿನ ಕಾಣಿಕೆಯಾಗಿ ನೀಡಿದರು.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ, ರಾಜ್‌ಕೋಟ್‌ನ ಶ್ರೀ ಪರಮಾನಂದ ಸರಸ್ವತಿ ಸ್ವಾಮೀಜಿ, ಕೇಂದ್ರ ಕಾರ್ಮಿಕ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ರಾಜ್ಯ ಕೃಷಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ವಿಪಕ್ಷ ನಾಯಕ ಆರ್.ಅಶೋಕ ಹಾಜರಿದ್ದರು.

ಮೇಕೆದಾಟು, ಮಹದಾಯಿಗೆ ಅನುಮತಿ ನೀಡಿ: ಸಿಎಂ

ಪುಟ ೧➡ ರಾಜ್ಯಕ್ಕೆ ಬುಧವಾರ ಭೇಟಿ ನೀಡಿದ್ದ ಪ್ರಧಾನಿ ಅವರನ್ನು ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿ ಮನವಿ ಸಲ್ಲಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಭದ್ರಾ ಮೇಲ್ದಂಡೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಿ 5,300 ಕೋಟಿ ರೂ. ನೀಡಬೇಕು, ಮಹದಾಯಿ ಯೋಜನೆಗೆ ಅರಣ್ಯ ಇಲಾಖೆಯಿಂದ ಪರವಾನಗಿ ಕೊಡಿಸಬೇಕು ಮತ್ತು ಮೇಕೆದಾಟು ಯೋಜನೆ ಒಪ್ಪಿಗೆ ನೀಡುವಂತೆ ಮನವಿ ಪತ್ರದಲ್ಲಿ ಬೇಡಿಕೆ ಸಲ್ಲಿಸಲಾಗಿದೆ. ಗೋದಾವರಿ-ಕಾವೇರಿ, ಬೇಡ್ತಿ-ವರದಾ ನದಿ ಜೋಡಣೆಯಲ್ಲಿ ರಾಜ್ಯಕ್ಕೆ ನ್ಯಾಯಬದ್ಧ ನೀರು ನೀಡಬೇಕು. ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ 5 ಸಾವಿರ ಕೋಟಿ ರೂ.ನೀಡಬೇಕು, ಕೇಂದ್ರದ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ರಾಜ್ಯ ಸರ್ಕಾರ ಗುರುತಿಸಿರುವ ಜಾತಿಗಳನ್ನು ಸೇರಿಸಿರುವ ಬಗ್ಗೆ ಸ್ಪಷ್ಟತೆ ನೀಡಬೇಕೆಂದು ಕೋರಲಾಗಿದೆ. ಶರಾವತಿ ಪಂಪ್ಡ್ ಸ್ಟೋರೇಜ್ ಕಾಮಗಾರಿಗೆ ಅರಣ್ಯ ಇಲಾಖೆಯಿಂದ ಅವಕಾಶ ಕಲ್ಪಿಸಬೇಕು, ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆ, ಜಲ ಜೀವನ್ ಮಿಷನ್ ಯೋಜನೆಯ ಬಾಕಿ ಹಣ, 15ನೇ ಹಣಕಾಸು ಆಯೋಗದಿಂದ ಗ್ರಾಮ ಪಂಚಾಯ್ತಿಗಳಿಗೆ ಅನುದಾನ, ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ ಮತ್ತು ಆದಾಯ ಕೊರತೆ ನೀಗಿಸಲು 5,495 ಕೋಟಿ ರೂ. ಹಣ ನೀಡುವಂತೆ ಬೇಡಿಕೆ ಸಲ್ಲಿಸಲಾಗಿದೆ. ಕೋಲಾರದಲ್ಲಿ ರೈಲ್ವೇ ಬೋಗಿ ತಯಾರಿಕಾ ಘಟಕ, ಮೈಸೂರು ಬೆಂಗಳೂರು ನಡುವೆ ಹೈಸ್ಪೀಡ್ ರೈಲ್ವೆ ಕಾರಿಡಾರ್, ಬೆಂಗಳೂರು ನಗರ ರೈಲ್ವೆಗೆ ಅನುದಾನ ಮತ್ತು ಬೆಂಗಳೂರು ಮುಂಬೈ ಹೈಸ್ಪೀಡ್ ರೈಲ್ವೆ ಕಾರಿಡಾರ್‌ಗೆ ಮನವಿ ಮಾಡಲಾಗಿದೆ.



9ನೇ ಶೆಡ್ಯೂಲ್‌ನಲ್ಲಿ ಸೇರಿಸಲು ಮನವಿ

ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಶೇ.56ರಷ್ಟು ಮೀಸಲಾತಿ ನೀಡುವ ರಾಜ್ಯದ ನಿರ್ಧಾರವನ್ನು ಸಂವಿಧಾನದ 9ನೇ ಶೆಡ್ಯೂಲ್‌ನಲ್ಲಿ ಸೇರಿಸಬೇಕೆಂದು ಮನವಿ ಮಾಡಲಾಗಿದೆ.

ದಾಖಲಾತಿಗೆ ಸಮಗ್ರ ಯೋಜನೆ

ಬೆಂಗಳೂರು: ಶಿಕ್ಷಣ ಕ್ಷೇತ್ರದಲ್ಲಿ ಹೊಸ ಚೈತನ್ಯ ಮೂಡಿಸುವ ಪ್ರಯತ್ನವಾಗಿ, ರಾಜ್ಯ ಸರ್ಕಾರವು ಸರ್ಕಾರಿ ಶಾಲೆಗಳ ದಾಖಲಾತಿ ಹೆಚ್ಚಿಸಲು ಶಾಲಾ ಶಿಕ್ಷಣ ಇಲಾಖೆ ಸಮಗ್ರ ಕಾರ್ಯಯೋಜನೆ ರೂಪಿಸಿದೆ.

ಕಳೆದ ಕೆಲವು ವರ್ಷಗಳಿಂದ ದಾಖಲಾತಿ ಕುಸಿತ ಕಂಡು ಬಂದಿರುವುದರಿಂದ, ಸಾರ್ವಜನಿಕ ವಿಶ್ವಾಸವನ್ನು ಪುನಃ ಕಟ್ಟಿಕೊಡುವುದು ಹಾಗೂ ಗುಣಮಟ್ಟದ ಶಿಕ್ಷಣವನ್ನು ಬಲಪಡಿಸುವುದು ಸರ್ಕಾರದ ಪ್ರಮುಖ ಗುರಿಯಾಗಿದೆ. ಈ ಹಿನ್ನೆಲೆಯಲ್ಲಿ, ಇಲಾಖೆಯು ಶಾಲೆಗಳ ಸ್ಥಿರತೆ, ಮಕ್ಕಳ ಆಕರ್ಷಣೆ ಮತ್ತು ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಒಟ್ಟುಗೂಡಿಸಿ, ದಾಖಲಾತಿ ಆಂದೋಲನವನ್ನು ರಾಜ್ಯಾದ್ಯಂತ ಜಾರಿಗೊಳಿಸಲು ಮುಂದಾಗಿದೆ.

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಹೆಚ್ಚಿಸಲು ಶಿಕ್ಷಣ ಇಲಾಖೆ ಸಮಗ್ರ ಕಾರ್ಯಯೋಜನೆ ರೂಪಿಸಿರುವುದು ಇದೀಗ ರಾಜ್ಯದ ಶಿಕ್ಷಣ ವಲಯದಲ್ಲಿ ಪ್ರಮುಖ ಚರ್ಚೆಯ ವಿಷಯವಾಗಿದೆ. ಕಳೆದ ಕೆಲವು ವರ್ಷಗಳಿಂದ ಅನೇಕ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ದಾಖಲಾತಿ ಕಡಿಮೆಯಾಗಿರುವುದು ಇಲಾಖೆಯ ಗಮನಕ್ಕೆ ಬಂದಿದ್ದು, ಸಾರ್ವಜನಿಕ ವಿಶ್ವಾಸವನ್ನು ಪುನಃ ಕಟ್ಟಿಕೊಡುವುದು ಹಾಗೂ ಗುಣಮಟ್ಟದ ಶಿಕ್ಷಣವನ್ನು ಬಲಪಡಿಸುವುದು ಮುಖ್ಯ ಗುರಿಯಾಗಿದೆ. ಈ ಹಿನ್ನೆಲೆಯಲ್ಲಿ, 2026-27ನೇ ಶೈಕ್ಷಣಿಕ ಸಾಲಿನಲ್ಲಿ ದಾಖಲಾತಿ ಹೆಚ್ಚಿಸಲು ಹಲವು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮೊದಲಿಗೆ ಯುಡಿಐಎಸ್‌ಇ+ ಆಧಾರದಮೇಲೆಕಡಿಮೆದಾಖಲಾತಿಯಶಾಲೆಗಳಪಟ್ಟಿಅಂತಿಮಗೊಳಿಸಲಾಗುವುದು. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ ಟ್ರ್ಯಾಕಿಂಗ್ ವ್ಯವಸ್ಥೆ ಜಾರಿಗೊಳಿಸಲಾಗುತ್ತದೆ.

ಸಮುದಾಯ ಆಧಾರಿತ ಪ್ರವೇಶ ಅಭಿಯಾನವನ್ನು ಶಾಲಾ ಚಲೋ ಮತ್ತು ಪ್ರವೇಶೋತ್ಸವ ಕಾರ್ಯಕ್ರಮಗಳ ಮೂಲಕ ಹಮ್ಮಿಕೊಳ್ಳಲಾಗುತ್ತಿದೆ. ಎಸ್‌ಡಿಎಂಸಿ, ಪಂಚಾಯತ್, ಅಂಗನವಾಡಿ ಸಿಬ್ಬಂದಿ ಹಾಗೂ ಹಳೆಯ ವಿದ್ಯಾರ್ಥಿಗಳ ಸಹಭಾಗಿತ್ವವನ್ನು ಖಚಿತಪಡಿಸಲಾಗುತ್ತಿದೆ. ಪೋಷಕರಲ್ಲಿ ಸರ್ಕಾರಿ ಶಾಲೆಗಳ ಮೇಲಿನ ವಿಶ್ವಾಸವನ್ನು ಹೆಚ್ಚಿಸಲು ತೆರೆದ ಮನೆ ದಿನ, ಕಲಿಕಾ ಫಲಿತಾಂಶ ಪ್ರದರ್ಶನ, ಫಲಿತಾಂಶ ಫಲಕ, ಹಾಗೂ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳ ಪ್ರಚಾರದಂತಹ ಕ್ರಮಗಳನ್ನು ಶಿಕ್ಷಣ ಇಲಾಖೆ ಜಾರಿಗೊಳಿಸಲಾಗುತ್ತಿದೆ.



ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಬುಧವಾರ ಸಿಎಂ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಸ್ವಾಗತಿಸಿದರು. ಕೃಷಿ ಸಚಿವ ಕೃಷ್ಣಬೈರೇಗೌಡ ಇದ್ದರು.

ರಾಜ್ಯದಲ್ಲಿ ₹5,500 ಕೋಟಿ ಹೂಡಿಕೆ: ಪ್ರಿಯಾಂಕ್ ಖರ್ಗೆ

ಬೆಂಗಳೂರು: ರಾಜ್ಯ ಸರ್ಕಾರವು ಕೈಗೊಳ್ಳುತ್ತಿರುವ ಹಲವು ಕಾರ್ಯಕ್ರಮಗಳ ಫಲವಾಗಿ ರಾಜ್ಯಕ್ಕೆ ಸುಮಾರು 5,500 ಕೋಟಿ ರೂ. ಮೊತ್ತದ ಜಾಗತಿಕ ಬಂಡವಾಳವು ಬರಲಿದ್ದು ಸುಮಾರು 7,200 ಉದ್ಯೋಗಗಳು ಸೃಷ್ಟಿಯಾಗಲಿವೆ. 6,350 ಕೋಟಿ ರೂ. ಬಂಡವಾಳವು



ಡಾಟಾ ಕೇಂದ್ರಗಳ ಸ್ಥಾಪನೆಗೆ ಹೂಡಿಕೆಯಾಗಲಿವೆ ಎಂದು ಐಟಿ ಮತ್ತು ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು. ಜಾಗತಿಕ ನಾವೀನ್ಯತಾ ಮೈತ್ರಿಕೂಟದ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ರಾಜ್ಯ ಸರ್ಕಾರವು ಜಾಗತಿಕ ನಾವೀನ್ಯತಾ ಮೈತ್ರಿಕೂಟದ (ಜಿಐಎ-2.೦)- ಎರಡನೇ ಆವೃತ್ತಿಯು ಏ.17ರಂದು ದಿಲ್ಲಿಯಲ್ಲಿ ನಡೆಯಲಿರುವ ಸಂವಾದ ಸಮಾವೇಶದಲ್ಲಿ ಅನಾವರಣಗೊಳ್ಳಲಿದೆ. ಈ ಸಮ್ಮೇಳನದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಭಾಗವಹಿಸಲಿದ್ದಾರೆ.

ಜಾಗತಿಕ ಮಟ್ಟದ ಒಡಂಬಡಿಕೆ

40ಕ್ಕೂ ಹೆಚ್ಚು ದೇಶಗಳು, 2 ಸಾವಿರಕ್ಕಿಂತ ಅಧಿಕ ನವೋದ್ಯಮಗಳ ಬೆಂಬಲ ಹಾಗೂ 60ಕ್ಕೂ ಅಧಿಕ ಜಾಗತಿಕಮಟ್ಟದ ಒಡಂಬಡಿಕೆ ಪತ್ರಗಳು (ಎಂಒಯು) ಹಾಗೂ ಬೇರೆ-ಬೇರೆ ಕಂಪನಿಗಳ ಜತೆಗಿನ ಸಹಕಾರದೊಂದಿಗೆ ಕರ್ನಾಟಕ ಸರ್ಕಾರವು ಜಾಗತಿಕ ನಾವೀನ್ಯತಾ ಮೈತ್ರಿಕೂಟದಲ್ಲಿ ಭಾರತದ ಅತ್ಯಂತ ಸುಸಜ್ಜಿತ ಮತ್ತು ದೂರದೃಷ್ಟಿಯ ಯೋಜನೆಗಳೊಂದಿಗೆ ತನ್ನದೇ ಛಾಪನ್ನು ಮೂಡಿಸುತ್ತಿದೆ.ಈ ಕಾರ್ಯಕ್ರಮಗಳು ಡೀಪ್ ಟೆಕ್, ಫಿನ್ಟೆಕ್, ಹೆಲ್ತ್‌ಟೆಕ್, ಕ್ಲೀನ್ ಟೆಕ್, ಬಯೋಟೆಕ್ ಮತ್ತು ಟ್ರಾವೆಲ್ಟೆಕ್ ಕ್ಷೇತ್ರಗಳಲ್ಲಿ ಜಾಗತಿಕ ಹೂಡಿಕೆದಾರರು, ಕಾರ್ಪೊರೇಟ್ ಸಂಸ್ಥೆಗಳು, ಮತ್ತು ನಿಯಂತ್ರಣಾ ಸಂಸ್ಥೆಗಳ ಜತೆ ಸಂಪರ್ಕ ಸಾಧಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಬಲ ಸಂಪರ್ಕ ಸೇತುವೆಯನ್ನು ಕಲ್ಪಿಸಲು ನೆರವಾಗಿವೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ ನೀಡಿದರು.

ಕಿರುಸುದ್ದಿ

ಕಾಂಗ್ರೆಸ್‌ನಲ್ಲಿ ದೊರೆ ಮಾಡಿದ್ರೆ ದಂಡ ಇಲ್ಲ: ಕೆ.ಎನ್. ರಾಜಣ್ಣ

ತುಮಕೂರು: ಕಾಂಗ್ರೆಸ್ ಪಕ್ಷದಲ್ಲಿ ದೊರೆ ಮಾಡಿದ್ದಕ್ಕೆ ದಂಡ ಇಲ್ಲ ಎಂದು ಮಾಜಿ ಸಚಿವ ಕೆ.ಎನ್. ರಾಜಣ್ಣ ವ್ಯಂಗ್ಯವಾಡಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ಅಂದ್ರೆ ಶಿಸ್ತು ಪಕ್ಷ. ಶಿಸ್ತು ಜಾರಿ ಮಾಡುವಾಗ, ಸದ್ಗುರು, ರಾಹುಲ್ ಗಾಂಧಿ ಅವರ ಬಗ್ಗೆ ಮಾತನ್ನಾಡಿದ್ದರು. ರಾಹುಲ್ ಗಾಂಧಿ ಅಂದ್ರೆ ನಂಗೊತ್ತಿಲ್ಲ ಅಂದ್ರು. ಅವರ ಜೊತೆಯಲ್ಲಿಯೇ ಹೋಗಿ, ಕೂತ್ಕೊಂಡ್ರೆ ಶಿಸ್ತು ಮೀರಿದಂಗೆ ಆಗಲ್ವಾ. ದೊರೆ ಮಾಡಿದ್ದಕ್ಕೆ ದಂಡ ಇಲ್ಲ ಎಂಬ ಮಾತು ಇದೆ. ವೇದಗಳು ಸುಳ್ಳಾದರೂ ಗಾದೆಗಳು ಸುಳ್ಳಾಗುವುದಿಲ್ಲ, ಈಗ ಅದೇ ರೀತಿ ನಡೀತಾ ಇದೆ. ನಡೀಲಿ ಮುಂದೆ ನೋಡೋಣ ಎಂದರು. ಸದ್ಗುರು ಅವರು ರಾಹುಲ್ ಗಾಂಧಿ ಅವರ ಬಗ್ಗೆ ಮಾತನ್ನಾಡಿದ್ದವರು ಅಂಥವರ ಜೊತೆಗೆ ವೇದಿಕೆ ಹಂಚಿಕೊಳ್ಳಬಹುದಾ.? ಆರ್ ಎಸ್ ಎಸ್ ಗೀತೆಯನ್ನು ಹಾಡಿದ್ದರು. ಅವರ ವಿರುದ್ಧ ಯಾಕೆ ಯಾವುದೇ ಕ್ರಮ ಆಗಿಲ್ಲ ಎಂಬ ಪ್ರಶ್ನೆ ಅವರದ್ದು. ದೊರೆಗಳು ಏನೇ ಮಾಡಿದರು ನಡೆಯುತ್ತೆ ಎಂದು ಹೇಳುವ ಮೂಲಕ ಡಿಕೆಶಿಗೆ ತಿರುಗೇಟು ನೀಡಿದರು.



ವೈದ್ಯರ ವರ್ಗಾವಣೆ: ವೇಳಾಪಟ್ಟಿ ಪ್ರಕಟ

ಬೆಂಗಳೂರು: 2026-27ನೇ ಸಾಲಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯಾಧಿಕಾರಿ ಮತ್ತು ಇತರೆ ಸಿಬ್ಬಂದಿ ವರ್ಗಾವಣೆಯನ್ನು ಕರ್ನಾಟಕ ನಾಗರೀಕ ಸೇವಾ (ವೈದ್ಯಾಧಿಕಾರಿಗಳ ಮತ್ತು ಇತರೆ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ನಿಯಮಗಳ ಅಡಿ ಕೌನ್ಸಿಲಿಂಗ್ ಮೂಲಕ ವರ್ಗಾವಣೆಯ ವೇಳಾಪಟ್ಟಿಯನ್ನು ಪರಿಷ್ಕರಿಸಿ ಸರ್ಕಾರ ಆದೇಶಿಸಿದೆ. ಒಂದೇ ಸ್ಥಳದಲ್ಲಿ ಕನಿಷ್ಠ ಸೇವಾವಧಿ ಪೂರೈಸಿರುವ ಅಧಿಕಾರಿ/ಸಿಬ್ಬಂದಿಯ ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಮತ್ತು ವಿಶೇಷ ವರ್ಗದ ಕೋರಿಕೆ ವರ್ಗಾವಣೆಗಳ ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಏ.30 ರಂದು ಕೊನೆಯ ದಿನಾಂಕವಾಗಿದ್ದು, ವರ್ಗಾವಣೆಗಳ ಅಂತಿಮ ಪಟ್ಟಿ ಪ್ರಕಟಿಸುವ ದಿನಾಂಕ ಮೇ 15 ಆಗಿದೆ. ಆಯುಕ್ತಾಲಯ/ನಿರ್ದೇಶನಾಲಯದಲ್ಲಿ ಅಂತಿಮ ಪಟ್ಟಿಯಂತೆ ವೃಂದವಾರು ಸಮಾಲೋಚನೆಯನ್ನು ಮೇ 20 ರಿಂದ ಪ್ರಾರಂಭಗೊಳ್ಳಲಿದೆ ಎಂದು ಆರೋಗ್ಯ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ತಿಳಿಸಿದ್ದಾರೆ.

ರೈತರ ಸಮಸ್ಯೆ ನಿವಾರಿಸಿ: ಕುರುಬೂರು

ಹುಬ್ಬಳ್ಳಿ: ರಾಜ್ಯದ 80 ಕಾರ್ಖಾನೆಗಳ ಪೈಕಿ 10 ಕಾರ್ಖಾನೆಗಳು ಮಾತ್ರ ಟನ್ ಕಬ್ಬಿಗೆ 100 ಹೆಚ್ಚುವರಿಯಾಗಿ ಪಾವತಿಸಿವೆ. ಉಳಿದ ಕಾರ್ಖಾನೆಗಳಲ್ಲಿ ಉತ್ಪಾದನೆಯಾದ ಸಕ್ಕರೆಯನ್ನು ಜಿಲ್ಲಾಧಿಕಾರಿಗಳು ಮುಟ್ಟುಗೋಲು ಹಾಕಿಕೊಳ್ಳಬೇಕು ಹಾಗೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಬೇಕು ಎಂದು ಕಬ್ಬು ಬೆಳೆಗಾರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಆಗ್ರಹಿಸಿದರು. ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ರಸಗೊಬ್ಬರ ಕೊರತೆ ನಿಭಾಯಿಸಬೇಕು. ಸಕ್ಕರೆ ಮಾರಾಟ ಮಾಡಿ, ಹಣವನ್ನು ರೈತರಿಗೆ ನೀಡಬೇಕು. ಯುದ್ಧದಿಂದ ಇಂಧನ ಕೊರತೆಯಾಗಿದೆ. ಕಬ್ಬು ಸೇರಿದಂತೆ ವಿವಿಧ ಬೆಳೆಗಳಿಂದ ಎಥೆನಾಲ್ ಉತ್ಪಾದಿಸಬಹುದು. ಇದು ಪರಿಸರ ಸ್ನೇಹಿಯಾಗಿದ್ದು, ರೈತರಿಗೆ ಹೆಚ್ಚಿನ ಆದಾಯವು ಸಿಗಲಿದೆ. ಈ ನಿಟ್ಟಿನಲ್ಲಿ ಯೋಚಿಸಬೇಕು ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರಿಗೆ ಮನವಿ ಮಾಡಲಾಗುವುದು ಎಂದರು. ಸಾಲ ಮರುಪಾವತಿಸದ ರೈತರ ಜಮೀನು ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶ ನೀಡುವ ಸರ್ಫೇಸಿ ಕಾಯ್ದೆ ರದ್ದು ಮಾಡಬೇಕು ಎಂದರು.

ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ

ಮೋದಿ ನಾಯಕತ್ವ ಸದೃಢ

ಮಂಡ್ಯ: ಪ್ರಧಾನಿ ಮೋದಿ ಅವರ ಸದೃಢ ನಾಯಕತ್ವ ಹಾಗೂ ರಾಷ್ಟ್ರ ನಿರ್ಮಾಣದಲ್ಲಿನ ಅವರ ಸಮರ್ಪಣ ಭಾವವು ಸಮಸ್ತ ಭಾರತೀಯರ ಹೃದಯಾಂತರದಲ್ಲಿ ಆಳವಾಗಿ ನೆಲೆಸಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಪ್ರತಿಪಾದಿಸಿದರು.

ನಾಗಮಂಗಲ ತಾಲೂಕಿನ ಆದಿಚುಂಚನಗಿರಿಯಲ್ಲಿ ಶ್ರೀ ಗುರು ಭೈರವೈಕ್ಯ ಮಂದಿರ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪ್ರಧಾನಮಂತ್ರಿ ಮೋದಿ ಅವರನಾಯಕತ್ವವು ಜಾಗತಿಕ ನಾಯಕತ್ವ ಆಗಿದ್ದು. ಅವರ ನೇತೃತ್ವದಲ್ಲಿ ಭಾರತ ಪರಿವರ್ತನಾತ್ಮಕ ಅಭಿವೃದ್ಧಿ ಕಾಣುತ್ತಿದೆ. ಬದಲಿಗೆ ಲಕ್ಷಾಂತರ ಭಾರತೀಯರ ಹೃದಯದಲ್ಲಿ ಅವರ ನಾಯಕತ್ವದ ಶ್ರೇಷ್ಠತೆಯು ಆಳವಾಗಿ ಬೇರೂರಿದೆ ಎಂದು ಕುಮಾರಸ್ವಾಮಿ ಅವರು ಬಣ್ಣಿಸಿದರು.

ಪ್ರಧಾನಿಗಳ ದಣಿವರಿಯದ ಸಮರ್ಪಣೆ ಮತ್ತು ಆಡಳಿತದಲ್ಲಿ ಭಾರತೀಯರು ಶಕ್ತಿ, ಸಾಮರ್ಥ್ಯವನ್ನು ವೃದ್ಧಿಸಿಕೊಂಡು, ಎಲ್ಲಾ ಆಯಾಮಗಳಲ್ಲಿಯೂ ಭಾರತವು ಸರ್ವಶಕ್ತ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ. ಶ್ರೀಮಠಕ್ಕೆ ಭೇಟಿ ನೀಡಿ ಹಿರಿಯ ಗುರುಗಳಿಗೆ ಪ್ರಧಾನಿಗಳು ಗೌರವ ಸಲ್ಲಿಸುತ್ತಿರುವುದು ನನಗೆ ಅತೀವ ಸಂತೋಷ ಉಂಟು ಮಾಡಿದೆ ಎಂದರು.

ಕರ್ನಾಟಕದ ಆಧ್ಯಾತ್ಮ ಮತ್ತು ತ್ರಿವಿಧ ದಾಸೋಹದ ಇತಿಹಾಸದಲ್ಲಿ ಪರಮಪೂಜ್ಯ ಜಗದ್ಗುರುಗಳಾದ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರು ಅಜರಾಮರ ಧ್ರುವತಾರೆ ಆಗಿದ್ದಾರೆ ಎಂದು ನಾನು ಭಕ್ತಿಪೂರ್ವಕವಾಗಿ ಹೇಳಬಯಸುತ್ತೇನೆ. ಅನ್ನ, ಅಕ್ಷರ, ಆಶ್ರಯ ನೀಡುವ ಮೂಲಕ ಅಸಂಖ್ಯಾತ ಬಡಮಕ್ಕಳ ಪಾಲಿಗೆ ಜ್ಞಾನದ ಬೆಳಕಾಗಿ, ಅಸಂಖ್ಯಾತ ಬಡ ಕುಟುಂಬಗಳ ಪ್ರತ್ಯಕ್ಷ ದೈವವಾಗಿ ಮಹಾಸ್ವಾಮೀಜಿ ಅವರು ನಮ್ಮ ಹೃದಯಗಳಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ ಎಂದು ಹಿರಿಯ ಶ್ರೀಗಳನ್ನು ಸ್ಮರಿಸಿದರು.

ಸಣ್ಣ ಮಠವಾಗಿದ್ದ ಶ್ರೀಕ್ಷೇತ್ರವನ್ನು ಜಾಗತಿಕ ಶ್ರದ್ಧಾಕೇಂದ್ರವನ್ನಾಗಿ ಬೆಳೆಸಿ ಮಹಾವೃಕ್ಷವನ್ನಾಗಿ ರೂಪಿಸಿದ 71ನೇ ಪೀಠಾಧ್ಯಕ್ಷರಾಗಿದ್ದ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ ಭೈರವೈಕ್ಯ ಮಂದಿರವನ್ನು ಲೋಕಾರ್ಪಣೆ ಮಾಡುವ ಈ ಪರಮಪುಣ್ಯ ಕಾರ್ಯಕ್ರಮಕ್ಕೆ ಆಗಮಿಸಿರುವ ಪ್ರಧಾನಮಂತ್ರಿಗಳು ಹಾಗೂ ಜಗತ್ತಿನ ಶ್ರೇಷ್ಠ ನಾಯಕರಾದ ನರೇಂದ್ರ ಮೋದಿ ಅವರಿಗೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದರು.

ಕರ್ನಾಟಕದಲ್ಲಿ ಶಿಕ್ಷಣ, ಪರಿಸರ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಮೌನ ಕ್ರಾಂತಿಯನ್ನು ಮಾಡಿದವರು ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರು, ಜೋಳಿಗೆ ಹಿಡಿದು ಹಳ್ಳಿಹಳ್ಳಿಯನ್ನು ಸುತ್ತಿ ರೈತಾಪಿ ಮಕ್ಕಳ ಜ್ಞಾನಾರ್ಜನೆಗೆ ದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ನಗರಗಳಿಗೆ ಮಾತ್ರ ಸೀಮಿತವಾಗಿದ್ದ ಗುಣಮಟ್ಟದ ಆರೋಗ್ಯ ಸೇವೆಯನ್ನು ಹಳ್ಳಿಗಳಿಗೂ, ಅದರಲ್ಲಿ ಬಡರೈತರ ಮನೆ ಬಾಗಿಲಿಗೆ ವಿಸ್ತರಿಸಿದ ಖ್ಯಾತಿ ಪರಮಪೂಜ್ಯರದ್ದು ಎಂದು ಬಣ್ಣಿಸಿದರು.

ಪರಿಸರ ಕ್ಷೇತ್ರದಲ್ಲಿ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರದು ಅನನ್ಯ ಕೊಡುಗೆ. ಸುಮಾರು 5 ಕೋಟಿ ಸಸಿಗಳನ್ನು ಬೆಳೆಸಿದ ಮಹಾನ್ ತಪಸ್ವಿ. ಅವರು ನೆಟ್ಟ ಸಣ್ಣಸಣ್ಣ ಸಸಿಗಳು ಇಂದು ಮಹಾವೃಕ್ಷಗಳಾಗಿ ಬೆಳೆದಿವೆ. ಶ್ರೀ ಆದಿಚುಂಚನಗಿರಿ ಕ್ಷೇತ್ರ ಬಹುವಿಧದ ದಾಸೋಹಗಳಲ್ಲಿ ದೊಡ್ಡ ಹೆಸರು. ಕಷ್ಟ ಎಂದು ಬರುವ ದೀನರಿಗೆ ಕಲ್ಪವೃಕ್ಷವಾಗಿದೆ. ಜ್ಞಾನ ಎಂದು ಬರುವವರೆಗೆ ಕಾಮಧೇನು.

ಸನಾತನ ಪರಂಪರೆ ಮತ್ತು ಆಧುನಿಕತೆಯ ಮಹಾ ಸಂಗಮ ವಾಗಿ, ಮೇರು ಮಹಾ ಪುಣ್ಯಕ್ಷೇತ್ರವಾಗಿ ಇಂದು ನಮಗೆಲ್ಲರಿಗೂ ದಾರಿದೀಪವಾಗಿದೆ ಎಂದರು.



ಚುಂಚನಗಿರಿಯಲ್ಲಿ ನವಿಲುಗಳ ಪೋಷಣೆಗೆ ಶ್ಲಾಘನೆ

ಶ್ರೀಮಠದಿಂದ ನನಗೆ ನವಿಲನ್ನು ಉಡುಗೊರೆಯಾಗಿ ನೀಡಿದ್ದಾರೆ. ಚುಂಚನಗಿರಿಯಲ್ಲಿ ನವಿಲುಗಳನ್ನು ಪೋಷಣೆ ಮಾಡಲಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು. ನವಿಲು ಭಾರತದ ರಾಷ್ಟ್ರ ಪಕ್ಷಿ ಹಾಗೂ ಸುಬ್ರಹ್ಮಣ್ಯನ ವಾಹನವಾಗಿದೆ. ದೆಹಲಿಯಲ್ಲಿ ನವಿಲುಗಳು ಇವೆ. ಅವು ನನಗೆ ದೋಸ್ತಿಗಳೂ ಆಗಿವೆ ಎಂದು ಹೇಳಿದರು.

ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅಭಿಮತ

ದೇಶಾಭಿವೃದ್ಧಿಗಾಗಿ ಪಿಎಂ ಮೋದಿ ಶ್ರಮ

ಮಂಡ್ಯ: ಬೆಂಗಳೂರು ನಿರ್ಮಾತೃ ಕೆಂಪೇಗೌಡರ ಪ್ರತಿಮೆ ಉದ್ಘಾಟನೆಗೆ ಪ್ರಧಾನಿ ಮೋದಿಯವರು 2022ರಲ್ಲಿ ಬೆಂಗಳೂರಿಗೆ ಬಂದಿದ್ದರು. ಅಂದು ಅವರು ಮಾತನಾಡುತ್ತಾ, ಕೆಂಪೇಗೌಡರ ಆಲೋಚನೆಗಳನ್ನು ಸರ್ಕಾರಗಳು ಅಳವಡಿಸಿಕೊಳ್ಳಬೇಕು ಎಂದಿದ್ದರು. ಅದೇ ಮಾದರಿಯಲ್ಲಿ ಪ್ರಧಾನಿ ಮೋದಿಯವರು ದೇಶದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದು ಆದಿಚುಂಚನಗಿರಿ ಪೀಠಾಧಿಪತಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ನಾಗಮಂಗಲ ತಾಲೂಕಿನ ಆದಿ ಚುಂಚನಗಿರಿಯಲ್ಲಿ ಶ್ರೀ ಗುರು ಭೈರವೈಕ್ಯ ಮಂದಿರ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಸಿದ್ಧಾಂತಗಳನ್ನು ಇಟ್ಟುಕೊಂಡು ಮೋದಿಯವರು ದೇಶ ಕಟ್ಟುತ್ತಿದ್ದಾರೆ. ಮೋದಿ ಅವರು ಪ್ರಧಾನಿ ಆದ ಬಳಿಕ 400 ಸಂಖ್ಯೆಯಲ್ಲಿದ್ದ ಸ್ಟಾರ್ಟಪ್‌ಗಳು ಇಂದು 2 ಲಕ್ಷಕ್ಕೂ ಅಧಿಕ ಇವೆ. ಇದು ದೇಶದ ಆರ್ಥಿಕತೆ ಹೇಗಿದೆ ಎನ್ನುವುದನ್ನು ತೋರಿಸುತ್ತದೆ ಎಂದು ಉದಾಹರಣೆ ಸಮೇತ ವಿವರಿಸಿದರು.

ಹೀಗೆ ಹಲವಾರು ಕ್ಷೇತ್ರಗಳಲ್ಲಿ ಮೋದಿಯವರು ಅಂತಾರಾಷ್ಟ್ರೀಯ ಮಟ್ಟಕ್ಕೆ ದೇಶವನ್ನು ಕೊಂಡೊಯ್ಯುತ್ತಿದ್ದಾರೆ ಎಂದು ಶ್ಲಾಘಿಸಿದರು. ನಮ್ಮ ಬಾಲಗಂಗಾಧರನಾಥ ಶ್ರೀಗಳು ಸಮಾಜಕ್ಕೆ ಹಲವು ಕೊಡುಗೆ ನೀಡಿದ್ದಾರೆ. ತ್ರಿವಳಿ ದಾಸೋಹದ ಮೂಲಕ ಅವರ ಹೆಸರು ಅಜರಾಮರವಾಗಿದೆ. ಇಂತಹ ಗುರುಗಳ ಮಂದಿರವನ್ನು ಮೋದಿಯವರು ಉದ್ಘಾಟನೆ ಮಾಡಿರುವುದು ಮಠದ ಕೋಟ್ಯಂತರ ಭಕ್ತರಿಗೂ ಸಂತಸ ತಂದಿದೆ ಎಂದು ಹೇಳಿದರು.




ಮುಗಿಲು ಮುಟ್ಟಿದ ಹರ್ಷೋದ್ಗಾರ

ಆದಿಚುಂಚನಗಿರಿಯಲ್ಲಿ ಗುರು ಶ್ರೀ ಭೈರವೈಕ್ಯ ಮಂದಿರ ಲೋಕಾರ್ಪಣೆ ಮಾಡಿದ ಪ್ರಧಾನಿ ನರೇಂದ್ರಮೋದಿಯವರು ವೇದಿಕೆಗೆ ಆಗಮಿಸುತ್ತಿದ್ದಂತೆ ನೆರೆದಿದ್ದ ಸಹಸ್ರಾರು ಮಂದಿ ಮೋದಿ ಮೋದಿ ಎಂಬ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು. ಅವರು ವೇದಿಕೆಗೆ ಆಗಮಿಸಿ ಶ್ರೀಗಳು ಸೇರಿದಂತೆ ಎಲ್ಲ ಅತಿಥಿಗಳಿಗೂ ವಂದಿಸಿ ಜನರತ್ತ ಕೈಮುಗಿಯುತ್ತಿದ್ದಂತೆ ಜನರ ಹರ್ಷೋದ್ಗಾರ, ಕರತಾಡನ, ಸಿಳ್ಳೆ ಜೋರಾಗಿತ್ತು.ಇದಕ್ಕೂ ಮುನ್ನ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ವೇದಿಕೆಗೆ ವೀಲ್ ಚೇರ್‌ನಲ್ಲಿ ಬರುತ್ತಿದ್ದಂತೆಯೇ ಶಿಳ್ಳೆ, ಚಪ್ಪಾಳೆ, ಜಯಘೋಷ ಮೊಳಗಿಸಿದರು.

ಪಂಪ ಪ್ರಶಸ್ತಿಗೆ ದೇವನೂರು ಆಯ್ಕೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನೀಡಲಾಗುವ ವಿವಿಧ ಪ್ರಶಸ್ತಿಗಳಿಗೆ ಗಣ್ಯರನ್ನು ಆಯ್ಕೆ ಮಾಡಲಾಗಿದ್ದು 2025-26 ನೇ ಸಾಲಿನ ಪ್ರತಿಷ್ಠಿತ ಬಸವ ರಾಷ್ಟ್ರೀಯ ಪುರಸ್ಕಾರಕ್ಕೆ ಶ್ರೀ ಸಿದ್ದರಾಮ ಶರಣರು ಬೆಲ್ದಾಳ, ಶ್ರೀ ಭಗವಾನ್ ಮಹಾವೀರ ಶಾಂತಿ ರಾಷ್ಟ್ರೀಯ ಪುರಸ್ಕಾರಕ್ಕೆ ಶ್ರೀ ಭಾನು ಕೀರ್ತಿ ಭಟ್ಟಾರಕ ಸ್ವಾಮೀಜಿಗಳು, ಕಂಬದಹಳ್ಳಿ, ಹಾಗೂ ಪ್ರತಿಷ್ಠಿತ ಪಂಪ ಪ್ರಶಸ್ತಿಗೆ ಖ್ಯಾತ ಸಾಹಿತಿ ದೇವನೂರು ಮಹಾದೇವ ಅವರು ಭಾಜನರಾಗಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದ್ದಾರೆ.

ಬುಧವಾರ ಪ್ರತಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿವಿಧ ಸಾಧಕರನ್ನು ಗುರುತಿಸಿ ರಾಜ್ಯ ಸರ್ಕಾರದ ಪ್ರತಿಷ್ಠಿತ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಅದರಂತೆಯೂ ಈ ಬಾರಿಯೂ ಹಲವು ಎಲೆಮರೆಯ ಸಾಧಕರನ್ನು ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು. ಇದೇ ವೇಳೆ ರಾಜ್ಯ ಸರ್ಕಾರ ನೀಡುವ ವಿವಿಧ ಪ್ರತಿಷ್ಠಿತ ಪ್ರಶಸ್ತಿಗೆ ಹಲವು ಸಾಧಕರನ್ನು ಆಯ್ಕೆ ಮಾಡಲಾಗಿದೆ ಎಂದು ಸಚಿವ ತಂಗಡಗಿ ತಿಳಿಸಿದರು. ರಾಷ್ಟ್ರೀಯ ಪ್ರಶಸ್ತಿಗೆ ತಲಾ10 ಲಕ್ಷ, ಉಳಿದ ಎಲ್ಲಾ ಪ್ರಶಸ್ತಿಗಳಿಗೂ ತಲಾ 5 ಲಕ್ಷ ರೂಪಾಯಿ ನಗದು ಹಾಗೂ ಪ್ರಶಸ್ತಿ ಫಲಕ, ಸ್ಮರಣಿಕೆ ಒಳಗೊಂಡಿದೆ. ಶೀಘ್ರದಲ್ಲಿಯೇ ಮುಖ್ಯಮಂತ್ರಿಗಳ ದಿನಾಂಕ ಪಡೆದು ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಆಯೋಜನೆ ಮಾಡಲಾಗುವುದು ಎಂದು ಹೇಳಿದರು.


ಭಟ್ಟಾರಕ ಸ್ವಾಮೀಜಿ


ದೇವನೂರು ಮಹಾದೇವ


ಸಿದ್ದರಾಮ ಶರಣರು

ಪ್ರಶಸ್ತಿ ಪಡೆದ ಸಾಧಕರು

- ಕೆ ಜಿ ಕುಂದಣಗಾರ ಗಡಿನಾಡ ಸಾಹಿತ್ಯ ಪ್ರಶಸ್ತಿ - ಅಲ್ಲಾಭಕ್ಷ್ ಮೀರಸಾಹೇಬ ಮಿರ್ಜಿ
- ಅತ್ತಿಮಬ್ಬೆ ಪ್ರಶಸ್ತಿ - ಡಾ. ಸುಕನ್ಯಾ ಮಾರುತಿ
- ಡಾ ಗುಬ್ಬಿ ವೀರಣ್ಣ ಪ್ರಶಸ್ತಿ - ಜಿ.ವಿ. ಶಾರದಾ
- ಬಿ. ವಿ. ಕಾರಂತ ಪ್ರಶಸ್ತಿ - ಪ್ರಸನ್ನ, ಶಿವಮೊಗ್ಗ
- ಡಾ. ಸಿದ್ದಲಿಂಗಯ್ಯ ಸಾಹಿತ್ಯ ಪ್ರಶಸ್ತಿ - ಗಂಗಾರಾಮ ಚಂಡಾಳ ,ಕೋಲಾರ.
- ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ - ವಿ. ಹರಿರಾಮ್
- ಜಕಣಾಚಾರಿ ಪ್ರಶಸ್ತಿ - ಅಶೋಕ್ ಗುಡಿಗಾರ್
- ಜಾನಪದಶ್ರೀ ಪ್ರಶಸ್ತಿ - ಎಂ. ಮಹದೇವಯ್ಯ ಹಾಗೂ ಬಿ. ಲಕ್ಷ್ಮಣ
- ಸಂಗೊಳ್ಳಿ ರಾಯಣ್ಣ ಪ್ರಶಸ್ತಿ- ಸಿದ್ದನಗೌಡ ಪಾಟೀಲ್, ಧಾರವಾಡ.
- ಅಕ್ಕಮಹಾದೇವಿ ಪ್ರಶಸ್ತಿ - ಕೆ. ನೀಲಾ,
- ಶ್ರೀ ಸಿದ್ದರಾಮೇಶ್ವರ ಪ್ರಶಸ್ತಿ -ಎಸ್. ಜಿ. ಸಿದ್ದರಾಮಯ್ಯ
- ಕುಮಾರವ್ಯಾಸ ಪ್ರಶಸ್ತಿ- ಕಲ್ಲಿನಾಥ ಶಾಸ್ತ್ರಿ, ಗದಗ.
- ನಾಟ್ಯ ರಾಣಿ ಶಾಂತಲಾ ಪ್ರಶಸ್ತಿ- ಪ್ರತಿಭಾ ಪ್ರಹ್ಲಾದ್

ಕಾರು ಹರಿದು ಮಗು ಸಾವು: ಆಕ್ರೋಶ

ಚಿಕ್ಕಮಗಳೂರು: ಅಂಬೇಡ್ಕರ್ ಜಯಂತಿ ಅಂಗವಾಗಿ ನಡೆಯುತ್ತಿದ್ದ ಮೆರವಣಿಗೆ ಮೇಲೆ ಕಾರೊಂದು ಹರಿದ ಪರಿಣಾಮ 7 ವರ್ಷದ ಬಾಲಕಿ ಸಾವಿಗೀಡಾಗಿ ಏಳೆಂಟು ಮಂದಿ ಗಾಯಗೊಂಡ ದಾರುಣ ಘಟನೆ ನಗರ ಹೊರವಲಯದ ಬಿಳೇಕಲ್ಲು ಗ್ರಾಮದಲ್ಲಿ ಮಂಗಳವಾರ ರಾತ್ರಿ ನಡೆದಿದೆ.

ಘಟನೆಯಲ್ಲಿ ಸಾನ್ವಿ ಎಂಬ 7 ವರ್ಷದ ಮಗು ಸ್ಥಳದಲ್ಲೇ ಪ್ರಾಣ ಕಳೆದುಕೊಂಡಿದೆ. ಸಾನ್ವಿ ಇಂದಾವರ ಗ್ರಾಮದಿಂದ ಸಂಬಂಧಿಕರ ಮನೆಗೆಂದು ಬಂದಿದ್ದಳು. ಉಳಿದಂತೆ ನಿಶ್ಚಿತ ಎನ್ನುವ 11 ವರ್ಷದ ಬಾಲಕಿ ಸೇರಿ ತೃಪ್ತಿ, ತಿಮ್ಮರಾಜು, ಉಷಾ, ಚೇತನ್, ಸೃಷ್ಟಿ, ನಾಗರಾಜ್ ಹಾಗೂ ಚೇತನ್ ಎಂಬುವವರು ತೀವ್ರ ಗಾಯಗೊಂಡಿದ್ದು ಎಲ್ಲರನ್ನೂ ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಮೆಡಿಕಲ್ ಕಾಲೇಜಿಗೆ ದಾಖಲಿಸಲಾಗಿದೆ. ಅತೀ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದು ನಂತರ ಉರುಳಿ ಬಿದ್ದಿದೆ. ಘಟನೆಯಲ್ಲಿ ಕಾರು ಚಾಲಕ ಸುಧಾಕರ್ ಎಂಬಾತನಿಗೂ ತೀವ್ರ ಗಾಯಗಳಾಗಿವೆ.

ರೊಚ್ಚಿಗೆದ್ದ ಜನರು: ಘಟನೆ ಸಂಭವಿಸುತ್ತಿದ್ದಂತೆ ತೀವ್ರ ರೊಚ್ಚಿಗೆದ್ದ ಮೆರವಣಿಗೆಯಲ್ಲಿದ್ದ ಜನರು ಕಾರಿನ ಗಾಜುಗಳನ್ನೆಲ್ಲಾ ಪುಡಿ ಮಾಡಿದ್ದಲ್ಲದೆ ಚಾಲಕ ಸುಧಾಕರ್‌ಗೆ ಹಿಗ್ಗಾಮುಗ್ಗ ಥಳಿಸಿದ್ದಾರೆ. ಘಟನೆ ನಂತರ ನಗರದ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆ ಎದುರು ಪ್ರತಿಭಟನೆ ನಡೆಸಿದ ಪರಿಣಾಮ ಕೆಲ ಸಮಯ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಯಕುಮಾರ್ ಮತ್ತು ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಪರಿಸ್ಥಿತಿ ನಿಯಂತ್ರಿಸಲು ಹರಸಾಹಸಪಟ್ಟರು.

ಸಿ.ಟಿ.ರವಿ ಸಾಂತ್ವನ

ಘಟನೆ ವಿಷಯ ತಿಳಿಯುತ್ತಿದ್ದಂತೆ ವಿಧಾನ ಪರಿಷತ್ ಸದಸ್ಯ ಡಾ. ಸಿ.ಟಿ.ರವಿ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಮೃತ ಮಗುವಿನ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಘಟನೆಗೆ ಕಾರಣರಾದವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು. ನಂತರ ಹಾಸನದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳುಗಳ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು.

ರಾಜ್ಯದಲ್ಲಿ ಮೇ 15ರವರೆಗೆ ಬಿಸಿಲಿನ ತಾಪಮಾನದ ಬೇಗೆ | ತತ್ತರಿಸಿದ ಜನತೆ

ಏಪ್ರಿಲ್ ಮಧ್ಯಂತರದಲ್ಲಿ ಗರಿಷ್ಠ ತಾಪಮಾನ

ಬೆಂಗಳೂರು: ಏಪ್ರಿಲ್ ಮಧ್ಯಂತರದಲ್ಲಿ ರಾಜ್ಯದಲ್ಲಿನ ಬಹುತೇಕ ಜಿಲ್ಲೆಗಳ ಗರಿಷ್ಠ ತಾಪಮಾನ 36 ರಿಂದ 42 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿದ್ದು, ಈ ನಡುವೆ ಹವಾಮಾನ ಇಲಾಖೆ 12 ಜಿಲ್ಲೆಗಳಿಗೆ ಶಾಖದ ಅಲೆ (ಹೀಟ್ ವೇವ್) ಎಚ್ಚರಿಕೆ ನೀಡಿದೆ. ಜತೆಗೆ ರಾಜ್ಯದಲ್ಲಿ ಮೇ 15ರವರೆಗೆ ಬಿಸಿಲಿನ ತಾಪಮಾನದ ಬೇಗೆ ಇರಲಿದ್ದು, ಈ ಮೂಲಕ ಮೊದಲೇ ಬೇಸಿಗೆಯ ತಾಪಕ್ಕೆ ಹೈರಾಣಾಗಿದ್ದ ಜನತೆಗೆ ಮತ್ತಷ್ಟು ಬಿಸಿ ಮುಟ್ಟಲಿದೆ.

ಇತ್ತೀಚಿನ ದಿನಗಳಲ್ಲಿ ರಾಜ್ಯದಲ್ಲಿ ಬಿಸಿಲಿನ ತೀವ್ರತೆ ಗಣನೀಯವಾಗಿ ಹೆಚ್ಚಾಗಿದೆ. ದಿನನಿತ್ಯದ ತಾಪಮಾನವು ಸಾಮಾನ್ಯ ಮಟ್ಟವನ್ನು ಮೀರಿ ಜನಜೀವನದ ಮೇಲೆ ಪರಿಣಾಮ ಬೀರುತ್ತಿದೆ. ಈ ಪರಿಸ್ಥಿತಿಗೆ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ ಮಳೆಯ ಕೊರತೆ. ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡದಲ್ಲಿ ಏ.15 ರಿಂದ 5 ದಿನ ಹಾಗೂ ಬಾಗಲಕೋಟೆ, ಬೀದರ್, ಧಾರವಾಡ, ಗದಗ, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ ಮತ್ತು ಯಾದಗಿರಿಯಲ್ಲಿ ಏ.16 ರಿಂದ 19ರವರೆಗೆ ಶಾಖದ ಅಲೆ ಮುಂದುವರೆಯಲಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಈ ಸಂದರ್ಭದಲ್ಲಿ ಈ ಜಿಲ್ಲೆಗಳಲ್ಲಿ ಬಿರುಗಾಳಿ ಸಹಿತ ಸಾಧಾರಣ ಮಳೆ ಸುರಿಯುವ ಸಾಧ್ಯತೆ ಇದೆ. ಚಿಕ್ಕಮಗಳೂರು, ಕೊಡಗು, ಹಾಸನ, ಶಿವಮೊಗ್ಗದಲ್ಲಿ ಏ.15 ರಿಂದ 21 ರವರೆಗೆ, ಮೈಸೂರು, ಚಾಮರಾಜನಗರ, ಚಿತ್ರದುರ್ಗ, ದಾವಣಗೆರೆಯಲ್ಲಿ ಏ.16 ರಂದು ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ತಜ್ಞರು ಸೂಚನೆ ನೀಡಿದ್ದಾರೆ.

ಮೇ ತಿಂಗಳ ಅಂತ್ಯದ ವೇಳೆಗೆ ರಾಜ್ಯದಲ್ಲಿ ಸರಾಸರಿ ಮಟ್ಟಕ್ಕಿಂತಲೂ ಹೆಚ್ಚು ಮಳೆ ದಾಖಲಾಗಿತ್ತು. ಇದರಿಂದ ವಾತಾವರಣ ತಂಪಾಗಿದ್ದು, ಬಿಸಿಲಿನ ತೀವ್ರತೆ ಕಡಿಮೆ ಆಗಿತ್ತು. ಮಳೆಯ ಪರಿಣಾಮವಾಗಿ ನೆಲ ತೇವಾಂಶವನ್ನು ಉಳಿಸಿಕೊಂಡಿದ್ದು, ಗಾಳಿ ತಂಪಾಗಲು ಸಹಾಯವಾಗಿತ್ತು.



ಬೆಂಗಳೂರಿನಲ್ಲಿ ಹೆಚ್ಚು ಬಿಸಿಲು ದಾಖಲಾಗಿರುವುದು ವಾಡಿಕೆಗಿಂತ 1.3 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಹೆಚ್ಚಾಗಿದೆ. ಅದರಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಅತಿ ಹೆಚ್ಚು ಉಷ್ಣಾಂಶ ದಾಖಲಾಗಿದ್ದು, ಇವೆಲ್ಲವೂ ಬಹುತೇಕ ವಾಡಿಯಷ್ಟೇ ಇದೆ. 1 ರಿಂದ 2 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ವಾಡಿಕೆಗಿಂತ ಏರಿಕೆಯಾಗಿದೆ.
■ ಡಾ. ಶ್ರೀನಿವಾಸರೆಡ್ಡಿ, ಹಿರಿಯ ಹವಾಮಾನ ತಜ್ಞ

ಒಟ್ಟು ಮಳೆ ಪ್ರಮಾಣದಲ್ಲಿ ಶೇ.75 ಮಳೆಯು ನೈಋತ್ಯ ಮಾನ್ಸೂನ್‌ನಲ್ಲಿ ಸುರಿಯುತ್ತದೆ. ಆದರೆ, ಮುಂಗಾರು ದುರ್ಬಲಗೊಳ್ಳಲಿದೆ. ಈ ಕಾರಣದಿಂದ ಕರ್ನಾಟಕ ಸೇರಿ ದೇಶಾದ್ಯಂತ ಮಾನ್ಸೂನ್ ಅವಧಿಯಲ್ಲಿ ಮಳೆ ಕುಂಠಿತಗೊಳ್ಳುವ ಸಾಧ್ಯತೆ ಹೆಚ್ಚಿದ್ದು, ನೈಋತ್ಯ ಮಾನ್ಸೂನ್ ಕುರಿತು ಬಿಡುಗಡೆ ಮಾಡಿರುವ ಮೊದಲ ಹಂತದ ವರದಿಯಲ್ಲಿ ಕರಾವಳಿ, ಮಲೆನಾಡು, ದಕ್ಷಿಣ ಕರ್ನಾಟಕ, ಉ.ಕರ್ನಾಟಕದ ಭೌಗೋಳಿಕ ಪ್ರದೇಶಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಂಭವ ಎದ್ದು ಕಾಣುತ್ತಿದೆ.

ಕಲಬುರಗಿಯಲ್ಲಿ ಅತೀ ಹೆಚ್ಚು ಉಷ್ಣಾಂಶ ದಾಖಲು

ರಾಜ್ಯದಲ್ಲಿ ಬಿಸಿಲಿನ ಬೇಗೆ ತೀವ್ರವಾಗಿದ್ದು, ರಾಜ್ಯದ ಇತರೆ ಜಿಲ್ಲೆಗಳಗಿಂತ ಕಲಬುರಗಿಯಲ್ಲಿ ಅತೀ ಹೆಚ್ಚು 44 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಬುಧವಾರ ದಾಖಲಾಗಿದೆ. ಚಿತ್ರದುರ್ಗ, ಧಾರವಾಡ, ಬೀದರ್, ಗದಗ, ರಾಯಚೂರು ಮತ್ತು ವಿಜಯಪುರದಲ್ಲಿ ತಲಾ 40 ಡಿ.ಸೆ.ವರದಿಯಾಗಿದೆ. ಈ ಮೇಲಿನ ಜಿಲ್ಲೆಗಳಲ್ಲಿ ಗರಿಷ್ಠ, ಕನಿಷ್ಠ ತಾಪಮಾನದಲ್ಲಿ ವಾಡಿಕೆಗಿಂತ 2-3 ಡಿಗ್ರಿ ಸೆಲ್ಸಿಯಸ್ ಅಧಿಕವಾಗಿದೆ.

ರಾಜಧಾನಿಯಲ್ಲಿ ಕನಿಷ್ಠ ವಾಡಿಕೆಗಿಂತ 1.3 ಡಿ.ಸೆ ಹೆಚ್ಚಳ

ರಾಜಧಾನಿ ಬೆಂಗಳೂರಿನಲ್ಲಿಯೂ ಸುಡು ಬಿಸಿಲು ಕಾಣಿಸಿಕೊಳ್ಳುತ್ತಿದೆ. ವಾಡಿಕೆಯಂತೆ 34.6 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಬೇಕಿತ್ತು. ಆದರೆ, ಪ್ರಸ್ತುತ ನಗರದಲ್ಲಿ 36.6 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದ್ದು, ವಾಡಿಕೆಗಿಂತ 2.6 ಡಿಗ್ರಿ ಸೆಲ್ಸಿಯಸ್ ಅಧಿಕವಾಗಿ ಕಂಡುಬಂದಿದೆ. ಕನಿಷ್ಠ ತಾಪಮಾನದಲ್ಲಿಯೂ ವಾಡಿಕೆಗಿಂತ 1.3 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗಿರುವುದು ಕಂಡುಬಂದಿದೆ.

ವಿದ್ಯುತ್ ಕೇಬಲ್ ಕಾಮಗಾರಿ ಶೀಘ್ರ: ಯು.ಟಿ. ಖಾದರ್

ಮಂಗಳೂರು: ಮಂಗಳೂರು, ಮಂಗಳೂರು ನಗರ ದಕ್ಷಿಣ ಹಾಗೂ ಮಂಗಳೂರು ನಗರ ಉತ್ತರ ಕ್ಷೇತ್ರದ ನಗರ ಪ್ರದೇಶದಲ್ಲಿ ಭೂಗತ ವಿದ್ಯುತ್ ಕೇಬಲ್ ಅಳವಡಿಕೆಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಶೀಘ್ರ ಕೆಲಸ ಆರಂಭವಾಗಲಿದೆ. ಉಳ್ಳಾಲ, ಸೋಮೇಶ್ವರ, ಕುದ್ರೋಳಿ-ಉರ್ವಸ್ಟೋರ್ ಹಾಗೂ ಕಾವೂರು ಪ್ರದೇಶಗಳಲ್ಲಿ ಭೂಗತ ಕೇಬಲ್ ಅಳವಡಿಕೆಯಾಗಲಿದೆ ಎಂದು ರಾಜ್ಯ ವಿಧಾನ ಸಭೆ ಸ್ಪೀಕರ್ ಯು.ಟಿ. ಖಾದರ್ ತಿಳಿಸಿದರು.



ಮಂಗಳೂರು ವಿಧಾನಸಭಾ ಕ್ಷೇತ್ರದಲ್ಲಿ ಭೂಗತ ಕೇಬಲ್ ಅಳವಡಿಸುವ ಕುರಿತು ಬಿಜೈ ಮೆಸ್ಕಾಂ ಕಚೇರಿಯಲ್ಲಿ ಬುಧವಾರ ಅಧಿಕಾರಿಗಳ ಸಭೆ ನಡೆಸಿ, ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಸಂಪೂರ್ಣ ಉಳ್ಳಾಲ ನಗರಸಭೆ ವ್ಯಾಪ್ತಿ, ಸೋಮೇಶ್ವರ ಪುರಸಭೆ ಸೋಮೇಶ್ವರ, ಕುಂಪಲ, ಕೊಲ್ಯ, ಉಚ್ಚಿಲ ಭಾಗದಲ್ಲಿ 186.45 ಕೋಟಿ ರೂ. ವೆಚ್ಚದಲ್ಲಿ ಭೂಗತ ಕೇಬಲ್ ಅಳವಡಿಕೆ ಆಗಲಿದೆ. ಮಂಗಳೂರು ನಗರ ದಕ್ಷಿಣ ಕ್ಷೇತ್ರದ ಮಣ್ಣಗುಡ್ಡ ಸೆಕ್ಷನ್‌ನ ಕುದ್ರೋಳಿ ಪ್ರದೇಶದಿಂದ ಉರ್ವ, ಉರ್ವಸ್ಟೋರ್, ಬಿಜೈ, ಕೆಎಸ್ ಆರ್‌ಟಿಸಿ ಬಸ್ ನಿಲ್ದಾಣ ಪ್ರದೇಶದಲ್ಲಿ 67.64 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ನಡೆಯಲಿದೆ. ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಕಾವೂರು ಏರ್‌ಪೋರ್ಟ್ ರಸ್ತೆಯಲ್ಲಿ 51.28 ಕೋಟಿ ರೂ.ವೆಚ್ಚದಲ್ಲಿ ಭೂಗತ ಕೇಬಲ್ ಅಳವಡಿಸಲಾಗುವುದು. ಅರ್ಧ ಮೀಟರ್ ಅಗಲ, 1.5 ಮೀಟರ್ ಆಳದಲ್ಲಿ ಕೇಬಲ್ ಅಳವಡಿಕೆ ಆಗಲಿದೆ ಎಂದರು.

ಸಂಪಾದಕೀಯ

ಮೋದಿಗೆ 'ದೇಶದ್ರೋಹಿ' ಎಂದ ರಾಹುಲ್ !

ಪ್ರಧಾನಿ ನರೇಂದ್ರ ಮೋದಿಯವರ ವಿರುದ್ಧ ವಿದೇಶಿ ಹಸ್ತಕ ಟೂಲ್‌ಕಿಟ್‌ಗಳು ನಡೆಸುತ್ತಿರುವ ಕುತ್ಸಿತ ನಿಂದಾಸತ್ರ ಸಾಮಾಜಿಕ ಮಾಧ್ಯಮಗಳಲ್ಲಿ ಅವ್ಯಾಹತವಾಗಿ ನಡೆಯುತ್ತಿರುವುದನ್ನು ನೋಡುತ್ತಿದ್ದೇವೆ. ಇದಕ್ಕಾಗಿ ದೇಶದೊಳಗಿನ ಕೆಲವು ಅತೃಪ್ತ ಶಕ್ತಿಗಳನ್ನು ಬಳಸಿಕೊಳ್ಳಲಾಗುತ್ತಿರುವುದು ಕೂಡ ಸರ್ವವೇದ್ಯ. ಇದೀಗ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪಶ್ಚಿಮ ಬಂಗಾಲದ ಚುನಾವಣಾ ರ್‍ಯಾಲಿಯೊಂದರಲ್ಲಿ ಪ್ರಧಾನಿ ಮೋದಿಯವರನ್ನು 'ದೇಶದ್ರೋಹಿ' ಎಂದು ದೂಷಿಸಿದ್ದಾರೆ. ಅಮೆರಿಕದ ಜತೆಗಿನ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿ ದೇಶದ ಹಿತಾಸಕ್ತಿಯನ್ನು ಮೋದಿ ಮಾರಿದ್ದಾರೆ ಎಂಬ ಆರೋಪದೊಂದಿಗೆ ರಾಹುಲ್ ಗಾಂಧಿ ಮೋದಿಯವರನ್ನು 'ದೇಶದ್ರೋಹಿ'. ಅವರಿಗೆ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡುವ ಧೈರ್ಯ ಇಲ್ಲ ಎಂದಿದ್ದಾರೆ. ರಾಹುಲ್ ಕೆಲವು ಸಮಯದಿಂದ ಪ್ರಧಾನಿ ಮೋದಿಯವರನ್ನು ಗುರಿಯಾಗಿರಿಸಿಕೊಂಡು ಆಕ್ರಮಣಕಾರಿ ರೀತಿಯ



ಆರೋಪಗಳನ್ನು ಮಾಡುತ್ತಿದ್ದಾರೆ. ಅದರಲ್ಲೂ ವಿದೇಶಕ್ಕೆ ಹೋಗಿ ಬಂದ ಬಳಿಕ ರಾಹುಲ್ ಮೋದಿಯವರ ವಿರುದ್ಧ ನಡೆಸುವ ವಾಗ್ದಾಳಿ ಮತ್ತಷ್ಟು ಆಕ್ರಮಣಕಾರಿಯಾಗಿರುವುದನ್ನು ದೇಶ ಗಮನಿಸುತ್ತಿದೆ. ಜೊತೆಗೆ ಎಂದಿನಂತೆ ಆರೆಸ್ಸೆಸ್-ಬಿಜೆಪಿ ಸಂವಿಧಾನವನ್ನು ನಾಶಗೊಳಿಸುತ್ತಿದೆ ಎಂದೂ ಸೇರಿಸಿದ್ದಾರೆ.

ರಾಜಕೀಯದಲ್ಲಿ ಟೀಕೆ-ಟಿಪ್ಪಣಿ ಸಾಮಾನ್ಯವಾಗಿರುವಂಥದ್ದೇ. ಆದರೆ ದೇಶದ ಪ್ರಧಾನಿಗೆ 'ದೇಶದ್ರೋಹಿ' ಪದ ಬಳಕೆ ಎಷ್ಟು ಸರಿ? ಮೋದಿಯವರ ವಿರುದ್ಧ ರಾಹುಲ್ ಆಗಲಿ ಅಥವಾ ಇನ್ನಾರೇ ಆಗಲಿ ಎಷ್ಟೇ ದೂಷಣೆಗೈದರೂ ದೇಶದ ಜನತೆ ಮಾತ್ರ ಮೋದಿಯವರನ್ನೇ ಬೆಂಬಲಿಸುತ್ತಿದೆ. ಈ ಬೆಂಬಲ ಕಡಿಮೆಯಾಗುವ ಬದಲಿಗೆ ಹೆಚ್ಚೆಚ್ಚಾಗುತ್ತಲೇ ಇದೆ !

ದೇಶದ ಹಿತಾಸಕ್ತಿಗಳನ್ನು ಕಾಂಗ್ರೆಸ್ ನೇತೃತ್ವದ ಹಿಂದಿನ ಸರಕಾರಗಳು ಹೇಗೆ ಕಡೆಗಣಿಸುತ್ತಾ ಬಂದಿವೆ ಮತ್ತು ವಿದೇಶಿ ಒತ್ತಡಗಳಿಗೆ ಹೇಗೆ ಮಣಿಯುತ್ತಿದ್ದವು ಎಂಬುದು ಇತಿಹಾಸದ ಪುಟಗಳಲ್ಲಿ ಎದ್ದು ಕಾಣುತ್ತಿರುವ ಸಂಗತಿ. ಅದು ಸಾವಿರಾರು ಚ.ಕಿ.ಮೀ.ಭೂಮಿಯನ್ನು ಚೀನೀ ಹಿಡಿತಕ್ಕೆ ಬಿಟ್ಟುಕೊಟ್ಟಿರುವುದು, ಡಬ್ಲ್ಯುಟಿಒ ಒಪ್ಪಂದಗಳಲ್ಲಿ ದೇಶದ ಹಿತಾಸಕ್ತಿಗಳಿಗೆ ಹಾನಿಯುಂಟು ಮಾಡಿದ್ದು, ಭಾರತೀಯ ಯೋಧರಿಗೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸುವಲ್ಲಿ ನಿರ್ಲಕ್ಷ್ಯ ತೋರಿದ್ದು, ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬನೆಯ ಬದಲಿಗೆ ದಲ್ಲಾಳಿಗಳ ಮೂಲಕ ವಿದೇಶಿ ಆಮದನ್ನೇ ನೆಚ್ಚಿಕೊಂಡು ಕೋಟ್ಯಂತರ ರೂ.ಗಳ ಭ್ರಷ್ಟಾಚಾರ ನಡೆಸಿದ ಸಂದರ್ಭಗಳಲ್ಲೆಲ್ಲ ದೇಶದ ಜನತೆ ಗುರುತಿಸಿದೆ. ರಾಹುಲ್ ಗಾಂಧಿ ಮತ್ತು ಅವರ ಆಪ್ತ ಬಳಗ ಮೋದಿಯವರ ವಿರುದ್ಧ ನಡೆಸುತ್ತಿರುವ ದಾಳಿ ಒಂದೆಡೆ ಇದ್ದರೆ, ಅವರದೇ ಪಕ್ಷದ ಹಿರಿಯ ಮುತ್ಸದ್ದಿಗಳು ಮೋದಿ ಸರ್ಕಾರದ ನಿಲುವುಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿ, ಸಮರ್ಥನೆ ನೀಡುತ್ತಿದ್ದಾರೆ. ಇದೀಗ ಮಹಿಳಾ ಮೀಸಲಾತಿ ಕುರಿತಂತೆ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಸೇರಿದಂತೆ ಕಾಂಗ್ರೆಸ್ ಮತ್ತು ಕೆಲವು ವಿಪಕ್ಷಗಳು ಉತ್ತರ-ದಕ್ಷಿಣ ಎಂದು ದೇಶದಲ್ಲಿ ಗೊಂದಲ ಹುಟ್ಟಿಸಿ ಒಕ್ಕೂಟ ತತ್ವಕ್ಕೆ ಹಾನಿಯುಂಟು ಮಾಡುತ್ತಿದ್ದರೆ, ಮಾಜಿ ರಾಷ್ಟ್ರಪತಿ ಕಾಂಗ್ರೆಸ್‌ನವರೇ ಆಗಿರುವ ಪ್ರತಿಭಾ ಪಾಟೀಲ್ ಅವರು ಪ್ರಧಾನಿ ಮೋದಿಯವರನ್ನು ಬೆಂಬಲಿಸಿ ಪತ್ರ ಬರೆದಿರುವುದೂ ಇಲ್ಲಿ ಉಲ್ಲೇಖನೀಯ.

ಎಲ್ಲವೂ ನಾನೇ ನಾನೇ, ಇದು ಟ್ರಂಪ್ ಹೊಸ ಅವತಾರ

ಗುರುತರ
• ಸೋಮಶೇಖರ ಸಿ.ಜಿ.
sompreethi@gmail.com



ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಇತ್ತೀಚಿನ ನಡೆ ಜಗತ್ತನ್ನು ಮತ್ತೆ ಮತ್ತೆ ಒಂದೇ ಪ್ರಶ್ನೆಯ ಮುಂದೆ ನಿಲ್ಲಿಸಿದೆ: ಇದು ರಾಜಕೀಯ ತಂತ್ರವೇ, ವೈಯಕ್ತಿಕ ಅಹಂಕಾರದ ಪ್ರದರ್ಶನವೇ, ಅಥವಾ ಅಧಿಕಾರದ ಮದದಿಂದ ಹುಟ್ಟಿದ ಅಸ್ಥಿರ ಮನಸ್ಥಿತಿಯ ಫಲವೇ? ಈ ಪ್ರಶ್ನೆಗೆ ವೈದ್ಯಕೀಯ ಉತ್ತರ ನೀಡುವುದು ನನ್ನ ಕೆಲಸವಲ್ಲ. ಆದರೆ ಅವರ ನಡೆ, ಮಾತು, ಪ್ರತಿಕ್ರಿಯೆ ಮತ್ತು ಸಾಮಾಜಿಕ ಮಾಧ್ಯಮದ ವರ್ತನೆಗಳನ್ನು ಗಮನಿಸಿದರೆ, ಅದು ಸಾಮಾನ್ಯ ರಾಜಕಾರಣಿಯ ಮಿತಿಯೊಳಗೆ ನಿಲ್ಲುವುದಿಲ್ಲ ಎಂಬುದಂತೂ ಸ್ಪಷ್ಟ.

ಟ್ರಂಪ್ ಎಂದರೆ ಸದಾ ಅತಿಶಯೋಕ್ತಿ, ಅಬ್ಬರ ಮತ್ತು ತನ್ನದೇ ಸತ್ಯವನ್ನು ಸೃಷ್ಟಿಸುವ ರಾಜಕಾರಣ. ಆದರೆ ಇತ್ತೀಚೆಗೆ ಅದು ಇನ್ನಷ್ಟು ಅಪಾಯಕಾರಿ ಹಂತಕ್ಕೆ ತಲುಪಿದಂತಿದೆ. ತಾನು 8 ಯುದ್ಧಗಳನ್ನು ನಿಲ್ಲಿಸಿದ್ದೇನೆ ಎಂಬಂತಹ ಭಾರೀ ಹೇಳಿಕೆಗಳಿಂದ ಹಿಡಿದು, ನೊಬೆಲ್ ಶಾಂತಿ ಪ್ರಶಸ್ತಿಯತ್ತ ಏಕಾಂಗಿ ಓಟ ನಡೆಸುವ ತನಕ ಅವರ ನಡೆ ಸ್ವಪ್ರಚಾರದ ಗಡಿಯನ್ನು ದಾಟಿ ವಾಸ್ತವದ ಮೇಲೆಯೇ ದಾಳಿ ನಡೆಸುವ ಹಂತಕ್ಕೇರಿದೆ. ಒಂದೆಡೆ ಶಾಂತಿಯ ರಕ್ಷಕನಂತೆ ಬಿಂಬಿಸಿಕೊಳ್ಳುವ ಪ್ರಯತ್ನ, ಇನ್ನೊಂದೆಡೆ ಇರಾನ್ ಮೇಲೆ ಯುದ್ಧದ ಧ್ವನಿ ? ಈ ವಿರೋಧಾಭಾಸವೇ ಟ್ರಂಪ್ ರಾಜಕೀಯದ ನಿಜ ಬಣ್ಣ.

ಶಾಂತಿ ಪ್ರಶಸ್ತಿಯ ಕನಸು ಕಂಡವನು ಯುದ್ಧದ ಭಾಷೆ ಬಳಸಿದಾಗ ಅದು ಕೇವಲ ರಾಜಕೀಯ ಲೆಕ್ಕಾಚಾರವಾಗಿರುವುದಿಲ್ಲ; ಅದು ಜಾಗತಿಕ ಸ್ಥಿರತೆಗೆ ಚೂರಿ ಬೀಸುವ ಕ್ರಮವಾಗುತ್ತದೆ. ಒಂದು ವೇಳೆ ಇವರಿಗೆ ನೊಬೆಲ್ ಪ್ರಶಸ್ತಿಯನ್ನು ನೀಡಿದ್ದರೆ ಏನಾಗುತ್ತಿತ್ತು ಎಂಬ ಆತಂಕವೂ ಇದೇ ಕಾರಣಕ್ಕೆ ಗಂಭೀರವಾಗುತ್ತದೆ. ಯಾಕೆಂದರೆ, ಟ್ರಂಪ್‌ಗೆ ಪ್ರಶಸ್ತಿ ದೊರೆತಿದ್ದರೆ ಅದನ್ನು ನೀತಿಗೆ ದೊರೆತ ಮನ್ನಣೆ ಎಂದುಕೊಳ್ಳುವುದಕ್ಕಿಂತ, ತನ್ನದೇ ವೈಯಕ್ತಿಕ ಮಹತ್ವಾಕಾಂಕ್ಷೆಗೆ ದೊರೆತ ಅನುಮೋದನೆ ಎಂದು ಅವರು ವ್ಯಾಖ್ಯಾನಿಸಬಹುದಿತ್ತು. ಆ ಮನಸ್ಥಿತಿಯ ಪರಿಣಾಮವು ಇನ್ನಷ್ಟು ಅಪಾಯಕಾರಿ ನಿರ್ಧಾರಗಳಲ್ಲಿ ವ್ಯಕ್ತವಾಗುತ್ತಿತ್ತು.

ಅವರ ಕುರಿತು ಮತ್ತೊಂದು ಗಂಭೀರ ಅಂಶವೆಂದರೆ ಸಂಸ್ಥೆಗಳ ಮೇಲಿನ ಅವಹೇಳನ. ವಿಶ್ವಸಂಸ್ಥೆ, ವಿಶ್ವ ನಾಯಕರು, ಧಾರ್ಮಿಕ ಮುಖಂಡರು? ಯಾರ ಮಾತಿಗೂ ಅವರು ತಲೆಬಾಗುವ ಸ್ವಭಾವ ತೋರಿಲ್ಲ. ಇತ್ತೀಚೆಗೆ ಪೋಪ್‌ಗೂ ಎದುರುತ್ತರ ನೀಡಿದ ಅವರ ನಡೆ ಇದನ್ನು ಮತ್ತೊಮ್ಮೆ ಸಾಬೀತುಪಡಿಸಿತು. ಧಾರ್ಮಿಕ ನೈತಿಕತೆ, ಮಾನವೀಯ ಕಳಕಳಿ, ಜಾಗತಿಕ ಶಾಂತಿಯ ಮೌಲ್ಯಗಳು? ಇವೆಲ್ಲವೂ ಟ್ರಂಪ್‌ನ ರಾಜಕೀಯ ಶೈಲಿಯಲ್ಲಿ ದುರ್ಬಲವಾಗುತ್ತಿವೆ. ಇನ್ನೂ ಗಂಭೀರವಾದ ಸಂಗತಿ ಎಂದರೆ, ಅವರು ತಮ್ಮ ಸಾಮಾಜಿಕ ಮಾಧ್ಯಮದಲ್ಲಿ ತಾವೇ ಜೀಸಸ್ ಕ್ರೈಸ್ಟ್ ಎನ್ನುವ ಅರ್ಥ ಬರುವ ರೀತಿಯ ವಿಷಯವನ್ನು ಹಾಕಿಕೊಂಡ ಘಟನೆ. ನಂತರ ಅದನ್ನು ತೆಗೆಸಿದರೂ, ಆ ಕ್ಷಣವು ಅವರ ಮನೋವೈಜ್ಞಾನಿಕ ಸ್ಥಿತಿ ಮತ್ತು ಸ್ವಕೇಂದ್ರಿತ ಅಹಂಕಾರದ ಕುರಿತು ಹಲವಾರು ಪ್ರಶ್ನೆಗಳನ್ನು ಎಬ್ಬಿಸಿತು.

ಆದರೆ, ಈ ವಿಚಾರದಲ್ಲಿ ಪೋಪ್ ಅವರ ನಡೆ ಶ್ಲಾಘನೀಯ ಎಂದರೆ ತಪ್ಪಾಗಲಾರದು. ಟ್ರಂಪ್ ಅವರು ಎಷ್ಟೇ ಹೇಳಿಕೆ ನೀಡಿದರೂ, ಪೋಪ್ ಬಾಗಲಿಲ್ಲ, ಹೆಚ್ಚಾಗಿ ಪ್ರತಿಕ್ರಿಯೆಯನ್ನೂ ನೀಡಲು ಹೋಗಲಿಲ್ಲ. ಒಂದು ವೇಳೆ ಈಗಿನ ಪೋಪ್ ಅಮೆರಿಕನ್ನರಾಗಿರುವುದು ಅದೃಷ್ಟವೇ ಸರಿ. ಒಂದು ವೇಳೆ ಅವರು ಬೇರೆ ದೇಶದವರಾಗಿ, ಟ್ರಂಪ್ ವಿರುದ್ಧ ಯುದ್ಧ ಸಂಬಂಧಿ ಹೇಳಿಕೆ ನೀಡಿದ್ದರೆ ಅಮೆರಿಕ ವಿರೋಧಿ ಎಂದೇ ಕರೆದುಬಿಡುತ್ತಿದ್ದರು. ಆದರೆ, ಈಗಿನ ಪೋಪ್ ಅಮೆರಿಕನ್ನರಾಗಿರುವುದರಿಂದ ಹೆಚ್ಚಿನ ಟೀಕೆಗೆ ಆಸ್ಪದವಿರಲಿಲ್ಲ. ಆದರೂ, ಟ್ರಂಪ್ ಅವರ ಅಧಿಕ ಪ್ರಸಂಗಿ ಹೇಳಿಕೆಗಳಿಗೆ ಪೋಪ್ ಕೂಡ ತುತ್ತಾದರೂ ಎಂಬುದು ವಿಚಿತ್ರ.

ಒಬ್ಬ ರಾಜಕಾರಣಿ ತನ್ನ ಶಕ್ತಿ, ಜನಪ್ರಿಯತೆ ಅಥವಾ ಪ್ರಭಾವವನ್ನು ಅತಿಯಾಗಿ ನಂಬುವುದು ಹೊಸದೇನಲ್ಲ. ಆದರೆ ಟ್ರಂಪ್ ವಿಷಯದಲ್ಲಿ ಸಮಸ್ಯೆ ಇನ್ನಷ್ಟು ಆಳದಲ್ಲಿದೆ. ಅವರು ಕೇವಲ ತನ್ನನ್ನು ದೊಡ್ಡವನಾಗಿ ತೋರಿಸಲು ಪ್ರಯತ್ನಿಸುವುದಿಲ್ಲ; ಜಗತ್ತಿನ ಬುದ್ಧಿವಂತಿಕೆ, ಶಿಸ್ತು ಮತ್ತು ರಾಜತಾಂತ್ರಿಕ ಸಂಯಮವನ್ನೇ ಅಸ್ಥಿರಗೊಳಿಸಲು ಪ್ರಯತ್ನಿಸುತ್ತಾರೆ. ಇದನ್ನು ಕೇವಲ ಅಹಂಕಾರವೆಂದು ತಳ್ಳಿಹಾಕಲಾಗದು. ಏಕೆಂದರೆ, ಅವರ ಪ್ರತಿಯೊಂದು ಅಜಾಗರೂಕ ಹೇಳಿಕೆಯೂ ಮಾರುಕಟ್ಟೆಗಳಿಗೆ, ಯುದ್ಧದ ಸಾಧ್ಯತೆಗಳಿಗೆ, ಜಾಗತಿಕ ರಾಜತಾಂತ್ರಿಕ ಸಂಬಂಧಗಳಿಗೆ ಪರಿಣಾಮ ಬೀರುತ್ತದೆ.

ಇಲ್ಲಿ ಮತ್ತೊಂದು ಆಯಾಮವೂ ಇದೆ. ಅದು ಆರ್ಥಿಕ-ರಾಜಕೀಯ ತಂತ್ರದ ಪ್ರಶ್ನೆ. ಚೀನಾ, ಭಾರತ ಸೇರಿದಂತೆ ಹಲವು ಅಭಿವೃದ್ಧಿಶೀಲ ದೇಶಗಳು ಮುಂದಿನ ಎರಡು ದಶಕಗಳಲ್ಲಿ ಅಮೆರಿಕದ ಸಮಾನ ಶಕ್ತಿಗಳಾಗಿ ಅಥವಾ ಕೆಲವು ಕ್ಷೇತ್ರಗಳಲ್ಲಿ ಅದಕ್ಕಿಂತ ಮುಂದೆ ಸಾಗಲಿವೆ ಎಂಬ ವಿಶ್ಲೇಷಣೆಗಳು ಬಹುಕಾಲದಿಂದಲೇ ಕೇಳಿಬರುತ್ತಿವೆ. ಈ ವಾಸ್ತವ ಟ್ರಂಪ್ ಮತ್ತು ಅವರಂತಹ ಅಮೆರಿಕ ಕೇಂದ್ರಿತ ಶಕ್ತಿಗಳಿಗೆ ಅಸಹ್ಯವಾಗುವುದು ಸಹಜ. ಯಾಕೆಂದರೆ ಜಗತ್ತು ಬಹುಧ್ರುವೀಯವಾಗುವ ಪ್ರಕ್ರಿಯೆಯಲ್ಲಿ ಅಮೆರಿಕದ ಹಳೆಯ ಪ್ರಾಬಲ್ಯ ಕುಸಿಯುತ್ತಿದೆ.

ಅದರಲ್ಲೂ ಇತ್ತೀಚಿನ ದಿನಗಳಲ್ಲಿ ಬ್ರಿಕ್ಸ್ ದೇಶಗಳೇ ಸೇರಿ, ತಮ್ಮದೊಂದು ಕರೆನ್ಸಿಯಲ್ಲಿ ವ್ಯವಹಾರ ಮಾಡುವ ಬಗ್ಗೆ ಚಿಂತನೆ ನಡೆಸುತ್ತಿವೆ. ಡಾಲರ್ ಮೇಲಿನ ಅವಲಂಬನೆಯನ್ನು ತಪ್ಪಿಸಿ, ತಮ್ಮದೇ ಕರೆನ್ಸಿಯಲ್ಲಿ ವ್ಯವಹಾರ ಮಾಡಿಕೊಳ್ಳಬಾರದೇಕೆ ಎಂಬುದು ಈ ದೇಶಗಳ ನಿಲುವು. ಈಗಾಗಲೇ ಇರಾನ್, ರಷ್ಯಾ ಜತೆಗೆ ಭಾರತ, ಚೀನಾದಂಥ ದೇಶಗಳು ಸ್ಥಳೀಯ ಕರೆನ್ಸಿಯಲ್ಲೇ ವ್ಯವಹಾರ ಮಾಡಿ ಗೆದ್ದಿವೆ. ಮುಂದಿನ ದಿನಗಳಲ್ಲಿ ಇದನ್ನು ಇನ್ನಷ್ಟು ವಿಸ್ತರಿಸುವ ಬಯಕೆಯನ್ನೂ ತೋರಿವೆ. ಇದು ಟ್ರಂಪ್‌ಗೆ ಸಹಿಸಲಾರದ ಸಂಗತಿ. ಒಂದು ವೇಳೆ ಡಾಲರ್ ಮೇಲಿನ ಬೇರೆ ದೇಶಗಳ ಅವಲಂಬನೆ ತಪ್ಪಿತೆಂದರೆ, ಅಲ್ಲಿಗೆ ಅಮೆರಿಕದ ಪ್ರಭಾವವೂ ಇಳಿದಂತೆಯೇ. ಹೀಗಾಗಿಯೇ ಯಾವುದೇ ಕಾರಣಕ್ಕೂ ಡಾಲರ್ ಮೇಲಿನ ಅವಲಂಬನೆಯನ್ನು ತಪ್ಪಿಸಬಾರದು, ಮುಂದಿನ ವರ್ಷಗಳಲ್ಲೂ ಜಗತ್ತು ಡಾಲರ್‌ನಲ್ಲೇ ವ್ಯವಹರಿಸಬೇಕು ಎಂಬುದು ಟ್ರಂಪ್ ಗಟ್ಟಿ ನಿಲುವುದು. ಹೀಗಾಗಿ, ಈ ಯುದ್ಧ ಸೇರಿದಂತೆ ಗ್ಲೋಬಲ್ ಆರ್ಡರ್‌ಗಳನ್ನು ತಪ್ಪಿಸುವ ಕೆಲಸಗಳನ್ನು ಆಗಿಂದಾಗ್ಗೆ ಟ್ರಂಪ್ ಮಾಡುತ್ತಲೇ ಇರುತ್ತಾರೆ.

ವಿಚಿತ್ರವೆಂದರೆ, ಈ ಎಲ್ಲ ಸಂಗತಿಗಳಲ್ಲಿ ಟ್ರಂಪ್ ನಂಬುವುದು ಜಗತ್ತಿನ ನಂಬಿಕೆ ಕಳೆದುಕೊಂಡ ದೇಶಗಳನ್ನೇ. ಇದಕ್ಕೆ ಬಹುದೊಡ್ಡ ಉದಾಹರಣೆ ಪಾಕಿಸ್ತಾನ. ಏಕೆಂದರೆ, ಮರ್ಯಾದೆಯುಳ್ಳ ಯಾವುದೇ ದೇಶಗಳು ಟ್ರಂಪ್ ತಾಳಕ್ಕೆ ಕುಣಿಯುವುದು ತೀರಾ ಕಷ್ಟಕರ. ಆದರೆ, ಪಾಕಿಸ್ತಾನದಂಥ ದೇಶಗಳಿಗೆ ಇದು ಅನಿವಾರ್ಯವೂ ಹೌದು. ಈ ದೇಶಗಳಿಗೆ ಹೇಗೂ ಟ್ರಂಪ್ ಅವರನ್ನು ಎದುರು ಹಾಕಿಕೊಳ್ಳಲು ಆಗುವುದಿಲ್ಲ. ಹಾಕಿಕೊಂಡರೂ ಬದುಕಲು ಸಾಧ್ಯವಿಲ್ಲ. ಅಲ್ಲದೆ, ಟ್ರಂಪ್ ಹೇಗೆ ಶಾಂತಿ ಬಗ್ಗೆ ಮಾತನಾಡಿದಾಗ ಅದು ಸತ್ಯಕ್ಕೆ ದೂರವಾದ ಸಂಗತಿಯಾಗುವುದೋ, ಹಾಗೆಯೇ, ಪಾಕಿಸ್ತಾನವೂ ಶಾಂತಿ ಬಗ್ಗೆ ಮಾತನಾಡಿದಾಗ ಅದು ಹಾಸ್ಯದ ಸಂಗತಿಯೇ ಆಗುತ್ತದೆ.

ಇರಲಿ, ಟ್ರಂಪ್ ಅವರ ಗಡಿಬಿಡಿಯ ಸಂದರ್ಭದಲ್ಲಿ ಯುದ್ಧ, ತೈಲ ಮಾರುಕಟ್ಟೆಯ ಅಸ್ಥಿರತೆ, ಆಮದು-ರಫ್ತು ಸರಪಳಿಯ ವ್ಯತ್ಯಯ, ಸಾಗಣೆ ಮಾರ್ಗಗಳ ಅಡೆತಡೆ, ಹಣದುಬ್ಬರ ? ಇವೆಲ್ಲವೂ ಅಭಿವೃದ್ಧಿಶೀಲ ದೇಶಗಳ ವೇಗವನ್ನು ಕುಗ್ಗಿಸುವ ಸಾಧನಗಳಾಗುತ್ತವೆ. ಕೋವಿಡ್ ಕಾಲದಲ್ಲಿ ಜಗತ್ತು ಅನುಭವಿಸಿದ ಆರ್ಥಿಕ ಹಿನ್ನಡೆಯ ಪಾಠ ಇನ್ನೂ ಮರೆತಿಲ್ಲ. ಸರಬರಾಜು ಸರಪಳಿ ಕುಸಿತ, ಆರೋಗ್ಯ ವ್ಯವಸ್ಥೆಯ ಒತ್ತಡ, ಉದ್ಯೋಗ ನಷ್ಟ, ಆಹಾರ ಮತ್ತು ಇಂಧನ ದರ ಏರಿಕೆ? ಇವು ಮತ್ತೆ ಉಂಟಾದರೆ ಅಭಿವೃದ್ಧಿಯತ್ತ ಸಾಗುತ್ತಿರುವ ದೇಶಗಳ ಆಂತರಿಕ ಬಲವೇ ದುರ್ಬಲವಾಗಬಹುದು. ಈ ದೃಷ್ಟಿಯಿಂದ ನೋಡಿದರೆ, ಯುದ್ಧವನ್ನು ಪ್ರೇರೇಪಿಸುವ ಅಥವಾ ಉಲ್ಬಣಗೊಳಿಸುವ ಯಾವುದೇ ನಡೆ ಕೇವಲ ಪ್ರಾದೇಶಿಕ ಸಂಘರ್ಷವಲ್ಲ; ಅದು ಜಾಗತಿಕ ಆರ್ಥಿಕ ತಂತ್ರವಾಗಿಯೂ ಕಾಣಬಹುದು.

ಟ್ರಂಪ್ ಅವರ ನಡೆ ಈ ಬೆಳಕಿನಲ್ಲಿ ಇನ್ನಷ್ಟು ಗಂಭೀರವಾಗಿ ಕಾಣುತ್ತದೆ. ಅದು ಕೇವಲ ಒಂದು ದೇಶದ ಅಧ್ಯಕ್ಷನ ಅಸಹನೀಯ ಶೈಲಿ ಅಲ್ಲ; ಅದು ಜಗತ್ತಿನ ನಿಯಮಾಧಾರಿತ ವ್ಯವಸ್ಥೆಯ ವಿರುದ್ಧದ ಬಂಡಾಯದಂತೆ ತೋರುತ್ತದೆ. ಸಂಸ್ಥೆಗಳ ಮೇಲೆ ನಂಬಿಕೆ ಕುಸಿದರೆ, ನಾಯಕರ ಮಾತುಗಳು ಸತ್ಯವನ್ನು ನಿರ್ಧರಿಸಲು ಆರಂಭಿಸಿದರೆ, ಮತ್ತು ವೈಯಕ್ತಿಕ ಅಹಂಕಾರವೇ ನೀತಿಯನ್ನು ಬದಲಾಯಿಸಿದರೆ, ಆಗ ಜಗತ್ತು ಅಪಾಯದ ಅಂಚಿಗೆ ಸರಿಯುತ್ತದೆ. ಟ್ರಂಪ್ ಈ ಅಪಾಯವನ್ನು ಅರ್ಥ ಮಾಡಿಕೊಂಡಿದ್ದಾರೆ ಎನ್ನುವುದು ಕಾಣುವುದಿಲ್ಲ. ಅಥವಾ ಅರ್ಥ ಮಾಡಿಕೊಂಡಿದ್ದರೂ, ಅದನ್ನೇ ತಮ್ಮ ಲಾಭಕ್ಕೆ ಬಳಸುತ್ತಿದ್ದಾರೆ.

ಅಂತಿಮವಾಗಿ ಹೇಳಬೇಕಾದರೆ, ಟ್ರಂಪ್ ಅವರನ್ನು ಕೇವಲ ಒಬ್ಬ ವಿಚಿತ್ರ ನಾಯಕ ಎಂದು ನೋಡಿದರೆ ತಪ್ಪಾಗುತ್ತದೆ. ಅವರ ನಡೆ ಜಾಗತಿಕ ಅರಾಜಕತೆಯ ಸಂಕೇತವೂ ಆಗಿದೆ. ಅವರು ತೋರಿಸುವ ಪ್ರತಿಯೊಂದು ಅತಿರೇಕವೂ ಒಂದು ಸಂದೇಶ ನೀಡುತ್ತದೆ: ಶಾಂತಿ, ಶಿಸ್ತು, ಸಹಕಾರ ಮತ್ತು ಸಂಸ್ಥೆಗಳ ಮೇಲೆ ಆಧಾರಿತ ವಿಶ್ವಕ್ರಮ ಈಗ ಬಿಗಿ ಪರೀಕ್ಷೆಯಲ್ಲಿದೆ. ಈ ಪರೀಕ್ಷೆಯಲ್ಲಿ ಟ್ರಂಪ್ ಅವರಂತಹ ನಾಯಕರು ಕೇವಲ ವ್ಯಕ್ತಿಗಳಲ್ಲ; ಅವರು ವ್ಯವಸ್ಥೆಯ ರಂಧ್ರಗಳು.

ಆದ್ದರಿಂದ ಟ್ರಂಪ್ ಬಗ್ಗೆ ಕೇಳಬೇಕಾದ ಪ್ರಶ್ನೆ ''ಅವರ ಮಾನಸಿಕ ಸ್ಥಿತಿ ಹೇಗಿದೆ?'' ಎಂಬುದಕ್ಕಿಂತ ದೊಡ್ಡದು. ''ಇಂತಹ ಅಸ್ಥಿರ ಮನೋಭಾವದ ರಾಜಕೀಯವು ಜಗತ್ತಿಗೆ ಏನು ಮಾಡುತ್ತದೆ?'' ಎಂಬ ಪ್ರಶ್ನೆಯೇ ಇಂದು ಹೆಚ್ಚು ಪ್ರಸ್ತುತ. ಮತ್ತು ಆ ಪ್ರಶ್ನೆಗೆ ಉತ್ತರ ಸುಲಭವಲ್ಲ. ಆದರೆ ಒಂದು ಸಂಗತಿ ಸ್ಪಷ್ಟ: ಅಹಂಕಾರ, ಅಜಾಗರೂಕತೆ ಮತ್ತು ಅಧಿಕಾರದ ದುರುಪಯೋಗ ಸೇರಿಕೊಂಡಾಗ, ಅದು ಶಾಂತಿಯ ಮುಖವಾಡ ಧರಿಸಿದ ಯುದ್ಧಕ್ಕಿಂತ ಕಡಿಮೆಯಲ್ಲ.

ನಾಸ್ತಿ ಎಂದರೆ ದೇಹಿ ಎನ್ನಬೇಕಾಗುತ್ತದೆ

ಅಕ್ಷರದ್ವಯಮಭ್ಯಸ್ತಂ ನಾಸ್ತಿ ನಾಸ್ತೀತಿ ಯತ್ಪುರಾ ।
ತದಿದಂ ದೇಹಿ ದೇಹೀತಿ ವಿಪರೀತ ಮುಪಸ್ಥಿತಮ್ ॥ -ಪರಾಶರ ಧರ್ಮಸಂಹಿತಾ

'ಇಲ್ಲ ಇಲ್ಲ' ಎಂದು ಹಿಂದೆ ಯಾವ ಎರಡಕ್ಷರವನ್ನು ಅಭ್ಯಾಸ ಮಾಡಿದ್ದರೋ ಅದೇ ಈಗ ತಿರುವುಮುರುವಾಗಿ 'ಕೊಡುಕೊಡು' ಎಂದು ಗಂಟು ಬಿದ್ದಿದೆ -ಎಂಬುದು ಶ್ಲೋಕಾರ್ಥ.

ಹಿರಿಯರು ಆಗಾಗ ಹೇಳುವ ಮಾತೆಂದರೆ ಕೇಳಿದವರಿಗೆಲ್ಲ ಇಲ್ಲವೆಂದು ಕಳಿಸುವುದು ಒಳ್ಳೆಯದಲ್ಲ. ಏನನ್ನಾದರೂ ನೀಡಬೇಕು. ಎಲ್ಲರಿಗೂ ನೀಡುವುದಿಲ್ಲವೆಂದಾದರೂ ಯಾರಿಗೆ ಅನಿವಾರ್ಯವಿದೆಯೋ ಅವರಿಗೆ ಯಥಾಶಕ್ತಿ ನೀಡಬೇಕು ಎನ್ನುವುದು.

ಶ್ಲೋಕ ಸಾಗರ
• ಡಾ.ಸೋಂದಾ ಭಾಸ್ಕರ ಭಟ್

ಇನ್ನು ಕೆಲವು ಕುಟುಂಬದಲ್ಲಿ ಯಾರಾದರೂ ಭಿಕ್ಷುಕರು ಬಂದು ಬೇಡಿದಾಗಲೂ ಮಕ್ಕಳ ಮೂಲಕ ಕೊಡಿಸುವ ಸಂಪ್ರದಾಯವಿದೆ. ಇನ್ನು ಕೆಲವರಿದ್ದಾರೆ- ಪಾಪದವರನ್ನು ಕಂಡರೆ ಏನನ್ನಾದರೂ ಕೊಡದಿದ್ದರೆ ಅವರಿಗೆ ಮನಸ್ಸಿಗೆ ಸಮಾಧಾನವಿರುವುದಿಲ್ಲ.

ಹಬ್ಬ, ಹರಿದಿನಗಳಲ್ಲಿ, ಗ್ರಹಣಾದಿ ವಿಶೇಷ ಸಂದರ್ಭಗಳಲ್ಲಿ ದಾನ ಮಾಡುವುದು, ದೇಣಿಗೆ ನೀಡುವುದು ಇತ್ಯಾದಿ ಮಾಡುತ್ತಾರೆ. ಈ ಎಲ್ಲ ಬಗೆಯ ಕಾಯಕದ ಹಿನ್ನೆಲೆಯಲ್ಲಿ ಉದಾತ್ತ ಭಾವವಿದೆ. ಒಳ್ಳೆಯದಕ್ಕೆ, ಒಳಿತಾಗುವುದಕ್ಕೆ ಭಗವಂತ ತನಗೆ ಕೊಟ್ಟ ಸಂಪತ್ತಿನಲ್ಲಿ ಕಿಂಚಿತ್ತಾದರೂ ಕೊಡಬೇಕು, ಅರ್ಹರಿಗೆ ದಾನ ಮಾಡಬೇಕು. ಇದರಿಂದ ಕೊಟ್ಟವರಿಗೆ ಒಳಿತಾಗುತ್ತದೆಯೇ ವಿನಾ ಕೆಡುಕಾಗದು. ಯಾವಾಗಲೂ 'ನಾಸ್ತಿ ನಾಸ್ತಿ' ಎಂದು ಬದುಕುವವನಿಗೆ 'ದೇಹಿ ದೇಹಿ' ಎಂಬ ಕಾಲ ಬರುತ್ತದೆ. ಆದ್ದರಿಂದ ಇದ್ದುದರಲ್ಲಿ ಸ್ವಲ್ಪವನ್ನಾದರೂ ಕೊಡುವ ಅಭ್ಯಾಸ ಮಾಡಿಕೊಳ್ಳಬೇಕು. ಒಂದೆಡೆ ಸುಭಾಷಿತಕಾರ ಹೀಗೆನ್ನುತ್ತಾನೆ. ಭಿಕ್ಷೆ ಬೇಡುವ ಭಿಕ್ಷುಕ ಮನೆಯಿಂದ ಮನೆಗೆ ಓಡಾಡುತ್ತಾನೆ. ಅವನು ಬೇಡುವುದು ಅಲೆಯುವುದು ಅವನಿಗೇನೋ ಕೊರತೆಯಿದೆ ಎಂದಲ್ಲ. ಲೋಕಕ್ಕೊಂದು ಸಂದೇಶ ನೀಡುವುದಕ್ಕೆ. ಕೊಡುವವನು ಯಾವಾಗಲೂ ಶ್ರೀಮಂತ. ಆದ್ದರಿಂದ ಕೊಟ್ಟು ನೀನು ನಿನ್ನಂತೆಯೇ ಆಗು. ಯಾರಿಗೂ ಕೊಡದೇ ಇಂದು ಬೇಡುವ ಸ್ಥಿತಿಗೆ ಬಂದ ನನ್ನಂತಾಗಬೇಡ ಎಂಬುದನ್ನು ಲೋಕಕ್ಕೆ ತಿಳಿಸುವುದಕ್ಕೆ ಎಂಬುದಾಗಿ. ಕೊಡುವುದರಲ್ಲಿರುವ ಸಂತೋಷ, ನೆಮ್ಮದಿ, ಪಡೆಯುವುದರಲ್ಲಿಲ್ಲ. ಕೊಡುವಾಗ ಉಂಟಾಗುವ ಆನಂದ 'ಇಲ್ಲ' ಎನ್ನುವಾಗ ಇರುವುದಿಲ್ಲ. ಜಗತ್ತಿನಲ್ಲಿ ಕೊಟ್ಟು ಕೆಟ್ಟವರಿಲ್ಲ. ಕೊಡುವುದು ಉತ್ತಮ ಸಂಸ್ಕಾರದ ಸಂಕೇತ. ಉತ್ತಮ ಕುಟುಂಬದ ಸಂಸ್ಕಾರದ ಸಂಕೇತ. ಉತ್ತಮ ಕುಟುಂಬದ ಸಂಸ್ಕಾರದ ದ್ಯೋತಕ. ಈ ಕಾರಣಕ್ಕಾಗಿಯೇ ಸನಾತನ ಭಾರತೀಯ ಜೀವನ ಪದ್ಧತಿಯಲ್ಲಿ ಜೀವನ ಸಭ್ಯತೆಯನ್ನು ಪರಿಪರಿಯಲ್ಲಿ ಕಲಿಸಿಕೊಡುವ ಕ್ರಮವಿತ್ತು. ಮನೆಯ ಮುಂದೆ ದುರ್ಬಲ ಭಿಕ್ಷುಕರು ಬಂದು ಯಾಚಿಸಿದರೆ ಮಕ್ಕಳ ಮೂಲಕ ಕೊಡಿಸುತ್ತಿದ್ದರು. ಇದು ಕೊಡುವ ಉದಾತ್ತ ಭಾವವನ್ನು ಬಾಲ್ಯದಲ್ಲೇ ಬೆಳೆಸುವ ಕ್ರಮ. ದೇವಸ್ಥಾನಗಳಿಗೆ ಹೋದಾಗ ಮಕ್ಕಳಿಂದ ಹುಂಡಿಗೆ ಕಾಣಿಕೆ ಹಾಕಿಸುವುದು ಸತ್ಕರ್ಮಕ್ಕೆ ದಾನ ನೀಡುವುದು ಇತ್ಯಾದಿ ಸಭ್ಯತೆಯನ್ನು ಬಾಲ್ಯದಲ್ಲೇ ಕಲಿಸುವ ಪ್ರಯತ್ನ. ಇಂದಿನ ಕಲಿಕಾಲದಲ್ಲಿ ಇಂತಹ ಸತ್ ಸಂಪ್ರದಾಯಗಳು ವಿರಳವಾಗಿದೆ. ದೊಡ್ಡವರಿಗೆ ಕೊಡುವ ಸಂಸ್ಕಾರ ಇಲ್ಲದಿರುವಾಗ ಚಿಕ್ಕವರಿಗೆ ಎಲ್ಲಿಂದ ಬರಬೇಕು. ಎಲ್ಲದಕ್ಕೂ 'ಇಲ್ಲ ಇಲ್ಲ' ಎಂದುಕೊಂಡು, ಕೊಡುವ ಸಾಮರ್ಥ್ಯವಿದ್ದರೂ ಅದನ್ನು ಮರೆಮಾಚಿದರೆ ಮುಂದೊಂದು ದಿನ ಬೇಡುವ ಸ್ಥಿತಿ ಬಂದೀತು. ನಾವು ಸಂಸ್ಕಾರ ತುಂಬುವ, ಸಭ್ಯತೆಯನ್ನು ಪೋಷಿಸುವ ಉತ್ತಮ ಜೀವನ ವಿಧಾನವನ್ನು ಕಲಿತು, ಕಲಿಸಿ ಕೊಡದಿದ್ದರೆ ಮುಂದೊಮ್ಮೆ ನಾವೇ ಸಣ್ಣವರಾಗುತ್ತೇವೆ.

ಬೇರು ಮೇಲಾದ ಒಂದು ಮರ

ಬೇರು ಮೇಲೆ, ಕೊಂಬೆ ಕೆಳಗೆ ಇರುವ ಮಾಯಾ ವೃಕ್ಷದ ರಹಸ್ಯವನ್ನು ಅರಿತವನಿಗೆ ಸಂಸಾರದ ಹಂಗಿಲ್ಲ.

ಆ-ಲೋಚನ
• ರಾಧಾಕೃಷ್ಣ ಕಲ್ಚಾರ್
rkkalchar@gmail.com



ಭಗವದ್ಗೀತೆಯಲ್ಲಿ ಒಂದು ಮರದ ಚಿತ್ರಣವಿದೆ. ಅದು ಸಾಧಾರಣವಾಗಿ ನಾವು ನೋಡುವ ಮರದಂತಹ ಮರವಲ್ಲ. ಹಾಗೆಂದು ಮರದ ಎಲ್ಲ ಲಕ್ಷಣಗಳೂ ಅದಕ್ಕಿವೆ. ಮತ್ತು ಇನ್ನೊಂದು ಅರ್ಥದಲ್ಲಿ ನೋಡಿದರೆ ಅದು ಅಮರವಾಗಿದೆ.

ಅತ್ಯಂತ ಹಳೆಯದೂ ಹೌದು. ಅಂತಹ ಒಂದು ಮರ.

ಏನದು?

'ಊರ್ಧ್ವಮೂಲಮಧಃಶಾಖಮಶ್ವತ್ಥಮ್ ಪ್ರಾಹುರವ್ಯಯಮ್'
ಛಂದಾಂಸಿ ಯಸ್ಯ ಪರ್ಣಾನಿ ಯಸ್ತಮ್ ವೇದ ಸ ವೇದವಿತ್'

ಮೇಲೆ ಬೇರು (ಅಥವಾ ಬುಡ) ಉಳ್ಳ, ಕೆಳಗೆ ಕೊಂಬೆಗಳನ್ನು ಹೊಂದಿದ ಅಶ್ವತ್ಥವೃಕ್ಷವು ಅವ್ಯಯವಾಗಿದೆ ಎನ್ನುತ್ತಾರೆ. ಛಂದಸ್ಸು (ಅಥವಾ ವೇದಗಳು) ಅದರ ಎಲೆಗಳು. ಇದನ್ನು ಯಾವನು ತಿಳಿಯುತ್ತಾನೋ ಅವನು ವೇದವನ್ನು ತಿಳಿದಂತೆ ಎಂಬುದು ಇದರ ಅರ್ಥ.



ಎಲಾ! ವಿಚಿತ್ರವಾಗಿದೆಯಲ್ಲ? ಸಾಮಾನ್ಯವಾಗಿ ಮರ, ಗಿಡ, ಅಥವಾ ಸಸ್ಯವರ್ಗಕ್ಕೆ ಸೇರಿದ ಯಾವುದೇ ಆದರೂ ಬೇರನ್ನು ಕೆಳಗೆ ಅಂದರೆ ಭೂಮಿಗೆ ಇಳಿಸಿ ತಾನೇ ಬೆಳೆಯುವುದು? ಶಾಖೆಗಳನ್ನು ಮೇಲೆ ಅಂತರಿಕ್ಷಕ್ಕೆ ವಿಸ್ತರಿಸುವುದು? ಆದರೆ ಇಲ್ಲಿ ಇದು ವ್ಯತಿರೇಕವಾಗಿದೆ. ಮಣ್ಣಿನಲ್ಲಿ ಇರಬೇಕಾದ ಬೇರು ಅಂತರಿಕ್ಷದಲ್ಲಿ ಇದೆ. ಅಲ್ಲಿ ಹೀರಿಕೊಳ್ಳುವುದಕ್ಕೆ ನೀರಾಗಲಿ, ಸಾರವಾಗಲಿ ಏನೂ ಇಲ್ಲ. ಹಾಗೆಂದು ಸಾರ, ನೀರುಗಳನ್ನು ಹೊಂದಿದ ಭೂಮಿಯತ್ತ ತನ್ನ ಶಾಖೆಗಳನ್ನು ಚಾಚಿದೆ. ಅಲ್ಲಿಂದ ಏನನ್ನೂ ಅದು ಹೀರಿಕೊಳ್ಳಲಾರದು. ಅದರ ಎಲೆಗಳೂ ಸಾಧಾರಣ ಎಲೆಗಳಲ್ಲ. ಯಾವುದು ಜ್ಞಾನದ ಮೊತ್ತವೆನ್ನಲಾಗುವುದೋ ಅಂತಹ ವೇದಗಳೇ ಆ ಎಲೆಗಳು. ಅದನ್ನು ಗ್ರಹಿಸಿದರೆ ಎಲ್ಲವನ್ನೂ ಗ್ರಹಿಸಿದಂತೆ. ಪರಿಪೂರ್ಣ ಜ್ಞಾನ ಪ್ರಾಪ್ತಿಯಾಗುವುದಂತೆ. ಇದು ಅಶ್ವತ್ಥ ಎಂಬ ವೃಕ್ಷ. ಅದು ಅವ್ಯಯವಾದುದು. ಅಂದರೆ ನಾಶವಿಲ್ಲದ್ದು. ಬೆಳೆಯುತ್ತಲೇ ಇರತಕ್ಕದ್ದು. ಯಾಕೆ ನಾಶವಿಲ್ಲವೆಂದರೆ ಅವಿನಾಶಿಯಾದ ತತ್ತ್ವದಿಂದಲೇ ಅದು ಮೂಡಿಬಂದಿದೆ. ಅತ್ಯಂತ ಉನ್ನತವಾಗಿರುವುದು ಪರಾತ್ಪರವಾದ ಬ್ರಹ್ಮ. ಅದೇ ಈ ವೃಕ್ಷಕ್ಕೆ ಆಧಾರ. 'ಊರ್ಧ್ವಮೂಲಮ್' ಆ ತತ್ತ್ವದಿಂದ ಮೂಡಿದರೂ ಪ್ರತ್ಯೇಕವಾಗಿ ಕಾಣಿಸಿಕೊಂಡು ಸಂಸಾರಾದಿ ಮೋಹಗಳಿಗೆ ಜೀವನನ್ನು ಬಂಧಿಸಿದೆ. ತ್ರಿಗುಣಗಳಿಂದ ಪುಷ್ಟವಾದ ವಿಷಯಗಳು ಚಿಗುರುಗಳಾಗಿ ಮೊಳೆತಿವೆ.

ನಾವು ನಿತ್ಯವೂ ನೋಡುವ ಪ್ರಪಂಚದ ಮರಗಳಂತೆ ಇಲ್ಲದ ಈ ಮರವಾದರೂ ಪ್ರತಿನಿಧಿಸುವುದು ಅದನ್ನೇ. ಅಂದರೆ ಸಂಸಾರವೆಂಬ ವೃಕ್ಷವೇ ಅದು. ಜೀವನನ್ನು ಪ್ರಪಂಚಕ್ಕೆ ಬಂಧಿಸಿರುವ ಮಾಯೆ. ನಿರಾಸಕ್ತಿ (ನಿರ್ಲಿಪ್ತಿ) ಯಿಂದ ಇದನ್ನು ಮೀರಿ ನಿಲ್ಲಬೇಕು. ಹಾಗೆಂದು ವೃಕ್ಷ ಮಾತ್ರ ನಶಿಸತಕ್ಕುದಲ್ಲ. ಅದು ಅವ್ಯಯ. ಒಬ್ಬ ಜೀವನು ಬಿಡುಗಡೆಯಾದರೂ ಅದನ್ನು ಆಶ್ರಯಿಸಿದ ಅಸಂಖ್ಯ ಜೀವರಾಶಿಗಳಿದ್ದಾವಲ್ಲ!

ಈ ಮಾಯಾ ವೃಕ್ಷದ ರಹಸ್ಯವನ್ನು ಅರಿತವನಿಗೆ ಸಂಸಾರದ ಹಂಗಿಲ್ಲ.

ವಿಚಿತ್ರವೆಂದರೆ ಇಂತಹ ಒಂದು ಅಡಿ ಮೇಲಾದ ಗಿಡದ ಪ್ರಸ್ತಾವ ಪಾಂಡವರ ಮಹಾ ಪ್ರಸ್ಥಾನದ ಸಂದರ್ಭದಲ್ಲಿ ಬರುತ್ತದೆ. (ಈ ಪ್ರಕರಣ ಮಹಾಭಾರತದಲ್ಲಿ ಇದ್ದ ಹಾಗಿಲ್ಲ. ಆದರೆ ಪ್ರಸಿದ್ಧವಿದೆ) ಕೃಷ್ಣನ ನಿರ್ಯಾಣವಾಗಿ, ದ್ವಾರಕೆ ಸಮುದ್ರದಲ್ಲಿ ಮುಳುಗಿದ ಬಳಿಕ ಪಾಂಡವರು ಮಹಾ ಪ್ರಸ್ಥಾನಕ್ಕೆ ಸನ್ನದ್ಧರಾಗುತ್ತಾರೆ. ಸಮಸ್ತವನ್ನೂ ಉತ್ತರಾಧಿಕಾರಿಗಳಿಗೆ ಒಪ್ಪಿಸಿ, ದ್ರೌಪದೀ ಸಮೇತ ಐವರೂ ಉತ್ತರ ದಿಕ್ಕಿನತ್ತ ನಡೆಯಲು ಪ್ರಾರಂಭಿಸುತ್ತಾರೆ.

ದಾರಿಯಲ್ಲಿ ದೇಹಾಯಾಸದಿಂದ ದ್ರೌಪದಿ ಕುಸಿದು ಬಿದ್ದು ಮೃತಳಾಗುತ್ತಾಳೆ. ಆ ಬಳಿಕ ಸಹದೇವ, ನಕುಲ, ಅರ್ಜುನ ಕೊನೆಯದಾಗಿ ಭೀಮಸೇನ. ಅವರೆಲ್ಲರ ಮರಣಕ್ಕೂ ಪ್ರಾಜ್ಞನಾದ ಯುಧಿಷ್ಠಿರ ಕಾರಣವನ್ನು ತಿಳಿಸುತ್ತಾನೆ. ದ್ರೌಪದಿಗೆ ಅರ್ಜುನನ ಕುರಿತು ಹೆಚ್ಚು ಪ್ರೀತಿ, ಸಹದೇವನಿಗೆ ಜ್ಞಾನದ, ನಕುಲನಿಗೆ ರೂಪದ, ಅರ್ಜುನನಿಗೆ ಪರಾಕ್ರಮದ ಅಹಂಕಾರಗಳು, ಭೀಮನ ಆಹಾರದ ಅತ್ಯಾಸಕ್ತಿ ಇವು ಅವಸಾನಕ್ಕೆ ಕಾರಣವಾದವು ಎನ್ನುತ್ತಾನೆ.

ಇಷ್ಟು ತಿಳಿವಳಿಕೆ ಇದ್ದವನಿಗೂ, ಭೀಮ ಸತ್ತು ಬಿದ್ದಾಗ ದುಃಖವನ್ನು ಮೀರುವುದಕ್ಕಾಗುವುದಿಲ್ಲ. ಇದೇ ಯುಧಿಷ್ಠಿರನು ಯಕ್ಷಪ್ರಶ್ನೆ ಪ್ರಕರಣದಲ್ಲಿ, ದಿನವೂ ಜೀವರು ಯಮನಾಲಯವನ್ನು ಸೇರುತ್ತಿದ್ದರೂ, ಮನುಷ್ಯರು ತಾವು ಶಾಶ್ವತವೆಂದು ಭಾವಿಸುತ್ತಾರಲ್ಲ, ಇದೊಂದು ದೊಡ್ಡ ಆಶ್ಚರ್ಯವೆಂದು ಉತ್ತರಿಸಿದ ಮೇಧಾವಿ ಎಂಬುದನ್ನು ಗಮನಿಸಬೇಕು. ಅಂತಹ ಯುಧಿಷ್ಠಿರ ಭೀಮನ ಮರಣಕ್ಕಾಗಿ ಕಣ್ಣೀರಿಳಿಸುತ್ತ ಮುಂದೆ ನಡೆಯುತ್ತಾನೆ. (ಅವನ ಕಳೇವರವನ್ನು ಹೊತ್ತುಕೊಂಡು ಸಾಗಿದ ಅಂತಲೂ ಉಂಟು)

ಅವನಲ್ಲಿ ಉಳಿದ ಈ ಮೋಹವು ನಶಿಸುವುದಕ್ಕೆ ಕಾರಣವಾದುದು ಅಲ್ಲಿ ಕಾಣಿಸಿದ ಒಂದು ವಿಚಿತ್ರ ದೃಶ್ಯ.

ಯುಧಿಷ್ಠಿರ ಮುಂದೆ ಸಾಗುತ್ತಿರುವಾಗ ಅಲ್ಲೊಬ್ಬ ಮನುಷ್ಯ ಒಂದು ತುಳಸಿ ಗಿಡವನ್ನು ನೆಟ್ಟು ಅದಕ್ಕೆ ನೀರೆರೆಯುತ್ತಿದ್ದ. ಅದರಲ್ಲಿ ವಿಶೇಷವೇನು? ಅಂದರೆ ಅವನು ಆ ಗಿಡವನ್ನು ತಲೆಕೆಳಗಾಗಿ ನೆಟ್ಟಿದ್ದ. ಅದು ಒಣಗಿ ಹೋಗಿತ್ತು. ದೂರದ ಸರಸ್ಸಿನಿಂದ ನೀರನ್ನು ತರುತ್ತಿದ್ದ ಅವನ ತಂಬಿಗೆಗೆ ಹಲವು ರಂಧ್ರಗಳು. ಒಣಗಿ ಹೋದ ಆ ಗಿಡದ ಬಳಿಗೆ ತಲುಪುವಾಗ ನೀರೆಲ್ಲ ಸೋರಿ ಹೋಗಿ ಬರಿದಾದ ಪಾತ್ರೆ ಮಾತ್ರ ಉಳಿಯುತ್ತಿತ್ತು. ಆದರೆ ಅವನು ನಿರಂತರವಾಗಿ ನೀರು ತಂದು ಸುರಿಯುವ ಪ್ರಯತ್ನವನ್ನು ಮಾಡುತ್ತಲೇ ಇದ್ದ.

ಯುಧಿಷ್ಠಿರ, ''ಇದೇನು ವಿಚಿತ್ರ! ತಲೆಕೆಳಗಾದ ಗಿಡ ಚಿಗುರುವುದೆ? ರಂಧ್ರಗಳಿಂದಕೂಡಿದಬಿಂದಿಗೆಯಲ್ಲಿನೀರುಬಂದೀತೆ? ಇದೇಕೆ ಅರ್ಥವಿಲ್ಲದ ಕೆಲಸ ಮಾಡುತ್ತಿದ್ದೀಯೆ?'' ಎಂದು ಅವನನ್ನು ಪ್ರಶ್ನಿಸಿದ.

''ನೀನೀಗ ಮಾಡುತ್ತಿರುವುದೇನು? ಸತ್ತವರಿಗಾಗಿ ಶೋಕಿಸುತ್ತ ಇದ್ದರೆ ಅವರು ಬದುಕಿ ಬರುತ್ತಾರೆಯೆ?'' ಎಂದು ಅವನು ಮರಳಿ ಪ್ರಶ್ನಿಸಿದ. ಈಗ ಯುಧಿಷ್ಠಿರನಿಗೆ ಸತ್ಯದರ್ಶನವಾಯಿತು. ಅವನು ಶೋಕವನ್ನು ಕಳೆದುಕೊಂಡು ಮುಂದೆ ನಡೆದ.

ತಲೆ ಕೆಳಗಾದ ಗಿಡ ಬದುಕಲಾರದು. ಬದುಕುವುದೇ ಹೌದಾದರೆ ಅದು ಕೃತ್ರಿಮ ಅಥವಾ ಮಾಯೆ. ಸಂಸಾರವೆಂಬ ವೃಕ್ಷವು ಮಾಯೆಯೇ. ಆದರೆ ಅದು 'ಅವ್ಯಯಮ್' ಯಾಕೆಂದರೆ ಅದು ಪರಾತ್ಪರ ತತ್ತ್ವದ ಅಂಶ. ಜೀವನು ಮೋಹವನ್ನು ಹೊಂದಿ ಅದನ್ನು ಅವಲಂಬಿಸಿರುತ್ತಾನೆ. ಆದರಿಂದ ಮುಕ್ತನಾದರೆ ಮಾತ್ರ ಸದ್ಗತಿ. ಅದನ್ನು ಸಾಧಿಸುವ ಸಾಧನವಾಗಿಯೂ ಅದು ಉಂಟು. ಅದರ ಚಿಗುರುಗಳು ವಿಷಯಗಳು. ಇದನ್ನು ಅಂಟಿಸಿಕೊಂಡವನು ಪ್ರಪಂಚವನ್ನು ಸರಿಯಾಗಿ ದರ್ಶಿಸಲಾರ. ಅದು ತಲೆ ಕೆಳಗಾಗಿಯೇ ಕಾಣುವುದು. ತಾನು ತಲೆ ಕೆಳಗಾಗಿದ್ದು ಉಳಿದುದೆಲ್ಲ ತಲೆ ಕೆಳಗಾಗಿದೆ ಎಂದು ಭಾವಿಸುವ ತ್ರಿಶಂಕುವಿನಂತೆ. ಸರಿಯಾದ ದೃಷ್ಟಿ ಪ್ರಾಪ್ತಿಸಿದಲ್ಲಿಗೆ ಮುಗಿಯಿತು. ತಾನು ಸಾಧಿಸಬೇಕಾದುದೇನು, ಯಾವುದು ಶಾಶ್ವತ, ಯಾವುದು ಅಶಾಶ್ವತ ಎಂಬ ಅರಿವು ಮಾಯಾಜಾಲದಿಂದ ಮುಕ್ತನಾಗುವಂತೆ ಮಾಡುತ್ತದೆ. ಯುಧಿಷ್ಠಿರನಿಗೆ ಕಾಣಿಸಿದ ತಲೆ ಕೆಳಗಾಗಿ ನೆಟ್ಟ ತುಳಸಿ ಗಿಡದಿಂದ ಅವನಿಗೆ ಈ ದೃಷ್ಟಿ ಲಭಿಸಿತು. ಮೋಹ ಹಾಗೂ ಶೋಕಗಳು ಇಲ್ಲವಾದವು. ಎರಡೂ ತಲೆ ಕೆಳಗಾಗಿಯೇ ಇವೆ. ಒಂದು ಭೌತ ಪ್ರಪಂಚವನ್ನು ಮೀರಿದ್ದು. ಆದರೆ ಅದಾಗಿ ಕಾಣುತ್ತಿರುವುದು. ಅದೇ ಅಲ್ಲ. ಅಂದರೆ ಮೂಲದ್ರವ್ಯ ಬೇರೆ. ಹಾಗೆಂದು ಅದರಿಂದ ರೂಪುಗೊಂಡದ್ದು ನಶ್ವರವಾದ ಲೋಕ. ಅದು ನಶ್ವರವಾದರೂ ಅವ್ಯಯ ವಸ್ತುವಿನಿಂದಾದುದು. ಅಥವಾ ಅದನ್ನು ಹೀಗೆ ಹೇಳಬಹುದು.

ಪ್ರಾಪಂಚಿಕ ಅಥವಾ ವಿಷಯಗಳ ಮೋಹ ಶಾಶ್ವತವಾದುದು. ಸಾಧಕನೊಬ್ಬ ಅದನ್ನು ಮೀರಿದರೂ ಇತರ ಜೀವರನ್ನು ಅದು ಬಂಧಿಸಿಯೇ ಇರುತ್ತದಷ್ಟೆ? ಹಾಗಾಗಿ ಅದು ಅವ್ಯಯ. ಇದನ್ನು ಗ್ರಹಿಸಿದವನಿಗೆ ಜ್ಞಾನೋದಯವಾದಂತೆ. ಅವನ ಮಟ್ಟಿಗೆ ಅದು ನಾಶವಾಗಿದೆ. ಆದರೆ ಇನ್ನೊಬ್ಬನಿಗೆ ಶಾಶ್ವತವಾಗಿದೆ. ಇದು ತಿಳಿಯುವುದು ತಲೆಕೆಳಗು ಮಾಡಿ ನೆಟ್ಟ ಗಿಡದ ದೃಷ್ಟಾಂತದಿಂದ. ಅದು ಬದುಕುವುದೆಂದು ನಂಬಿ ನೀರು ಹಾಕುವವನಿಗೆ ಸಹಜವಾಗಿ ಕಾಣಿಸುವುದು. ಆ ನಂಬುಗೆಯಿಂದ ಹೊರಗಿರು ವವನಿಗೆ ಇದರ ಮಿಥ್ಯೆಯ ಅರಿವು ಇರುವುದು. ಯುಧಿಷ್ಠಿರ ಆ ಹಂತವನ್ನು ದಾಟಿದ ಬಳಿಕವೇ ನಿರ್ಮೋಹಿಯಾಗಿ ಸ್ವರ್ಗವನ್ನು ಸೇರಿದ.

ಸಮಯ ಬಂದಿದೆ: ಮಹಿಳಾ ಮೀಸಲಾತಿ ಭಾರತೀಯ ಪ್ರಜಾಪ್ರಭುತ್ವವನ್ನು ಹೇಗೆ ಬದಲಿಸಲಿದೆ?

ಶೋಭಾ ಕರಂದ್ಲಾಜೆ, ಕೇಂದ್ರ ಎಂಎಸ್‌ಎಂಇ, ಕಾರ್ಮಿಕ, ಉದ್ಯೋಗ ಖಾತೆ ಸಹಾಯಕ ಸಚಿವರು



ಸಹಾಯಕ ಸಚಿವೆಯಾಗಿ ನಾನು ಮೊದಲ ಬಾರಿಗೆ ಪ್ರಮಾಣವಚನ ಸ್ವೀಕರಿಸುವಾಗ, ನಾನು ಕಿಕ್ಕಿರಿದ ಕೋಣೆಯ ಸುತ್ತಲೂ ನೋಡಿದೆ ಮತ್ತು ಅಲ್ಲಿದ್ದವರನ್ನು ಎಣಿಕೆ ಮಾಡಿದೆ. ಆ ಜಾಗದಲ್ಲಿ ಇದ್ದ ಮಹಿಳೆಯರ ಸಂಖ್ಯೆ ಕೇವಲ ಬೆರಳೆಣಿಕೆಯಷ್ಟಿತ್ತು. ಈ ದೃಶ್ಯವು ವೈಯಕ್ತಿಕ ಸಾಧನೆಯನ್ನು ಗುರುತಿಸುವುದಕ್ಕಿಂತಲೂ, ಸಾರ್ವಜನಿಕ ಕ್ಷೇತ್ರದಲ್ಲಿ ಮಹಿಳೆಯರು ಇನ್ನೂ ದೂರ ಕ್ರಮಿಸಬೇಕಾದ ಸ್ಪಷ್ಟ ಸೂಚನೆಯನ್ನು ಸೂಚಿಸುತ್ತಿತ್ತು.

ನಾನು ಸಾಂಪ್ರದಾಯಿಕವಾಗಿ ಶ್ರೀಮಂತ ಪ್ರದೇಶವಾದ ಕರಾವಳಿ ಕರ್ನಾಟಕದ ಪುತ್ತೂರು ಬಳಿಯ ಒಂದು ಸಣ್ಣ ಹಳ್ಳಿಗೆ ಸೇರಿದವಳು. ಅಲ್ಲಿ ಮಹಿಳೆಯರು ಸದಾ ತಮ್ಮ ಸದೃಢತೆ ಮತ್ತು ಶಕ್ತಿಯನ್ನು ಪ್ರದರ್ಶಿಸಿದ್ದಾರೆ. ಆ ಶಕ್ತಿಯನ್ನು ಸಾರ್ವಜನಿಕ ಜೀವನಕ್ಕೆ ತರುವುದು ಕೆಲವೇ ಕೆಲವರು. ಈ ಮೊದಲು ನಡೆದ ಹಾದಿಯಲ್ಲಿ ನಡೆಯುವುದು ಮತ್ತು ಅದೇ ಉತ್ಸಾಹವನ್ನು ಹೊಂದಿದ್ದರೂ ಪ್ರತಿಯೊಬ್ಬರೂ ಅಂಥದ್ದೇ ಅವಕಾಶ ಪಡೆಯುವುದು ಎಷ್ಟು ಕಷ್ಟವೆಂಬುದು ನನಗೆ ತಿಳಿದಿದೆ.

ನಾರಿ ಶಕ್ತಿ ವಂದನ್ ಅಧಿನಿಯಮವನ್ನು ಈಗಾಗಲೇ ಅಂಗೀಕರಿಸಲಾಗಿದೆ. ಸಂಸತ್ತು ಸೆಪ್ಟೆಂಬರ್ 2023ರಲ್ಲಿ ಈ ಬಗ್ಗೆ ಚರ್ಚಿಸಿದೆ; ಸಂವಿಧಾನ ತಿದ್ದುಪಡಿ ಮಾಡಲಾಗಿದೆ. ಆದರೆ ಈಗ ಅತ್ಯಂತ ಸವಾಲಿನ ಭಾಗ ನಮ್ಮ ಮುಂದಿದೆ – ಅದೇ ಆ ಮಾತನ್ನು ಉಳಿಸಿಕೊಳ್ಳುವುದು.

ತನ್ನ ಜನರನ್ನು ಪ್ರತಿನಿಧಿಸುವ ಪ್ರಜಾಪ್ರಭುತ್ವ

ಭಾರತವು 670 ದಶಲಕ್ಷ ಮಹಿಳೆಯರಿಗೆ ನೆಲೆಯಾಗಿದೆ. ಆದರೆ ಸುದೀರ್ಘ ವರ್ಷಗಳಿಂದ, ನಮ್ಮ ಶಾಸಕರು ಆ ಜನಸಂಖ್ಯೆಯಲ್ಲಿ ಕೇವಲ ಶೇ.15ರಷ್ಟನ್ನು ಮಾತ್ರ ಪ್ರತಿನಿಧಿಸಿದ್ದಾರೆ. ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಿಂದ ತನ್ನ ಅರ್ಧದಷ್ಟು ನಾಗರಿಕರನ್ನು ನಿರಂತರವಾಗಿ ಹೊರಗಿಡುವ ಪ್ರಜಾಪ್ರಭುತ್ವವನ್ನು ನೈಜ ಪ್ರಜಾಪ್ರಭುತ್ವ ಎಂದು ಪರಿಗಣಿಸಲಾಗುವುದಿಲ್ಲ; ಅದು ಇನ್ನೂ ಆಗಬೇಕಿರುವ ಕೆಲಸವಾಗಿಯೇ ಉಳಿದಿದೆ. 'ನಾರಿ ಶಕ್ತಿ ವಂದನ್ ಅಧಿನಿಯಮ'ವು ಈ ಪ್ರಯತ್ನವನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಒಂದು ಮಹತ್ವದ ಹೆಜ್ಜೆಯಾಗಿದೆ. ಜನಗಣತಿ ನಡೆಯಬೇಕು, ಅದರ ಬಳಿಕ ಕ್ಷೇತ್ರ ಪುನರ್ವಿಂಗಡಣೆ ನಡೆಯಬೇಕು, ಮುಂದಿನ ಹಂತವಾಗಿ ಸಂಸತ್ತು ಮತ್ತು ಪ್ರತಿ ರಾಜ್ಯ ವಿಧಾನಸಭೆಯ ಮೂರನೇ ಒಂದು ಭಾಗದಷ್ಟು ಸ್ಥಾನಗಳನ್ನು ಮಹಿಳೆಯರು ಅಲಂಕರಿಸಲಿದ್ದಾರೆ. ಕಾನೂನುಗಳನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಮಹಿಳೆಯರನ್ನು ಸೇರಿಸಿಕೊಂಡಾಗ, ಶಾಸನದ ಕೇಂದ್ರ ಬಿಂದು ಬದಲಾಗುತ್ತದೆ. ದಶಕಗಳ ಹಿಂದೆ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿಯನ್ನು ಜಾರಿಗೆ ತಂದಿದ್ದ ಪಂಚಾಯತ್ ರಾಜ್ ಸಂಸ್ಥೆಗಳು ಆದ್ಯತೆಗಳಲ್ಲಿ ಆಳೆಯಬಹುದಾದ ಬದಲಾವಣೆಯನ್ನು ತೋರಿಸುತ್ತವೆ.

ಏಕತಾನತೆಯ ಚಕ್ರವನ್ನು ಭೇದಿಸುವತ್ತ

ಮಹಿಳೆಯರು ತಮ್ಮದೇ ಆದ ಅರ್ಹತೆಯ ಮೇಲೆ ಮೇಲೇರಬೇಕು ಎಂಬ ವಾದವನ್ನು ನಾನು ಕೇಳಿದ್ದೇನೆ. ಆ ಭಾವನೆಯನ್ನು ನಾನು ಗೌರವಿಸುತ್ತೇನೆ, ಆದರೆ ನಾನು ಪ್ರಮೇಯವನ್ನು ತಿರಸ್ಕರಿಸುತ್ತೇನೆ. ನಿರ್ವಾತದಲ್ಲಿ ಅರ್ಹತೆ ಅಸ್ತಿತ್ವದಲ್ಲಿ ಇರುಲು ಸಾಧ್ಯವಿಲ್ಲ. ಅವಕಾಶಗಳು ಇರುವಲ್ಲಿ ಮಾತ್ರ ಅದು ಪ್ರವರ್ಧಮಾನಕ್ಕೆ ಬರುತ್ತದೆ. ತಲೆಮಾರುಗಳಿಂದಲೂ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ರಚನಾತ್ಮಕ ಅಡೆತಡೆಗಳು ಪ್ರತಿಭಾವಂತ ಮಹಿಳೆಯರನ್ನು ರಾಜಕೀಯದಿಂದ ದೂರವಿರಿಸಿವೆ. ಮೀಸಲಾತಿಯು ಅರ್ಹತೆಯನ್ನು ಕಡಿಮೆ ಮಾಡುವುದಿಲ್ಲ, ಅದು ತಡೆಗೋಡೆಯನ್ನು ತೊಡೆದುಹಾಕುತ್ತದೆ.

ಹೊಸ ನೀತಿಗೆ ಇದು ಯಾವ ಅರ್ಥ ನೀಡುತ್ತದೆ?

ನಿರ್ಧಾರ ಕೈಗೊಳ್ಳುವ ಸಮಯದಲ್ಲಿ ಕೋಣೆಯಲ್ಲಿ ಯಾರು ಇದ್ದಾರೆ ಎಂಬುದು ಅಲ್ಲಿ ಏನು ಚರ್ಚೆ ನಡೆಸಲಾಗುತ್ತದೆ ಎಂಬುದನ್ನು ನಿರ್ಧರಿಸುತ್ತದೆ. ಸರ್ಕಾರದಲ್ಲಿ ನನ್ನ ವ್ಯಾಪಕ ಅನುಭವದಿಂದ ಈ ವಿಷಯವನ್ನು ನನಗೆ ಕಲಿಸಿದೆ. ಮಹಿಳಾ ಶಾಸಕರು ತಾಯಿಯ ಆರೋಗ್ಯ ನಿಧಿಯನ್ನು ಕಡಿತಗೊಳಿಸಿದಾಗ ಅದನ್ನು ಒತ್ತಾಯಿಸುತ್ತಾರೆ. ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಶೇ.33ರಷ್ಟು ಮೀಸಲಾತಿ ಎಂದರೆ ಇದೇ ಮೊದಲ ಬಾರಿಗೆ ಈ ಧ್ವನಿಗಳಿಗೆ ಶಕ್ತಿ ಬರಲಿದೆ. ಅವು ರಚನಾತ್ಮಕವಾಗಿರುತ್ತವೆ. ಶಾಶ್ವತವಾಗುತ್ತವೆ, ಆ ದನಿಗಳನ್ನು ನಿರ್ಲಕ್ಷಿಸುವುದು ಅಸಾಧ್ಯ.

ನಾರೀಶಕ್ತಿ: ದೂರದೃಷ್ಟಿಯಿಂದ ಕಾನೂನಿನವರೆಗೆ

ಮಹಿಳೆಯರ ಸಂಪೂರ್ಣ ಮತ್ತು ಸಮಾನ ಭಾಗವಹಿಸುವಿಕೆಯಿಲ್ಲದೆ ಭಾರತವು ತನ್ನ ಸಂಪೂರ್ಣ ಸಾಮರ್ಥ್ಯವನ್ನು ಅರಿತುಕೊಳ್ಳಲು ಸಾಧ್ಯವಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಬಹಳ ಹಿಂದಿನಿಂದಲೂ ಹೇಳುತ್ತಿದ್ದಾರೆ. ಇದು ಕೇವಲ ಮಾತಿನಲ್ಲಿ ಉಳಿದಿಲ್ಲ. ಬದಲಿಗೆ ಬೇಟಿ ಬಚಾವೋ ಬೇಟಿ ಪಡಾವೋದಿಂದ ಹಿಡಿದು ಜನ್ ಧನ್, ಉಜ್ವಲ ಮತ್ತು ಪಿಎಂ ಆವಾಸ್ ಯೋಜನೆಯಲ್ಲಿ ಮಹಿಳೆಯರನ್ನು ದಾಖಲೆಯ ಮಟ್ಟದಲ್ಲಿ ಸೇರ್ಪಡೆಗೊಳಿಸುವ ಮೂಲಕ ಪ್ರತಿ ನೀತಿಯನ್ನು ದೃಢ ನಿಶ್ಚಯದಿಂದ ಮುನ್ನಡೆಸಿದ್ದಾರೆ.

ಪಕ್ಷಾತೀತವಾಗಿ ನನ್ನ ಸಹೋದ್ಯೋಗಿಗಳಿಗೆ

ಇದು ನಮ್ಮೆಲ್ಲರಿಗೂ ಸೇರಿದ ಸಮಯ. ಯಾವುದೇ ಒಂದು ಪಕ್ಷಕ್ಕೆ ಸೀಮಿತವಾದುದಲ್ಲ, ಬದಲಿಗೆ ಒಂದು ಸಂಸ್ಥೆಯಾಗಿ ಇಡೀ ಸಂಸತ್ತಿಗೆ ಸಂಬಂಧಿಸಿದ್ದು. ಸರ್ಕಾರದ ಪ್ರತಿಯೊಂದು ಹಂತದಲ್ಲೂ ಈ ರಾಷ್ಟ್ರಕ್ಕೆ ಸೇವೆ ಸಲ್ಲಿಸಿದ ಮಹಿಳೆಯಾಗಿ ನಾನು ಎಲ್ಲರಿಗೂ ಮನವಿ ಮಾಡುತ್ತೇನೆ ಮತ್ತು ಭಾರತದ ಪ್ರಜಾಪ್ರಭುತ್ವವನ್ನು ಬಲವಾಗಿ ಮತ್ತು ಹೆಚ್ಚು ಪರಿಪೂರ್ಣವಾಗಿ ನೋಡುವ ಬಯಕೆಯನ್ನು ನಾವೆಲ್ಲರೂ ಹಂಚಿಕೊಳ್ಳುತ್ತೇವೆ ಎಂದು ನಾನು ನಂಬುತ್ತೇನೆ.

ಅನುಷ್ಠಾನ, ಮೀಸಲು ಸ್ಥಾನಗಳ ಆವರ್ತನ, ಬದಲಿ ಅಭ್ಯರ್ಥಿಗಳು, ಷರತ್ತುಗಳ ಬಗೆಗಿನ ಕಳವಳಗಳನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಇವು ಕಾನೂನುಬದ್ಧ ಚರ್ಚೆಗಳಾಗಿವೆ, ಆದರೆ ಈ ವಿಷಯದ ಬಗ್ಗೆ ತುರ್ತು ಗಮನ ಹರಿಸುವುದು ಅಗತ್ಯ ಎಂದು ನಾವು ಖಚಿತಪಡಿಸಿಕೊಳ್ಳಬೇಕು. ತತ್ವವು ಸದೃಢವಾಗಿದೆ. ಅವಶ್ಯಕತೆ ತುರ್ತಾಗಿದೆ. ಪರಿಪೂರ್ಣರನ್ನು ಪರಿವರ್ತನೆಯ ಶತ್ರುವಾಗಲು ನಾವು ಅನುವು ನೀಡಬಾರದು.

ನ್ಯಾಯಸಮ್ಮತತೆಯನ್ನು ಆಯ್ಕೆ ಮಾಡಿದ ರಾಷ್ಟ್ರ

ಸೆಪ್ಟೆಂಬರ್ 2023ರಲ್ಲಿ ಇತಿಹಾಸ ನಿರ್ಮಿಸಲಾಯಿತು. ಆದರೆ ಅದರ ನಂತರ ನಡೆಯಬೇಕಾದ ಪ್ರಕ್ರಿಯೆ ನಡೆದರಷ್ಟೇ ಇತಿಹಾಸ ಅರ್ಥಪೂರ್ಣವಾಗಲಿದೆ. ನ್ಯಾಯಸಮ್ಮತತೆಯನ್ನು ಆಯ್ಕೆ ಮಾಡುವ ದೇಶವು ತಾನು ಅಂಗೀಕರಿಸುವ ಕಾನೂನುಗಳ ಪ್ರಕಾರ ಬದುಕುವ ಮೂಲಕ ಸದ್ದಿಲ್ಲದೆ ಶಾಶ್ವತ ಕೆಲಸವನ್ನು ಮಾಡುತ್ತದೆ. ತನ್ನ ದೇಶಕ್ಕೆ ಸೇವೆ ಸಲ್ಲಿಸಲು ಬಯಸುವ ಯಾವುದೇ ಸಮುದಾಯದ ಮಹಿಳೆಗೆ, ಎಂದಿಗೂ ವೇದಿಕೆ ಏರದ ನಾಯಕಿಗೆ ಮತ್ತು ಎಂದಿಗೂ ಮೈಕ್ರೊಫೋನ್ ದೊರೆಯದ ಧ್ವನಿಗಾಗಿ, ನಾವು ಕಾರ್ಯಪ್ರವೃತ್ತರಾಗುವ ಸಮಯ ಈಗ ಬಂದಿದೆ. ಈ ಕಾನೂನನ್ನು ಜಾರಿಗೆ ತರಬೇಕಿದೆ. ಕೋಣೆಯನ್ನು ಮತ್ತಷ್ಟು ದೊಡ್ಡದಾಗಿ ಮಾಡಬೇಕಿದೆ... ಭಾರತ ನೋಡುತ್ತಿದೆ.

ಕದನ ವಿರಾಮ ಕನಿಷ್ಠ ಇನ್ನೆರಡು ವಾರ ವಿಸ್ತರಿಸುವ ಪ್ರಯತ್ನದ ನಡುವೆ ಅಮೆರಿಕ ಅಧ್ಯಕ್ಷ ಟ್ರಂಪ್ ಹೇಳಿಕೆ

ಅಂತಿಮ ಹಂತಕ್ಕೆ ಮಧ್ಯಪ್ರಾಚ್ಯ ಸಮರ!

ಕೈರೋ: ಇರಾನ್‌ಗೆ ಯಾವುದೇ ರೀತಿಯ ಶಸ್ತ್ರಾಸ್ತ್ರಗಳನ್ನು ಒದಗಿಸುವುದಿಲ್ಲವೆಂದು ಚೀನಾ ಒಪ್ಪಿಕೊಂಡಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಹೇಳಿದ್ದಾರೆ. ಇತ್ತೀಚಿನ ವರದಿ ಪ್ರಕಾರ, ಬೀಜಿಂಗ್ ಇರಾನ್‌ಗೆ ಸೇನಾ ನೆರವು ನೀಡುತ್ತಿದೆ ಎಂಬ ಮಾತುಗಳು ಹರಿದಾಡುತ್ತಿದ್ದರೂ, ಚೀನಾದ ವಿದೇಶಾಂಗ ಸಚಿವಾಲಯವು ಇದನ್ನು ಹಲವು ಬಾರಿ ಖಂಡಿಸಿದೆ.

ಬುಧವಾರ ಪ್ರಸಾರವಾದ ಸಂದರ್ಶನವೊಂದರಲ್ಲಿ ಟ್ರಂಪ್, ಇರಾನ್‌ನ ಯುದ್ಧ ಬಹುತೇಕ ಅಂತಿಮ ಹಂತಕ್ಕೆ ಬಂದಿದೆ ಎಂದಿದ್ದಾರೆ. ಯುದ್ಧ ಆರಂಭವಾದ ಕೆಲವೇ ದಿನಗಳಲ್ಲಿ ಅವರು ಅಮೆರಿಕ ಜಯ ಸಾಧಿಸಿದೆ ಎಂದು ಹಲವು ಬಾರಿ ಘೋಷಿಸಿದ್ದರು, ಆದರೆ ತಳಮಟ್ಟದ ಪರಿಸ್ಥಿತಿ ಇನ್ನೂ ಸಂಕೀರ್ಣವಾಗಿಯೇ ಇದೆ.



ಅಮೆರಿಕದ ಸೆಂಟ್ರಲ್ ಕಮಾಂಡ್ ತನ್ನ ಹೇಳಿಕೆಯಲ್ಲಿ ಸಮುದ್ರದ ಮೇಲಿನ ಸಂಪೂರ್ಣ ನಿಯಂತ್ರಣವನ್ನು ಸಾಧಿಸಲಾಗಿದೆ ಎಂದು ತಿಳಿಸಿದೆ. ಇರಾನ್‌ನ ಬಂದರುಗಳ ಮೇಲೆ ಹೇರಲಾಗಿದ್ದ ನಿರ್ಬಂಧವು ಆರಂಭವಾದ 36 ಗಂಟೆಗಳೊಳಗೆ ಸಂಪೂರ್ಣ ಜಾರಿಗೆ ಬಂದಿದೆ ಎಂದು ಸೋಮವಾರ ತಡರಾತ್ರಿ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟಣೆ ನೀಡಿದೆ.

ಇದರ ನಡುವೆ, ಅಮೆರಿಕ ಮತ್ತು ಇರಾನ್ ನಡುವೆ ಇರುವ ಯುದ್ಧ ವಿರಾಮವನ್ನು ವಿಸ್ತರಿಸಲು ಮಧ್ಯವರ್ತಿಗಳ ಪ್ರಯತ್ನಗಳು ಮುಂದುವರಿದಿವೆ. ಪ್ರಾದೇಶಿಕ ಅಧಿಕಾರಿಗಳ ಪ್ರಕಾರ, ಉಭಯ ಪಕ್ಷಗಳು ಮತ್ತೆ ಮಾತುಕತೆ ಬರಲು ಸಿದ್ಧವಾಗಿವೆ. ಏಪ್ರಿಲ್ 22ರಂದು ಮುಗಿಯಲಿರುವ ಈ ಯುದ್ಧ ವಿರಾಮವನ್ನು ಕನಿಷ್ಠ ಇನ್ನೂ ಎರಡು ವಾರಗಳ ಕಾಲ ವಿಸ್ತರಿಸಲು ಪ್ರಯತ್ನಿಸಲಾಗುತ್ತಿದೆ, ಇದರಿಂದ ರಾಜತಾಂತ್ರಿಕ ಪರಿಹಾರಕ್ಕೆ ಮತ್ತೊಂದು ಅವಕಾಶ ಸಿಗಲಿದೆ.

ಅಮೆರಿಕದಿಂದ 8 ತೈಲ ನೌಕೆ ತಡೆ

ಟೆಹ್ರಾನ್: ಹಾರ್ಮುಜ್ ಜಲಸಂಧಿಯಲ್ಲಿ ದಿಗ್ಬಂಧನ ಜಾರಿಯಾದ ನಂತರ ಇರಾನ್ ಬಂದರುಗಳನ್ನು ಪ್ರವೇಶಿಸುತ್ತಿದ್ದ ಅಥವಾ ನಿರ್ಗಮಿಸುತ್ತಿದ್ದ ಕನಿಷ್ಠ ಎಂಟು ತೈಲ ನೌಕೆಗಳನ್ನು ಅಮೆರಿಕದ ನೌಕಾಪಡೆ ತಡೆಹಿಡಿದಿದೆ. ಅಮೆರಿಕದ ಮಿಲಿಟರಿ ಸಿಬ್ಬಂದಿ ರೇಡಿಯೋ ಸಂಪರ್ಕದ ಮೂಲಕ ನೌಕೆಗಳ ಸಿಬ್ಬಂದಿಯನ್ನು ಸಂಪರ್ಕಿಸಿ, ಹಿಂದಕ್ಕೆ ಹೋಗುವಂತೆ ಸೂಚನೆ ನೀಡಿದ್ದಾರೆ. ಶಾಂಘೈ ಶುವಾನ್‌ರುನ್ ಶಿಪ್ಪಿಂಗ್ ಕಂಪನಿಗೆ ಸೇರಿದ ರಿಚ್ ಸ್ಟಾರಿ ಸೇರಿದಂತೆ ಎಲ್ಲಾ ನೌಕೆಗಳು ಈ ಆದೇಶಗಳನ್ನು ಪಾಲಿಸಿವೆ. ಈ ಘಟನೆಗಳ ಸಂದರ್ಭದಲ್ಲಿ ನೌಕೆಗಳ ಒಳಪ್ರವೇಶಿಸುವ ಅಗತ್ಯ ಕಂಡುಬಂದಿಲ್ಲ ಎಂದು ತಿಳಿದುಬಂದಿದೆ. ಮರೀನ್ ಮತ್ತು ವಿಶೇಷ ಕಾರ್ಯಾಚರಣೆ ಪಡೆಗಳು ಸೇರಿದಂತೆ ಸಾವಿರಾರು ಸೈನಿಕರು ಹಾಗೂ 15ಕ್ಕೂ ಹೆಚ್ಚು ಯುದ್ಧನೌಕೆಗಳು ಈ ದಿಗ್ಬಂಧನ ಜಾರಿಗೊಳಿಸಿವೆ. ನಂತರದ 36 ಗಂಟೆಗಳ ಒಳಗೆ ಇರಾನ್‌ನ ಕಡಲ ವ್ಯಾಪಾರವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಅಮೆರಿಕದ ಸೆಂಟ್ರಲ್ ಕಮಾಂಡ್ ತಿಳಿಸಿದೆ. ಕದನ ವಿರಾಮ ಮಾತುಕತೆಗಳು ವಿಫಲವಾದ ಹಿನ್ನೆಲೆಯಲ್ಲಿ ಈ ದಿಗ್ಬಂಧನ ವಿಧಿಸಲಾಗಿದೆ. ಅಮೆರಿಕದ ಪಡೆಗಳು ಎರಡು ಮಾರ್ಗದರ್ಶಿ ಕ್ಷಿಪಣಿ ಧ್ವಂಸಕ ನೌಕೆಗಳನ್ನು ಬಳಸಿ ಮೈನ್‌ಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ನಡೆಸುತ್ತಿವೆ. ಇರಾನ್ ತಾನು ಅಳವಡಿಸಿದ್ದ ಸ್ಫೋಟಕಗಳನ್ನು ತೆಗೆಯುವ ಸಾಮರ್ಥ್ಯ ಹೊಂದಿಲ್ಲ ಎಂದು ವರದಿಯಾಗಿದೆ. ಜಾಗತಿಕ ತೈಲ ಪೂರೈಕೆಯ ಐದನೇ ಒಂದು ಭಾಗದಷ್ಟು ಹಾರ್ಮುಜ್ ಜಲಸಂಧಿಯ ಮೂಲಕವೇ ಸಾಗುತ್ತದೆ.



ಯುರೇನಿಯಂ ಸಮೃದ್ಧೀಕರಣ ಕುರಿತ ಚರ್ಚೆಗೆ ಇರಾನ್ ಸಿದ್ಧ

ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಘಾಯಿ ಅವರು, ಯುರೇನಿಯಂ ಸಮೃದ್ಧೀಕರಣದ ಸ್ವರೂಪ ಮತ್ತು ಮಟ್ಟದ ಬಗ್ಗೆ ಚರ್ಚಿಸಲು ತಮ್ಮ ದೇಶ ಸಿದ್ಧವಾಗಿದೆ ಎಂದು ತಿಳಿಸಿದ್ದಾರೆ. ಆದರೆ, ನಮ್ಮ ಅಗತ್ಯಗಳ ಆಧಾರದ ಮೇಲೆ ಸಮೃದ್ಧೀಕರಣವನ್ನು ಮುಂದುವರಿಸುವ ಹಕ್ಕು ನಮಗಿರಬೇಕು ಎಂದು ಅವರು ಇರಾನ್‌ನ ಸರ್ಕಾರಿ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಯುದ್ಧ ವಿರಾಮ ವಿಸ್ತರಣೆಗೆ ಇನ್ನೂ ಒಪ್ಪಂದವಾಗಿಲ್ಲ

ಯುದ್ಧ ವಿರಾಮವನ್ನು ವಿಸ್ತರಿಸುವ ಕುರಿತು ಇನ್ನೂ ಯಾವುದೇ ಅಧಿಕೃತ ಒಪ್ಪಂದವಾಗಿಲ್ಲ ಎಂದು ಅಮೆರಿಕದ ಹಿರಿಯ ಅಧಿಕಾರಿಯೊಬ್ಬರು ಬುಧವಾರ ಹೇಳಿದ್ದಾರೆ. ಇರಾನ್ ಜತೆಗಿನ ಮಾತುಕತೆಗಳು ಮುಂದುವರಿದಿವೆ ಎಂದು ಅವರು ತಿಳಿಸಿದ್ದಾರೆ. ಅವರು ಈ ವಿಷಯದ ಸೂಕ್ಷ್ಮತೆಯ ಕಾರಣದಿಂದ ತಮ್ಮ ಹೆಸರನ್ನು ಬಹಿರಂಗಪಡಿಸಿಲ್ಲ.

ಅನಿಲ ಬೆಲೆ ಏರಿಕೆಯಿಂದ ನಾರ್ವೇಗೆ ಲಾಭ

ಮಧ್ಯಪೂರ್ವದಲ್ಲಿ ಉಂಟಾದ ಸಂಘರ್ಷದಿಂದ ಹಾರ್ಮುಜ್ ಜಲಸಂಧಿಯ ಮುಚ್ಚುವಿಕೆ ತೈಲ ಮಾರುಕಟ್ಟೆಯಲ್ಲಿ ದೊಡ್ಡ ಹೊಡೆತ ನೀಡಿದ್ದು, ನಾರ್ವೇಗೆ ಹೆಚ್ಚಿನ ಲಾಭ ತಂದಿದೆ. ಮಾರ್ಚ್ ತಿಂಗಳಲ್ಲಿ ನಾರ್ವೇಯ ತೈಲ ರಫ್ತು ಆದಾಯ ಸುಮಾರು 200 ಬಿಲಿಯನ್ ಕ್ರೋನರ್(ಸುಮಾರು 21 ಬಿಲಿಯನ್ ಡಾಲರ್) ತಲುಪಿದ್ದು, ಇದು ಕಳೆದ ವರ್ಷಕ್ಕಿಂತ 28% ಹೆಚ್ಚಾಗಿದೆ. ಸ್ವಾಭಾವಿಕ ಅನಿಲ ರಫ್ತು ಕೂಡ 19% ಏರಿಕೆಯಾಗಿದೆ. ತಜ್ಞರ ಪ್ರಕಾರ, ಮಧ್ಯಪೂರ್ವದ ಅಶಾಂತಿ ಜಾಗತಿಕ ಮಾರುಕಟ್ಟೆಯಲ್ಲಿ ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿದೆ.

ಟೆಹ್ರಾನ್‌ನಲ್ಲಿ ಸ್ಫೋಟ, 3 ಜನರಿಗೆ ಗಾಯ

ಟೆಹ್ರಾನ್‌ನಲ್ಲಿ ಬುಧವಾರ ಬೆಳಗ್ಗೆ ಎರಡು ದೂರ ನಿಯಂತ್ರಿತ ತಾತ್ಕಾಲಿಕ ಸ್ಫೋಟಕ ಸಾಧನಗಳು ಸ್ಫೋಟಗೊಂಡಿವೆ. ಈ ಘಟನೆದಲ್ಲಿ ಮೂರು ಜನರಿಗೆ ಸಣ್ಣ ಮಟ್ಟಿನ ಗಾಯಗಳಾಗಿವೆ ಎಂದು ಇರಾನ್ ಸರ್ಕಾರಿ ಮಾಧ್ಯಮಗಳು ವರದಿ ಮಾಡಿವೆ. ಒಂದು ಸ್ಫೋಟಕ ಸಾಧನವನ್ನು ಸಮಯಕ್ಕೆ ಮುನ್ನ ನಿಷ್ಕ್ರಿಯಗೊಳಿಸಲಾಗಿದೆ. ಸ್ಥಳೀಯ ರಕ್ಷಣಾ ಅಧಿಕಾರಿಗಳ ಪ್ರಕಾರ ಪರಿಸ್ಥಿತಿ ನಿಯಂತ್ರಣದಲ್ಲಿದ್ದು ಯಾವುದೇ ದೊಡ್ಡ ಹಾನಿ ಸಂಭವಿಸಿಲ್ಲ. ಇದು ಸಣ್ಣ ಮಟ್ಟದ ಘಟನೆ ಮಾತ್ರ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಕ್ಷಿಣ ಏಷ್ಯಾಕ್ಕೆ ಜಪಾನ್ 10 ಬಿಲಿಯನ್ ಡಾಲರ್ ನೆರವು

ಜಪಾನ್ ಪ್ರಧಾನಿ ಸನಾಏ ತಕೈಚಿ ದಕ್ಷಿಣ ಏಷ್ಯಾ ದೇಶಗಳ ನಾಯಕರೊಂದಿಗೆ ವೀಡಿಯೊ ಸಂವಾದ ನಡೆಸಿದ ನಂತರ, ಪವರ್ ಏಷ್ಯಾ ಎಂಬ ಹೆಸರಿನ 10 ಬಿಲಿಯನ್ ಡಾಲರ್ ನೆರವು ನಿಧಿಯನ್ನು ಘೋಷಿಸಿದರು. ಈ ಯೋಜನೆಯ ಉದ್ದೇಶ ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳನ್ನು ಖರೀದಿಸಲು ಸಾಲ ಸಹಾಯ ನೀಡುವುದು ಹಾಗೂ ತುರ್ತು ಪರಿಸ್ಥಿತಿಯಲ್ಲಿ ಸರಬರಾಜು ಸರಪಳಿಯನ್ನು ಸ್ಥಿರಗೊಳಿಸುವುದು. ಈ ನಿಧಿ ಏಷ್ಯಾದಲ್ಲಿ ತೈಲ ಸಂಗ್ರಹ ವ್ಯವಸ್ಥೆಯನ್ನು ವಿಸ್ತರಿಸಲು, ಇಂಧನ ವೈವಿಧ್ಯತೆಯನ್ನು ಉತ್ತೇಜಿಸಲು ಮತ್ತು ಶಕ್ತಿ ಸಂರಕ್ಷಣೆಗೆ ಸಹಕಾರಿಯಾಗಲಿದೆ. ಜಪಾನ್, ದಕ್ಷಿಣ ಏಷ್ಯಾದಿಂದ ಆಮದು ಮಾಡುವ ವೈದ್ಯಕೀಯ ಮತ್ತು ಇತರ ಪೆಟ್ರೋಲಿಯಂ ಉತ್ಪನ್ನಗಳ ಸರಬರಾಜಿನ ಕೊರತೆಯಿಂದ ಆತಂಕಗೊಂಡಿದೆ.

ಗುಜರಾತ್ ತಲುಪಿದ 20,400 ಮೆ.ಟನ್ ಎಲ್ಪಿಜಿ ಹೊತ್ತ ನೌಕೆ

ಅಹಮದಾಬಾದ್: ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನತೆ ಮುಂದುವರಿದಿರುವ ನಡುವೆಯೇ, 20,400 ಮೆಟ್ರಿಕ್ ಟನ್ ದ್ರವೀಕೃತ ಪೆಟ್ರೋಲಿಯಂ ಗ್ಯಾಸ್(ಎಲ್‌ಪಿಜಿ) ಹೊತ್ತ ಭಾರತೀಯ ಧ್ವಜದ ಜಗ್ ವಿಕ್ರಮ್ ನೌಕೆ ಗುಜರಾತ್‌ನ ಕಂಡ್ಲಾದಲ್ಲಿರುವ ದೀನ್‌ದಯಾಳ್ ಬಂದರು ಪ್ರಾಧಿಕಾರ ತಲುಪಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಅಮೆರಿಕ ಮತ್ತು ಇರಾನ್ ನಡುವಿನ ತಾತ್ಕಾಲಿಕ ಎರಡು ವಾರಗಳ ಕದನ ವಿರಾಮದ ಹಿನ್ನೆಲೆಯಲ್ಲಿ ಈ ಹಡಗು ಹಾರ್ಮುಜ್ ಜಲಸಂಧಿಯನ್ನು ದಾಟಿದೆ. ಮಂಗಳವಾರ ರಾತ್ರಿ ಕಛ್‌ನ ಡಿಪಿಎ ಕಂಡ್ಲಾದಲ್ಲಿರುವ ಆಯಿಲ್ ಜೆಟ್ಟಿ-1ರಲ್ಲಿ ಈ ನೌಕೆ ಲಂಗರು ಹಾಕಿದೆ ಎಂದು ದೀನ್‌ದಯಾಳ್ ಬಂದರು ಪ್ರಾಧಿಕಾರ ತನ್ನ ಹೇಳಿಕೆಯಲ್ಲಿ ತಿಳಿಸಿದೆ. ಮಾರ್ಚ್ ಆರಂಭದಿಂದ ಪರ್ಷಿಯನ್ ಕೊಲ್ಲಿಯಿಂದ ಹೊರಬಂದ ಒಂಬತ್ತನೇ ಭಾರತೀಯ ನೌಕೆ ಇದಾಗಿದೆ. ಇನ್ನು ಸುಮಾರು 15 ಭಾರತೀಯ ಧ್ವಜದ ಹಡಗುಗಳು ಅದೇ ಪ್ರದೇಶದಲ್ಲಿದ್ದು, ಕಾಯುತ್ತಿವೆ, ಎಂದು ಸರ್ಕಾರಿ ಅಧಿಕಾರಿಗಳು ಈ ಹಿಂದೆ ತಿಳಿಸಿದ್ದರು. ಕದನ ವಿರಾಮ ಘೋಷಣೆಯಾದ ನಂತರ ಈ ಜಲಸಂಧಿ ದಾಟಿದ ಮೊದಲ ಭಾರತೀಯ ನೌಕೆ ಇದಾಗಿದೆ.

ವಾಷಿಂಗ್ಟನ್ ಮಾತುಕತೆಯ ಬೆನ್ನಲ್ಲೇ ದ.ಲೆಬನಾನ್ ಮೇಲೆ ಇಸ್ರೇಲ್ ದಾಳಿ

ವಾಷಿಂಗ್ಟನ್‌ನಲ್ಲಿ ಲೆಬನಾನ್ ಮತ್ತು ಇಸ್ರೇಲ್ ಅಧಿಕಾರಿಗಳ ನಡುವೆ ಐತಿಹಾಸಿಕ ರಾಜತಾಂತ್ರಿಕ ಚರ್ಚೆಗಳು ಮುಕ್ತಾಯಗೊಂಡ ಬೆನ್ನಲ್ಲೇ ಬುಧವಾರ ಮುಂಜಾನೆ ದಕ್ಷಿಣ ಲೆಬನಾನ್ ಮೇಲೆ ಇಸ್ರೇಲ್ ಮಿಲಿಟರಿ ದಾಳಿ ನಡೆಸಿದೆ.

ಟೈರ್ ನಗರದ ಮಧ್ಯಭಾಗದ ಸಮೀಪ ಇಸ್ರೇಲ್ ಡ್ರೋನ್ ನಡೆಸಿದ ದಾಳಿಯಲ್ಲಿ ತನ್ನ ಮನೆಯ ಹೊರಗೆ ಕುಳಿತಿದ್ದ 19 ವರ್ಷದ ಫುದಿರ್ ಬಾಲ್ಬಕಿ ಎಂಬ ಯುವತಿ ಸಾವನ್ನಪ್ಪಿದ್ದಾಳೆ. ಕರಾವಳಿ ನಗರದಾದ್ಯಂತ ಕಟ್ಟಡಗಳು ಧ್ವಂಸಗೊಂಡಿದ್ದು ಎಲ್ಲೆಲ್ಲೂ ರಸ್ತೆಯಲ್ಲಿ ಅವಶೇಷಗಳು ಹರಡಿಕೊಂಡಿವೆ. ಬೈರೂತ್‌ನಲ್ಲಿ ಬಾಂಬ್ ದಾಳಿಗಳು ಕಡಿಮೆಯಾಗಿದ್ದರೂ, ದಕ್ಷಿಣ ಭಾಗದ ಪ್ರದೇಶಗಳು ನಿರಂತರ ದಾಳಿ ಮತ್ತು ಸ್ಥಳಾಂತರದ ಭೀತಿ ಎದುರಿಸುತ್ತಿವೆ.

ವಾಷಿಂಗ್ಟನ್ ಮಾತುಕತೆಯು ಉಭಯ ರಾಷ್ಟ್ರಗಳ ನಡುವಿನ ಅಪರೂಪದ ನೇರ ಸಂಪರ್ಕವಾಗಿತ್ತು. ದೇಶವನ್ನು ಮತ್ತೊಂದು ಯುದ್ಧಕ್ಕೆ ತಳ್ಳಿದ್ದಕ್ಕಾಗಿ ಹಿಜ್ಬುಲ್ಲಾವನ್ನು ಟೀಕಿಸುತ್ತಾ ಬಂದಿರುವ ಲೆಬನಾನ್ ಸರ್ಕಾರ, ಈ ಹೋರಾಟವನ್ನು ಕೊನೆಗೊಳಿಸಲು ಮಾತುಕತೆಯೇ ಏಕೈಕ ಮಾರ್ಗ ಎಂದು ಹೇಳಿದೆ. ಆದರೆ, ಇಸ್ರೇಲ್‌ನ ವೈಮಾನಿಕ ಮತ್ತು ಭೂಸೇನಾ ಕಾರ್ಯಾಚರಣೆಗಳು ಮುಂದುವರಿಯುತ್ತಿರುವುದನ್ನು ಉಲ್ಲೇಖಿಸಿ ಹೆಜ್ಬುಲ್ಲಾ ಈ ಮಾತುಕತೆಯನ್ನು ವಿರೋಧಿಸಿದೆ.

ದುಬಾರಿ ಡ್ರೋನ್ ನಷ್ಟ ಒಪ್ಪಿಕೊಂಡ ಅಮೆರಿಕ!

ವಾಷಿಂಗ್ಟನ್: ಇರಾನ್ ಜತೆಗಿನ ತಾತ್ಕಾಲಿಕ ಕದನ ವಿರಾಮದ ವೇಳೆ ಹಾರ್ಮುಜ್ ಜಲಸಂಧಿಯ ಸಮೀಪ ಏ.9ರಂದು ಸುಮಾರು 238 ದಶಲಕ್ಷ ಡಾಲರ್ ಅಥವಾ 2,222 ಕೋಟಿ ರೂ. ಮೌಲ್ಯದ ದುಬಾರಿ ಕಣ್ಗಾವಲು ಡ್ರೋನ್ ಕಳೆದುಕೊಂಡಿದ್ದನ್ನು ಅಮೆರಿಕ ನೌಕಾಪಡೆ ಒಪ್ಪಿಕೊಂಡಿದೆ.



ಪರ್ಷಿಯನ್ ಗಲ್ಫ್ ಮತ್ತು ಹಾರ್ಮುಜ್ ಜಲಸಂಧಿಯ ಮೇಲೆ ಕಣ್ಗಾವಲು ನಡೆಸುತ್ತಿದ್ದ ಅಮೆರಿಕ ಸೇನೆಯ 238 ದಶಲಕ್ಷ ಡಾಲರ್ ಮೌಲ್ಯದ ಎಂಕ್ಯೂ-4ಸಿ ಟ್ರಿಟನ್ ಡ್ರೋನ್ ಕಾಣೆಯಾಗಿತ್ತು. ಇದು ಕೊನೆಯದಾಗಿ ಇರಾನ್ ವಾಯು ಪ್ರದೇಶದಲ್ಲಿ ಕಾಣಿಸಿಕೊಂಡಿದ್ದು, ಅಮೆರಿಕ-ಇರಾನ್ ನಡುವಿನ ಕದನ ವಿರಾಮ ಘೋಷಣೆಯ ಬಳಿಕ ಘಟನೆ ನಡೆದಿತ್ತು. ಡ್ರೋನ್ ಪತನಗೊಂಡಿತೋ ಅಥವಾ ಇರಾನಿಯನ್ನರು ಹೊಡೆದುರುಳಿಸಿದ್ದಾರೋ ಎಂಬ ಬಗ್ಗೆ ಮಾಹಿತಿಯಿಲ್ಲ. ಎಂಕ್ಯೂ-4ಸಿ ಟ್ರಿಟನ್ ಡ್ರೋನ್, ಪರ್ಷಿಯನ್ ಗಲ್ಫ್ ಮತ್ತು ಹಾರ್ಮುಜ್‌ನ ಮೇಲೆ ಸುಮಾರು 3 ಗಂಟೆಗಳ ಕಾಲ ಕಣ್ಗಾವಲು ನಡೆಸಿದ ಬಳಿಕ ಇಟಲಿಯ ಸಿಗೊನೆಲ್ಲಾ ನೌಕಾನೆಲೆಗೆ ಹೋಗುತ್ತಿತ್ತು ಎಂದು ವರದಿಯಾಗಿದ್ದು, ಆದರೆ ಅದು ತಲುಪಿಲ್ಲ. ಡ್ರೋನ್ ಕಾಣೆಯಾಗುವ ಮುನ್ನ ಸಹಾಯಕ್ಕಾಗಿ ತುರ್ತು ಪರಿಸ್ಥಿತಿ (ಎಮರ್ಜೆನ್ಸಿ) ಅಥವಾ ಅಪಾಯದ ಕೋಡ್ 7700 ಅನ್ನು ಕಳುಹಿಸಿತ್ತು. ಹಾರ್ಮುಜ್‌ನಲ್ಲಿ ಅಮೆರಿಕ ಮತ್ತು ಇರಾನ್ ಕದನ ವಿರಾಮ ಒಪ್ಪಂದಕ್ಕೆ ಒಪ್ಪಿಕೊಂಡ 2 ದಿನಗಳ ಬಳಿಕ ಡ್ರೋನ್ ಕಾಣೆಯಾಗಿತ್ತು.

ಡ್ರೋನ್ ವಿಶೇಷತೆಗಳೇನು?

ಸಾಗರೋತ್ತರ ಬೇಹುಗಾರಿಕೆ, ಗುಪ್ತಚರ, ಕಣ್ಗಾವಲು ಮತ್ತು ಸ್ಥಳಾನ್ವೇಷಣೆ (ಐಎಸ್‌ಆರ್) ಇತ್ಯಾದಿ ಉದ್ದೇಶಕ್ಕಾಗಿ ಬಳಸಲಾಗುತ್ತದೆ. ಸುಮಾರು 50,000 ಅಡಿ ಎತ್ತರದಲ್ಲಿ 24 ಗಂಟೆಗಳಿಗೂ ಹೆಚ್ಚು ಸಮಯ 13,705 ಕಿ.ಮೀ. ದೂರದವರೆಗೆ ಮತ್ತು ಕತ್ತಲಾಗುವ ಮುನ್ನ 10,000 ಅಡಿಗಿಂತ ಕೆಳಗಡೆಯೂ ಕಣ್ಗಾವಲು ನಡೆಸುವ ಸಾಮರ್ಥ್ಯವನ್ನು ಹೊಂದಿದೆ. ಗಂಟೆಗೆ 575ರಿಂದ 610 ಕಿ.ಮೀ. ವೇಗದಲ್ಲಿ ಹಾರಬಲ್ಲದು. ಕಣ್ಗಾವಲಿನ ವೇಳೆ ಹಡಗುಗಳು, ಸಬ್‌ಮೆರೀನ್ (ಜಲಾಂತರ್ಗಾಮಿ) ಮತ್ತು ಸಂಶಯಾಸ್ಪದ ಸಾಗರ ಚಲನವಲನಗಳು ಮತ್ತು ಚಟುವಟಿಕೆಗಳನ್ನು ಡ್ರೋನ್ ಪತ್ತೆಹಚ್ಚುತ್ತದೆ. ಎಲ್ಲಾ ವಾತಾವರಣಗಳಲ್ಲಿ, ಅತಿಎತ್ತರದಲ್ಲೂ ಕಾರ್ಯಾಚರಣೆ ನಡೆಸುತ್ತದೆ.

ದಿಗ್ಬಂಧನ ನಡುವೆಯೂ ಗುರಿ ತಲುಪಿದ ಇರಾನ್ ಟ್ಯಾಂಕರ್

ಟೆಹ್ರಾನ್: ಅಮೆರಿಕದ ಮಿಲಿಟರಿ ದಿಗ್ಬಂಧನದ ನಡುವೆಯೂ, ಅಮೆರಿಕದಿಂದ ಕಪ್ಪುಪಟ್ಟಿಗೆ ಸೇರಿಸಲ್ಪಟ್ಟ ಇರಾನ್‌ನ ಬೃಹತ್ ಕಚ್ಚಾ ತೈಲ ನೌಕೆ (ವಿಎಲ್‌ಸಿಸಿ) ಹಾರ್ಮುಜ್ ಜಲಸಂಧಿಯನ್ನು ಯಶಸ್ವಿಯಾಗಿ ದಾಟಿ ಇರಾನ್ ತೀರವನ್ನು ತಲುಪಿದೆ.

ಮುಂಬೈನ ಇರಾನ್ ಕಾನ್ಸುಲೇಟ್ ಜನರಲ್ ವರದಿ ಮಾಡಿರುವಂತೆ, 2 ಮಿಲಿಯನ್ ಬ್ಯಾರೆಲ್ ಕಚ್ಚಾ ತೈಲ ಹೊತ್ತೊಯ್ಯುವ ಸಾಮರ್ಥ್ಯವಿರುವ ಈ ಸೂಪರ್‌ಟ್ಯಾಂಕರ್ ತನ್ನ ಪ್ರಯಾಣದುದ್ದಕ್ಕೂ ಟ್ರ್ಯಾಕಿಂಗ್ ವ್ಯವಸ್ಥೆಯನ್ನು ಚಾಲನೆಯಲ್ಲಿಟ್ಟಿತ್ತು. ಅಮೆರಿಕದ ನಿರ್ಬಂಧಗಳು ಮತ್ತು ಬೆದರಿಕೆಗಳ ನಡುವೆಯೂ ಈ ನೌಕೆ ಯಾವುದೇ ಅಡೆತಡೆಯಿಲ್ಲದೆ ಅಂತರಾಷ್ಟ್ರೀಯ ಜಲಪ್ರದೇಶ ಮತ್ತು ಆಯಕಟ್ಟಿನ ಜಲಸಂಧಿಯನ್ನು ದಾಟಿ ಬಂದಿದೆ. ಕಡಲ ಟ್ರ್ಯಾಕಿಂಗ್ ಸಂಸ್ಥೆ ಕೆಪ್ಲರ್ ಸೋಮವಾರ ಹಾದುಹೋದ ನಂತರ, ಲೈಬೀರಿಯಾ ಧ್ವಜದ ಕ್ರಿಸ್ಟಿಯಾನಾ ನೌಕೆ ದಿಗ್ಬಂಧನ ಜಾರಿಯಾದ ಎರಡು ಗಂಟೆಗಳ ನಂತರ ಲಾರಾಕ್ ದ್ವೀಪವನ್ನು ದಾಟಿದೆ. ಅದೇ ದಿನ ಮಧ್ಯಾಹ್ನ 31,000 ಟನ್ ಮೆಥನಾಲ್ ಹೊತ್ತಿದ್ದ ಕೊಮೊರೊಸ್ ಧ್ವಜದ ಎಲ್ಪಿಸ್ ನೌಕೆ ಜಲಸಂಧಿಯನ್ನು ದಾಟಿದೆ.

ಕಿರುಸುದ್ದಿ

180 ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ, ಸೆರೆ

ಮುಂಬೈ: ಮಹಾರಾಷ್ಟ್ರದ ಅಯಾನ್ ಅಹ್ಮದ್ ತನ್ವೀರ್ ಎಂಬ ಮುಸ್ಲಿಂ ಯುವಕನೋರ್ವ 180ಕ್ಕೂ ಹೆಚ್ಚು ಅಪ್ರಾಪ್ತೆಯರ ಲೈಂಗಿಕ ದೌರ್ಜನ್ಯ ಎಸಗಿದ್ದಲ್ಲದೆ, 350 ವಿಡಿಯೋಗಳನ್ನು ಚಿತ್ರೀಕರಿಸಿ, ಬೆದರಿಕೆ ಮತ್ತು ಬ್ಲ್ಯಾಕ್‌ಮೇಲ್ ಮಾಡಲು ಅವುಗಳನ್ನು ಬಳಸಿಕೊಂಡಿದ್ದು, ಪ್ರಾಥಮಿಕ ತನಿಖೆಯಲ್ಲಿ ಪೊಲೀಸರು 8 ಸಂತ್ರಸ್ತೆಯರನ್ನು ಮಾತ್ರ ಗುರುತಿಸಿದ್ದಾರೆ. ಬಿಜೆಪಿ ರಾಜ್ಯಸಭಾ ಸಂಸದ ಅನಿಲ್ ಬೊಂಡೆ ದೂರಿನ ಅನ್ವಯ ಪ್ರಕರಣ ದಾಖಲಿಸಿದ್ದು, ಈತನನ್ನು ಬಂಧಿಸಲಾಗಿದೆ.

ಅಂಡಮಾನ್ ಬಳಿ ಮಗುಚಿದ ದೋಣಿ, 250 ಜನರ ಸಾವು?

ಹೊಸದಿಲ್ಲಿ: ಅಂಡಮಾನ್ ಸಮುದ್ರದಲ್ಲಿ ಮೀನುಗಾರಿಕಾ ದೋಣಿಯೊಂದು ಮಂಗಳವಾರ ಮಗುಚಿ ಬಿದ್ದಿದ್ದು, ರೊಹಿಂಗ್ಯಾ ವಲಸಿಗರು ಮತ್ತು ಬಾಂಗ್ಲಾದೇಶದ ನಾಗರಿಕರ ಸಹಿತ ಸುಮಾರು 250 ಜನರು ಮೃತಪಟ್ಟಿರುವ ಸಾಧ್ಯತೆಯಿದೆ. ಇವರ ರಕ್ಷಣೆಗಾಗಿ ಭಾರೀ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ.

ಸಿಬಿಎಸ್‌ಇ ಫಲಿತಾಂಶ ಪ್ರಕಟ: ಶೇ.93 ಉತ್ತೀರ್ಣ

ಹೊಸದಿಲ್ಲಿ: ಸಿಬಿಎಸ್‌ಇ 10ನೇ ತರಗತಿಯ ಬೋರ್ಡ್ ಪರೀಕ್ಷೆಗಳ ಫಲಿತಾಂಶ ಪ್ರಕಟಿಸಲಾಗಿದೆ ಎಂದು ಮಂಡಳಿಯ ಹಿರಿಯ ಅಧಿಕಾರಿ ತಿಳಿಸಿದ್ದಾರೆ.

ಈ ವರ್ಷದಿಂದ 10ನೇ ತರಗತಿಗೆ ಎರಡು ಹಂತಗಳಲ್ಲಿ ಬೋರ್ಡ್ ಪರೀಕ್ಷೆಗಳನ್ನು ನಡೆಸುವ ವ್ಯವಸ್ಥೆಯನ್ನು ಸಿಬಿಎಸ್‌ಇ ಪ್ರಾರಂಭಿಸಿದ್ದು, ಮೊದಲ ಹಂತದಲ್ಲಿ ಪರೀಕ್ಷೆ ಬರೆಯುವುದು ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿತ್ತು. ಇದೇ ಹಂತದ ಫಲಿತಾಂಶವನ್ನು ಈಗ ಪ್ರಕಟಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಈ ಬಾರಿಯೂ ಹುಡುಗಿಯರು ಮೇಲುಗೈ ಸಾಧಿಸಿದ್ದು, ಒಟ್ಟು ಶೇ.93.7 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕಳೆದ ವರ್ಷ ಈ ಪ್ರಮಾಣ ಶೇ.93.66 ಆಗಿತ್ತು.

ಅಧಿಕಾರಿಗಳ ಪ್ರಕಾರ, ಹುಡುಗಿಯರ ಉತ್ತೀರ್ಣ ಪ್ರಮಾಣ ಶೇ.94.99 ಇದ್ದು, ಇದು ಹುಡುಗರಿಗಿಂತ ಶೇ.1.3 ಹೆಚ್ಚು. ಒಟ್ಟು 55,368 ವಿದ್ಯಾರ್ಥಿಗಳು ಶೇ.95ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ. ಇನ್ನು 2,21,574 ವಿದ್ಯಾರ್ಥಿಗಳು ಶೇ.90ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ವರ್ಷ 1.47 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಕಂಪಾರ್ಟ್‌ಮೆಂಟ್ ವಿಭಾಗಕ್ಕೆ ಸೇರಿಸಲಾಗಿದೆ. ಈ ಸಂಖ್ಯೆ ಕಳೆದ ವರ್ಷಕ್ಕಿಂತ ಸ್ವಲ್ಪ ಕಡಿಮೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಈ ಬಾರಿ 8,074 ಪರೀಕ್ಷಾ ಕೇಂದ್ರಗಳಲ್ಲಿ 24.71 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

ಮೋದಿಗೆ ಮಾಜಿ ರಾಷ್ಟ್ರಪತಿ ಪ್ರತಿಭಾ ಮೆಚ್ಚುಗೆಯ ಪತ್ರ

ಹೊಸದಿಲ್ಲಿ: ಕೇಂದ್ರ ಸರ್ಕಾರವೀಗ ತರಲು ಉದ್ದೇಶಿಸಿರುವ ಮಹಿಳಾ ಮೀಸಲು ಮಸೂದೆಯು, ಭಾರತೀಯ ಪ್ರಜಾತಂತ್ರಕ್ಕಾಗಿ ಒಂದು ಪರಿವರ್ತನೀಯ ಹೆಜ್ಜೆ ಎಂಬುದಾಗಿ ಶ್ಲಾಘಿಸಿರುವ ಮಾಜಿ ರಾಷ್ಟ್ರಪತಿ ಪ್ರತಿಭಾ ದೇವಿ ಸಿಂಗ್ ಪಾಟೀಲ್, ಪ್ರಧಾನಿ ನರೇಂದ್ರ ಮೋದಿಯವರಿಗೆ ಪತ್ರ ಬರೆದು ಬೆಂಬಲ ಘೋಷಿಸಿದ್ದಾರೆ.

ಕಾಂಗ್ರೆಸ್ ನಾಯಕಿಯಾಗಿದ್ದ ಪ್ರತಿಭಾ ಪಾಟೀಲ್, ದೇಶದ 12ನೇ ರಾಷ್ಟ್ರಪತಿ ಮತ್ತು ಪ್ರಥಮ ಮಹಿಳಾ ರಾಷ್ಟ್ರಪತಿಯಾಗಿ ಆಯ್ಕೆಯಾಗಿದ್ದರು. ಅವರು 2007ರಿಂದ 2012ರವರೆಗೆ ಅಧಿಕಾರದಲ್ಲಿದ್ದರು. ಕೇಂದ್ರ ಸರ್ಕಾರದ ನಾರೀ ಶಕ್ತಿ ವಂದನ್ ಅಧಿನಿಯಮ್ ಸಾಂವಿಧಾನಿಕ ತಿದ್ದುಪಡಿ ಮಸೂದೆಯು ಸಾಂವಿಧಾನಿಕ ಮಂಡಳಿಗಳಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ಬಲಪಡಿಸುವ ಮಸೂದೆಯಾಗಿದೆ.

ಏ.16ರಂದು ಆರಂಭವಾಗಲಿರುವ ಸಂಸತ್ತಿನ ವಿಶೇಷ ಅಧಿವೇಶನ ಆರಂಭಗೊಳ್ಳುವ ಸಂದರ್ಭದಲ್ಲೇ ಅವರು ಈ ಪತ್ರ ಬರೆದಿರುವುದು ಮಹತ್ವದ್ದಾಗಿದೆ. ಮಹಿಳಾ ಸಬಲೀಕರಣ ಮತ್ತು ರಾಷ್ಟ್ರೀಯ ಪ್ರಗತಿಯತ್ತ ನಿರಂತರ ಪ್ರಯತ್ನಗಳಿಗೆ ನನ್ನ ಶುಭಾಶಯಗಳು ಎಂದಿದ್ದಾರೆ ಪ್ರತಿಭಾ.

ಕಾಂಗ್ರೆಸ್‌ಗಿಂತ ಭಿನ್ನ ನಿಲುವು: ಸೋನಿಯಾ ಗಾಂಧಿ ಸೇರಿ ಕಾಂಗ್ರೆಸ್ ನಾಯಕರು ಮಸೂದೆ ಮಂಡನೆಯ ಸಮಯದಲ್ಲಿ ಅಪಸ್ವರ ತೆಗೆದಿರುವಾಗಲೇ ಪ್ರತಿಭಾ ಪಾಟೀಲ್ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿ, ಇದು ರಾಷ್ಟ್ರನಿರ್ಮಾಣದಲ್ಲಿ ಗ್ರಾಮೀಣ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಿಸುವ ಉಪಕ್ರಮವಾಗಿದ್ದು, ಪ್ರಜಾತಂತ್ರ ಬಲಪಡಿಸುವ ದಿಟ್ಟ ಹೆಜ್ಜೆ ಎಂದು ಪ್ರಶಂಸಿಸಿದ್ದಾರೆ.

ಟಿಸಿಎಸ್ ಎಚ್‌ಆರ್ ನಿದಾ ಖಾನ್ ಮಾಸ್ಟರ್ ಮೈಂಡ್

ಹೊಸದಿಲ್ಲಿ: ಮಹಾರಾಷ್ಟ್ರದ ನಾಸಿಕ್‌ನ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್(ಟಿಸಿಎಸ್) ಬಿಪಿಒ ಘಟಕದಲ್ಲಿ ಮಹಿಳಾ ಉದ್ಯೋಗಿಗಳ ಮೇಲೆ ಲೈಂಗಿಕ ಕಿರುಕುಳ ಮತ್ತು ಬಲವಂತದ ಮತಾಂತರಕ್ಕೆ ಯತ್ನಿಸಿದ ಪ್ರಕರಣದಲ್ಲಿ ಎಚ್‌ಆರ್ ಮ್ಯಾನೇಜರ್ ನಿದಾ ಖಾನ್ ಮಾಸ್ಟರ್ ಮೈಂಡ್ ಆಗಿದ್ದಳೆಂದು ತಿಳಿದುಬಂದಿದೆ. ಇದೀಗ ಆಕೆ ತಲೆಮರೆಸಿಕೊಂಡಿದ್ದಾಳೆ. ಈಕೆ ಟಿಸಿಎಸ್ ನಾಸಿಕ್ ಘಟಕದ ಲೈಂಗಿಕ ಕಿರುಕುಳ ತಡೆ ಕಾಯ್ದೆ (ಪಾಶ್) ಸಮಿತಿಯ ಸದಸ್ಯೆಯಾಗಿದ್ದಳು.

ಆರೋಪಿಗಳಾದ ಆಸಿಫ್ ಅನ್ಸಾರಿ, ಶಾಫಿ ಶೇಖ್, ಶಾರುಖ್ ಖುರೇಷಿ, ರಾಝಾ ಮೆಮನ್, ದಾನಿಶ್ ಶೇಖ್ ಮತ್ತು ತೌಸಿಫ್ ಅತ್ತಾರ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಮುಸ್ಲಿಂ ಪುರುಷ ಸಹೋದ್ಯೋಗಿಗಳು ಹಿಂದು ಮಹಿಳಾ ಉದ್ಯೋಗಿಗಳಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ ಬಗ್ಗೆ ಹಲವಾರು ಹಿಂದು ಮಹಿಳೆಯರು ನೀಡಿದ ದೂರುಗಳನ್ನು ಎಚ್‌ಆರ್ ಮ್ಯಾನೇಜರ್ ನಿದಾ ಖಾನ್ ಕಡೆಗಣಿಸಿದ್ದು, ಬೆಂಬಲವಾಗಿ ನಿಂತಿದ್ದಳು. ಹಿಂದು ಮಹಿಳಾ ಉದ್ಯೋಗಿಗಳ 78 ಇಮೇಲ್ ದೂರುಗಳನ್ನು ಖಾನ್ ಕಡೆಗಣಿಸಿದ್ದು, ಅದು ಟಿಸಿಎಸ್ ಉನ್ನತ ಮಟ್ಟದ ಅಧಿಕಾರಿಗಳಿಗೆ ತಲುಪದಂತೆ ನೋಡಿಕೊಂಡಿದ್ದಳು ಎಂದು ತನಿಖೆಯಲ್ಲಿ ತಿಳಿದುಬಂದಿದೆ. ನಾಸಿಕ್ ನಗರ ಪೊಲೀಸ್ ಠಾಣೆಯಲ್ಲಿ ಹಿಂದು ಮಹಿಳೆಯರು ದಾಖಲಿಸಿದ ದೂರಿನಲ್ಲಿ ಆಕೆಯ ಹೆಸರು ಇದೆ. 2026ರ ಜನವರಿಯಲ್ಲಿ ಈಕೆ ಕಂಪನಿ ತೊರೆದಿದ್ದಳೆಂದೂ ವರದಿಯಾಗಿದೆ. ಪ್ರಕರಣದ ತನಿಖೆಗಾಗಿ ರಾಷ್ಟ್ರೀಯ ಮಹಿಳಾ ಆಯೋಗ (ಎನ್‌ಸಿಡಬ್ಲ್ಯು) ಸತ್ಯ ಶೋಧನಾ ಸಮಿತಿ ರಚಿಸಿದ್ದಾಗಿ ಬುಧವಾರ ಪ್ರಕಟಿಸಿದೆ.

ಇಂದಿನಿಂದ 3 ದಿನ ಅಧಿವೇಶನ

ಹೊಸದಿಲ್ಲಿ: ಏಪ್ರಿಲ್ 16ರಿಂದ 18ರವರೆಗೆ ಮೂರು ದಿನ ನಡೆಯಲಿರುವ ವಿಶೇಷ ಅಧಿವೇಶನದಲ್ಲಿ ನಾರೀಶಕ್ತಿ ವಂದನ ಅಧಿನಿಯಮಕ್ಕೆ ತಿದ್ದುಪಡಿಗಳನ್ನು ತರಲಾಗುವುದು. ಈ ಕಾಯ್ದೆ, ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿಯನ್ನು ಕಡ್ಡಾಯಗೊಳಿಸುತ್ತದೆ. ಇದನ್ನು 2029 ರಲ್ಲಿ ಜಾರಿಗೆ ತರಲು ಉದ್ದೇಶಿಸಲಾಗಿದೆ. ಏತನ್ಮಧ್ಯೆ, ವಿಶೇಷ ಅಧಿವೇಶನದಲ್ಲಿ ಮಂಡನೆಯಾಗಲಿರುವ ಸಂವಿಧಾನ ತಿದ್ದುಪಡಿ ಮಸೂದೆಯ ಕ್ಷೇತ್ರ ಮರುವಿಂಗಡಣೆ ನಿಬಂಧನೆಗಳ ವಿರುದ್ಧ ಮತ ಚಲಾಯಿಸಲು ಹಲವು ವಿರೋಧ ಪಕ್ಷಗಳು ನಿರ್ಧರಿಸಿವೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ನಡೆದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಮಹಿಳಾ ಮೀಸಲಾತಿಯನ್ನು ಪಕ್ಷಗಳು ಬೆಂಬಲಿಸಿದರೂ, ವಿರೋಧ ಪಕ್ಷಗಳನ್ನು ಹತ್ತಿಕ್ಕುವ ಉದ್ದೇಶದಿಂದ ಈ ಕ್ಷೇತ್ರ ಮರುವಿಂಗಡಣೆ ಅಂಶಗಳನ್ನು ಸೇರಿಸಲಾಗಿದೆ. ಇದನ್ನು ಒಗ್ಗಟ್ಟಿನಿಂದ ವಿರೋಧಿಸುವುದಾಗಿ ಖರ್ಗೆ ತಿಳಿಸಿದ್ದಾರೆ.

ಬಿಹಾರ: ಜೆಡಿಯುನ ಬಿಜೇಂದ್ರ ಯಾದವ್, ವಿಜಯ್ ಕುಮಾರ್‌ಗೆ ಡಿಸಿಎಂ ಸ್ಥಾನ

ನೂತನ ಸಿಎಂ ಸಾಮ್ರಾಟ್ ಬಳಿ 30 ಖಾತೆ

ಪಾಟ್ನಾ: ಜೆಡಿಯು ನಾಯಕರಾದ ಬಿಜೇಂದ್ರ ಪ್ರಸಾದ್ ಯಾದವ್ ಮತ್ತು ವಿಜಯ್ ಕುಮಾರ್ ಚೌಧರಿ ಅವರು ಸಾಮ್ರಾಟ್ ಚೌಧರಿ ನೇತೃತ್ವದ ಬಿಹಾರದ ಹೊಸ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಗಳಾಗಿ ನೇಮಕಗೊಂಡಿದ್ದಾರೆ.

ಸಾಮ್ರಾಟ್ ಚೌಧರಿ ಅವರು ಬುಧವಾರ ಬಿಹಾರದ 24ನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಬಿಹಾರದಲ್ಲಿ ಬಿಜೆಪಿ ನಾಯಕರೊಬ್ಬರು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿರುವುದು ವಿಶೇಷವಾಗಿದೆ.

ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರು ತಾತ್ಕಾಲಿಕವಾಗಿ ಸುಮಾರು 30 ಇಲಾಖೆ ತಮ್ಮ ಬಳಿಯೇ ಇಟ್ಟುಕೊಂಡಿದ್ದಾರೆ. ಇದರಲ್ಲಿ ಗೃಹ, ಜಾಗೃತಿ(ವಿಜಿಲೆನ್ಸ್), ಆದಾಯ ಮತ್ತು ಭೂ ಸುಧಾರಣೆ, ಆರೋಗ್ಯ ಮುಂತಾದ ಪ್ರಮುಖ ಇಲಾಖೆಗಳು ಸೇರಿವೆ.

ಕ್ಯಾಬಿನೆಟ್ ಕಾರ್ಯಾಲಯ ಇಲಾಖೆಯಿಂದ ಹೊರಡಿಸಿದ ಅಧಿಸೂಚನೆಯ ಪ್ರಕಾರ,



ಮುಖ್ಯಮಂತ್ರಿಯನ್ನು ಹೊರತುಪಡಿಸಿ ಪ್ರಮಾಣವಚನ ಸ್ವೀಕರಿಸಿದ ಏಕೈಕ ಇಬ್ಬರು ನಾಯಕರು ವಿಜಯ್ ಕುಮಾರ್ ಚೌಧರಿ ಮತ್ತು ಬಿಜೇಂದ್ರ ಪ್ರಸಾದ್ ಯಾದವ್ ಅವರು ಉಪ ಮುಖ್ಯಮಂತ್ರಿಗಳಾಗಿ ನೇಮಕಗೊಂಡಿದ್ದಾರೆ.

ಮುಖ್ಯಮಂತ್ರಿಯವರ ಬಳಿಯಲ್ಲಿರುವ ಇತರೆ ಇಲಾಖೆಗಳು ಕೃಷಿ, ಕಾರ್ಮಿಕ ಸಂಪನ್ಮೂಲ ಮತ್ತು ವಲಸೆ ಕಾರ್ಮಿಕರ ಕಲ್ಯಾಣ, ವಿಪತ್ತು ನಿರ್ವಹಣೆ, ಪಂಚಾಯತ್ ರಾಜ್ ಮತ್ತು ಕೈಗಾರಿಕೆಗಳನ್ನು ಒಳಗೊಂಡಿವೆ.

ಅಧಿಸೂಚನೆಯಲ್ಲಿ ಸಾಮ್ರಾಟ್ ಚೌಧರಿ ಅವರ ಬಳಿ ಒಟ್ಟು 29 ಇಲಾಖೆಗಳು ಇದ್ದು, ಇನ್ನೂ ಯಾರಿಗೂ ಹಂಚಿಕೆಯಾಗದ ಎಲ್ಲಾ ಇತರೆ ಇಲಾಖೆಗಳೂ ಅವರ ಬಳಿ ಇವೆ ಎಂದು ಹೇಳಲಾಗಿದೆ.

ವಿಜಯ್ ಕುಮಾರ್ ಚೌಧರಿ ಅವರಿಗೆ ಜಲ ಸಂಪನ್ಮೂಲ, ಸಂಸದೀಯ ವ್ಯವಹಾರಗಳು ಮತ್ತು ಮಾಹಿತಿ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ ಸೇರಿದಂತೆ 10 ಇಲಾಖೆಗಳು ನೀಡಲಾಗಿದೆ. ಇವುಗಳನ್ನು ಅವರು ಹಿಂದಿನ ನಿತೀಶ್ ಕುಮಾರ್ ಸರ್ಕಾರದಲ್ಲಿಯೂ ನಿರ್ವಹಿಸಿದ್ದರು.

ಬಿಜೇಂದ್ರ ಪ್ರಸಾದ್ ಯಾದವ್ ಅವರಿಗೆ ಇಂಧನ, ಹಣಕಾಸು ಮತ್ತು ಯೋಜನೆ ಹಾಗೂ ಅಭಿವೃದ್ಧಿ ಸೇರಿದಂತೆ 8 ಇಲಾಖೆಗಳನ್ನು ನೀಡಲಾಗಿದೆ. ಇವುಗಳನ್ನೂ ಅವರು ಹಿಂದಿನ ಸರ್ಕಾರದಲ್ಲಿಯೇ ನೋಡಿಕೊಂಡಿದ್ದರು. ಅವರಿಗೆ ಮದ್ಯನಿಷೇಧ, ಅಬಕಾರಿ ಮತ್ತು ನೋಂದಣಿ ಇಲಾಖೆಯ ಜವಾಬ್ದಾರಿಯನ್ನೂ ನೀಡಲಾಗಿದೆ.

ತಮಿಳುನಾಡಿನಲ್ಲಿ ರೋಡ್ ಶೋ ಬಳಿಕ ಪ್ರಧಾನಿ ಮೋದಿ ವಿಶ್ವಾಸ

ಎಐಎಡಿಎಂಕೆ ಮಿತ್ರಕೂಟಕ್ಕೆ ಜಯ ಖಚಿತ

ನಾಗರ್‌ಕೊಯಿಲ್(ತಮಿಳುನಾಡು): ತಮಿಳುನಾಡಿನ ಏ.23ರ ವಿಧಾನಸಭಾ ಚುನಾವಣಾ ಕಣದಲ್ಲಿರುವ ಎನ್‌ಡಿಎ ಅಭ್ಯರ್ಥಿಗಳ ಪರವಾಗಿ ಪ್ರಧಾನಿ ನರೇಂದ್ರ ಮೋದಿ ಬುಧವಾರ ಕನ್ಯಾಕುಮಾರಿ ಜಿಲ್ಲೆಯ ನಾಗರಕೊಯಿಲ್‌ನಲ್ಲಿ ಭರ್ಜರಿ ರೋಡ್ ಶೋ ನಡೆಸಿದರು. ಎಐಎಡಿಎಂಕೆ ನೇತೃತ್ವದ ಮಿತ್ರಕೂಟಕ್ಕೆ ವಿಜಯ ಖಚಿತ ಎಂದು ಆತ್ಮವಿಶ್ವಾಸ ವ್ಯಕ್ತಪಡಿಸಿದ ಪ್ರಧಾನಿ ಮೋದಿ, ಆಳುವ ಡಿಎಂಕೆಗೆ ನಿರ್ಗಮನ ಬಾಗಿಲು ತೆರೆದಿರುತ್ತೆ ಎಂದು ಖಚಿತವಾಗಿ ನುಡಿದರು.

ಪುಷ್ಪಾಲಂಕೃತ ವಾಹನದಲ್ಲಿ ನಿಂತುಕೊಂಡ ಪ್ರಧಾನಿ ಮೋದಿ ರಸ್ತೆಯ ಇಕ್ಕೆಲಗಳಲ್ಲೂ ಪ್ರವಾಹೋಪಾದಿಯಲ್ಲಿ ನೆರೆದಿದ್ದ ಅಭಿಮಾನಿ ಜನರತ್ತ ಪ್ರೀತಿಯಿಂದ ಕೈಬೀಸಿದರು. ಸುಮಾರು 1 ತಾಸು ರೋಡ್ ಶೋನಲ್ಲಿ ಪಾಲ್ಗೊಂಡ ಪ್ರಧಾನಿ ಅವರಿಗೆ ಜನರು ರಸ್ತೆಯ ಇಕ್ಕೆಲಗಳಿಂದ ಪುಷ್ಪಾರ್ಚನೆಗೈದು ಸಂತಸಪಟ್ಟರು. ನಾಗರಕೊಯಿಲ್‌ನ ವೆಪ್ಪಮೂಡು ಜಂಕ್ಷನ್‌ನಿಂದ ವಡಸೇರಿವರೆಗೆ ಅಂದರೆ 1.5 ಕಿಮೀ ವ್ಯಾಪ್ತಿವರೆಗೆ ರೋಡ್ ಶೋ ನಡೆಯಿತು.

ರೋಡ್ ಶೋ ಹಾದಿಯುದ್ದಕ್ಕೂ ಮೋದಿ, ಮೋದಿ, ಭಾರತ್ ಮಾತಾ ಕೀ ಜೈ ಘೋಷಣೆಗಳು ಅನುರಣಿಸಿತ್ತು. ಎನ್‌ಡಿಎ ಮಿತ್ರಪಕ್ಷಗಳಾದ ಎಡಿಎಂಕೆ, ಬಿಜೆಪಿ , ಎಎಂಎಂಕೆ ಧ್ವಜಗಳು ಹಾದಿಯುದ್ದಕ್ಕೂ



ಹಾರಾಡುತ್ತಾ ರಂಗುರಂಗಿನ ವಾತಾವರಣ ನಿರ್ಮಿಸಿತ್ತು. ನೃತ್ಯ ಕಲಾವಿದರ ಶಾಸ್ತ್ರೀಯ ನೃತ್ಯ ಪ್ರದರ್ಶನ ರೋಡ್‌ಶೋ ರಂಗೇರಿಸಿತ್ತು.

ಕಾರ್ಯಕ್ರಮಗಳಿಂಗ ಡಾ. ಬಿ.ಆರ್.ಅಂಬೇಡ್ಕರ್, ದ್ರಾವಿಡ ನಾಯಕರಾದ ಸಿ.ಎನ್.ಅಣ್ಣಾದುರೈ, ಎಐಎಡಿಎಂಕೆ ಸ್ಥಾಪಕ ಎಂ.ಜಿ.ರಾಮಚಂದ್ರನ್ ಅವರ ಭಾವಚಿತ್ರಗಳಿಗೆ ಪ್ರಧಾನಿ ಮೋದಿ ನಮನ ಸಲ್ಲಿಸಿದರು. ನಂತರ ತುರ್ತಾಗಿ ಭಾಷಣ ಮಾಡಿ, ಏ.23ರ ಚುನಾವಣೆಯಲ್ಲಿ ಎನ್‌ಡಿಎಗೆ ವಿಜಯ ಖಚಿತವೆಂದು ಭರವಸೆ ವ್ಯಕ್ತಪಡಿಸಿದರು.

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,70,000(2,55,000) ಅಪರಂಜಿ ಚಿನ್ನ: 1,55,350(1,53,930) ಆಭರಣ ಚಿನ್ನ: 1,42,400(1,41,100) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 78,111 (1263↑) ಎನ್‌ಎಸ್‌ಇ 24,231 (388↑)

$1 = ₹93.28

167 ನೇ ದಿನ ಬಲ್ಡೋಟ ತೊಲಗಿಸಿ ಹೋರಾಟ



ಕೊಪ್ಪಳ : ಬಲ್ಡೋಟ ಕಾರ್ಖಾನೆ ಆಗಲು ಸಿಎಂ ಸಿದ್ದರಾಮಯ್ಯ ಬಿಡಬಾರದು, ಅವರಿಗೆ ಜನರ ಸೇವೆಗಿಂತ ದೊಡ್ಡ ಕೆಲಸ ಇನ್ನೇನಿದೆ, ಬಿಟ್ಟರೆ ಸ್ಮಶಾನ ಆಗುತ್ತದೆ ಮತ್ತೆ ಜನಪ್ರತಿನಿಧಿಗಳು ಬಾಂಬೆ ಸೇರಬೇಕಾಗುತ್ತದೆ ಎಂದು ಮಾಜಿ ಸಚಿವ, ಎಂಎಲ್ಸಿ ಎಚ್. ವಿಶ್ವನಾಥ ಆತಂಕ ವ್ಯಕ್ತಪಡಿಸಿದರು.

ಅವರು ನಗರಸಭೆ ಮುಂದುಗಡೆ ನಡೆಯುತ್ತಿರುವ ಬಲ್ಡೋಟ ತೊಲಗಿಸಿ ಕೊಪ್ಪಳ ಉಳಿಸಿ ಹೋರಾಟದ ಅನಿರ್ದಿಷ್ಟವಾದಿ ಧರಣಿ ಸತ್ಯಾಗ್ರಹದ 167ನೇ ದಿನ ವೇದಿಕೆಗೆ ಬಂದು ಹೋರಾಟ ಬೆಂಬಲಿಸಿ ಮಾತನಾಡಿದರು.

167 ದಿನ ನಿರಂತರ ಹೋರಾಟ ಮಾಡೋದು ಅಂದ್ರೆ ಸಾಮಾನ್ಯ ವಿಷಯ ಅಲ್ಲ, ಮಂತ್ರಿ ಶಿವರಾಜ ತಂಗಡಗಿ ಅವರು, ಶಾಸಕರು ತೀವ್ರವಾಗಿ ಸ್ಪಂದಿಸಬೇಕು ಎಂದು ಒತ್ತಾಯಿಸಿದರು.

ಸರ್ವೋಚ್ಚ ನ್ಯಾಯಾಲಯದ ಆದೇಶ ಬಂದಿದೆ, ಜಿಲ್ಲಾಧಿಕಾರಿ ಅವರು ಕೆರೆ ಸಂರಕ್ಷಣೆ ಮಾಡಲು ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡಿದ್ದಾರೆ, ಇಲ್ಲಿ ಅವರೇ ಅದನ್ನು ಮಾರಿದ್ದಾರೆ ಕೂಡಲೇ ಒಂದು ಕೇಸ್ ಹಾಕಿ ಕಾನೂನು ಹೋರಾಟ ಮಾಡಬೇಕು, ವಿರೋಧ ಪಕ್ಷ ಏನು ಮಾಡ್ತಿವೆ, ಆಶೋಕ ಅವರು ಏನು ಮಾಡ್ತಾ ಇದಾರೆ, ಇದಕ್ಕಿಂತ ದೊಡ್ಡ ವಿಷಯ ಬೇಕಾ?, ಈ ಹೋರಾಟಕ್ಕೆ ಬೆಂಬಲ ಇದೆ, ಪರಿಣಾಮಕಾರಿ ಆಗಿ ಮಾಡಿ ಗೆಲ್ಲೋಣ ಎಂದರು.

ವಕೀಲರ ಸಂಘದ ಜಿಲ್ಲಾಧ್ಯಕ್ಷ ಎ.ವಿ. ಕಣವಿ ಮಾತನಾಡಿದರು.

ಧರಣಿಯಲ್ಲಿ ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು, ಸಂಚಾಲಕರಾದ ಮಲ್ಲಿಕಾರ್ಜುನ ಬಿ. ಗೋನಾಳ, ಮಂಜುನಾಥ ಜಿ. ಗೊಂಡಬಾಳ, ಮಹಿಳಾ ನಾಯಕಿಯರಾದ ಸರೋಜಾ ಬಾಕಳೆ, ಕಾವ್ಯಾ ಗಡಾದ, ಜಿಲ್ಲಾ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಹಾದಿಮನಿ, ವಕೀಲರಾದ ಬಿ.ಬಿ ಪಾಟೀಲ್, ಎಚ್.ವೈ ಕಮ್ಮಾರ, ಎನ್. ವಿ ಹಾಳಕೇರಿ, ನಿವೃತ್ತ ಕಾರ್ಮಿಕ ನಿರೀಕ್ಷಕ ಶಾಂತಯ್ಯ ಅಂಗಡಿ, ರಾಜಶೇಖರ ಏಳುಭಾವಿ, ರವಿ ಕಾಂತನವರ, ಬಸವರಾಜ ನರೇಗಲ್, ಎಸ್.ಎಂ ಕಂಬಾಳಿಮಠ, ಶರಣು ಪಾಟೀಲ್, ಶರಣು ಶೆಟ್ಟರ್, ಮಹಾದೇವಪ್ಪ ಮಾವಿನಮಡು, ನರೇಂದ್ರ ಪಾಟೀಲ್, ಯಮನೂರಪ್ಪ ಹಾಲಳ್ಳಿ ಬಸಾಪುರ, ಗುರುರಾಜ ಬಸಾಪುರ, ಹನುಮಂತ ಬಸಾಪುರ, ಬಸವರಾಜಪ್ಪ ಶೆಟ್ಟರ್, ಬಸಪ್ಪ ಕಲಕೇರಿ, ನಾಗರಾಜ ಕುಷ್ಟಗಿ, ಶಿವಪ್ಪ ಹಲಗೇರಿ, ಗುರಪ್ಪ ಕಲಕೇರಿ, ಪತ್ರಕರ್ತ ರುದ್ರಪ್ಪ ಭಂಡಾರಿ, ಮೂಕಪ್ಪ ಮೇಸ್ತ್ರಿ ಬಸಾಪುರ, ಸಂಜೀವದಾಸ್ ಕೌಜಗೇರಿ, ರಾಮಲಿಂಗಯ್ಯ ಶಾಸ್ತ್ರಿ, ಚನ್ನಮ್ಮ ಕಲಕೇರಿ, ವಿಜಯಮಹಾಂತೇಶ ಹಟ್ಟಿ, ಶಿವಪ್ಪ ಜಲ್ಲಿ ಇದ್ದರು.

ಉದ್ಯೋಗಾಕಾಂಕ್ಷಿಗಳಿಗೆ ಬಿಗ್ ರಿಲೀಫ್

ತನಿಖೆಗೆ ಧಾರವಾಡ ಹೈಕೋರ್ಟ್ ತಡೆಯಾಜ್ಞೆ

ಧಾರವಾಡ: ಸರ್ಕಾರಿ ಇಲಾಖೆಗಳ ಖಾಲಿ ಹುದ್ದೆಗಳ ನೇಮಕಾತಿ ವಿಳಂಬ ಖಂಡಿಸಿ ಪ್ರತಿಭಟನೆ ನಡೆಸಿದ್ದ ಉದ್ಯೋಗಾಕಾಂಕ್ಷಿಗಳ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಸಂಬಂಧಿಸಿದಂತೆ ಧಾರವಾಡ ಹೈಕೋರ್ಟ್ ಪೀಠ ಬುಧವಾರ ಮಹತ್ವದ ಆದೇಶ ಹೊರಡಿಸಿದೆ.

ಹುಬ್ಬಳ್ಳಿ-ಧಾರವಾಡ ಪೊಲೀಸ್ ಇಲಾಖೆ ಅಭ್ಯರ್ಥಿಗಳ ವಿರುದ್ಧ ಕೈಗೊಂಡ ಕ್ರಮಕ್ಕೆ ಧಾರವಾಡ ಹೈಕೋರ್ಟ್ ಪೀಠ ಅಸಮಧಾನ ವ್ಯಕ್ತಪಡಿಸುವ ಜೊತೆ ಎಫ್‌ಐಆರ್ ತನಿಖೆಗೆ ಮಧ್ಯಂತರ ತಡೆಯಾಜ್ಞೆ ನೀಡಿರುವುದು ಹೋರಾಟಗಾರರಿಗೆ ಸಮಾಧಾನ ತಂದಿದೆ.

ಪ್ರಕರಣ ಏನು?: ಕಳೆದ ಫೆಬ್ರವರಿಯಲ್ಲಿ ನಡೆದ ಪ್ರತಿಭಟನೆ ವೇಳೆ ಹಿಂಸಾಚಾರ ಮತ್ತು ಪೊಲೀಸರ ಮೇಲಿನ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಕಾಂತಕುಮಾರ್ ಸೇರಿ ಉದ್ಯೋಗಾಕಾಂಕ್ಷಿಗಳ ವಿರುದ್ಧ ವಿವಿಧ ಕಲಂ ಅಡಿಯಲ್ಲಿ ನಾಲ್ಕು ಎಫ್.ಐ.ಆರ್. ದಾಖಲಿಸಿದ್ದರು.

ಈ ಎಫ್‌ಐಆರ್‌ನಿಂದ ತಮ್ಮ ಉದ್ಯೋಗದ ಭವಿಷ್ಯಕ್ಕೆ ತೊಂದರೆಯಾಗುತ್ತದೆ ಎಂದು ಆತಂಕಗೊಂಡಿದ್ದ ಅಭ್ಯರ್ಥಿಗಳು ಎಫ್.ಐ.ಆರ್. ರದ್ದುಗೊಳಿಸಲು ಕೋರಿ ಹೈಕೋರ್ಟ್ ಮೊರೆ ಹೋಗಿದ್ದರು. ವಿಚಾರಣೆ ನಡೆಸಿದ ಪೀಠವು ತಡೆಯಾಜ್ಞೆ ನೀಡಿದೆ.

ಅರ್ಜಿದಾರರ ಪರ ವಾದ: ಪ್ರತಿಭಟನೆ ಪ್ರತಿಯೊಬ್ಬರ ಹಕ್ಕು. ಪೊಲೀಸರು ವಿವೇಚನೆ ಇಲ್ಲದೆ ಹೋರಾಟಗಾರರ ಮೇಲೆ ಎಫ್.ಐ.ಆರ್. ದಾಖಲಿಸಿದ್ದಾರೆ. ಈ ಎಫ್.ಐ.ಆರ್ ರದ್ದುಗೊಳಿಸುವಂತೆ ಅರ್ಜಿದಾರರ ಪರ ವಕೀಲ ಗಿರೀಶ ಭಾರದ್ವಾಜ ನ್ಯಾಯಪೀಠದ ಮುಂದೆ ವಾದ ಮಂಡಿಸಿದರು.

ನ್ಯಾಯಪೀಠದ ಅಭಿಮತ: ಅರ್ಜಿ ಆಲಿಸಿದ ನ್ಯಾಯಪೀಠವು ತನಿಖೆಯ ಹೆಸರಿನಲ್ಲಿ ಅಭ್ಯರ್ಥಿಗಳ ಭವಿಷ್ಯಕ್ಕೆ ತೊಂದರೆಯಾಗಬಾರದು ಎಂದು ಅಭಿಪ್ರಾಯಪಟ್ಟಿತು. ಮುಂದಿನ ಆದೇಶದವರೆಗೆ ಪೊಲೀಸರು ದಾಖಲಿಸಿರುವ ಎಫ್‌ಐಆರ್. ಮೇಲಿನ ಮುಂದಿನ ಕ್ರಮಗಳಿಗೆ ತಡೆ ನೀಡಿತು.

ತಡೆಯಾಜ್ಞೆ ಉದ್ಯೋಗಾಕಾಂಕ್ಷಿಗಳ ಹೋರಾಟಕ್ಕೆ ದೊರೆತ ದೊಡ್ಡ ಜಯ. ಪೊಲೀಸ್ ಇಲಾಖೆ ಹೋರಾಟ ಹತ್ತಿಕ್ಕುವ ಪ್ರಯತ್ನ ಮಾಡುತ್ತಿದೆ. ಮುಂದಿನ ದಿನಗಳಲ್ಲಿ ಕೋರ್ಟ್ ಅನುಮತಿ ಪಡೆದು ಹೋರಾಟ ಮಾಡುವುದಾಗಿಯೂ ಕಾಂತಕುಮಾರ ತಿಳಿಸಿದರು.

ನ್ಯಾಯಾಲಯವು ಹೋರಾಟಗಾರರ ಹಕ್ಕನ್ನು ಮಾನ್ಯ ಮಾಡಿದ್ದರೂ, ಕಾನೂನು ಕೈಗೆತ್ತಿಕೊಳ್ಳದಂತೆ ಎಚ್ಚರಿಕೆ ನೀಡಿದೆ. ತಡೆಯಾಜ್ಞೆಯು ಈ ಪ್ರಕರಣದ ಅಂತಿಮ ತೀರ್ಪಿನವರೆಗೂ ಚಾಲ್ತಿಯಲ್ಲಿ ಇರಲಿದೆ ಎಂದು ಹೈಕೋರ್ಟ್ ಪೀಠ ಆದೇಶದಲ್ಲಿ ತಿಳಿಸಿದೆ.

> **ತನಿಖೆಗೆ ಬ್ರೇಕ್:** ತಡೆಯಾಜ್ಞೆಯಿಂದಾಗಿ ಪೊಲೀಸರು ಸದ್ಯಕ್ಕೆ ಅಭ್ಯರ್ಥಿಗಳನ್ನು ವಿಚಾರಣೆಗೆ ಕರೆಯುವಂತಿಲ್ಲ ಅಥವಾ ಬಂಧಿಸುವಂತಿಲ್ಲ.
>
> **ಉದ್ಯೋಗ ಭವಿಷ್ಯ:** ಎಫ್‌ಐಆರ್ ದಾಖಲಾಗಿದ್ದರಿಂದ ಪೊಲೀಸ್ ವೆರಿಫಿಕೇಶನ್ ಸಮಯದಲ್ಲಿ ತೊಂದರೆಯಾಗುವ ಆತಂಕದಲ್ಲಿದ್ದ ಅಭ್ಯರ್ಥಿಗಳಿಗೆ ಈ ಆದೇಶ ವರದಾನವಾಗಿದೆ.
>
> **ಸರ್ಕಾರಕ್ಕೆ ನೋಟಿಸ್:** ಈ ಕುರಿತು ವಿಸ್ತೃತ ವರದಿ ಸಲ್ಲಿಸುವಂತೆ ರಾಜ್ಯ ಸರ್ಕಾರ ಮತ್ತು ಪೊಲೀಸ್ ಇಲಾಖೆಗೆ ನ್ಯಾಯಾಲಯ ಸೂಚನೆ ನೀಡಿದೆ.

ಸಾಮೂಹಿಕ ಉಪನಯನ ಕಾರ್ಯಕ್ರಮ



ಹುಬ್ಬಳ್ಳಿ: ನಗರದ ನವಯುಗ ಸಂಘಟನೆ ಹಾಗೂ ಪ್ರಹ್ಲಾದ ಜೋಶಿ ಅವರ ಕ್ಷಮತಾ ಸೇವಾ ಸಂಸ್ಥೆ ಸಹಯೋಗದಲ್ಲಿ ಮೇ 10 ರಂದು 24ನೇ ಬೃಹತ್ ಸರ್ವಧರ್ಮ ಉಚಿತ ಸಾಮೂಹಿಕ ಉಪನಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ನವಯುಗ ಸಂಘಟನೆ ಅಧ್ಯಕ್ಷ ಕೃಷ್ಣಾ ಗಂಡಗಾಳೆಕರ ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಗೋಕುಲ ರಸ್ತೆಯ ಅಕ್ಷಯ ಪಾರ್ಕ್ ಎದುರುಗಡೆಯ ಸಂತೆ ಮೈದಾನದಲ್ಲಿ ನಡೆಯಲಿದೆ. 40 ಜೋಡಿ ಸಾಮೂಹಿಕ ವಿವಾಹ ಮಾಡಲು ನಿರ್ಧರಿಸಿದ್ದು, 10 ಜನ ನೋಂದಣಿ ಹಾಗೂ 25 ಜನ ಉಪನಯನ ಮಾಡಲು ನಿರ್ಧರಿಸಿದ್ದು, 5 ಜನರು ನೋಂದಣಿ ಮಾಡಿಸಿದ್ದಾರೆ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕು ಎಂದರು.

ಸಾನಿಧ್ಯ ಮೂರುಸಾವಿರಮಠದ ಗುರುಸಿದ್ಧರಾಜಯೋಗೀಂದ್ರ ಸ್ವಾಮೀಜಿ, ರುದ್ರಾಕ್ಷಿ ಮಠದ ಬಸವಲಿಂಗ ಸ್ವಾಮೀಜಿ, ಗೌರಿ ಗದ್ದೆ ಆಶ್ರಮದ ವಿನಯ ಗುರು ಸಾನಿಧ್ಯ ವಹಿಸುವರು. ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಶಾಸಕ ಮಹೇಶ ಟೆಂಗಿನಕಾಯಿ ಅತಿಥಿಯಾಗಿ ಭಾಗವಹಿಸುವರು. ವಿವಾಹ ಆಗುವ ವಧು ವರರಿಗೆ ಬಂಗಾರ ತಾಳಿ, ಎರಡು ಗುಂಡು, ಬೆಳ್ಳಿ ಕಾಲುಂಗರ, ಸೀರೆ ರವಿಕೆ, ವರನಿಗೆ ಪಂಚೆ, ಶರ್ಟ್, ಟೋಪಿ ಹಾಗೂ ಬಾಸಿಂಗ್ ನೀಡಲಾಗುವುದು. ರಾಜ್ಯ ಸರ್ಕಾರದಿಂದ ವಿವಾಹ ಆದರ್ಶ ಅಡಿಯಲ್ಲಿ 10 ಸಾವಿರ ಹಾಗೂ ಸರಳ ವಿವಾಹ ಯೋಜನೆಯಡಿ ಪರಿಶಿಷ್ಟ ಜಾತಿ ಹಾಗೂ ಪಂಗಡ ನವಜೋಡಿಗಳಿಗೆ 50 ಸಾವಿರ ಹಾಗೂ ಅಂತರ ಜಾತಿ 3 ಲಕ್ಷ ಸೌಲಭ್ಯ ದೊರೆಯಲಿದೆ. ಆದರೆ ಸರ್ಕಾರದ ಕಳೆದ 2 ವರ್ಷದಿಂದ ಪರಿಶಿಷ್ಟ ಜಾತಿ ಹಾಗೂ ಪಂಗಡ ನವಜೋಡಿಗಳಿಗೆ ಒಂದು ರೂಪಾಯಿ ನೀಡಿಲ್ಲ. ಈ ಬಗ್ಗೆ ಸರ್ಕಾರದ ಗಮನ ಸೆಳೆಯಲಾಗುವುದು ಎಂದು ತಿಳಿಸಿದರು. ಮುಖಂಡರಾದ ಪ್ರಕಾಶ ಕ್ಯಾರಕಟ್ಟಿ, ಸುಬ್ರಹ್ಮಣ್ಯ ಶಿರಕೋಳ, ರವಿ ನಾಯಕ, ನಾಗರಾಜ ಕಲಾಲ ಇದ್ದರು.

ಕೋರ್ಟ್ ಆವರಣದಲ್ಲೇ ರೌಡಿ ಶೀಟರ್ ಅಟ್ಟಹಾಸ

ಬೆಳಗಾವಿ : ಬೆಳಗಾವಿಯಲ್ಲಿ ರೌಡಿ ಶೀಟರ್ ಲಕ್ಷ್ಮಣ ದಡ್ಡಿ ಅಟ್ಟಹಾಸ ಮೆರೆದು ಮಧ್ಯಮಗಳ ಪ್ರತಿನಿಧಿಗಳ ಮೇಲೆ ಹಲ್ಲೆ ನಡೆಸಿ ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿರುವ ಘಟನೆ ಗುರುವಾರ ಸಂಜೆ ವೇಳೆ ಬೆಳಗಾವಿ ಕೋರ್ಟ್ ಆವರಣದಲ್ಲಿ ನಡೆದಿದೆ.

ಪೊಲೀಸರ ಮುಂದೆಯೇ ರೌಡಿಗಳ ರಾಕ್ಷಸಿ ಪ್ರವೃತ್ತಿಯನ್ನು ವರ್ತನೆ ಮಾಡಿದ್ದಾನೆ. ಬೆಳಗಾವಿಯಲ್ಲಿ ರೌಡಿಶೀಟರ್‌ಗಳ ಪುಂಡಾಟಿಕೆ ಮಿತಿಮೀರಿದೆ. ಶಹಬಾಜ್ ಪಠಾಣ್ ಕೊಲೆ ಪ್ರಕರಣದ ವಿಚಾರಣೆಗೆ ಬಂದಿದ್ದ ರೌಡಿಶೀಟರ್‌ಗಳು, ನ್ಯಾಯಾಲಯದ ಆವರಣದಲ್ಲೇ ಕರ್ತವ್ಯ ನಿರತ ಮಾಧ್ಯಮ ಪ್ರತಿನಿಧಿಗಳ ಮೇಲೆ ಹಲ್ಲೆ ನಡೆಸಿ, ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಲಾಗಿದೆ.

ಶಹಬಾಜ್ ಪಠಾಣ್ ಕೊಲೆಪ್ರಕರಣಕ್ಕೆಸಬಂಧಿಸಿದಂತೆ ಬೆಳಗಾವಿ ಎರಡನೇ ಜಿಲ್ಲಾ ಹೆಚ್ಚುವರಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿ ಶಿಕ್ಷೆ ಪ್ರಕಟಿಸುವ ಬಾಕಿ ಉಳಿದು ಹಿಂಡಲಗಾ ಜೈಲಿಗೆ ರವಾನೆ ಮಾಡುವ ವೇಳೆ ಮಾಧ್ಯಮಗಳ ಕ್ಯಾಮರಾ ಮೆನ್ ಗಳು ವಿಡಿಯೋ ಶೂಟಿಂಗ್ ಮಾಡಿಕೊಳ್ಳುತ್ತಿದ್ದಂತೆಯೇ ರಾಕ್ಷಸ ಪ್ರವೃತ್ತಿ ತೋರಿದ್ದಾನೆ. ಲಕ್ಷ್ಮಣ ದಡ್ಡಿ, ಸವೀನ ದಡ್ಡಿ, ಬಸವರಾಜ ದಡ್ಡಿ, ಬಸವಣ್ಣಿ ನಾಯಕ ಮಾಳಮಾರುತಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರು ಪಡಿಸಿ ಬಳಿಕ ಮರಳಿ ಜೈಲಿಗೆ ಕರುಳಿಸುವಾಗ ಈ ಘಟನೆ ನಡೆದಿದೆ.

ಮಾರ್ಕೆಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು ರೌಡಿಶೀಟರ್ ವಿರುದ್ಧ ಬೆಳಗಾವಿ ಪತ್ರಕರ್ತರು ಆಕ್ರೋಶವನ್ನು ಹೊರಹಾಕಿ ಆರೋಪಿ ವಿರುದ್ಧ ಸೂಕ್ತ ಕಾನೂನಿನ ಕ್ರಮ ಕೈಗೊಳ್ಳುವಂತೆ ಪೊಲೀಸರ ಮುಖಾಂತರ ನ್ಯಾಯಾಲಯಕ್ಕೆ ಮನವಿ ಆಗ್ರಹಿಸಿದರು.

ಕಾರು ಅಪಘಾತ ಸಿಪಿಐ ರಘುನಾಥ ಸಾವು



ವಿಜಯನಗರ: ಮರಕ್ಕೆ ಕಾರು ಡಿಕ್ಕಿ ಹೊಡೆದು ಜಿಲ್ಲಾ ಪೊಲೀಸ್ ಇಲಾಖೆಯ ಡಿಸಿಆರ್ ಘಟಕದ ಸಿಪಿಐ ರಘುನಾಥ್ ಸ್ಥಳದಲ್ಲೇ ಮೃಪಟ್ಟರುವ ಘಟನೆ ವಿಜಯನಗರ-ದಾವಣಗೆರೆ ಗಡಿ ಭಾಗದ ಮುಸ್ಟೂರು-ಕಡಬನಕಟ್ಟೆ ಮಧ್ಯೆ ಘಟನೆ ಬುಧವಾರ ನಡೆದಿದೆ. ಸಿಪಿಐ ರಘುನಾಥ್ ಅವರು 3 ದಿನಗಳ ಹಿಂದೆಯಷ್ಟೇ ರಜೆ ಪಡೆದಿದ್ದರು. ಪತ್ನಿ ತವರೂರಾದ ಚಿತ್ರದುರ್ಗ ಜಿಲ್ಲೆಯ ಆಯಿಕಲ್ ಗ್ರಾಮಕ್ಕೆ ತೆರಳಿದ್ದರು. ಅಲ್ಲಿಂದ ಮುಸ್ಟೂರು ಮಾರ್ಗವಾಗಿ ಹೊಸಪೇಟೆಗೆ ವಾಪಸ್ಸಾಗುತ್ತಿರುವಾಗ ಕಾರು ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ.ಚಿತ್ರದುರ್ಗ ಜಿಲ್ಲೆ ಬರಮಸಾಗರ ರಘುನಾಥ ಅವರ ಸ್ವಗ್ರಾಮವಾಗಿದ್ದು, ತಾಯಿ, ಪತ್ನಿ ಹಾಗೂ ಓರ್ವ ಪುತ್ರ ಚಿತ್ರದುರ್ಗ ನಗರದ ಬ್ಯಾಂಕ್ ಕಾಲೋನಿಯಲ್ಲಿ ವಾಸವಿದ್ದಾರೆ.ರಘುನಾಥ ಅವರ ನಿಧನಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಾಹ್ನವಿ ಎಸ್., ಹೊಸಪೇಟೆ ವಿಭಾಗದ ಡಿವೈಎಸ್‌ಪಿ ಟಿ.ಮಂಜುನಾಥ, ಡಿಸಿಆರ್ ಘಟಕದ ಡಿವೈಎಸ್ಪಿ ವಿಶ್ವನಾಥ ಕುಲ್ಕರ್ಣಿ ಸೇರಿದಂತೆ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಸಂತಾಪ ಸೂಚಿಸಿದ್ದಾರೆ.

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ(ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	2271	3029
ಕಡಲೆಕಾಳು	1830	5665
ಉದ್ದಿನಕಾಳು	4019	7429
ಒಣ ಮೆಣಸಿನಕಾಯಿ	3399	60116
ಹೆಸರುಕಾಳು	1210	6100
ನೆಲಗಡಲೆ (ಶೇಂಗಾ)	2800	6600
ಜೋಳ	1529	4251
ಮೆಕ್ಕೆಜೋಳ	1506	1875
ಮಡಿಕೆ (ಮಟಕಿ)	7501	13431
ಸಾಸುವೆ	4329	4431
ನವಣೆ	2081	2081
ಈರುಳ್ಳಿ	400	2000
ಆಲೂಗಡ್ಡೆ	1100	1700
ಕುಸುಬೆ	5489	5556
ಸೋಯಾಬಿನ್	4410	5570
ಸೂರ್ಯಕಾಂತಿ	5659	5659
ತೊಗರಿ	2029	4229
ಗೋಧಿ	1739	2529

CHANGE OF NAME

I, **ANANDA KUMBHAR** (Old Name) Resident of #262 Nangnur Road Yamagamni, Chikodi Belgaum, Karnataka 591241, have changed my name as **ANAND JOTIRAM KUMBHAR** (New Name) henceforth I will be called and recognized by new name for all future purposes, dated: 15/04/2026.

CHANGE OF NAME

I, **ASHOK LAXMANASA MEHARWADE** (Old Name) Resident of #5/14, Kalyan Nagar Vidya Nagar, 2nd Cross Ganesh Colony, Hubli Eng College, Dharwad Kanataka - 580031, have changed my name as **ASHOK MEHARWADE** (New Name) henceforth I will be called and recognized by new name for all future purposes, dated: 15/04/2026.

CHANGE OF NAME

I, **DHARA NILKANTH DHONGADI** (Old Name) Resident of H No: 27, Mudugal Layout Kusugal Road, Keshwapur, Hubli, Dharwad, State: Karnataka, Pin Code: 580023, have changed my name as **DHARA ANKIT PUJARI** (New Name) henceforth I will be called and recognized by new name for all future purposes, dated: 13/04/2026.

CHANGE OF NAME

I, **Mahadev N Kulkarni** Residing at Munyal, Taluk: Mudalagi, District: Belagavi, I state that my correct name is **Mahadev N Kulkarni.** I state that my name is recorded as **Mahadev N Kulkarni** in my Aadhaar Card and I state that in the Share Certificate issued by Godavari Biorefineries Ltd, my name is mentioned as **Madhav Narayan Kulkarni**. I state that **Mahadev N Kulkarni** and **Madhav Narayan Kulkarni** are one and the same person, i.e., myself, I further state that the name **Madhav Narayan Kulkarni** mentioned in the share certificate is due to spellig/clerical mistake, and my correct name is **Mahadev N Kulkarni.** for all purposes affidavit Dtd.: 13-03-2026 sworn before notary **S. S. Godgoudar.**

CHANGE OF NAME

I, **MAIMUNA MUNAVAR SIDDIBAPA** (Old Name) R/o. Plotkeri Upponi Honnavar, have changed my name as **MAIMUNA MUNWARA SIDDHIBAPA** (New Name) henceforth I will be called and recognized by new name for all future purposes, dated: 15/04/2026.

CHANGE OF NAME

I, **MEENAXI D/O. SURESH BADDI** (Old Name) Resident of H.No. 60, Rajadhani Colony, Green Garden, Gokul Road, Hubballi, have changed my name as **Smt. PRIYA W/o. RAGHAVENDRA REVANKAR** (New Name) for all purposes affidavit Dtd.: 15-06-2016 sworn before notary **H. G. Inamdar**.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕ.ನೀ.ನಿ.ನಿ., ಮಬದಕಾನಿ ವಿಭಾಗ ನಂ. 3 ಬ್ಯಾಹಟ್ಟಿ, ತಾ : ಹುಬ್ಬಳ್ಳಿ ಜಿ : ಧಾರವಾಡ 580023 ಫೋನ್ : 0836-2315225 ಫ್ಯಾಕ್ಸ್ : 2315226 e-mail : eemrbcc3byt@gmail.com

ಸಂ.ಕನೀನಿನಿ/ಮಬದವಿ-3/ಎ.ಇ-2/ಇ-ಟೆಂಡರ/2026-27/58

ದಿನಾಂಕ : 15-04-2026

ಟೆಂಡರ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ ಪೊರ್ಟಲ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರುರವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್ ಕನೀನಿನಿ, ಮಬದಕಾನಿ ವಿಭಾಗ ಸಂ.3, ಬ್ಯಾಹಟ್ಟಿ ವ್ಯಾಪ್ತಿಯ 4701 ಲೆಕ್ಕಶೀರ್ಷಿಕೆ ಅಡಿ ಈ ಕೆಳಗೆ ನಮೂದಿಸಿರುವ ಇಂಡೆಂಟ ನಂಬರಿನ 01 ಕಾಮಗಾರಿಗೆ ಶೇಕಡಾವಾರು ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಇ-ಪ್ರೋಕ್ಯೂರಮೆಂಟ ಮೂಲಕ ಆಹ್ವಾನಿಸಲಾಗಿದೆ.

Indent No :- 4043, ಕಾಮಗಾರಿಯ ಅಂದಾಜು ಮೊತ್ತ ರೂ. **100.00** ಲಕ್ಷಗಳು, ಇ.ಎಂ.ಡಿ ಮೊತ್ತ : ರೂ. **1,69,500/-**

ಇ-ಪೋರ್ಟಲ್ ಮೂಲಕ ಟೆಂಡರನ್ನು ದಿನಾಂಕ : **06/05/2026** ರ 4.00 pm ತನಕ ಸಲ್ಲಿಸಬಹುದಾಗಿದೆ. ಬಿಡ್ ತೆರೆಯುವ ದಿನಾಂಕ : **08/05/2026** ರಂದು ಮುಂಜಾನೆ 11.00 am ರಿಂದ ಹಾಗೂ ಕಾಮಗಾರಿವಾರು ಇತರೆ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ ಪೋರ್ಟಲ್ ವೆಬ್‌ಸೈಟ್ ಮುಖೇನ http://kppp.karnataka.gov.in ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ : **0836-2315225** ನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಕನೀನಿನಿ, ಮಬದಕಾನಿ ವಿಭಾಗ ನಂ.3
ಬ್ಯಾಹಟ್ಟಿ

ವಾಸಾಸಂಇ/ಧಾ/ಕೆಎಸ್‌ಎಂಸಿಎ/58/2026-27

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತುಕುಟುಂಬ ಕಲ್ಯಾಣ ಇಲಾಖೆ

ಜಿಲ್ಲಾ ಅಂಧತ್ವ ನಿವಾರಣಾಧಿಕಾರಿಗಳ ಕಛೇರಿ ವಿಜಯನಗರ ಜಿಲ್ಲೆ,ಹೊಸಪೇಟೆ-583201 ದೂರವಾಣಿ ಸಂಖ್ಯೆ : 9449842086

ಈಮೇಲ್:dlovijayanagara@gmail.com

ಸಂಖ್ಯೆ:ಜಿ.ಅ.ನಿ.ಕಾ /05/2026-27 ದಿನಾಂಕ: 10.04.2026

ತಿದ್ದುಪಡಿ ಟೆಂಡರ್ ಪ್ರಕಟಣೆ

ದಿನಾಂಕ 2.04.2026 ರಂದು ಇದೇ ದಿನಪತ್ರಿಕೆಯಲ್ಲಿ ಹೊರಡಿಸಲಾದ ಟೆಂಡರ್ ಅಧಿಸೂಚನೆ **(DHFWS/2025-26/PREQUAL_TENDER_NUMBER_90)** ರ ವೇಳಾಪಟ್ಟಿಯನ್ನು ಈ ಕೆಳಗೆ ನಮೂದಿಸಿದಂತೆ ಪರಿಷ್ಕತಗೊಳಿಸಲಾಗಿದೆ.

ಟೆಂಡರ್ ಸಲ್ಲಿಸಲು ನಿಗದಿಪಡಿಸಿರುವ ಪ್ರಸ್ತುತ ವೇಳಾಪಟ್ಟಿ: ದಿನಾಂಕ:31-03-2026 ರಿಂದ ದಿನಾಂಕ:15-04-2026 ರ ಸಮಯ ಸಾಯಂಕಾಲ 05:00 ಗಂಟೆಯವರೆಗೆ
ಟೆಂಡರ್ ಸಲ್ಲಿಸಲು ನಿಗದಿಪಡಿಸಿರುವ ಪರಿಷ್ಕತ ವೇಳಾಪಟ್ಟಿ: ದಿನಾಂಕ:08-04-2026 ರಿಂದ ದಿನಾಂಕ:24-04-2026 ರ ಸಮಯ ಸಾಯಂಕಾಲ 05:00 ಗಂಟೆಯವರೆಗೆ
ಷರಾ: ಉಳಿದಂತೆ ಯಾವುದೇ ಬದಲಾವಣೆಗಳು ಇರುವುದಿಲ್ಲ

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 9449842086 ಕಛೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ಮುದ್ದಾಂ ಪಡೆಯಬಹುದಾಗಿದೆ.

ಸಹಿ/-ಜಿಲ್ಲಾ ಅಂಧತ್ವ ನಿವಾರಣಾ ಅಧಿಕಾರಿಗಳು, ವಿಜಯನಗರ ಜಿಲ್ಲೆ.

ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/23

ನಗರಸಭಾ ಕಾರ್ಯಾಲಯ ಹೊಸಪೇಟೆ.

ಕ್ರಸಂ/ನಸಹೊ/ನೀಸ/ಕೋಟೇಷನ್/03 /2025-2026 ದಿನಾಂಕ:13-04-2026

ಕೋಟೇಷನ್ ಪ್ರಕಟಣೆ

ಹೊಸಪೇಟೆ ನಗರಸಭೆ ವ್ಯಾಪ್ತಿಗೆ ಬರುವ ವಾರ್ಡ ಸಂಖ್ಯೆ 01 ರಿಂದ 35 ವರೆಗಿನ ಎಲ್ಲಾ ಮನೆಗಳು, ವಾಣಿಜ್ಯ ಕಟ್ಟಡಗಳು, ಹಾಗೂ ಕೈಗಾರಿಕ ಕಟ್ಟಡಗಳ ನೀರು ಸರಬರಾಜುಗೆ ಸಂಭದಿಸಿದಂತೆ ವೆಬ್ ಆಧಾರಿತ ನೀರಿನ ಬಿಲ್ಲಿಂಗ್ ಮತ್ತು ಕಂದಾಯ ನಿರ್ವಹಣೆ ಮಾಡಲು ಸಾಫ್ಟ್ ವೇರ್ ನ್ನು ಅಭಿವೃದ್ಧಿಪಡಿಸಿ ಹಾಗೂ ನಿರ್ವಹಣೆ ಮಾಡಲು ಮಾರ್ಕೆಟ್ ಧರಗಳನ್ನು ಪಡೆಯಲು ಕೋಟೇಷನ್ ಕರೆಯಲಾಗಿದ್ದು, ಇಚ್ಛೆವುಳ್ಳ ಏಜೆನ್ಸಿದಾರರು ತಮ್ಮ ಕೋಟೇಷನ್ ದರಗಳನ್ನು (ಜಿ.ಎಸ್.ಟಿಸಹಿತ) ದಿನಾಂಕ :20/04/2026 ರಂದು ಸಂಜೆ 04:30 ರ ಒಳಗಾಗಿ ಪೌರಾಯುಕ್ತರು ನಗರಸಭೆರವರ ಹೆಸರಿಗೆ ವಿಳಾಸಿಸಿ ಸಲ್ಲಿಸತಕ್ಕದ್ದು.

ಸೂಚನೆ: 1)ಸಮಯ ಮೀರಿಸಲ್ಲಿಸಿದ ಕೋಟೇಷನ್‌ಗಳನ್ನು ತಿರಸ್ಕರಿಸಲಾಗುವುದು 2)ಹೆಚ್ಚಿನ ಮಾಹಿತಿಗಾಗಿ ಕಾರ್ಯಾಲಯದ ವೇಳೆಯಲ್ಲಿ ತಾಂತ್ರಿಕ ಶಾಖೆಯ ನೀರು ಸರಬರಾಜು ವಿಭಾಗವನ್ನು ಸಂಪರ್ಕಿಸಿ .

ಸಹಿ/-ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ನಗರಸಭೆ ಹೊಸಪೇಟೆ.
ಸಹಿ/-ಪೌರಾಯುಕ್ತರು, ನಗರಸಭೆ ಹೊಸಪೇಟೆ.

ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/26

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ಗದಗ ವಿಭಾಗ, ಗದಗ

ಸಂಖ್ಯೆ/ವಾಕರಸಾ/ಗವಿ/ಸಂಚಾರ/ವಾಣಿಜ್ಯ:129/26-27 ದಿನಾಂಕ: 13-04-2026

ಇ-ಟೆಂಡರ್ ಪ್ರಕಟಣೆ ಸಂಖ್ಯೆ :05/2026 (ಕೆ.ಪಿ.ಪಿ ಪೋರ್ಟಲ್ ಮೂಲಕ)

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಗದಗ ವಿಭಾಗದ ವ್ಯಾಪ್ತಿಗೆ ಬರುವ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ, ಮತ್ತು ಖಾಲಿಯಾಗಲಿರುವ ವಾಣಿಜ್ಯ ಮಳಿಗೆಗಳಿಗೆ ಹಾಗೂ ಬಸ್ ನಿಲ್ದಾಣಗಳಾದ ನರಗುಂದ, ಕೊಣ್ಣುರು, ಮುಂಡರಗಿ, ಗಜೇಂದ್ರಗಡ, ನರೇಗಲ್, ಹೊಳೆಆಲೂರ ಬಸ್ ನಿಲ್ದಾಣಗಳಲ್ಲಿರುವ ವಿಶಾಲವಾದ (501 ಚ.ಅ ಮೇಲ್ಪಟ್ಟ ವಿಸ್ತೀರ್ಣದ) ತೆರೆದ ಸ್ಥಳ/ನಿವೇಶನಗಳಲ್ಲಿ ಶಾಪಿಂಗ್ ಕಾಂಪ್ಲೆಕ್ಸ್, ಗೋಡೋನ್, ಸೂಪರ್ ಮಾರ್ಕೆಟ್ ಮತ್ತು ಇತರೆ ಕಾನೂನಾತ್ಮಕ ವ್ಯವಹಾರ ಮಾಡಲು ಹತ್ತು(10) ವರ್ಷದ ಅವಧಿಗೆ ಪರವಾನಗಿದಾರರನ್ನು ಲೈಸನ್ಸ್ ಆಧಾರದ ಮೇಲೆ ಆಯ್ಕೆಗೊಳಿಸಲು, (ಕೊಟೇಷನ್) ಇ-ವೇದಿಕೆಯ Karnataka Public Procurement Portal (KPP Portal) ಮೂಲಕ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ದಸ್ತಾವೇಜಗಳನ್ನು ಇ-ಪ್ರೊಕ್ಯೂರಮೆಂಟ್ ವೆಬ್‌ಸೈಟ್ ವಿಳಾಸ: **"http/www.kppp.karnataka.gov.in/#/portal-home"** ಮೂಲಕ ಡೌನಲೋಡ್ ಮಾಡಿಕೊಳ್ಳಬಹುದು. ನಿಗದಿತ ದಾಖಲಾತಿಗಳೊಂದಿಗೆ **ದಿನಾಂಕ: 05-05-2026 ರಂದು 17:00 ಗಂಟೆಯವರೆಗೆ** ಆನ್‌ಲೈನ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದ್ದು, ಇ-ಪ್ರೊಕ್ಯೂರಮೆಂಟ್ ಸೆಲ್‌ನಿಂದ DSC(Digital Signature Certificate) ಪಡೆದಿರುವ ಅಧಿಕೃತ ಅಭ್ಯರ್ಥಿಗಳು ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. **ದಿನಾಂಕ: 07-05-2026 ರಂದು ಬೆಳಗ್ಗೆ 11.00 AM ಗಂಟೆಗೆ** ಟೆಂಡರ್ ತೆರೆಯಲಾಗುವದು. (ಯಾವುದೇ ತಾಂತ್ರಿಕ ದೋಷವಿಲ್ಲದಿದ್ದಲ್ಲಿ). ಹೆಚ್ಚಿನ ವಿವರಗಳಿಗಾಗಿ ಹೆಲ್ಪಡೆಸ್ಕ್ ಸಂಖ್ಯೆ: **91+8046010000, 8068948777** ನ್ನು ಸಂಪರ್ಕಿಸಿ ಅಥವಾ ವಿಭಾಗೀಯ ಕಚೇರಿ, ವಾ.ಕ.ರ.ಸಾ ಸಂಸ್ಥೆ ಗದಗ ವಿಭಾಗ ಗದಗ ಇವರಲ್ಲಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: **7760991802** (ವಿಭಾಗೀಯ ಸಂಚಲನಾಧಿಕಾರಿಗಳು), **9986802447/7026047644** (ವಿಷಯ ನಿರ್ವಾಹಕ) ರವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಇ-ಟೆಂಡರ್‌ನಲ್ಲಿ ಭಾಗವಹಿಸುವವರು ಇ-ಟೆಂಡರ್ ಪ್ರಕಟಣೆ ಸಂಖ್ಯೆ: 05/2026ರ ಮತ್ತು ಇ-ಟೆಂಡರ್ Document ನಲ್ಲಿ ನಮೂದಿಸಿದ ಷರತ್ತು ಮತ್ತು ನಿಭಂದನೆಗಳಿಗೆ ಭದ್ದರಾಗಿರತಕ್ಕದ್ದು. ಕಾರಣ ನೀಡದೇ ಇ-ಟೆಂಡರ್‌ನಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ಆಯ್ಕೆ ಮಾಡುವ ಅಥವಾ ಇ-ಟೆಂಡರ್ ಪ್ರಕಟಣೆಯನ್ನು ಮುಂದೂಡುವ, ಮಾರ್ಪಾಡು ಮಾಡುವ ಅಥವಾ ಪ್ರಕಟಣೆಯನ್ನು ರದ್ದುಪಡಿಸುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.

ಸಹಿ/
ವಿಭಾಗೀಯ ನಿಯಂತ್ರಣಾಧಿಕಾರಿ,
ವಾ.ಕ.ರ.ಸಾ ಸಂಸ್ಥೆ: ಗದಗ ವಿಭಾಗ,
ಗದಗ

ವಾ.ಸಾ.ಇ./ಗದಗ/23/2026-27/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ, ಉತ್ತರ ಕನ್ನಡ

ದೂರವಾಣಿ: 08384-226381 ಇ-ಮೇಲ್: ee_zpedsirsi@yahoo.co.in

ಕ್ರ.ಸಂ: ಪಂ.ರಾ.ಇಂ/ವಿಶಿ/ಪಿ.ಬಿ-1/ಟೆಂಡರ್-44/CMIDP/2025-26/37

ದಿನಾಂಕ: 09-04-2026

ಟೆಂಡರ್ ಪ್ರಕಟಣೆ 44/2025-26 (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನವಿಕೃತ ನೊಂದಾಯಿತ 2019-20ನೇ ಸಾಲಿನ ನವಿಕೃತ ನೋಂದಾಯಿಸಿದ ಅರ್ಹ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ CMIDP ಯೋಜನೆಯಡಿ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನಂತೆ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ http://www.kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿ ಹೆಸರು: SC Category: (1) RDPR/2026-27/RD/WORK_INDENT25946
ST Category: (2) RDPR/2026-27/BD/WORK_INDENT25915
Others Category: (3) (3) RDPR/2026-27/BD/WORK_INDENT25917 (4) RDPR/2026-27/BD/WORK_INDENT25931 (5) RDPR/2026-27/BD/WORK_INDENT25930 (6) RDPR/2026-27/BR/WORK_INDENT25944 (7) RDPR/2026-27/BD/WORK_INDENT25914

(1) ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 28-04-2026 ರ ಸಂಜೆ 16.00 ಘಂಟೆವರೆಗೆ (2) ಟೆಂಡರನ್ನು ತೆರೆಯುವ ದಿನಾಂಕ: 29-04-2026 ಸಂಜೆ 16.30 ಘಂಟೆಗೆ (ಸಾಧ್ಯವಾದಲ್ಲಿ) ಹೆಚ್ಚಿನ ವಿವರಗಳನ್ನು www.kppp.karnataka.gov.in ವೆಬ್‌ಸೈಟಿನಲ್ಲಿ ಅಥವಾ ಈ ಕಚೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ

DIPR/KWR/KSMCA/47/25-26 dt.15.04.2026

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಸಹಾಯಕ ನಿರ್ದೇಶಕರ ಕಛೇರಿ

ಹರಿದೇವ ನಗರ ಹಬ್ಬುವಾಡ ಕಾರವಾರ, ಉತ್ತರ ಕನ್ನಡ-581306
ದೂರವಾಣಿ ಸಂಖ್ಯೆ: 9480886551
Email ID: dysskar@gmail.com

ಸಂಖ್ಯೆ:ಸನಿ/ಯುಸಕ್ರೀಇ/ಕಾ/ಮೆಸ್/ಇ.ಟೆಂಡರ್/2026-27

ದಿನಾಂಕ : 10-04-2026

: ಇ-ಟೆಂಡರ್ ಪ್ರಕಟಣೆ:

2026-27ನೇ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಕಾರವಾರ ಮತ್ತು ಹಳಿಯಾಳ ಕ್ರೀಡಾ ವಸತಿ ನಿಲಯಗಳು ಹಾಗೂ ಹಳಿಯಾಳ ಸಿದ್ದಿ ಕ್ರೀಡಾ ವಸತಿಯದಲ್ಲಿ ವಾಸ್ತವ್ಯ ಹೊಂದಿರುವ 5 ರಿಂದ 10ನೇ ತರಗತಿ ಹಾಗೂ 10ನೇ ತರಗತಿ ಮೇಲ್ಪಟ್ಟ ಕ್ರೀಡಾಪಟುಗಳಿಗೆ ಊಟೋಪಹಾರ ವ್ಯವಸ್ಥೆಯನ್ನು ಕಲ್ಪಿಸುವ ಸಂಬಂಧ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮ 2000 ರ ಪ್ರಕಾರ ಗುತ್ತಿಗೆಯನ್ನು ನೀಡುವ ಸಲುವಾಗಿ ಅರ್ಹ ಗುತ್ತಿಗೆದಾರರನ್ನು ಪಡೆಯಲು ಇ-ಪ್ರೊಕ್ಯೂರಮೆಂಟ್ (kppp.karnataka.gov.in) ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ.

1	ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	:	ಸನಿ/ಯುಸಕ್ರೀಇ/ಕಾ/ಮೆಸ್/ಇ.ಟೆಂಡರ್/2026-27 Dated: 10-04-2026
2	ಟೆಂಡರ್‌ಗೆ ಇಟ್ಟ ಒಟ್ಟು ಮೊತ್ತ	:	ರೂ. 138.94 ಲಕ್ಷಗಳು (ಅಂದಾಜು)
3	ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ	:	ದಿ: 10-04-2026
4	ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ	:	ದಿನಾಂಕ : 11-05-2026 ಸಂಜೆ 04.30 ಗಂಟೆಗೆ kppp.karnataka.gov.in
5	ಪ್ರಿ-ಬಿಡ್ ಮೀಟಿಂಗ್ ದಿನಾಂಕ	:	ದಿ: 02-05-2026 ಸಾಯಂಕಾಲ 4.00 ಗಂಟೆಗೆ
6	ತಾತ್ಕಾಲಿಕ ತಾಂತ್ರಿಕ ಬಿಡ್ ತೆರೆಯುವ ಬಗ್ಗೆ (ತಾಂತ್ರಿಕ ಉಪಕರಣಗಳು ಸರಿ ಇದ್ದಲ್ಲಿ)	:	ದಿನಾಂಕ : 12-05-2026 ಸಾಯಂಕಾಲ 5.00 ಗಂಟೆಗೆ ಬದಲಾವಣೆಗೊಳಪಟ್ಟಿರುತ್ತದೆ
7	ಆರ್ಥಿಕ ಬಿಡ್ ತೆರೆಯುವ ಬಗ್ಗೆ (ತಾಂತ್ರಿಕ ಉಪಕರಣಗಳು ಸರಿ ಇದ್ದಲ್ಲಿ)	:	ದಿನಾಂಕ: 13-05-2026 ಬೆಳಿಗ್ಗೆ 11.00 ಗಂಟೆಗೆ ಬದಲಾವಣೆಗೊಳಪಟ್ಟಿರುತ್ತದೆ
8	ಇ-ಪ್ರೊಕ್ಯೂರಮೆಂಟ್ ನಲ್ಲಿ ಇ.ಎಂ.ಡಿ ಶುಲ್ಕದ ಬಗ್ಗೆ	:	ರೂ. 1,38,940/-
9	ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ ದೂರವಾಣಿ ಸಂಖ್ಯೆ :	:	ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಉತ್ತರ ಕನ್ನಡ ಜಿಲ್ಲೆ ದೂರವಾಣಿ ಸಂಖ್ಯೆ: 9480886551/08382201824

ಸಹಿ/- ಸಹಾಯಕ ನಿರ್ದೇಶಕರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಉತ್ತರ ಕನ್ನಡ ಜಿಲ್ಲೆ.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ನೋಂದಾಯಿತ ಕಛೇರಿ: ನಂ.148, ಎಂಬೆಸಿ ಸ್ಕ್ವೇರ್, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು-560001

ದೂರವಾಣಿ ಸಂಖ್ಯೆ: 080-22289966/22256688 ಫ್ಯಾಕ್ಸ್: 080-22264477

ಇ-ಮೇಲ್: mail@vjnl.in, ವೆಬ್‌ಸೈಟ್: www.vjnl.in CIN No: U41000KA2016SGC097260

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ:4 ಮಧುಗಿರಿ, ತುಮಕೂರು ಜಿಲ್ಲೆ-572132

ಫೋನ್ ನಂ.: 08137- 282112 ಇ-ಮೇಲ್:eeyetmadhugiri4@gmail.com

ಕ್ರ.ಸಂ: ಕಾಂ/ವಿಜನಿನಿ/ಎಹೊಯೋ/ಮ/ವಿ.04/ಟೆ.ಅ-01/2026-27 ದಿನಾಂಕ: 08.04.2026

ಟೆಂಡರ್ ಪ್ರಕಟಣೆ: (ಕೆ.ಪಿ.ಪಿ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ 2.0 ಪೋರ್ಟಲ್‌ನಲ್ಲಿ ಮಧುಗಿರಿ ವಿಭಾಗ ವ್ಯಾಪ್ತಿಯಲ್ಲಿ **1) Construction Of Rcc Box Under NH-48 (Old NH-4) By Box Pushing Technique At Ch: 26+895 Km (NH LHS Ch: 40+395 Km & NH RHS Ch: 40+425 Km) To Provide Crossing Of Gravity Main Of TG Halli And Ramanagara Gravity Feeder Under Yettinahole Project (Indent No. VJNL/2025-26/BR/WORK_INDENT493)** ಮತ್ತು **2) Construction Of Rcc Box Under NH-75 (Old NH-48) By Box Pushing Technique At Ch:40+762 Km (NH Ch: 35+65 Km) To Provide Crossing Of Gravity Main Of TG Halli And Ramanagara Gravity Feeder Under Yettinahole Project. (Indent No. VJNL/2025-26/BR/WORK_INDENT495)** ಒಟ್ಟು **02 ಕಾಮಗಾರಿಗಳ ರೂ.490.69** ಲಕ್ಷ ಮತ್ತು **ರೂ.454.42** ಲಕ್ಷದ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಸದರಿ ಕಾಮಗಾರಿಗಳಿಗೆ Percentage Tender ಮೂಲಕ ಅರ್ಹ ಬಿಡ್ಡುದಾರರಿಂದ ಶೇಕಡಾವಾರು ದರಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್‌ನ **https://kppp.karnataka.gov.in** ವೆಬ್‌ಸೈಟ್ ಮೂಲಕ **ದಿನಾಂಕ: 10.04.2026 ರಿಂದ ದಿನಾಂಕ: 12.05.2026 ರ ಸಂಜೆ 5:00 ಗಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದು.

ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ, ನಿಗದಿಪಡಿಸಿದ ಇ.ಎಂ.ಡಿ ಮೊತ್ತ, ಬಿಡ್ಡುದಾರರ ದರ್ಜೆ, ಟೆಂಡರ್ ನಿಯಮ, ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳನ್ನು **https://kppp.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ **ದಿನಾಂಕ: 30.04.2026 ರ ಸಂಜೆ 3:00 ಗಂಟೆಯವರೆಗೆ** ಸಂಪರ್ಕಿಸಬಹುದು ಹಾಗೂ ಸ್ವೀಕೃತ ಟೆಂಡರ್‌ಗಳನ್ನು ಕೆ.ಪಿ.ಪಿ-ಪೋರ್ಟಲ್‌ನಲ್ಲಿ **ದಿನಾಂಕ:14.05.2026 ರಂದು ಬೆಳಗ್ಗೆ 11:00 ಗಂಟೆಗೆ** ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ. 04 ಮಧುಗಿರಿ ರವರ ಕಛೇರಿಯಲ್ಲಿ ತೆರೆಯಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ವಿ.ಜ.ನಿ.ನಿ, ಎತ್ತಿನಹೊಳೆ ಯೋಜನಾ ವಿಭಾಗ-04
ಮಧುಗಿರಿ.

DIPR/TUM/RO-11/26-27/Oysters

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ
BELAGAVI URBAN DEVELOPMENT AUTHORITY, BELAGAVI.

ಫ್ಯಾಕ್ಸ/ದೂರವಾಣಿ: 0831-2470342, 2470257 E-mail: belagavibuda@gmail.com

No BUDA/PWD/E-TENDER/2026-27/93 ದಿನಾಂಕ: 15-04-2026

ಟೆಂಡರ ಪ್ರಕಟಣೆ (e-procurement ಮುಖಾಂತರ)

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ ಮತ್ತು ನಿಯಮಾವಳಿಗಳಲ್ಲಿನ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಅನ್ವಯ ಇ-ಪ್ರೋಕ್ಯೂರಮೆಂಟ-2 ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಆಸಕ್ತ ಮತ್ತು ಅರ್ಹ ಗುತ್ತಿಗೆದಾರರು ಇ-ಟೆಂಡರ್‌ನಲ್ಲಿ ಭಾಗವಹಿಸಬಹುದು.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು, ಕಾರ್ಯಕಾರಿ ಅಭಿಯಂತರರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ ಇವರಿಂದ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. **(ದೂರವಾಣಿ ಸಂಖ್ಯೆ: 0831-2470342)** ಮತ್ತುಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ: **kppp.karanataka.gov.in** ರಲ್ಲಿ ಪಡೆಯಬಹುದು.

Sl No	Name of Work	Indent No	EMD Amt in Rupees
1	E Auction for the deposit BUDA Fund for Maximum one year Period (Around 60.00 Crore) only Public sector Banks should participate	BGMUDA/2026-27/AUCTION146	2,10,000/-

ಟೆಂಡರ್ ಫಾರ್ಮ ಬೆಲೆ ಇ-ಪ್ರೋಕ್ಯೂರಮೆಂಟ್‌ದಲ್ಲಿದ್ದಂತೆ:
1) ಆಕ್ಷನ್ ಕ್ವಾರೀಸ್ ಸಲ್ಲಿಸಲು ಕೊನೆಯ **ದಿನಾಂಕ: 08-05-2026** ರಂದು ಸಾಯಂಕಾಲ **4.30** ಗಂಟೆವರೆಗೆ
2) ಆಕ್ಷನ್‌ನಲ್ಲಿ ಭಾಗವಹಿಸುವ ಕೊನೆಯ **ದಿನಾಂಕ: 14.05.2026** ರಂದು ಸಾಯಂಕಾಲ **4.30** ಗಂಟೆವರೆಗೆ
3) ಆಕ್ಷನ್ ಪ್ರಾರಂಭ **ದಿನಾಂಕ: 15.05.2026** ರಂದು ಮುಂಜಾನೆ **10.00** ಗಂಟೆಗೆ.
4) ಆಕ್ಷನ್ ಮುಕ್ತಾಯ **ದಿನಾಂಕ: 16.05.2026** ರಂದು ಸಾಯಂಕಾಲ **04.00** ಗಂಟೆಗೆ.

ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು,
ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಬೆಳಗಾವಿ

ವಾ.ಸಾ.ಇ./ಬೆಳಗಾವಿ/102/2026-27/ದೇಶಪಾಂಡೆಪಬ್ಲಿಸಿಟಿ

ಸಹಿ/-
ಆಯುಕ್ತರು,
ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರಬೆಳಗಾವಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್-1/2026-27/169 ದಿನಾಂಕ:13-04-2026.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಏಕ ಮತ್ತು ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ **https://kppp.karnataka.gov.in/**ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1)	PWD/2026-27/BD/WORK_INDENT35375	25.00
2)	PWD/2025-26/RD/WORK_INDENT35251	500.00
3)	PWD/2026-27/RD/WORK_INDENT35594	500.00
4)	PWD/2026-27/RD/WORK_INDENT35598	300.00
5)	PWD/2026-27/BD/WORK_INDENT35590	310.00
6)	PWD/2025-26/BR/WORK_INDENT34347	600.00

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಬದಲಾವಣೆಗಳಾದಲ್ಲಿ ಮತ್ತು ಮರು ಟೆಂಡರ್ ಆಹ್ವಾನಿಸಿದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.


ಅ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **16-04-2026 ರಂದು 12.00 ಗಂಟೆಯ ವರೆಗೆ.** ಆ)ಕೆಪಿಪಿ-ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **21-04-2026 ರಂದು 16.00 ಗಂಟೆಯ ವರೆಗೆ.** ಇ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **22-04-2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/54

CHANGE OF NAME

I, **SAKEENA FAYAZ AHMED MORAB** (Old Name) Resident of H No: 210 Ahmed Nagar Mantur Road Hubli 580020 (address), have changed my name as **SAKEENA INAMDAR** (New Name) henceforth I will be called and recognized by new name for all future purposes, dated: 15/04/2026.



CHANGE OF NAME

I, **SHWETA SUNDER MANAKUR** (Old Name) Resident of H No: 102, Mangal Oni Karwar Road, Hubballi Pin - 580029, have changed my name as **SHWETA SUNDAR MANAKUR** (New Name) henceforth I will be called and recognized by new name for all future purposes, dated: 15/04/2026.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರಮ ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ
ಮುಖ್ಯ ಅಭಿಯಂತರರ ಕಛೇರಿ (ಕೇಂದ್ರ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009					
1	ಕೇಂದ್ರ-4	ಬೆಂಜಮಂ/ಕಾನಿಅ(ಕೇಂದ್ರ-4)/ಪಿಬಿ/16/2026-27 ದಿನಾಂಕ: 10.04.2026	ರೂ.38.10 ಲಕ್ಷಗಳು / ರೂ.0.76 ಲಕ್ಷಗಳು	22.04.2026 ರ ಸಂಜೆ 4.00 ಗಂಟೆಯವರೆಗೆ	23.04.2026 ರ ಸಂಜೆ 4.00 ಗಂಟೆಗೆ
					ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಕೇಂದ್ರ-4)
ಮುಖ್ಯ ಅಭಿಯಂತರರ ಕಛೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009					
2	ಪಶ್ಚಿಮ-4	ಬೆಂಜಮಂ/ಕಾನಿಅ(ಪ-4)/ತಾಂಅ/ಪಿಬಿ/24/2026-27 ದಿನಾಂಕ: 15.04.2026 (ಕರೆ-3)	ರೂ.65,28,649/- / ರೂ.1,30,600/-	27.04.2026 ರ ಮಧ್ಯಾಹ್ನ 3.00 ಗಂಟೆಯವರೆಗೆ	29.04.2026 ರ ಮಧ್ಯಾಹ್ನ 3.00 ಗಂಟೆಯ ನಂತರ
					ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಪಶ್ಚಿಮ-4)
ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ ಮತ್ತು ಗುಣ ಆಶ್ವಾಸನೆ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009					
3	ಕಟ್ಟಡಗಳು	ಬೆಂಜಮಂ/ಕಾನಿಅ(ಕಟ್ಟಡಗಳು)/ಪಿಬಿ/24/2025-26 ದಿನಾಂಕ: 10.04.2026 (ಕರೆ-2)	ರೂ.15,40,287/- / ರೂ.38,508/-	23.04.2026 ರ ಸಂಜೆ 4.00 ಗಂಟೆಯವರೆಗೆ	24.04.2026 ರ ಸಂಜೆ 4.00 ಗಂಟೆಯ ನಂತರ
					ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಕಟ್ಟಡಗಳು)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ವಾ.ಸಾ.ಸಂ.ಇ/ವಾಶ್ರ/190/ಆಕಾರ್/2026-27

ಮಾಲೂರು ನಗರ ಯೋಜನಾ ಪ್ರಾಧಿಕಾರ, ಮಾಲೂರು

ಮಾರುತಿ ಬಡಾವಣೆ 2ನೇ ಹಂತ, ಮಾಡ್ರನ್ ಶಾಲೆ ಹತ್ತಿರ, ತಿರುಮಲ ಕಲ್ಯಾಣ ಮಂಟಪ ರಸ್ತೆ, ಮಾಲೂರು-563 130, ಕೋಲಾರ ಜಿಲ್ಲೆ, ಕಛೇರಿ ದೂರವಾಣಿ ಸಂಖ್ಯೆ: 08151-299920.

Web Site:www.malur.tpa.gov.in, Email:ms.malur.planning.authority@gmail.com

ಸಂಖ್ಯೆ:ಮಾಯೋಪ್ರಾ/ಭೂ.ಬ/2025-26/10 ದಿನಾಂಕ: 04.04.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.


ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ ಎ/ಗು	ಅನುಮೋದಿತ ಮಹಾ ಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪ ಯೋಗ	ಷರಾ
1.	ಪ್ರದೀಪ್ ಕುಮಾರ್.ಆರ್.ಹೆಚ್	ಮಾಲೂರು	ಕಸಬಾ	ಚಿಕ್ಕಕಡತೂರು	72/4	0-24ಗು	ಕೃಷಿ	ವಾಣಿಜ್ಯ	-
2.		ಮಾಲೂರು	ಕಸಬಾ	ಚಿಕ್ಕಕಡತೂರು	72/8	0-17ಗು	ಕೃಷಿ	ವಾಣಿಜ್ಯ	-
3.		ಮಾಲೂರು	ಕಸಬಾ	ಚಿಕ್ಕಕಡತೂರು	72/9	0-16ಗು	ಕೃಷಿ	ವಾಣಿಜ್ಯ	-
4.		ಮಾಲೂರು	ಕಸಬಾ	ಚಿಕ್ಕಕಡತೂರು	72/11	0-23ಗು	ಕೃಷಿ	ವಾಣಿಜ್ಯ	-

ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಅಭಿವೃದ್ಧಿ ಪಡಿಸುವುದರಿಂದ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗವಕಾಶ ಸೃಷ್ಟಿಯಾಗುತ್ತದೆ. ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡಿದಂತಾಗುತ್ತದೆ. ಇದರಿಂದ ನಗರ ಪ್ರದೇಶದ ಸಮಗ್ರ ಅಭಿವೃದ್ಧಿ ಹೊಂದುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೃಷಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ಸದಸ್ಯ ಕಾರ್ಯದರ್ಶಿ
ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:30/ಕೆಎಸ್‌ಎಂಸಿಎ/2026-27

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಗುರುವಾರ, 16 ಏಪ್ರಿಲ್ 2026
ಹುಬ್ಬಳ್ಳಿ



ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ	5	4	1	0	8	+1.503
ರಾಜಸ್ಥಾನ	5	4	1	0	8	+0.889
ಪಂಜಾಬ್	4	3	0	1	7	+0.720
ಹೈದರಾಬಾದ್	5	2	3	0	4	+0.576
ದಿಲ್ಲಿ	4	2	2	0	4	+0.322
ಗುಜರಾತ್	4	2	2	0	4	-0.029
ಲಖನೌ	5	2	3	0	4	-0.804
ಚೆನ್ನೈ	5	2	3	0	4	-0.846
ಮುಂಬೈ	4	1	3	0	2	-0.772
ಕೆಕೆಆರ್	5	0	4	1	1	-1.383

ಕಿರುಸುದ್ದಿ

ರಹಾನೆಗೆ 12 ಲಕ್ಷ ರೂ. ದಂಡ

ಚೆನ್ನೈ: ನಿಧಾನಗತಿ ಓವರ್ ಮಾಡಿದ್ದಕ್ಕಾಗಿ ಕೆಕೆಆರ್ ತಂಡದ ಅಜಿಂಕ್ಯಾ ರಹಾನೆ ಅವರಿಗೆ 12 ಲಕ್ಷ ರೂ. ದಂಡ ವಿಧಿಸಲಾಗಿದೆ. ಮಂಗಳವಾರ ನಡೆದ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧದ ಪಂದ್ಯವೂ ತಡವಾಗಿ ಮುಕ್ತಾಯಗೊಂಡಿತು. ಮೊದಲ ಇನ್ನಿಂಗ್ಸ್ ನಿಗದಿತ 1 ಗಂಟೆ 30 ನಿಮಿಷದಲ್ಲಿ ಮುಕ್ತಾಯಗೊಂಡಿರಲಿಲ್ಲ. ಪರಿಣಾಮ ನಾಯಕ ರಹಾನೆಗೆ ದಂಡ ವಿಧಿಸಲಾಗಿದೆ. ಬಹುತೇಕ ಪ್ರತಿ ಪಂದ್ಯದಲ್ಲೂ ದಂಡ ವಿಧಿಸಲಾಗುತ್ತಿದೆ. ಈಗಾಗಲೇ ಗಾಯಕ್ವಾಡ್, ಗಿಲ್, ಶ್ರೇಯಸ್, ಅಕ್ಷರ್ ಮತ್ತು ಇತ್ಯಾದಿ ನಾಯಕರಿಗೂ ದಂಡ ವಿಧಿಸಲಾಗಿದೆ. ಎರಡನೇ ನಿರಂತರ ಪಂದ್ಯದಲ್ಲೂ ಹೀಗಾದರೆ 24 ಲಕ್ಷ ರೂ. ದಂಡ ವಿಧಿಸಲಾಗುತ್ತದೆ.

ಇಟಲಿ ಟೆನಿಸ್ ಕ್ರಾಂತಿಗೆ ಸಿನ್ನರ್ ಸ್ಫೂರ್ತಿ

ಹೊಸದಿಲ್ಲಿ: ಇಟಲಿಯ ಟೆನಿಸ್ ವಲಯ ದಿನೇದಿನೇ ಬಲವಾಗುತ್ತಿದ್ದು, ವಿಶ್ವದ ಗಮನ ಸೆಳೆಯುತ್ತಿದೆ. ವಿಶ್ವ ನಂ.1 ಆಟಗಾರ ಯಾನಿಕ್ ಸಿನ್ನರ್ ನೇತೃತ್ವದಲ್ಲಿ ಇಟಲಿ ಮತ್ತೊಂದು ಮಹತ್ವದ ಟೂರ್ನಿಯನ್ನು ಸೇರ್ಪಡೆಗೊಳಿಸಿದೆ. ಇಟಾಲಿಯನ್ ಟೆನಿಸ್ ಮತ್ತು ಪ್ಯಾಡೆಲ್ ಫೆಡರೇಶನ್ ಬ್ರಸ್ಸೆಲ್ಸ್‌ನಲ್ಲಿ ನಡೆಯುತ್ತಿದ್ದ ಎಟಿಪಿ 250 ಮಟ್ಟದ ಟೂರ್ನಿಯ ಹಕ್ಕುಗಳನ್ನು ಖರೀದಿಸಿದ್ದು, 2028ರಿಂದ ಪ್ರತಿ ಜೂನ್‌ನಲ್ಲಿ ಈ ಸ್ಪರ್ಧೆಯನ್ನು ಆಯೋಜಿಸಲು ನಿರ್ಧರಿಸಿದೆ. ಈ ಕುರಿತು ಫೆಡರೇಶನ್ ಅಧ್ಯಕ್ಷ ಅಂಜೆಲೊ ಬಿನಾಘಿ ಮಾಹಿತಿ ನೀಡಿದ್ದಾರೆ. ಈ ಟೂರ್ನಿಯನ್ನು ಉತ್ತರ ಇಟಲಿಯಲ್ಲಿ ಆಯೋಜಿಸುವ ಸಾಧ್ಯತೆ ಹೆಚ್ಚಿದ್ದು, ಸ್ಥಳದ ಕುರಿತು ಇನ್ನೂ ಅಂತಿಮ ನಿರ್ಧಾರವಾಗಿಲ್ಲ. ಮಿಲಾನ್‌ನ ಸಾನ್ ಸಿರೋ ಕ್ರೀಡಾಂಗಣದಲ್ಲಿಯೇ ಫುಟ್‌ಬಾಲ್ ಮೈದಾನದಲ್ಲಿ ಈ ಸ್ಪರ್ಧೆ ನಡೆಯುವ ಸಾಧ್ಯತೆಯೂ ಚರ್ಚೆಯಲ್ಲಿದೆ. ಇದಕ್ಕೂ ಮೊದಲು ಮ್ಯಾಡ್ರಿಡ್ ಓಪನ್‌ನಲ್ಲಿ ಸಾಂಟಿಯಾಗೋ ಬೆರ್ನಬೇವು ಕ್ರೀಡಾಂಗಣದಲ್ಲಿ ಅಭ್ಯಾಸ ಕೋರ್ಟ್‌ಗಳನ್ನು ನಿರ್ಮಿಸುವ ಯೋಜನೆ ಜಾರಿಯಲ್ಲಿದೆ. ಇದೇ ಮಾದರಿಯಲ್ಲಿ ಸಾನ್ ಸಿರೋ ಕೂಡ ಬಳಸುವ ಯೋಚನೆ ಇದೆ. ಇಟಲಿ ಈಗಾಗಲೇ ಎಟಿಪಿ ಫೈನಲ್ಸ್ (ಟುರಿನ್‌ನಲ್ಲಿ 2030ರವರೆಗೆ) ಮತ್ತು ಡೆವಿಸ್ ಕಪ್ ಫೈನಲ್ಸ್ (ಬೊಲೋನಿಯಾದಲ್ಲಿ ಮುಂದಿನ ವರ್ಷವರೆಗೆ) ಆತಿಥ್ಯ ವಹಿಸುತ್ತಿದೆ. ಜೊತೆಗೆ ಮುಂದಿನ ತಿಂಗಳು ಇಟಾಲಿಯನ್ ಓಪನ್ ಕೂಡ ನಡೆಯಲಿದೆ.

ಹೈದರಾಬಾದ್ ಪಂದ್ಯಕ್ಕೆ ಧೋನಿ?

ಚೆನ್ನೈ: ಮಹೇಂದ್ರ ಸಿಂಗ್ ಧೋನಿ ಅವರನ್ನು ನೋಡಲು ಕಾತರದಿಂದ ಕಾಯುತ್ತಿರುವ ಸಹಸ್ರಾರು ಕ್ರಿಕೆಟ್ ಅಭಿಮಾನಿಗಳಿಗೆ ಖುಷಿ ವಿಚಾರ ಸಿಕ್ಕಿದ್ದು



ಭಾನುವಾರ ನಡೆಯಲಿರುವ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಕಣಕ್ಕಿಳಿಯುವುದಕ್ಕೆ ಸಿದ್ಧರಾಗಿದ್ದಾರೆ. ಕಾಫ್ ಸ್ಟೈನ್‌ನಿಂದ ಬಳಲುತ್ತಿರುವ ಅವರು 2026 ಆವೃತ್ತಿಯಲ್ಲಿ ಯಾವುದೇ ಪಂದ್ಯದಲ್ಲ ಕಣಕ್ಕಿಳಿದಿಲ್ಲ. ಕೆಕೆಆರ್ ವಿರುದ್ಧದ ಪಂದ್ಯದಲ್ಲಿ ಗೆದ್ದ ನಂತರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡುವಾಗ ಚೆನ್ನೈ ತಂಡದ ಪ್ರಧಾನ ಕೋಚ್ ಸ್ಟೀಫನ್ ಫ್ಲೆಮಿಂಗ್, ಧೋನಿ ಶೇ. 100ರಷ್ಟು ಚೇತರಿಸಿಕೊಂಡಿದ್ದಾರೆ. ತೀಕ್ಷ್ಣವಾಗಿ ಅಭ್ಯಾಸವೂ ಶುರು ಮಾಡಿದ್ದಾರೆ. ನಮಗೆ ಮುಂದಿನ ಪಂದ್ಯ, ಅಂದರೆ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಕಣಕ್ಕಿಳಿಯುವ ನಿರೀಕ್ಷೆಯಿದೆ ಎಂದಿದ್ದಾರೆ.

ಚಿನ್ನಸ್ವಾಮಿಯಲ್ಲಿ ಲಖನೌದಿಂದ ಸಾಮಾನ್ಯ ಗುರಿ | ರಸಿಖ್, ಭುವನೇಶ್ವರ್ ದಾಳಿಗೆ ಬಸವಳಿದ ಪಂತ್ ಪಡೆ

ಕೆಂಪು ಸಾಗರದಲ್ಲಿ ಮಿಂಚಿದ ಆರ್‌ಸಿಬಿ

ಪೃಥ್ವಿರಾಜ್ ಕುಲಕರ್ಣಿ

ಚಿತ್ರ: ಮೋಹನ್ ಕುಮಾರ್ ಬಿ.ಎನ್.



ಬೆಂಗಳೂರು: ಮೈದಾನವೆಂಬ ಮರಳಲ್ಲಿ ಸಾಗರದಂತೆ ಹರಡಿದ್ದ ಬೆಂಗಳೂರಿನ ಅಭಿಮಾನಿಗಳು ಬುಧವಾರ ಪಂದ್ಯದುದ್ದಕ್ಕೂ ಸಂಭ್ರಮದಲ್ಲಿ ತೇಲಾಡಿದರು. ಲಖನೌ ತಂಡದ ಲಗಾಮು ಹಿಡಿದು ಸಾಗರದಲ್ಲಿ ಮಿಂಚಿದ ಬೆಂಗಳೂರು ಮತ್ತೊಮ್ಮೆ ರಾಯಲ್ ಆಟ ಪ್ರದರ್ಶಿಸಿದ್ದು, ಚಿನ್ನಸ್ವಾಮಿಯ ಅಂಗಳದಲ್ಲಿ 5 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಲಖನೌ ತಂಡವನ್ನು 146 ರನ್‌ಗಳಿಗೆ ಆಲೌಟ್ ಮಾಡಿದ ಆರ್‌ಸಿಬಿ 15.2 ಓವರ್‌ಗಳಲ್ಲಿ ಹೊಡೆದಿದೆ.

ವೇಗಿಗಳ ಆರ್ಭಟಕ್ಕೆ ಸ್ಪಿನ್ನರ್‌ಗಳ ಕರಾರುವಾಕ್ ದಾಳಿ ಕೂಡಿದ ನಂತರ ಲಖನೌ ಒಂದೊಂದು ರನ್ ಪಡೆಯಲು ತಿಣುಕಾಡಿತು. ರಸಿಕ್ ಸಲಾಂ ದಾರ್ (4-0-24-4) ಆರ್‌ಸಿಬಿ ಅಭಿಮಾನಿಗಳ ಪಾಲಿನ ಹೀರೋ. ಭುವನೇಶ್ವರ್ ಕುಮಾರ್ (4-0-27-3) ಲಖನೌ ಪಾಲಿನ ದುಃಸ್ವಪ್ನವಾದರು. ಕೃಣಾಲ್ ಪಾಂಡ್ಯ (4-0-38-2) ಕೂಡ ಮಿಂಚಿದರು. ಇನ್ನು ಕೊಹ್ಲಿ 49 ರನ್ ಗಳಿಸಿ ಬೆಸ್ಟ್ ಬ್ಯಾಟರ್ ಅನ್ನಿಸಿಕೊಂಡರು. ಪಾಟಿದಾರ್, ಜಿತೇಶ್ ಕೂಡ ಮಿಂಚಿದರು.

ಲಖನೌ ಗಿ/ಖ ಆರ್‌ಸಿಬಿ ರನ್ ಮಟ್ಟ: ಮೊದಲು ಬ್ಯಾಟಿಂಗ್ ಗಿಳಿದ ಲಖನೌ ಸೂಪರ್ ಜೇಂಟ್ಸ್ ಆರಂಭದಿಂದಲೂ ಸಿಂಗಲ್‌ಗಳ ಮೇಲೆ ಅವಲಂಭಿತವಾಗಿತ್ತು. ಕಡಿವಾಣ ಹಾಕಿದ ಆರ್‌ಸಿಬಿ ವೇಗಿಗಳು ಉತ್ತಮ ಬೌಲಿಂಗ್‌ನೊಂದಿಗೆ ಮಿಂಚಿದರು. ಮರ್ಕ್ರಂ 12 ರನ್‌ಗೆ ವಿಕೆಟ್ ಕಳೆದುಕೊಂಡರು. ಮಾರ್ಷ್ ಸಿಂಗಲ್-ಟುಡಿಗಳ ಮೂಲಕ ಸೆಟ್ ಆಗುವ ಔಪಚಾರಿಕತೆಗೆ ಬಿದ್ದರು. ಆದಾಗ್ಯೂ ಒಂದೆರಡು ಬೌಂಡರಿಗಳೊಂದಿಗೆ ಮಿಂಚಿದ ನಂತರ ಲಖನೌ ಪವರ್‌ಪ್ಲೇನಲ್ಲಿ 1 ವಿಕೆಟ್‌ಗೆ 35 ರನ್ ಗಳಿಸಿತು.

ಇತ್ತ ಆರ್‌ಸಿಬಿ ಪವರ್‌ಪ್ಲೇನಲ್ಲಿ ಹೆಚ್ಚು ಬೌಂಡರಿಗಳಿಂದ ರನ್ ಮಾಡಿತು. ವಿರಾಟ್ ಕೊಹ್ಲಿ ಮೊದಲಿನಿಂದಲೂ ಅಬ್ಬರದ ಬ್ಯಾಟಿಂಗ್ ಶುರು ಮಾಡಿದರು. 6 ಭರ್ಜರಿ ಬೌಂಡರಿಗಳೊಂದಿಗೆ ಮಿಂಚಿದ ಅವರು ಲಖನೌ ಬೌಲರ್‌ಗಳ ಮೇಲೆ ಒತ್ತಡ ಹೇರಿದರು. ಇತ್ತ ಸಾಲ್ಟ್ ಔಟಾದ ನಂತರ ಪಡಿಕ್ಕಲ್ ಸೆಟ್ ಆಗುವತ್ತ ಸಾಗಿದರು. ಪವರ್‌ಪ್ಲೇನಲ್ಲಿ ಬೆಂಗಳೂರು 60 ರನ್ ಗಳಿಸಿತು.

ಕೃಣಾಲ್ ಸ್ಟ್ರೈಕ್: ಆರ್‌ಸಿಬಿ ವಿರುದ್ಧ 53 ರನ್ ಅವರೇಜ್ ಹೊಂದಿರುವ ರಿಷಭ್ ಪಂತ್ ಮೊಣಕೈ ಗಾಯದಿಂದಾಗಿ ಹೊರನಡೆದರು. ಮಧ್ಯಮ ಓವರ್ ಶುರುವಿನಲ್ಲಿ ಎರಡು ವಿಕೆಟ್ ಕಳೆದುಕೊಂಡಿದ್ದ ಲಖನೌ ರನ್‌ರೇಟ್ ಹೆಚ್ಚಿಸುವ ಜವಾಬ್ದಾರಿಗೆ ಬಿದ್ದಿತು. ಆದರೆ ಏಳನೇ ಓವರ್ ಮೊದಲನೇ ಬಾಲ್‌ನಲ್ಲೇ ಪೂರಣ್ ಕ್ಲೀನ್ ಬೋರ್ಡ್ ಆದರು. ಆಯುಷ್ ಮತ್ತು ಮಾರ್ಷ್ ಕೊಂಚ ಹೊತ್ತು ಉತ್ತಮ ಬ್ಯಾಟಿಂಗ್ ಮಾಡಿದರು. ಸೆಟ್ ಆಗುವ ಔಪಚಾರಿಕತೆ ಮುಗಿಸಿಕೊಂಡಿದ್ದ ಮಾರ್ಷ್ ಇನ್ನೇನು ದಂಡಿಸಲಾರಂಭಿಸುತ್ತಿದ್ದಂತೆ ದಾಳಿಗಿಳಿದ ಕೃಣಾಲ್ ಪಾಂಡ್ಯ ತಮ್ಮ ಐಪಿಎಲ್ ವೃತ್ತಿಜೀವನದ 100ನೇ ವಿಕೆಟ್ ಪಡೆದು ಸಂಭ್ರಮಿಸಿಬಿಟ್ಟರು. ಅಷ್ಟಕ್ಕೆ ನಿಲ್ಲದೆ ಅಬ್ದುಲ್ ಸಮದ್‌ಗೂ ಪೆವಿಲಿಯನ್ ಹಾದಿ ತೋರಿಸಿದರು. ಮುಕುಲ್ ಮತ್ತು ಆಯುಷ್ ಮಧ್ಯಮ ಓವರ್‌ಗಳಲ್ಲಿ ವಿಕೆಟ್ ಕಳೆದುಕೊಳ್ಳದೆ ನಿಂತರು. ಬೌಂಡರಿ ಮತ್ತು ಸಿಕ್ಸರ್‌ಗಳ ಮೂಲಕ 38 ರನ್ ಬಾರಿಸಿದ್ದ ಆಯೂಷ್ ಬದೋನಿ ಜಿತೇಶ್ ಶರ್ಮ ಮಾಡಿದ ಅದ್ಭುತ ಕ್ಯಾಚ್‌ಗೆ ಕೊಟ್ಟರು. ಮಧ್ಯಮ ಓವರ್‌ಗಳಲ್ಲಿ (7-15) ಲಖನೌ 83 ರನ್ ಗಳಿಸಿತು. ಆರ್‌ಸಿಬಿ ಅಲ್ಲೂ 4 ವಿಕೆಟ್ ಪಡೆಯಿತು.

ಇತ್ತ ಆರ್‌ಸಿಬಿ ಮಧ್ಯಮ ಓವರ್‌ಗಳಲ್ಲಿ ಹೆಚ್ಚಿನ ರನ್ ಗಳಿಸುವ ಒತ್ತಡವೇನು ಹೊಂದಿರಲಿಲ್ಲ. ಕೊಹ್ಲಿ ಸೆಟ್ ಆಗಿ ಅರ್ಧಶತಕದತ್ತ ಸಾಗಿದ್ದರು. ಪಡಿಕ್ಕಲ್ 10 ರನ್‌ಗೆ ವಿಕೆಟ್ ಒಪ್ಪಿಸಿದರು. ಬಳಿಕ ಬ್ಯಾಟಿಂಗ್‌ಗಿಳಿದ ನಾಯಕ ರಜತ್ ಪಾಟಿದಾರ್ ಅಬ್ಬರದ ಬ್ಯಾಟಿಂಗ್‌ಗೆ ಮುಂದಾದರು. ಸೆಟ್ ಆಗುವ ಯಾವುದೇ ಮುಲಾಜಿಗೆ ಬೀಳದ ಅವರು, ಸಿಕ್ಸರ್‌ಗಳೊಂದಿಗೆ ಡೀಲ್ ಮಾಡಲಿಳಿದರು. ಕೊಹ್ಲಿ 49 ರನ್‌ಗೆ ವಿಕೆಟ್ ಒಪ್ಪಿಸಿದರು. ಅವರ 34 ಬಾಲ್‌ಗಳ ಇನ್ನಿಂಗ್ಸ್‌ನಲ್ಲಿ 6 ಬೌಂಡರಿ, 1 ಸಿಕ್ಸರ್ ಕೂಡ ಸೇರಿದೆ. ಅವರು ವಿಕೆಟ್ ಒಪ್ಪಿಸಿದ ನಂತರ ಜಿತೇಶ್ ಪಾಟಿದಾರ್‌ಗೆ ಸಾಥ್ ನೀಡಿದರು. ಬಾನೆತ್ತರದ ಸಿಕ್ಸರ್‌ಗಳಿಗೆ ಮೈದಾನವೇ ಸಂಭ್ರಮಿಸಿತು. ಆರ್‌ಸಿಬಿ ಮಧ್ಯಮ ಓವರ್‌ಗಳಲ್ಲೇ ಪಂದ್ಯ ಗೆದ್ದುಕೊಂಡಿತು. ಈ ಸರದಿನಲ್ಲಿ ಒಂದೆರಡು ವಿಕೆಟ್ ಪಡೆದ ಲಖನೌ ಕೇವಲ ಓವರ್ ಹಿಗ್ಗಿಸಲೆತ್ನಿಸಿತು. ಆರ್‌ಸಿಬಿ 15.2 ಓವರ್‌ಗಳಲ್ಲಿ ಪಂದ್ಯ ಮುಗಿಸಿತು.

ಡೆತ್ ಓವರ್: ಆರ್‌ಸಿಬಿಗೆ ನಾಗಾಲೋಟ್. ಮಧ್ಯಮ ಓವರ್‌ಗಳ ನಂತರ ಲಖನೌ 118 ರನ್ ಮಾತ್ರ ಗಳಿಸಿತ್ತು. ನಿರೀಕ್ಷಿತ ಡೆತ್ ಓವರ್‌ಗಳಲ್ಲಿ ರನ್ ಹೊಳೆ ಹರಿಸುವ ಲಖನೌ ಯತ್ನಕ್ಕೆ ಭುವನೇಶ್ವರ್ ಕುಮಾರ್ ತಡೆಯೊಡ್ಡಿದರು. ಬದೋನಿ ವಿಕೆಟ್ ಬಿದ್ದ ನಂತರ ಪಂತ್ ಮೈದಾನಕ್ಕೆ ಮರಳಿದರು. 1 ರನ್ ಮಾತ್ರ ಗಳಿಸಿ ಸಾಲ್ಟ್ ಅವರ ಅದ್ಭುತ ಕ್ಯಾಚ್‌ಗೆ ಬಲಿಯಾದರು. 19ನೇ ಓವರ್ ಬೌಲಿಂಗ್ ಮಾಡಲು ಬಂದ ಭುವನೇಶ್ವರ್ ಕುಮಾರ್ ಸರಸರನೇ ಲಿಂಡೆ, ಶಮಿ ವಿಕೆಟ್ ಪಡೆದರು. ಮುಕುಲ್ ಚೌಧರಿ ಒಂದು ಹಂತದಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡುವುದಕ್ಕೆ ಕಾಯುತ್ತಿದ್ದರು. ಆದರೆ ಕೊನೆಯ ಓವರ್‌ನಲ್ಲಿ ರಸಿಖ್ ಸಲಾಂ ಆಡಲಾಗದ ಯಾರ್ಕರ್ ಎಸೆದುಬಿಟ್ಟರು. ಅಲ್ಲದೆ, ಕೊನೆಯ ವಿಕೆಟ್ ಅನ್ನೂ ಪಡೆದು ದಿನದ ಹೀರೋ ಅನ್ನಿಸಿಕೊಂಡರು. ಡೆತ್ ಓವರ್‌ನಲ್ಲಿ ಲಖನೌ 28 ರನ್‌ಗೆ 5 ವಿಕೆಟ್ ಕಳೆದುಕೊಂಡಿತು.

ಕೊಹ್ಲಿ ಇಂಪ್ಯಾಕ್ಟ್ ಪ್ಲೇಯರ್


ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಹಿಂದೆಂದೂ ನಡೆಯದ ವಿಸ್ಮಯ ನಡೆಯಿತು. ಅಭಿಮಾನಿಗಳ ಹೀರೋ, ಆರ್‌ಸಿಬಿ ತಂಡದ ಪ್ರಮುಖ ಆಟಗಾರ ವಿರಾಟ್ ಕೊಹ್ಲಿ ಇಂಪ್ಯಾಕ್ಟ್ ಆಟಗಾರರಾದರು. ಭಾನುವಾರ ನಡೆದಿದ್ದ ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದ ವೇಳೆ ಗಾಯಗೊಂಡಿದ್ದ ಕೊಹ್ಲಿ ಫೀಲ್ಡಿಂಗ್ ಮಾಡಿರಲಿಲ್ಲ. ಆದರೆ ಪಂದ್ಯಕ್ಕೂ ಮುನ್ನ ನಡೆದ ಅಭ್ಯಾಸದ ವೇಳೆ ಕೊಹ್ಲಿ ಕಾಣಿಸಿಕೊಂಡಿದ್ದನ್ನು ನೋಡಿದ ಅಭಿಮಾನಿಗಳು ಹಿರಿಹಿರಿ ಹಿಗ್ಗಿದ್ದರು. ಆದರೆ ಅದೇ ಗಾಯದ ಸಮಸ್ಯೆಯಿಂದ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಕೊಹ್ಲಿ ಕಣಕ್ಕಿಳಿಯಲಿಲ್ಲ. ಆದರೆ ಬ್ಯಾಟಿಂಗ್‌ಗೆ ಬಂದರು.

ಸಂಕ್ಷಿಪ್ತ ಸ್ಕೋರ್

ಲಖನೌ: 146/10 (20)
ಮಾರ್ಷ್ 40(32), ಬಡೋನಿ 38(24), ಮುಕುಲ್ 39(28), ಭುವನೇಶ್ವರ್ 27ಕ್ಕೆ 3, ರಸಿಕ್ 24ಕ್ಕೆ 4, ಕೃಣಾಲ್ 38ಕ್ಕೆ 2, ಹೆಜೆಲ್‌ವುಡ್ 20ಕ್ಕೆ 1
ಆರ್‌ಸಿಬಿ: 149/5 (15.1)
ವಿರಾಟ್ 49(34), ರಜತ್ 27(13), ಜಿತೇಶ್ 23(9), ಡೇವಿಡ್ 14(8)★, ಶೆಫರ್ಡ್ 14(8)★.
ಪ್ರಿನ್ಸ್ 32ಕ್ಕೆ 3, ಆವೇಶ್ 23ಕ್ಕೆ 2.

ಚೆನ್ನೈಗೆ ಸೂಪರ್ ಗೆಲುವು | ಕೆಕೆಆರ್‌ಗೆ ಮತ್ತೆ ಸಿಎಸ್‌ಕೆ

ನೂರ್ ಸ್ಪಿನ್, ಚೆನ್ನೈ ವಿನ್



ಚೆನ್ನೈ: ಸೋಲಿನ ಸರಪಳಿ ಮುರಿದುಕೊಂಡಿದ್ದ ಚೆನ್ನೈ ಸತತ ಎರಡನೇ ಗೆಲುವು ಸಾಧಿಸಿ ಪುಟಿದೇಳುವ ಭರವಸೆಯಲ್ಲಿ ಕಾಣಿಸಿಕೊಂಡಿದೆ. ದಿಲ್ಲಿ ಪಂದ್ಯದ ಗೆಲುವಿನ ನಂತರ ಕೆಕೆಆರ್ ತಂಡವನ್ನು 32 ರನ್‌ಗಳಿಂದ ಸೋಲಿಸಿದೆ. ಸಂಜು ಸ್ಯಾಮ್ಸನ್, ಡೆವಾಲ್ಡ್ ಬ್ರೇವಿಸ್ ಹಾಗೂ ಆಯುಷ್ ಮಾತ್ರೆ ಅವರ ಸ್ಫೋಟಕ ಬ್ಯಾಟಿಂಗ್ ನಂತರ ನೂರ್ ಅಹ್ಮದ್ ಹಾಗೂ ಅಕೀಲ್ ಹುಸೈನ್ ಅವರ ಮಾರಕ ಬೌಲಿಂಗ್ ದಾಳಿಯ ನೆರವಿನಿಂದ ಗೆಲುವಿನೋಟಕ್ಕೆ ಮರಳಿದೆ.

ಹಿಂದಿನ ಆವೃತ್ತಿಯಲ್ಲಿ ಭಾರೀ ಹಿನ್ನಡೆ ಅನುಭವಿಸಿದ್ದ ಚೆನ್ನೈ ಹೊಸ ಆವೃತ್ತಿಯಲ್ಲೂ ಆರಂಭಿಕ ಆಘಾತ ಎದುರಿಸಿತ್ತು. ಬೆಂಗಳೂರು, ಪಂಜಾಬ್ ಮತ್ತು ರಾಜಸ್ಥಾನ ವಿರುದ್ಧದ ಪಂದ್ಯಗಳಲ್ಲಿ ಭಾರೀ ಸೋಲನುಭವಿಸಿತು.

ದಿಲ್ಲಿ ವಿರುದ್ಧದ ಪಂದ್ಯದಲ್ಲಿ ಗೆದ್ದ ನಂತರ ಕಂಬ್ಯಾಕ್ ಮಾಡಿರುವ ಚೆನ್ನೈ ಮಂಗಳವಾರದಂದು ಕೆಕೆಆರ್ ಪಡೆಯನ್ನು ಮಣಿಸಿದೆ. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಚೆನ್ನೈ ಸೂಪರ್ ಕಿಂಗ್ಸ್ ತಂಡವು 20 ಓವರ್‌ಗಳಲ್ಲಿ 192 ರನ್ ಗಳಿಸಿತು. ಗುರಿ ಬೆನ್ನತ್ತಿದ ಕೆಕೆಆರ್ 7 ವಿಕೆಟ್ ನಷ್ಟಕ್ಕೆ 167 ರನ್ ಮಾತ್ರ ಗಳಿಸಿ ಸೋಲೊಪ್ಪಿಕೊಂಡಿತು. ನೂರ್ ಅಹ್ಮದ್ ಗೆಲುವಿನ ಶ್ರೇಯ ಪಡೆದರು. 21 ರನ್ ಮಾತ್ರ ನೀಡಿ 3 ವಿಕೆಟ್ ಪಡೆದ ಅವರು ಪಂದ್ಯ ಗೆಲ್ಲಿಸಿದ ಹೀರೋ ಅನ್ನಿಸಿಕೊಂಡರು. ಇತ್ತ ಕೆಕೆಆರ್ ಪರ ಯಾವುದೇ ಬ್ಯಾಟಿಗರೂ ಗೆಲುವಿನಾಟ ಆಡಲೇ ಇಲ್ಲ. ಬೌಲಿಂಗ್‌ನಲ್ಲಿ ಸುನಿಲ್ ನರೈನ್ ಅಲ್ಪ ಪ್ರಯತ್ನ ಪಟ್ಟರು.

ಪಂದ್ಯದಲ್ಲಿ ಇಬ್ಬನಿ ತೀರಾ ದೊಡ್ಡ ಪಾತ್ರ ವಹಿಸಿದರೂ, ಕೆಕೆಆರ್ ತಂಡದ ಮೇಲೆ ಭಾರೀ ಒತ್ತಡ ಹೇರಿದ ಚೆನ್ನೈ ಸೂಪರ್ ಕಿಂಗ್ಸ್ ಪಂದ್ಯವನ್ನು ಅಲ್ಲೇ ಗೆದ್ದಿತು. ಮೊದಲು ಬ್ಯಾಟಿಂಗ್ ಮಾಡುವಾಗ ಪವರ್‌ಪ್ಲೇನಲ್ಲಿ 72, ಮಧ್ಯಮ ಓವರ್‌ಗಳಲ್ಲಿ 90 ಮತ್ತು ಅಂತಿಮ ಓವರ್‌ಗಳಲ್ಲಿ 30 ರನ್ ಗಳಿಸಿತು.

ತತ್ತರಿಸಿದ ಕೆಕೆಆರ್: ಕೆಕೆಆರ್ ಪರ ಸುನಿಲ್ ನರೈನ್ 24, ರಹಾನೆ 28 ಮತ್ತು ರಘುವಂಶಿ 27 ರನ್ ಗಳಿಸಿದ್ದರು. ಪವರ್‌ಪ್ಲೇನಲ್ಲಿ 36 ರನ್ ಮಾತ್ರಕ್ಕೆ 2 ವಿಕೆಟ್‌ಗಳನ್ನು ಕಳೆದುಕೊಂಡಿದ್ದ ಕೋಲ್ಕತ್ತಾ ಮಧ್ಯಮ ಓವರ್‌ಗಳಲ್ಲಿ ಭಾರೀ ಹಿನ್ನಡೆ ಅನುಭವಿಸಿತು. ಚೆನ್ನೈನ ಸ್ಪಿನ್ ದಾಳಿಗೆ ಉರುಳಿದ ನಂತರ 84 ರನ್ ಗಳಿಸಿ 4 ವಿಕೆಟ್ ಕಳೆದುಕೊಂಡಿತು. ಆದಾಗ್ಯೂ ಅಂತಿಮದಲ್ಲಿ ರಮಣದೀಪ್ ಹಾಗೂ ಪೋವೆಲ್ ಅವರ 63 ರನ್‌ಗಳ ಜೊತೆಯಾಟದ ನೆರವಿನಿಂದ ಆಲೌಟ್ ಆಗದೆ ಕೊನೆಯ ಓವರ್‌ಗಳಲ್ಲಿ 41 ರನ್‌ಗಳಿಸಿತು. ಒಟ್ಟು 160 ರನ್ ಗಳಿಸಿತು. ಚೆನ್ನೈ ಪರ ನೂರ್ 3, ಕಂಬೋಜ್ 2 ಮತ್ತು ಅಕೀಲ್ 1 ವಿಕೆಟ್ ಪಡೆದುಕೊಂಡರು.

ಸಂಕ್ಷಿಪ್ತ ಸ್ಕೋರ್

ಚೆನ್ನೈ: 20 ಓವರ್‌ಗಳಲ್ಲಿ 192/5: ಸಂಜು 48, ಆಯುಷ್ 38, ಬ್ರೇವಿಸ್ 41; ತ್ಯಾಗಿ 35/2
ಕೆಕೆಆರ್: 20 ಓವರ್‌ಗಳಲ್ಲಿ 160/7: ರಮಣದೀಪ್ 35, ಪೋವೆಲ್ 31*; ನೂರ್ 21/3

ಮುಂಬೈಗೆ ಪಂಜಾಬ್ ಸವಾಲು

ಮುಂಬೈ: ಸೋಲಿನ ಸುಳಿಯಲ್ಲಿ ಸಿಲುಕಿಕೊಂಡಿರುವ ಮುಂಬೈ ಇಂಡಿಯನ್ಸ್ ತವರು ಪಂದ್ಯದಲ್ಲಿ ಪಂಜಾಬ್ ತಂಡವನ್ನು ಎದುರಿಸಲಿದ್ದು ಗೆಲುವಿನ ಹುಟುಕಾಟದಲ್ಲಿದೆ.



ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ 24ನೇ ಪಂದ್ಯಕ್ಕೆ ಮುಂಬೈನ ವಾಂಖೆಡೆ ಕ್ರೀಡಾಂಗಣ ಆತಿಥ್ಯ ನೀಡಲಿದೆ. ಕಳೆದ ತವರು ಪಂದ್ಯದಲ್ಲಿ ಆರ್‌ಸಿಬಿ ವಿರುದ್ಧ ಹೀನಾಯ ಸೋಲು ಕಂಡಿರುವ ಮುಂಬೈ ಪಲ್ಟಾನ್ಸ್, ಟೂರ್ನಿಯಲ್ಲಿ ಇಲ್ಲಿಯವರೆಗೇ ಒಂದೂ ಸೋಲನುಭವಿಸದ ಪಂಜಾಬ್ ಪಡೆಯನ್ನು ಎದುರಿಸಲಿದೆ. ಅಂಕಪಟ್ಟಿಯಲ್ಲಿ 9ನೇ ಸ್ಥಾನ ಹೊಂದಿರುವ ಮುಂಬೈ ಪುಟಿದೇಳುವ ತವಕದಲ್ಲಿದೆ. ಶ್ರೇಯಸ್ ಅಯ್ಯರ್ ಪಡೆ ಗೆಲುವಿನ ನಾಗಾಲೋಟ ಮುಂದುವರಿಸುವ ಭರವಸೆಯಲ್ಲಿದೆ.

ದೇಶಿ ಕ್ರಿಕೆಟ್‌ನಲ್ಲಿ ಮುಂಬೈ ಪರ ಆಡುವ ಶ್ರೇಯಸ್ ಅಯ್ಯರ್ ಇದೀಗ ತಮ್ಮ ತವರಿನೆದುರು ಎದುರಾಳಿ ತಂಡದ ನಾಯಕನಾಗಿ ಮುನ್ನಡೆಸುತ್ತಿರುವುದು ಗಮನಾರ್ಹ.

ಮುಂಬೈಗೆ ಲಯದ ಕೊರತೆ: ಆವೃತ್ತಿಯಲ್ಲಿ ತೀರಾ ಹಿನ್ನಡೆ ಅನುಭವಿಸುತ್ತಿರುವ ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ಗೆಲುವಿನ ಹುಡುಕಾಟದಲ್ಲಿ ಕಾಣಿಸಿಕೊಂಡಿದೆ. ರೋಹಿತ್ ಶರ್ಮ, ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ, ಹಾರ್ದಿಕ್ ಪಾಂಡ್ಯ ಅಂಥವರು ತಂಡದಲ್ಲಿದ್ದರೂ ಭಾರೀ ಹಿನ್ನಡೆ ಅನುಭವಿಸುತ್ತಿದೆ. ಯಾರೊಬ್ಬರೂ ಲಯದಲ್ಲಿಲ್ಲ. ರಯಾನ್ ರಿಕೆಲ್ಟನ್, ರುದರ್ ಫೋರ್ಡ್ ಮಾತ್ರ ಲಯದಲ್ಲಿದ್ದಾರೆ. ಇನ್ನು ಬೂಮ್ರಾ, ಬೋಲ್ಟ್, ದೀಪಕ್ ಅಂಥವರಿದ್ದರೂ ಬೌಲಿಂಗ್ ಪಡೆ ಭಾರೀ ದುಬಾರಿಯಾಗುತ್ತಿದೆ.

ಪಂಜಾಬ್ ತಂಡದಲ್ಲಿ ಆತ್ಮವಿಶ್ವಾಸ: ಇನ್ನು ಗೆಲುವಿನ ಹಳಿಯಲ್ಲಿರುವ ಪಂಜಾಬ್ ಕಿಂಗ್ಸ್ ತಂಡದಲ್ಲಿ ಭರವಸೆಯ ಬೆಳಕಿದೆ. ಯುವ ಬ್ಯಾಟರ್ ಪ್ರಿಯಾಂಶ್ ಆರ್ಯ, ಪ್ರಭಸಿಮ್ರನ್ ಸಿಂಗ್ ಲಯದಲ್ಲಿದ್ದಾರೆ. ಶ್ರೇಯಸ್ ಅಯ್ಯರ್ ಸ್ಫೋಟಕ ಬ್ಯಾಟಿಂಗ್ ಮಾಡುತ್ತಿದ್ದು ತಂಡದಲ್ಲಿ ವಿಶ್ವಾಸ ಹೆಚ್ಚಿದೆ. ಮಧ್ಯಮ ಕ್ರಮಾಂಕದಲ್ಲಿ ಕೂಪರ್ ಕೊನೊಲಿ, ಸ್ಟೊಯಿನಿಸ್, ಶಶಾಂಕ್ ಸಿಂಗ್, ನಿಹಾಲ್ ವಧೇರಾ ಅಂಥವರು ಭರವಸೆ ಹೆಚ್ಚಿಸಿದ್ದಾರೆ. ಬೌಲಿಂಗ್‌ನಲ್ಲಿ ಅರ್ಶದೀಪ್ ಸಿಂಗ್, ಯಾನ್ಸನ್, ಬಾರ್ಟ್ಲೆಟ್, ಚಾಹಲ್ ಅಂಥಹ ಘಟಾನುಘಟಿ ಬೌಲರ್‌ಗಳಿದ್ದು ಬಲವಾದ ನಂಬಿಕೆಯಲ್ಲಿದೆ ಪಂಜಾಬ್.

ಪಂದ್ಯದ ವಿವರ:
ಯಾವಾಗ: ಗುರುವಾರ
ಎಲ್ಲಿ: ಮುಂಬೈ
ಸಮಯ: ಸಂಜೆ 7:30
ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

13ನೇ ಸುತ್ತಿನ ಪಂದ್ಯ ಡ್ರಾ | ಜಂಟಿ ಅಗ್ರಸ್ಥಾನದಲ್ಲಿ ಆಟಗಾರ್ತಿ

ಚೆಸ್: ವೈಶಾಲಿ ಆಸೆ ಇನ್ನೂ ಜೀವಂತ

ಹೊಸದಿಲ್ಲಿ: ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್ ವೈಶಾಲಿ ಅವರು ಫಿಡೆ ಮಹಿಳಾ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿಗಾಗಿ ಸ್ಪರ್ಧೆಯಲ್ಲಿ ಮುಂದುವರಿದಿದ್ದಾರೆ. ಮಂಗಳವಾರ ನಡೆದ 13ನೇ ಸುತ್ತಿನಲ್ಲಿ ಅವರು ಟಾನ್ ಝೊಂಗ್ಯಿ ವಿರುದ್ಧ ಡ್ರಾ ಸಾಧಿಸಿದರು.

ಈ ಫಲಿತಾಂಶದೊಂದಿಗೆ ವೈಶಾಲಿ 7.5 ಅಂಕಗಳೊಂದಿಗೆ ಸಂಯುಕ್ತ ಮುನ್ನಡೆಯಲ್ಲಿದ್ದಾರೆ. ಬಿಬಿಸಾರಾ ಅವರೂ ಇದೇ ಅಂಕಗಳನ್ನು ಹೊಂದಿದ್ದಾರೆ. ಅಂತಿಮ ಸುತ್ತಿನಲ್ಲಿ ವೈಶಾಲಿ ಅವರು ಲಾಗ್ನೋ ಕಟೇರಿನಾ ಅವರನ್ನು ಎದುರಿಸಲಿದ್ದಾರೆ.

ಪ್ರಶಸ್ತಿ ಗೆಲ್ಲಲು ವೈಶಾಲಿ ಅವರಿಗೆ ಅಂತಿಮ ಸುತ್ತಿನಲ್ಲಿ ಬಿಬಿಸಾರಾಗಿಂತ ಹೆಚ್ಚು ಅಂಕ ಗಳಿಸಬೇಕು. ಜೊತೆಗೆ ಎರಡನೇ ಸ್ಥಾನದಲ್ಲಿರುವ ಝು ಜಿನರ್ ಅವರು ತಮ್ಮ ಪಂದ್ಯವನ್ನು ಗೆಲ್ಲದೇ ಇರಬೇಕು.

13ನೇ ಸುತ್ತಿನ ಪಂದ್ಯದಲ್ಲಿ ವೈಶಾಲಿ ಅವರು ಕ್ವೀನ್ಸ್ ಗ್ಯಾಂಬಿಟ್ ಅಕ್ಸೆಪ್ಟೆಡ್ ಎಂಬ ಸುರಕ್ಷಿತ ಆರಂಭವನ್ನು ಆಯ್ಕೆ ಮಾಡಿಕೊಂಡರು. 15ನೇ ನಡೆಗೆ ಬಂದಾಗ ಇಬ್ಬರ ನಡುವಿನ ಸ್ಥಿತಿ ಸಮಬಲದಲ್ಲಿತ್ತು. ಟಾನ್ ಅವರು ಕಿಂಗ್ಸೈಡ್ ಮೇಲೆ ಒತ್ತಡ ತರಲು ಪ್ರಯತ್ನಿಸಿದರೂ, ವೈಶಾಲಿ ಬಲವಾದ ರಕ್ಷಣಾತ್ಮಕ ಆಟದ ಮೂಲಕ ಅದನ್ನು ಸಮರ್ಥವಾಗಿ ಎದುರಿಸಿದರು.



ನಂತರ ಟಾನ್ ಅವರು ಕ್ವೀನ್ ಮೂಲಕ ಚೆಕ್ ನೀಡಿದಾಗ ವೈಶಾಲಿಯ ರಾಜ ಹಚ್ ಏಳನೇ ಚೌಕಕ್ಕೆ ಸರಿಯಬೇಕಾಯಿತು. ಆಟ ಇನ್ನೂ ಉದ್ವಿಗ್ನವಾಗಿದ್ದರೂ, ವೈಶಾಲಿಯ ಕುದುರೆಗಳು ಡಿ3 ಮತ್ತು ಎಫ್4 ಚೌಕಗಳಲ್ಲಿ ಬಲವಾಗಿ ನೆಲೆಗೊಂಡು ಕಿಂಗ್ಸೈಡ್ ಮೇಲೆ ಒತ್ತಡ ತರುತ್ತಿದ್ದವು. ಹೆಚ್ಚಿನ ಅಪಾಯ ತೆಗೆದುಕೊಳ್ಳುವುದನ್ನು ಟಾನ್ ತಪ್ಪಿಸಿಕೊಂಡರು. ಕೊನೆಗೆ ಇಬ್ಬರೂ ಒಂದೇ ನಡೆಗಳನ್ನು ಮರುಕಳಿಸಿ ಮೂರು ಬಾರಿ ಪುನರಾವರ್ತನೆಯ ಮೂಲಕ ಡ್ರಾಗೆ ಒಪ್ಪಿಕೊಂಡರು. ಹಿಂದಿನ ವಿಶ್ವ ಚಾಂಪಿಯನ್ ವಿರುದ್ಧ ಈ ಫಲಿತಾಂಶ ವೈಶಾಲಿಗೆ ತೃಪ್ತಿದಾಯಕವಾಗಿದ್ದು, ಅಂತಿಮ ಸುತ್ತಿನ ಮೊದಲು ಪ್ರಶಸ್ತಿ ಗೆಲ್ಲುವ ಹೋರಾಟದಲ್ಲಿ ಅವರು ಇನ್ನೂ ಬಲವಾಗಿ ಉಳಿದಿದ್ದಾರೆ.

ಬ್ಯಾಡ್ಮಿಂಟನ್‌ಗೆ ದಿಗ್ಗಜ ವಿಕ್ಟರ್ ನಿವೃತ್ತಿ

ಹೊಸದಿಲ್ಲಿ: ಎರಡು ಬಾರಿ ಒಲಿಂಪಿಕ್ ಹಾಗೂ ವಿಶ್ವ ಚಾಂಪಿಯನ್ ಆಗಿರುವ ವಿಕ್ಟರ್ ಅಕ್ಸೆಲ್‌ಸೆನ್ ಅವರು 32ನೇ ವಯಸ್ಸಿನಲ್ಲಿ ವೃತ್ತಿಪರ ಬ್ಯಾಡ್ಮಿಂಟನ್‌ಗೆ ನಿವೃತ್ತಿ ಘೋಷಿಸಿದ್ದಾರೆ.

ಪದೆ ಪದೆ ಗಾಯದ ನಿಟ್ಟಿನಲ್ಲಿ ನಿರ್ಧಾರ

ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿದ ಸಂದೇಶದಲ್ಲಿ ಡೆನ್ಮಾರ್ಕ್ ಆಟಗಾರ, ನನಗೆ ನಿವೃತ್ತಿ ಸುಲಭವಾದ ವಿಚಾರವಲ್ಲ. ಮರುಮರು ಕಾಣಿಸಿಕೊಂಡ ಬೆನ್ನು ಸಮಸ್ಯೆಗಳ ಕಾರಣದಿಂದ ನಾನು ಅತ್ಯುನ್ನತ ಮಟ್ಟದಲ್ಲಿ ತರಬೇತಿ ಮತ್ತು ಸ್ಪರ್ಧೆ ನಡೆಸಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದ್ದಾರೆ. ಈ ಪರಿಸ್ಥಿತಿಯನ್ನು ಒಪ್ಪಿಕೊಳ್ಳುವುದು ತುಂಬಾ ಕಷ್ಟವಾಗಿತ್ತು. ಆದರೆ ಈಗ ನನ್ನ ದೇಹ ಮುಂದುವರಿಯಲು ಅವಕಾಶ ನೀಡುತ್ತಿಲ್ಲ ಎಂದರು.

ಅಕ್ಸೆಲ್ಸನ್ 2010ರಲ್ಲಿ ಜೂನಿಯರ್ ವಿಶ್ವ ಚಾಂಪಿಯನ್ ಆಗಿ ಮೊದಲ ಬಾರಿಗೆ ಗಮನ ಸೆಳೆದಿದ್ದರು. ಬಳಿಕ ಅವರು ಟೋಕಿಯೋ




ಒಲಿಂಪಿಕ್ಸ್ ಮತ್ತು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸತತ ಚಿನ್ನದ ಪದಕಗಳನ್ನು ಗೆದ್ದರು. ಜೊತೆಗೆ 2016ರ ಒಲಿಂಪಿಕ್ಸ್‌ನಲ್ಲೂ ಅವರು ಕಂಚಿನ ಪದಕ ಗೆದ್ದಿದ್ದರು. ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಅವರು 2017 ಮತ್ತು 2022ರಲ್ಲಿ ಪ್ರಶಸ್ತಿಗಳನ್ನು ಜಯಿಸಿದ್ದರು. ಹಾಗೆಯೇ 2021ರಿಂದ 2023ರವರೆಗೆ ನಡೆದ ಬಿಡಬ್ಲ್ಯುಎಫ್ ವಿಶ್ವ ಟೂರ್ ಫೈನಲ್‌ನಲ್ಲಿ ಮೂರು ಬಾರಿ ಸತತವಾಗಿ ಗೆದ್ದಿದ್ದರು. ಮೂರು ಬಾರಿ ಯುರೋಪಿಯನ್ ಚಾಂಪಿಯನ್ ಆಗಿರುವ ಅವರು, 2016ರಲ್ಲಿ ಡೆನ್ಮಾರ್ಕ್ ತಂಡವನ್ನು ಥಾಮಸ್ ಕಪ್‌ನಲ್ಲಿ ಮೊದಲ ಬಾರಿಗೆ ಚಾಂಪಿಯನ್ ಮಾಡಿದರು.

ಪುರುಷರ ಬ್ಯಾಡ್ಮಿಂಟನ್ ವಿಶ್ವ ರ್‍ಯಾಂಕಿಂಗ್‌ನಲ್ಲಿ ಅವರು ಒಟ್ಟು 183 ವಾರಗಳ ಕಾಲ ನಂ.1 ಸ್ಥಾನದಲ್ಲಿದ್ದರು. ಈ ಪಟ್ಟಿಯಲ್ಲಿ ಲೀ ಚೊಂಗ್ ವೀ (398 ವಾರಗಳು) ಮತ್ತು ಲಿನ್ ದಾನ್ (211 ವಾರಗಳು) ಅವರ ನಂತರ ಮೂರನೇ ಸ್ಥಾನದಲ್ಲಿದ್ದಾರೆ. ನಾನು ಮೊದಲ ಬಾರಿಗೆ ರಾಕೆಟ್ ಹಿಡಿದ ದಿನದಿಂದಲೇ ವಿಶ್ವದ ಅತ್ಯುತ್ತಮ ಆಟಗಾರನಾಗಬೇಕೆಂಬ ಕನಸು ಕಂಡಿದ್ದೆ. ಈ ಕ್ರೀಡೆಗೆ ನಾನು ಎಲ್ಲವನ್ನೂ ಅರ್ಪಿಸಿದ್ದೇನೆ. ಇದು ನನಗೆ ಕೇವಲ ವೃತ್ತಿಯಲ್ಲ, ನನ್ನ ಜೀವನವೇ ಆಗಿತ್ತು ಎಂದು ಅಕ್ಸೆಲ್ಸನ್ ತಿಳಿಸಿದ್ದಾರೆ. ಗಮನಾರ್ಹವಾಗಿ, ಅವರು ಕಳೆದ ವರ್ಷದ ಅಕ್ಟೋಬರ್‌ನಲ್ಲಿ ನಡೆದ ಫ್ರೆಂಚ್ ಓಪನ್ ನಂತರದಿಂದ ಸ್ಪರ್ಧೆಯಿಂದ ದೂರವಾಗಿದ್ದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5955

ಎಡದಿಂದ ಬಲಕ್ಕೆ
1.ರಾಮಾಯಣದಲ್ಲಿ ಬರುವ ಲಂಕೆಯ ರಾಜ (3)
3.ಪಶ್ಚಿಮ ಭಾರತದ ಕರಾವಳಿ ಪ್ರದೇಶ (3)
7.ಪ್ರಾಣವನ್ನು ಕಡೆಯಲ್ಲಿಟ್ಟುಕೊಂಡ ತಾವರೆ (3)
8.ಮಧ್ಯೆ ವಿರಾಮವಿಲ್ಲದೆ ಮುಂದುವರೆಯುವ ಸ್ಥಿತಿ (4)
10.ಮಾರುತ್ತಾ ಇರುವಾಗಿನ ಅಸ್ತವ್ಯಸ್ತತೆ ತಿರುಗಿದೆ (4)
12.ನಿರಾಕಾರ ಬ್ರಹ್ಮನ ಸ್ವರೂಪ-ಶಂಕರ (4)
15.ಪಟ್ಟಣವಾಸಿ-ಸುಸಂಸ್ಕೃತನಿಲ್ಲಿ ತಿರುಗಿದ್ದಾನೆ (4)
17.ಕಾಯ ಕಡೆಯಲ್ಲಿರುವ ಗುಮಾನಿ (3)
18.ಸಾಮಾನುಗಳನ್ನು ಮಾರುವ ಸ್ಥಳ (3)
19.ಇಂದಿನ ಮಧ್ಯಪ್ರದೇಶದ ಪಶ್ಚಿಮಭಾಗ (3)

ಮೇಲಿನಿಂದ ಕೆಳಕ್ಕೆ
2.ಕಾಡ ಜನ ಪೂಜಿಸುವ ದೇವತೆ (4)
4.ಸ್ವಾತಂತ್ರ್ಯ ಹೋರಾಟಗಾರರಿಗೆ ಅಂಡಮಾನ್‌ನಲ್ಲಿ ನೀಡುತ್ತಿದ್ದ ಕಠಿಣ ಶಿಕ್ಷೆ (4)
5.ಅಂಚುಳ್ಳ, ಅಗಲವಾದ ದೊಡ್ಡ ಲೋಹದ ತಟ್ಟೆ (3)
6.ಅವರು ತರಲು ಹೋದದ್ದು ತಮ್ಮ ಈ ಹುಟ್ಟೂರಿಗೆ (3)
9.ದೇವಾಲಯದ ಗೋಪುರವಿಲ್ಲಿ ಉಲ್ಟಾ ಕಾಣುತ್ತಿದೆ (3)
11.ನಮೂನೆ-ಆದರ್ಶದ ಸಮಾನಪದ (3)
13.ಕಾಳಗ ನಡೆಯುವ ಸ್ಥಳ-ಯುದ್ಧಭೂಮಿ (4)
14.ಗಿಡ-ಮರಗಳು ಚಿಗುರುವ ಋತು (3)
15.ಕಳೆಯ ನಡುವೆ ತುತ್ತೂರಿಯಿದೆ (3)
16.ಮದುವೆ ಮಂಟಪದಲ್ಲಿ ನುಡಿಸುವ ಮಂಗಳವಾದ್ಯ (4)

5954 ಉತ್ತರ

ಎಡದಿಂದ ಬಲಕ್ಕೆ:
1.ಅಪಾರ 3.ಶರ್ವಾಣಿ
5.ವಿಜಯಪುರ
6.ಚಂದ್ರಹಾಸ
7.ಜಾಗತಿಕ 9.ಸಹಪಾಠಿ
11.ರಾಮಸೀತೆ
14.ದಾನವಾಂತಕ
16.ವಿವರ 17.ರಿಕಾಪು

ಮೇಲಿನಿಂದ ಕೆಳಕ್ಕೆ :
1.ಅಕ್ಷಿ 2.ರವಿಚಂದ್ರ
3.ಶರವೇಗ 4.ಗಿಣಿ
6.ಸರಸ 8.ಕವಿತೆ
10.ಪಾಲುದಾರ
12.ಮಧುಕರ 13.ಬಾವಿ
15.ತಂಪು

ಕಿರುಸುದ್ದಿ

ಸಾಮೂಹಿಕ ವಿವಾಹ

ಗದಗ: ಅಖಂಡ 38 ವರ್ಷಗಳ ಮೌನಾಚರಣೆಯ ಮೂಲಕ ಈ ಸಮಾಜವನ್ನು ತಿದ್ದಲು ಲಿಂಗೈಕ್ಯ ಬಸವರಾಜೇಂದ್ರ ಸ್ವಾಮೀಜಿ ಸಮಾಜಮುಖಿ ಕಾರ್ಯ ಶ್ಲಾಘನೀಯವಾಗಿದೆ. ನೂತನ ವಧು ವರರಿಗೆ ಶ್ರೀಗಳ ಮೌನ ತಪಸ್ಸಿನ ಆಶೀರ್ವಾದದಿಂದ ದಾಂಪತ್ಯ ಜೀವನ ಉತ್ತಮವಾಗಿರಲಿದೆ ಎಂದು ಡಾ.ಕೊಟ್ಟೂರೇಶ್ವರ ಸ್ವಾಮೀಜಿ ಹೇಳಿದರು.

ಲಕ್ಕುಂಡಿಯ ಅಲ್ಲಮ್ಮಪ್ರಭುದೇವರ ಮಠದಲ್ಲಿ ಬಸವರಾಜೇಂದ್ರ ಸ್ವಾಮೀಜಿ ರಥೋತ್ಸವದ ಅಂಗವಾಗಿ ಸಾಮೂಹಿಕ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು. ಅಲ್ಲಮ್ಮಪ್ರಭುದೇವರ ಗ್ರಾಮಕ್ಕೆ ಆಗಮಿಸಿ ಧ್ಯಾನವನ್ನು ಮಾಡಿದ ಈ ಸ್ಥಳವು ಪವಿತ್ರವಾಗಿದೆ. ಇಲ್ಲಿ ಸಕಾರಾತ್ಮಕ ಚಿಂತನೆಗಳು ಮೈಗೂಡಲಿವೆ. ಆದ್ದರಿಂದ ನೂತನ ವಧು ವರರು ಜೀವನದಲ್ಲಿ ಆಧ್ಯಾತ್ಮಿಕ ಚಿಂತನೆಗಳ ವಿಚಾರಗಳನ್ನು ಪರಸ್ಪರ ಹಂಚಿಕೊಳ್ಳಬೇಕು. ಶ್ರೀಮಠದ ಜೊತೆ ಬಾಂಧವ್ಯವನ್ನು ಇಟ್ಟುಕೊಂಡು ಜೀವನವನ್ನು ಸಾಗಿಸಬೇಕು ಎಂದರು.

ಹರಪನಹಳ್ಳಿ ತಾಲೂಕಿನ ನಿಲಗುಂದ ಗ್ರಾಮದ ಗುಡ್ಡದ ಸುಕ್ಷೇತ್ರದ ಚನ್ನಬಸವ ಶಿವಯೋಗಿಗಳು ಮಾತನಾಡಿದರು. ಮಹಾಂತಯ್ಯಶಾಸ್ತ್ರಿಗಳು ಬದ್ನಿಮಠ, ಶಂಕ್ರಯ್ಯಶಾಸ್ತ್ರಿಗಳು ಹಿರೇಮಠ ನೇತೃತ್ವದಲ್ಲಿ 6 ಜೋಡಿ ಸಾಮೂಹಿಕ ವಿವಾಹಗಳು ನೆರವೇರಿದವು. ಮಠದ ಜೀರ್ಣೋದ್ಧಾರಕ್ಕೆ ಸೋಬಾನ ಪದ ಅಕಾಡೆಮಿ ಪ್ರಶಸ್ತಿ ವಿಜೇತೆ ಲಕ್ಷ್ಮವ್ವ ಗೌಳಿ ಒಂದು ಲಕ್ಷ ರೂ. ದೇಣಿಗೆ ನೀಡಿದರು. ಸಿದ್ಧಲಿಂಗೇಶ್ವರ ಸ್ವಾಮೀಜಿ, ನಿವೃತ್ತ ಶಿಕ್ಷಕ ಅಶೋಕ ಬೂದಿಹಾಳ ಇದ್ದರು.

ಹೆಚ್ಚುವರಿ ರಸಗೊಬ್ಬರ ಬಳಕೆ ಸಲ್ಲ

ನರಗುಂದ: ಕೃಷಿ ಪರಿಕರ ಮಾರಾಟಗಾರರು ಕಡ್ಡಾಯವಾಗಿ ರೈತರ ಎಫ್‌ಐಡಿಯನ್ನು ಪರಿಶೀಲಿಸಿ, ನಿಗದಿತ ಪ್ರಮಾಣದಲ್ಲಿ ರಸಗೊಬ್ಬರವನ್ನು ಕೆ-ಕಿಸಾನ್ ತಂತ್ರಾಂಶ ಬಳಸಿಕೊಂಡು ಪಿಓಎಸ್ ಮಷಿನ್ ಮೂಲಕ ರಸಗೊಬ್ಬರ ವಿತರಿಸಬೇಕು. ಇದರಿಂದ ಕಾಳಸಂತೆಯಲ್ಲಿ ರಸಗೊಬ್ಬರ ಮಾರಾಟ ಸಾಧ್ಯವಾಗುವುದಿಲ್ಲ. ರೈತರು ಅನವಶ್ಯಕವಾಗಿ ಹೆಚ್ಚುವರಿ ರಸಗೊಬ್ಬರ ಬಳಸದಂತೆ ನಿಯಂತ್ರಿಸಿ ಮಣ್ಣಿನ ಫಲವತ್ತತೆಯನ್ನು ಕಾಯ್ದುಕೊಳ್ಳಲು ಸಹಾಯವಾಗುವುದು ಎಂದು ಜಂಟಿ ಕೃಷಿ ನಿರ್ದೇಶಕ ಚೇತನ ಪಾಟೀಲ ಹೇಳಿದರು. ತಾಲೂಕು ಪಂಚಾಯತ್ ಸಭಾಭವನದಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ತಾಲೂಕಿನ ಖಾಸಗಿ ಹಾಗೂ ಸಹಕಾರಿ ಸಂಘಗಳ ರಸಗೊಬ್ಬರ ಮಾರಾಟಗಾರರ ಸಭೆಯಲ್ಲಿ ಮಾತನಾಡಿ, ಯೂರಿಯಾ ಹಾಗೂ ಡಿಎಪಿಗಳ ಬದಲಾಗಿ ನ್ಯಾನೋ ಯೂರಿಯಾ, ನ್ಯಾನೋ ಡಿಎಪಿ ಅಂತಹ ದ್ರವರೂಪದ ರಸಗೊಬ್ಬರಗಳನ್ನು ಬಳಸುವ ಬಗ್ಗೆ ರೈತರಿಗೆ ಜಾಗೃತಿ ಮೂಡಿಸಬೇಕು. ಕೃಷಿ ಪರಿಕರ ಮಾರಾಟಗಾರರು ಕಡ್ಡಾಯವಾಗಿ ತಮ್ಮ ಮಳಿಗೆಯ ಸೂಚನಾ ಫಲಕದಲ್ಲಿ ರಸಗೊಬ್ಬರಗಳ ಮಾಹಿತಿ ಮತ್ತು ಅವುಗಳ ದರ ಪಟ್ಟಿಯನ್ನು ಪ್ರದರ್ಶಿಸಬೇಕು. ಯಾವುದೇ ಕಾರಣಕ್ಕೂ ನಿಗದಿತ ದರಕ್ಕಿಂತ ಹೆಚ್ಚಿನ ದರಕ್ಕೆ ರಸಗೊಬ್ಬರ ಮಾರಾಟ ಮಾಡಿದಲ್ಲಿ ಅಂತವರ ವಿರುದ್ಧ ಕಾನೂನಾತ್ಮಕ ಕ್ರಮ ಜರುಗಿಸಲಾಗುವುದು. ತಾಲೂಕಿನ ರೈತರಿಗೆ ಮಾತ್ರ ರಸಗೊಬ್ಬರವನ್ನು ವಿತರಣೆ ಮಾಡಬೇಕು ಮತ್ತು ಕೃತಕ ಅಭಾವ ಸೃಷ್ಟಿಯಾಗದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು. ತಹಶೀಲ್ದಾರ್ ಶ್ರೀಶೈಲ ತಳವಾರ ಮಾತನಾಡಿ, ಯಾವುದೇ ಕಾರಣಕ್ಕೂ ರೈತರಿಗೆ ರಸಗೊಬ್ಬರದ ಕೊರತೆಯಾಗದಂತೆ ನೋಡಿಕೊಳ್ಳಬೇಕು. ಸೂಕ್ತ ಪ್ರಮಾಣದಲ್ಲಿ ರಸಗೊಬ್ಬರವನ್ನು ದಾಸ್ತಾನು ಮಾಡಿಕೊಳ್ಳಲು ಮತ್ತು ನಿಗದಿತ ದರಕ್ಕಿಂತ ಹೆಚ್ಚಿನ ದರದಲ್ಲಿ ರಸಗೊಬ್ಬರ ಮಾರಾಟ ಮಾಡದಂತೆ ಮಾರಾಟಗಾರರಿಗೆ ಸೂಚಿಸಿದರು. ಜಂಟಿ ಕೃಷಿ ನಿರ್ದೇಶಕ ಅಧಿಕಾರಿ ಚೈತ್ರ ಅವರು ಕೆ-ಕಿಸಾನ್ ತಂತ್ರಾಂಶದ ಮೂಲಕ ರಸಗೊಬ್ಬರ ವಿತರಣೆ ಮಾಡಬೇಕೆಂದು ಹೇಳಿದರು. ಕೃಷಿ ಪರಿಕರ ಮಾರಾಟಗಾರರ ಸಂಘದ ಅಧ್ಯಕ್ಷ ವೆಂಕಟೇಶ ಗುಡಿಸಾಗರ ಮಾತನಾಡಿದರು. ಕೃಷಿ ಇಲಾಖೆಯ ಉಪ ಕೃಷಿ ನಿರ್ದೇಶಕ ಪಾಲಾಕ್ಷಗೌಡ, ಆತ್ಮ ಯೋಜನೆಯ ಉಪ ಯೋಜನಾ ನಿರ್ದೇಶಕ ಮಂಜುನಾಥ ಭರಮಗೌಡ್ರ, ಸಹಾಯಕ ಕೃಷಿ ನಿರ್ದೇಶಕ ಎಂ.ಎಸ್. ಕುಲಕರ್ಣಿ ಇತರರಿದ್ದರು.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜಿ ಶೇಂಗಾ	3029-6960
ಅಲಸಂದಿ	3277-5969
ಅವರೆ	1529-1529
ಕಡಲೆ	1897-5439
ಉದ್ದು	4044-5709
ಔಡಲ	5519-5519
ಹವೀಜ	7881-7881
ಒಣಮೆಣಸಿಕಾಯಿ	6669-49009
ಹೆಸರು	1309-7801
ಹುರಳಿ	2807-5279
ಜೋಳ	1569-4612
ಗೋವಿನಜೋಳ	1015-1644
ಮಡಕಿ	10169-10169
ಸಾಸವಿ	4312-4312
ನವಣಿ	2689-2689
ಕುಸಬಿ	2009-5727
ಸೂರ್ಯಕಾಂತಿ	5319-6270
ತೊಗರಿ	4512-4759



ಗದಗ: ಲಕ್ಕುಂಡಿ ಗ್ರಾಮದ ಅಲ್ಲಮ ಪ್ರಭುದೇವರ ಮಠದ ಲಿಂ.ಬಸವರಾಜೇಂದ್ರ ಸ್ವಾಮೀಜಿ ಮಹಾ ರಥೋತ್ಸವ ಸಂಭ್ರಮದಿಂದ ಜರುಗಿತು. ಅಲ್ಲಮಪ್ರಭುದೇವರ ಮಠದಿಂದ ಚೌಕಿಮಠದವರೆಗೂ ಸಾಗಿದ ರಥಕ್ಕೆ ಹೊಸರಿತ್ತಿಯ ಗುದ್ದಲೀಶ್ವರ ಶ್ರೀಗಳು ಹಾಗೂ ಮಠದ ಸಿದ್ಧಲಿಂಗೇಶ್ವರ ಶ್ರೀಗಳು ಪೂಜೆ ಸಲ್ಲಿಸಿ ಚಾಲನೆ ನೀಡಿದರು.

ನಾರಿಶಕ್ತಿ ವಂದನಾ ಕಾಯ್ದೆ ಜಾಗೃತಿ: ಬೈಕ್ ರ‍್ಯಾಲಿ

ಗದಗ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ವಿಕಸಿತ ಭಾರತದ ಸಂಕಲ್ಪದ ಮಹತ್ವದ ಮೈಲಿಗಲ್ಲಾದ ಶೇ.33ರಷ್ಟು ಮಹಿಳಾ ಮೀಸಲಾತಿ (ನಾರಿ ಶಕ್ತಿ ವಂದನಾ ಅಧಿನಿಯಮ 2026) ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಬುಧವಾರ ನಗರದಲ್ಲಿ ಬೃಹತ್ ಬೈಕ್ ರ‍್ಯಾಲಿ ನಡೆಯಿತು.

ಬೈಕ್ ರ‍್ಯಾಲಿಗೆ ಬಿಜೆಪಿ ಜಿಲ್ಲಾಧ್ಯಕ್ಷ ರಾಜು ಕುರುಡಗಿ ಹಾಗೂ ನಿಗಮ ಮಂಡಳಿ ಮಾಜಿ ಅಧ್ಯಕ್ಷ ಎಂ.ಎಸ್.ಕರೀಗೌಡ್ರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಿಂಗರಾಜ ಪಾಟೀಲ ಹಾಗೂ ಮುಖಂಡರು ಚಾಲನೆ ನೀಡಿದರು. ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ನಿರ್ಮಲಾ ಕೊಳ್ಳಿ, ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ಸ್ವಾತಿ ಅಕ್ಕಿ, ಉಷಾ ದಾಸರ, ವಿಜಯಲಕ್ಷ್ಮೀ ದಿಂಡೂರ, ವಿದ್ಯಾವತಿ ಗಡಗಿ, ಜಯಶ್ರೀ ಉಗಲಾಟದ, ಶಾರದಾ ಸಜ್ಜನರ, ಪಾರ್ವತಿ ಪಟ್ಟಣಶೆಟ್ಟಿ, ಅಕ್ಕಮ್ಮ ವಸ್ತ್ರದ, ಪುಷ್ಪಾ ಪೂಜಾರ, ರೇಖಾ ಗೌಳಿ, ಪ್ರೀತಿ ಶಿವಪ್ಪನಮಠ, ರೇಖಾ ಬಂಗಾರಶೆಟ್ಟರ, ಯೋಗೇಶ್ವರಿ ಬಾವಿಕಟ್ಟಿ, ಶಿವಲೀಲಾ ಉಮಚಗಿ, ಮಾಧುರಿ ಮಾಳೆಕೊಪ್ಪ, ವಿಜಯಲಕ್ಷ್ಮೀ ಮಾನ್ವಿ, ಪವಿತ್ರಾ ಮುದುಗಲ್, ನೇತ್ರ ಜೋಗಿನ್, ಶ್ರೀದೇವಿ ಲಕ್ಕಾಪುರ್, ಸುನಿತಾ ಹಳ್ಳಿ, ಪ್ರಮುಖರಾದ ಅನೀಲ ಅಬ್ಬಿಗೇರಿ, ಸುಧೀರ ಕಾಟಿಗರ, ನಾಗರಾಜ ತಳವಾರ, ಶಂಕರ ಮಲ್ಲಸಮುದ್ರ, ರಮೇಶ ಸಜ್ಜಗಾರ, ದೇವೇಂದ್ರಪ್ಪ ಹೂಗಾರ, ರವಿ ಮಾನ್ವಿ, ವಿನೋದ ಹಂಸನೂರ ಇದ್ದರು.



ಗದಗ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ವಿಕಸಿತ ಭಾರತದ ಸಂಕಲ್ಪದ ಮಹತ್ವದ ಮೈಲಿಗಲ್ಲಾದ ಶೇ.33ರಷ್ಟು ಮಹಿಳಾ ಮೀಸಲಾತಿ (ನಾರಿ ಶಕ್ತಿ ವಂದನಾ ಅಧಿನಿಯಮ 2026) ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಬುಧವಾರ ನಗರದಲ್ಲಿ ಬೃಹತ್ ಬೈಕ್ ರ‍್ಯಾಲಿ ನಡೆಯಿತು.

ಡಾ.ಅಂಬೇಡ್ಕರ್, ಡಾ.ಬಾಬು ಜಗಜೀವನರಾಂ ಧ್ರುವತಾರೆಗಳು

ನರಗುಂದ: ದೇಶದಲ್ಲಿ ಬಡವ ಮತ್ತು ಶ್ರೀಮಂತ ಸೇರಿದಂತೆ ಎಲ್ಲ ವರ್ಗದ ಜನತೆಗೆ ಸರಿಸಮಾನವಾಗಿ ನ್ಯಾಯ ಸಿಗುವಂತೆ ಸಂವಿಧಾನವನ್ನು ಡಾ.ಬಿ.ಆರ್. ಅಂಬೇಡ್ಕರ್ ರಚಿಸಿದ್ದಾರೆ. ಕಷ್ಟದ ಜೀವನದಲ್ಲಿ ಶಿಕ್ಷಣ ಕಲಿತು ಮೇಲೆ ಬಂದಿರುವ ಡಾ.ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನರಾಂ ಅವರು ಭಾರತ ದೇಶದ ಎರಡು ಧ್ರುವತಾರೆಗಳು ಎಂದು ಶಾಸಕ ಸಿ.ಸಿ. ಪಾಟೀಲ ಹೇಳಿದರು.

ಬಾಲಕಿಯರ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ತಾಲೂಕು ಆಡಳಿತ, ತಾಪಂ, ಪುರಸಭೆ, ಸಮಾಜ ಕಲ್ಯಾಣ ಇಲಾಖೆ ಮತ್ತು ವಿವಿಧ ಇಲಾಖೆಗಳ ಆಶ್ರಯದಲ್ಲಿ ನಡೆದ ಡಾ.ಬಾಬು ಜಗಜೀವನರಾಮ ಹಾಗೂ ಡಾ.ಬಿ ಆರ್ ಅಂಬೇಡ್ಕರ್ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಉಪನ್ಯಾಸಕ ಡಾ.ಸಿ.ಬಿ. ನಂದನ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರು ಹಿಂದುಳಿದವರ ಮತ್ತು ತುಳಿತಕ್ಕೆ ಒಳಗಾದವರಿಗೆ ಜೀವನ ರೂಪಿಸಿಕೊಟ್ಟಿದ್ದಾರೆ. ಜನಸಾಮಾನ್ಯರಿಗೆ ಸಂವಿಧಾನದ ಮೂಲಕ ಮೂಲಭೂತ ಹಕ್ಕನ್ನು ನೀಡಿದ್ದಾರೆ. ಅಂಬೇಡ್ಕರ್ ಅವರ ಚಿಂತನೆ, ಮೌಲ್ಯಗಳು ಯುವಕರಿಗೆ ದಾರಿದೀಪವಾಗಿವೆ ಎಂದರು.

ತಹಶೀಲ್ದಾರ್ ಶ್ರೀಶೈಲ ತಳವಾರ, ವಾಸು ಜೋಗಣ್ಣವರ, ಡಾ.ಪರಶುರಾಮ ಮಾತನಾಡಿದರು. ಈ ಸಂದರ್ಭದಲ್ಲಿ ತಾಪಂ ಇಒ ಎಸ್.ಕೆ ಇನಾಮದಾರ, ವಾಸು ಜೋಗನ್ನವರ, ಎನ್.ಕೆ.ಸೋಮಾಪೂರ, ವಿವೇಕ ಯಾವಗಲ್ಲ, ಎಫ್.ವೈ. ಜೋಗಣ್ಣವರ, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಚ್.ಕಂಬಳಿ, ಮುಖ್ಯಾಧಿಕಾರಿ ಸಂಗಮೇಶ ಬ್ಯಾಳಿ, ಸಿಪಿಐ ಮಂಜುನಾಥ ನಡುವಿನಮನಿ, ಸಮಾಜ ಕಲ್ಯಾಣಾಧಿಕಾರಿ ಬಿ.ಎಂ. ಬಡಿಗೇರ, ಮಲ್ಲಪ್ಪ ಪೂಜಾರ, ಪ್ರಮೋದ ಜಾಧವ, ಎಸ್.ವೈ.ಸುರಕೋಡ ಹಾಗೂ ದಲಿತ ಸಂಘಟನೆ ಮುಖಂಡರು, ಕಾರ್ಯಕರ್ತರು ಪಾಲ್ಗೊಂಡಿದ್ದರು.



ಸರ್ವರೂ ಕಡ್ಡಾಯ ಶಿಕ್ಷಣ ಪಡೆಯಲಿ

ದೇಶದ ಪ್ರತಿಯೊಬ್ಬ ಯುವಕರು ರಾಷ್ಟ್ರಕ್ಕಾಗಿ ಶಿಕ್ಷಣ ಮತ್ತು ಸಂಸ್ಕಾರವನ್ನು ಹೊಂದಬೇಕು. ಶಿಕ್ಷಣ ಪಡೆದ ವ್ಯಕ್ತಿಗೆ ಈ ದೇಶದಲ್ಲಿ ಏನು ಸಿಗಬೇಕೋ ಅದೆಲ್ಲವೂ ಸಿಗಲಿದೆ. ಆದ್ದರಿಂದ ಎಲ್ಲರೂ ಕಡ್ಡಾಯವಾಗಿ ಶಿಕ್ಷಣ ಹೊಂದಬೇಕು. ಇದರಿಂದ ಸದೃಢವಾದ ದೇಶವನ್ನು ನಿರ್ಮಾಣ ಮಾಡಲು ಸಾಧ್ಯವೆಂದು ಶಾಸಕ ಸಿ.ಸಿ. ಪಾಟೀಲ ಹೇಳಿದರು.

» ಸಮಾರಂಭದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು

ಕ್ಷೇತ್ರಗಳ ಪುನರ್ ವಿಂಗಡಣೆ ಅವಶ್ಯ: ವೈ.ಎನ್. ಗೌಡರ



ಮುಂಡರಗಿ: ಅಭಿವೃದ್ಧಿಯ ಹಿತದೃಷ್ಟಿಯಿಂದ ತಾಲೂಕಿಗೊಂದು ವಿಧಾನಸಭಾ ಕ್ಷೇತ್ರ ಇರಬೇಕು. ಇದರಲ್ಲಿ ಯಾವುದೇ ರಾಜಕೀಯ ಮಾಡದೇ ಮುಂಡರಗಿ ವಿಧಾನಸಭಾ ಕ್ಷೇತ್ರ ಮರಳಿ ಬರಲೇ ಬೇಕು ಎಂದು ಮುಂಡರಗಿ ತಾಲೂಕು ಅಭಿವೃದ್ಧಿ ಹೋರಾಟ ವೇದಿಕೆ ಅಧ್ಯಕ್ಷ ವೈ.ಎನ್.ಗೌಡರ ಆಗ್ರಹಿಸಿದರು.

ಅವರು ಈ ಕುರಿತು ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿ, 2002 ರಲ್ಲಿ ದಿ.ವಾಜಪೇಯಿ ಅವರ ನೇತೃತ್ವದ ಸರ್ಕಾರ ಕ್ಷೇತ್ರಗಳ ಪುನರ್ ವಿಂಗಡಣೆ ಮಸೂದೆಯನ್ನು ಸಂಸತ್‌ನಲ್ಲಿ ಮಂಡಿಸಿ ಒಪ್ಪಿಗೆ ಪಡೆದು ಕುಲದೀಪಸಿಂಗ್ ಆಯೋಗವನ್ನು ರಚಿಸಿ ,ಆ ವರದಿಯನ್ನು ಒಪ್ಪಿ ವರದಿಯಂತೆ ಕ್ಷೇತ್ರಗಳ ಪುನರ್ ವಿಂಗಡನೆಯಾಗಿ 2008 ರಲ್ಲಿ ವಿಧಾನಸಭಾ ಚುನಾವಣೆ ಮತ್ತು 2009ರಲ್ಲಿ ಲೋಕಸಭಾ ಚುನಾವಣೆ ನಡೆದಿದ್ದು ಇತಿಹಾಸ. ಈಗ 25 ವರ್ಷಗಳವರೆಗೆ ಈ ವಿಂಗಡನೆ ಇದ್ದು, ಮುಂದಿನ ಚುನಾವಣೆಗೆ ಮತ್ತೆ ಕ್ಷೇತ್ರವಿಂಗಡಣೆಯ ಪ್ರಕ್ರೀಯೆ ಪ್ರಾರಂಭಿಸಲಾಗಿದ್ದು, ಮುಂಡರಗಿ ತಾಲೂಕಿನ ಜನರು ಈಗಲೇ ಎಚ್ಚೆತ್ತು ಹೋರಾಟಕ್ಕೆ ಸಿದ್ಧವಾಗುತ್ತಿದ್ದಾರೆ. 2008ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮುಂಡರಗಿ ಕ್ಷೇತ್ರ ಕಳೆದುಕೊಂಡು ಹರಿದು ಹಂಚಿಹೋಗಿತ್ತು. ಮುಂಡರಗಿ ತಾಲೂಕಿನ ಮುಂಡರಗಿ ಹೋಬಳಿಯನ್ನು ಶಿರಹಟ್ಟಿ ಮೀಸಲು ಮತಕ್ಷೇತ್ರಕ್ಕೆ ಮತ್ತು ತಾಲೂಕಿನ ಡಂಬಳ ಹೋಬಳಿಯನ್ನು ರೋಣ ಮತಕ್ಷೇತ್ರಕ್ಕೆ ಸೇರಿಸಿ ಮುಂಡರಗಿ ತಾಲೂಕಿನ ಕತ್ತು ಹಿಸುಕಲಾಗಿದೆ. ತಾಲೂಕಿನ ಭೌಗೋಲಿಕ ಕ್ಷೇತ್ರ, ಜನಸಂಖ್ಯೆ, ಆ ತಾಲೂಕಿಗೆ ಇರುವ ಗ್ರಾಮಗಳ ಸಂಖ್ಯೆ ಮತ್ತು ಸಮೂಹ ಸಂಹನ ಸೌಲಭ್ಯಗಳ ಮಾನದಂಡವನ್ನು ಆಧರಿಸಿ ಕ್ಷೇತ್ರ ವಿಂಗಡನೆ ಮಾಡುವುದು ಸರ್ವಸಾಮಾನ್ಯ. ಆದರೆ ಇವೆಲ್ಲ ಮಾನದಂಡಕ್ಕೂ ಮುಂಡರಗಿ ಮುಂದೆ ಇದ್ದರೂ ರಾಜಕೀಯ ನಡೆದು ಮುಂಡರಗಿ ತನ್ನ ಕ್ಷೇತ್ರವನ್ನು ಕಳೆದುಕೊಂಡಿತ್ತು.

ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಭೌಗೋಲಿಕ ವಿಸ್ತೀರ್ಣ 891 ಚ.ಕಿ.ಮೀ, ಒಟ್ಟು ಗ್ರಾಮಗಳು 58, 2001ರ ಜನಸಮಖ್ಯೆ 1,16,309 ಆದರೆ ಜಿಲ್ಲೆಯ ನರಗುಂದ ತಾಲೂಕಿನ ಭೌಗೋಲಿಕ ವಿಸ್ತೀರ್ಣ 436 ಚ.ಕಿ.ಮೀ, ಒಟ್ಟು ಗ್ರಾಮಗಳು 35 ಹಾಗೂ 2001ರ ಜನಸಂಖ್ಯೆ 92,676 ಇದ್ದರೂ ನರಗುಂದಕ್ಕೆ ಹಾಸಿಗೆ ಹಾಸಿ ಮುಂಡರಗಿ ತಾಲೂಕನ್ನು ಕಡೆಗಣಿಸಲಾಗಿತ್ತು. 2011 ರ ಗಣತಿಯ ಪ್ರಕಾರ ಮುಂಡರಗಿ ತಾಲೂಕಿನ ಜನಸಂಖ್ಯೆ 1,31897 ಮತ್ತು ನರಗುಂದ ತಾಲೂಕಿನ ಜನಸಂಖ್ಯೆ 100623 ಇದ್ದು,ಈಗಲೂ ಮುಂಡರಗಿಯೇ ಮೇಲುಗೈ ಇದೆ. ಆದ್ದರಿಂದ ಮುಂಡರಗಿ ವಿಧಾನಸಭಾ ಕ್ಷೇತ್ರ ಈ ಮರುವಿಂಗಡನೆಯಲ್ಲಿ ಆಗಲೇ ಬೇಕು ಎನ್ನುವುದು ಇಲ್ಲಿಯವರ ಒತ್ತಾಯವಾಗಿದೆ. ಈಗಿನ ನರಗುಂದ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಲಕ್ಕುಂಡಿ, ಅಡವಿಸೋಮಾಪೂರ ಮುಂತಾದ ಹಳ್ಳಿಗಳು ಮೊದಲು ಮುಂಡರಗಿ ವಿಧಾನಸಭಾಕ್ಷೇತ್ರಕ್ಕೆಸೇರಿದ್ದವು,ಅವುಗಳನ್ನು ಕಸಿದುಕೊಂಡು ನರಗುಂದಕ್ಕೆ ಸೇರಿಸಿ ಆ ಕ್ಷೇತ್ರವನ್ನು ಉಳಿಸಿಕೊಳ್ಳಲಾಗಿದೆ.ಇದು ಅವೈಜ್ಞಾನಿಕವಾಗಿದ್ದು, ಈ ಸರಿಯ ವಿಂಗಡನೆಯಲ್ಲಿ ಮುಂಡರಗಿಗೆ ನ್ಯಾಯ ಸಿಗಬೇಕು ಎಂದು ಒತ್ತಾಯಿಸಿದರು.



ಮುಂಡರಗಿ: ಶ್ರೀ ಮೃಡಗಿರಿ ಗೆಳೆಯರ ಬಳಗದ ವತಿಯಿಂದ ಹಮ್ಮಿಕೊಂಡಿದ್ದ ಮುಂಡರಗಿ ಸ್ಟ್ರೀಟ್ ಪ್ರಿಮಿಯರ್ ಲೀಗ್ ಹಾರ್ಡ್ ಟೆನಿಸ್ ಕ್ರಿಕೆಟ್ ಟೂರ್ನಾಮೆಂಟ್‌ನ್ನು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳು ಡಾ.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಸಮರ್ಪಿಸುವ ಮೂಲಕ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಡಿ.ಡಿ.ಮೋರನಾಳ ವಹಿಸಿದ್ದರು. ಅಲ್ಲಾಭಕ್ಷಿ ಬೆಟಗೇರಿ, ಮಂಜುನಾಥ ಮುಧೋಳ ಮುಂತಾದವರಿದ್ದರು.

ಶ್ರೀ ಫಕೀರೇಶ್ವರ ಕೃತಿ ಬಿಡುಗಡೆಗೊಳಿಸಿದ ಸಿಎಂ

ಲಕ್ಷ್ಮೇಶ್ವರ: ಪಟ್ಟಣದ ಶಿಕ್ಷಕ ಸಾಹಿತಿ ಹಾಗೂ ಲಕ್ಷ್ಮೇಶ್ವರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಈಶ್ವರ ಮೆಡ್ಲೇರಿ ರಚಿಸಿದ ಸಾಮರಸ್ಯದ ಸುಧಾಕರ ಶಿರಹಟ್ಟಿ ಶ್ರೀ ಫಕೀರೇಶ್ವರ ಕೃತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾರ್ಪಣೆಗೊಳಿಸಿದರು. ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಪ್ರಕಟಿಸಿದ ಕನ್ನಡ ಸಾಮರಸ್ಯ ನೆಲೆಗಳು ಶೀರ್ಷಿಕೆಯ ಅಡಿಯಲ್ಲಿ ರಾಜ್ಯದ ವಿಭಿನ್ನ ಭಾಗಗಳ ಲೇಖಕರ ಒಟ್ಟು 41 ಕೃತಿಗಳನ್ನು ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮುಖ್ಯಮಂತ್ರಿಗಳು ಬಿಡುಗಡೆಗೊಳಿಸಿದರು. ಸಚಿವರು ಶಾಸಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಮಂಜುನಾಥ, ಕನ್ನಡದ ಖ್ಯಾತ ಸಾಹಿತಿ ಡಾ. ಬರಗೂರು ರಾಮಚಂದ್ರಪ್ಪ, ಶಿಕ್ಷಣ ತಜ್ಞ ಡಾ. ನಿರಂಜನರಾಧ್ಯ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ. ಸಂತೋಷ ಹಾನಗಲ್ , ಲಕ್ಷ್ಮೇಶ್ವರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಸಲಹಾ ಸಮಿತಿಯ ಈರಣ್ಣ ಗಾಣಿಗೇರ, ಮಹೇಶ ಮಣಕವಾಡ, ನಾಗಯ್ಯ ಚಿಂಚಲಿ, ಈಶ್ವರ ಬನ್ನಿಕೊಪ್ಪ,ಗುರುಪುತ್ರ ಮೆಡ್ಲೇರಿ ಇದ್ದರು.



ಬೆಣ್ಣೆಹಳ್ಳದ ಶಾಶ್ವತ ಪರಿಹಾರಕ್ಕೆ ಕೇಂದ್ರ ಸರ್ಕಾರ ಶೀಘ್ರ ಅನುದಾನ ನೀಡಲಿ: ಸಿಸಿಪಾ

ನರಗುಂದ: ರಾಜ್ಯ ಸರ್ಕಾರ ಆರ್ಥಿಕ ಸಂಕಷ್ಟದ ನಡುವೆಯೂ ಬೆಣ್ಣೆಹಳ್ಳದ ಹೂಳೆತ್ತುವ ಕಾಮಗಾರಿಗೆ 200 ಕೋಟಿ ರೂ. ಅನುದಾನ ನೀಡಿದ್ದಕ್ಕಾಗಿ ಧನ್ಯವಾದ ಹೇಳುತ್ತೇನೆಂದು ಮಾಜಿ ಸಚಿವ, ಹಾಲಿ ಶಾಸಕ ಸಿ.ಸಿ. ಪಾಟೀಲ ಹೇಳಿದರು.

ತಾಲೂಕಿನ ಬನಹಟ್ಟಿ ಗ್ರಾಮದ ಹತ್ತಿರದಲ್ಲಿ ಬೆಣ್ಣೆಹಳ್ಳದಿಂದ ಮೆಣಸಗಿ ಮಲಪ್ರಭಾ ನದಿಯವರೆಗೆ ಬೆಣ್ಣೆಹಳ್ಳ ಪ್ರವಾಹ ನಿಯಂತ್ರಣ ಕಾಮಗಾರಿಯನ್ನು 38 ಕೋಟಿ ವೆಚ್ಚದಲ್ಲಿ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಬೆಣ್ಣೆಹಳ್ಳ ಹೂಳೆತ್ತುವುದು ಸೇರಿದಂತೆ ಇನ್ನಿತರೆ ಅಭಿವೃದ್ಧಿ ಕಾರ್ಯಗಳಿಗಾಗಿ ಕುಂದಗೋಳ ಶಾಸಕ ಎಂ.ಆರ್. ಪಾಟೀಲ, ನವಲಗುಂದ ಶಾಸಕ ಎನ್.ಎಚ್. ಕೋನರಡ್ಡಿ ಮತ್ತು ನಾನು ಮೂವರು ಸೇರಿಕೊಂಡು ಕೇಂದ್ರದ ಬಳಿ ತೆರಳಿ 1686 ಕೋಟಿ ಅನುದಾನವನ್ನು ನೀಡುವಂತೆ ಮನವಿ ಮಾಡಿದ್ದೇವೆ. ಇದರಲ್ಲಿ ನರಗುಂದ ಮತಕ್ಷೇತ್ರದ ಅಭಿವೃದ್ಧಿಗೆ 450 ಕೋಟಿ ರೂ. ದೊರಕಲಿದೆ. ಆದ್ದರಿಂದ ಬೆಣ್ಣೆಹಳ್ಳದ ಶಾಶ್ವತ ಪರಿಹಾರಕ್ಕೆ ಕೇಂದ್ರ ಸರ್ಕಾರವು ಶೀಘ್ರ ಅನುದಾನ ನೀಡಬೇಕಿದ್ದು, ಮಳೆಗಾಲ ಪ್ರಾರಂಭದ ಮೊದಲೇ ಬೆಣ್ಣೆಹಳ್ಳ ಹೂಳೆತ್ತುವ ಕಾಮಗಾರಿ ಬೇಗ ಮುಗಿಯಲಿ. ಹೂಳೆತ್ತಿದ್ದ ಮಣ್ಣನ್ನು ದಡದಲ್ಲಿ ಹಾಕದೇ ದೂರದಲ್ಲಿ ಹಾಕಬೇಕು. ದಡದಲ್ಲಿ ಹಾಕಿದರೆ ಮಳೆಗೆ ಮತ್ತೇ ಹಳ್ಳ ಸೇರುತ್ತದೆ ಎಂದರು.

ಕಾರ್ಯನಿರ್ವಾಹಕ ಅಭಿಯಂತರ ಅರ್.ಎಂ. ಜಾಲಿಹಾಳ ಮಾತನಾಡಿ, ಬೆಣ್ಣೆಹಳ್ಳದ ಹೂಳೆತ್ತುವ ಕಾರ್ಯದಲ್ಲಿ 15 ಗ್ರಾಮಗಳು ಬರಲಿವೆ. ಬೆಣ್ಣೆಹಳ್ಳವು ಶೇ.45ರಷ್ಟು ಅತಿಕ್ರಮಣ ಆಗಿದೆ. ಹರಿಯುವ ನೀರಿನ ಮಾರ್ಗ ಸುಲಭವಾಗಿದ್ದರೆ, ಯಾವುದೇ ಪ್ರವಾಹ ಉಂಟಾಗುವುದಿಲ್ಲ, ಹಳ್ಳಕೊಳ್ಳಗಳ ಮೂಲಸ್ವರೂಪವನ್ನು ಬದಲಾಯಿಸುವ ಪ್ರಯತ್ನ ಮಾಡಬೇಡಿ ಎಂದರು. ವೇ.ಮೂ ಸೊಲಬಯ್ಯ ಸ್ವಾಮೀಜಿ, ಶಿವನಗೌಡ ಕರಿಗೌಡ್ರ, ಬಾಪುಗೌಡ ಪಾಟೀಲ, ಯಲ್ಲಪ್ಪಗೌಡ ಗೌಡಪ್ಪಗೌಡ, ವೈ.ಎಚ್. ಪೂಜಾರ, ಚಂದ್ರು ಜಾಧವ, ಭೀಮಪ್ಪ ಕಡ್ಲಿಕೊಪ್ಪ, ಅಭಿಯಂತರ ಆರ್.ಎಂ. ಜಾಲಿಹಾಳ, ಗುತ್ತಿಗೆದಾರ ಶಿವಾನಂದ ನಾಯಕ, ವಿ.ಬಿ. ಮಾನಿಪಾಟೀಲ, ಮಹೇಶ ಓಲೇಕಾರ, ಚೇತನ ಕಪಲಿ, ಚಂದ್ರು ಜಾಧವ, ಗುರಪ್ಪ ಆದೆಪ್ಪನವರ, ಬಿ ಬಿ ಕುಂಬಾರ, ರಾಜುಗೌಡ ಪಾಟೀಲ, ಈಶ್ವರಗೌಡ ಪಾಟೀಲ ಇತರರಿದ್ದರು.



ಸೋಶಿಯಲ್ ಮೀಡಿಯಾದಲ್ಲಿ ಶಾಸಕರ ಬಗ್ಗೆ ಅಪಪ್ರಚಾರ ಸಲ್ಲ: ದಂಡಿನ

ನರಗುಂದ: ಇತ್ತೀಚೆಗೆ ಸೋಶಿಯಲ್ ಮೀಡಿಯಾದಲ್ಲಿ ಶಾಸಕ ಸಿ.ಸಿ. ಪಾಟೀಲ ಅವರ ಬಗ್ಗೆ ಹಾಲುಮತ ಸಮಾಜದ ವಿರೋಧಿ ಎಂದು ಅಪಪ್ರಚಾರ ಮಾಡುತ್ತಿರುವುದು ತಿಳಿದಿದೆ. ಒಬ್ಬ ಜನಪ್ರತಿನಿಧಿ ಬಗ್ಗೆ ಕೇವಲವಾಗಿ ಮಾತನಾಡುವುದು ಸರಿಯಲ್ಲ, ಶಾಸಕ ಸಿ.ಸಿ. ಪಾಟೀಲ ಅವರು ಯಾವಾಗಲೂ ಹಾಲುಮತ ಸಮಾಜದ ಪರವಾಗಿಯೇ ಇದ್ದಾರೆಂದು ಕರ್ನಾಟಕ ಪ್ರದೇಶ ಕುರುಬರ ಸಮಾಜದ ತಾಲೂಕು ಘಟಕದ ಕಾರ್ಯದರ್ಶಿ ಚಂದ್ರಶೇಖರ ದಂಡಿನ ಹೇಳಿದರು.

ಅವರು ಬುಧವಾರ ಪಟ್ಟಣದ ಲೋಕೋಪಯೋಗಿ ಇಲಾಖೆಯ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಾಗಲಕೋಟೆ ವಿಧಾನಸಭೆ ಉಪಚುನಾವಣೆಯಲ್ಲಿ ಪ್ರಚಾರಕ್ಕೆ ಹೋದ ಸಂದರ್ಭದಲ್ಲಿ ನರಗುಂದ ಶಾಸಕರು ಭಾಷಣದಲ್ಲಿ ಟುರ್‍ರ ಎಂದು ಹಾಲುಮತದ ಸಮಾಜಕ್ಕೆ ಹಿಯಾಳಿಸಿದ್ದಾರೆಂದು ಕೆಲವರು ಸೋಶಿಯಲ್ ಮೀಡಿಯಾದಲ್ಲಿ ಅಪಪ್ರಚಾರ ಮಾಡುತ್ತಿದ್ದಾರೆ. ಆದರೆ ಶಾಸಕ ಪಾಟೀಲ ಅವರು ಹಾಲುಮತದ ವಿರೋಧಿಗಳಾಗಿದ್ದರೆ ಕುರುಬ ಸಮಾಜದವರು ಪಟ್ಟಣದಲ್ಲಿ ನಿರ್ಮಿಸುತ್ತಿರುವ ಕನಕ ಭವನಕ್ಕೆ ಆರ್ಥಿಕ ನೆರವು ನೀಡುತ್ತಿರಲಿಲ್ಲ, ಶಾಸಕ ಸಿ.ಸಿ. ಪಾಟೀಲ ಅವರು ತಮ್ಮ ಶಾಸಕರ ಪ್ರದೇಶಾಭಿವೃದ್ಧಿಯಲ್ಲಿ ಸಾಕಷ್ಟು ಅನುದಾನ ನೀಡಿದ್ದಾರೆ. ವೈಯಕ್ತಿಕವಾಗಿ ಕೂಡಾ ನಮ್ಮ ಕನಕ ಭವನ ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡಿದ್ದಾರೆ. ಈ ತಾಲೂಕಿನಲ್ಲಿ ಲಿಂಗಾಯತ ಸಮಾಜ ಮತ್ತು ಹಾಲುಮತದ ಸಮಾಜದವರು ಸಹೋದರತ್ವ ಭಾವನೆಯಿಂದ ಜೀವನ ಮಾಡುತ್ತಿದ್ದಾರೆ. ಆದರೆ ಕೆಲವರು ಬಾಗಲಕೋಟೆ ಉಪ ಚುನಾವಣೆಯಲ್ಲಿ ಬಿಜೆಪಿ ಶಾಸಕ ಸಿ.ಸಿ.ಪಾಟೀಲರು ಹಾಲುಮತ ಸಮಾಜದವರಿಗೆ ಟುರ್‍ರ ಎಂದು ಹಿಯಾಳಿಸಿದ್ದಾರೆಂದು ಸೋಶಿಯಲ್ ಮೀಡಿಯಾದಲ್ಲಿ ಅಪಪ್ರಚಾರ ಮಾಡುವುದನ್ನು ಕೈಬಿಡಬೇಕೆಂದು ಹೇಳಿದರು. ಕರ್ನಾಟಕ ಪ್ರದೇಶ ಕುರುಬ ಸಮಾಜದ ತಾಲೂಕು ಘಟಕದ ಅಧ್ಯಕ್ಷ ನೀಲಪ್ಪ ಗುಡದಣ್ಣವರ, ಪುರಸಭೆ ಮಾಜಿ ಸದಸ್ಯರಾದ ಫಕೀರಪ್ಪ ಸವದತ್ತಿ, ಸುನೀಲ ಕುಷ್ಟಗಿ, ಮಹಾದೇವಪ್ಪ ಗುದಗಿ, ಮಂಜುನಾಥ ಮೆಣಸಗಿ, ಅನಿಲ ಧರಿಯಣ್ಣವರ, ಬೀರಪ್ಪ ದುಂಡಿ, ಬೀರಪ್ಪ ಕಲಹಾಳ, ರಂಗಪ್ಪ, ಬಸವರಾಜ ಕೊಳಲದ, ನೀಲಪ್ಪ ಬೆಳಹುಂಡ, ರಂಗಪ್ಪ ಕಲಕೇರಿ, ಚಳ್ಳಪ್ಪ ನಾಯ್ಕರ, ಅಶೋಕ ಹೆಬ್ಬಳ್ಳಿ, ಹನುಮಂತ ಕಾಡಪ್ಪನವರ, ಬಸವರಾಜ ಸವದತ್ತಿ, ಸುರೇಶ ಸವದತ್ತಿ, ಹಟ್ಟಿ ಸೇರಿದಂತೆ ಮುಂತಾದವರಿದ್ದರು.



ಗಜೇಂದ್ರಗಡದಲ್ಲಿ ಪಾರ್ಕಿಂಗ್ ಸಮಸ್ಯೆ: ಸೂಕ್ತ ಕ್ರಮಕ್ಕೆ ಒತ್ತಾಯ

ಗಜೇಂದ್ರಗಡ: ಗಜೇಂದ್ರಗಡ ಪಟ್ಟಣಕ್ಕೆ ನೆರೆಯ ಗ್ರಾಮಸ್ಥರಷ್ಟೇ ಅಲ್ಲದೇ ನೆರೆಯ ತಾಲೂಕುಗಳಾದ ಕುಷ್ಟಗಿ, ಯಲಬುರ್ಗಾ, ಬದಾಮಿ, ಇಲ್ಲಕಲ ಸೇರಿದಂತೆ ವಿವಿಧ ನಗರ ಪ್ರದೇಶದ ಜನರು ಇಲ್ಲಿ ವ್ಯಾಪಾರ ವಹಿವಾಟಿಗಾಗಿ ಆಗಮಿಸುತ್ತಾರೆ. ಆದರೆ ವಾಹನ ನಿಲುಗಡೆ ಮಾಡುವುದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ ಎಂದು ಸಾರ್ವಜನಿಕರು ದೂರುತ್ತಿದ್ದಾರೆ.

ಬೇಕಾಬಿಟ್ಟಿಯಾಗಿ ಕೆಲವರು ಇನ್ನೊಬ್ಬರ ಹಕ್ಕುಗಳನ್ನು ಗೌರವಿಸದೆ ನಿರ್ಲಕ್ಷ್ಯದಿಂದ ಮನಸಿಗೆ ತೋಚಿದಂತೆ ವಾಹನನಿಲ್ಲಿಸುವುದರಿಂದ ಜನಸಾಮಾನ್ಯರ ಸಂಚಾರಕ್ಕೆ ತೊಡಕಾಗಿದೆ. ಪ್ರತಿ ವರ್ಷವೂ ವ್ಯಾಪರ ವಹಿವಾಟಿಗೆ ಗಜೇಂದ್ರಗಡಕ್ಕೆ ಸಾವಿರಾರು ವಾಹನಗಳು ಆಗಮಿಸುತ್ತವೆ. ಆದರೆ ವಾಹನ ನಿಲುಗಡೆಗೆ ಮಾತ್ರ ಎಲ್ಲಿಯೂ ಸ್ಥಳಾವಕಾಶವೇ ಸಿಗುತ್ತಿಲ್ಲ. ವಾರಾಂತ್ಯದಲ್ಲಂತೂ ವಿಪರೀತ ವಾಹನಗಳು ಬಂದು ಪಾದಾಚಾರಿಗಳ ಓಡಾದಂತ ಸ್ಥಿತಿ ನಿರ್ಮಾಣವಾಗಿದೆ.



ಜನರ ಆರೋಪ

- ಬೇಕಾಬಿಟ್ಟಿ ಪಾರ್ಕಿಂಗ್
- ಮಾಡೋದ್ ಹೇಗೆ ವಾಕಿಂಗ್?
- ಇಂಥವರಿಗೆ ಕೊಡೋರಿಲ್ಲ ವಾರ್ನಿಂಗ್

ಸಂಚಾರಕ್ಕೆ ಸಮಸ್ಯೆ

ಪ್ರಮುಖ ರಸ್ತೆಗಳಲ್ಲಿ ಪಾರ್ಕಿಂಗ್ ಸಮಸ್ಯೆ ಹೇಳತೀರದ್ದು, ಮಂಗಳವಾರ ಸಂತೆಯ ದಿನವಾಗಿರುವುದರಿಂದ ಪಟ್ಟಣದ ದುರ್ಗಾ ವೃತ್ತದಿಂದ ಬಸ್ ನಿಲ್ದಾಣದವರೆಗೆ ಕಾಲಕಾಲೇಶ್ವರ ವೃತ್ತದಿಂದ ಸರ್ಕಾರಿ ಆಸ್ಪತ್ರೆಯುದ್ದಕ್ಕೂ ಜನರು ದ್ವಿಚಕ್ರ ವಾಹನ, ಕಾರು ನಿಲ್ಲಿಸಿ ಹೋಗುತ್ತಾರೆ. ಉದ್ಯೋಗಕ್ಕೆ ಹೋಗುವ ಅನೇಕರು ತಮ್ಮ ಕಾರು ಅಥವಾ ದ್ವಿಚಕ್ರ ವಾಹನ ರಸ್ತೆಯ ಇಕ್ಕೆಲಗಳಲ್ಲಿ ನಿಲ್ಲಿಸಿ ಹೋಗುತ್ತಾರೆ. ದಿನಗಟ್ಟಲೇ ವಾಹನ ರಸ್ತೆ ಬದಿಯಲ್ಲಿಯೇ ಇರುವುದರಿಂದ ಸಂಚಾರಕ್ಕೆ ಸಮಸ್ಯೆಯಾಗಿವೆ. ರಸ್ತೆಯ ಇಕ್ಕೆಲಗಳಲ್ಲಿ ತಮಗೆ ಬೇಕಾದಂತೆ ವಾಹನಗಳನ್ನು ನಿಲ್ಲಿಸಿ ಹೋಗುತ್ತಾರೆ ಎಂಬುದು ನಾಗರಿಕರ ಆರೋಪವಾಗಿದೆ.

ಫುಟ್‌ಪಾತ್‌ನಲ್ಲಿ ನಿಲುಗಡೆ

ನಗರದ ದುರ್ಗಾವೃತ, ಶಿವಾಜಿ ವೃತ್ತ, ಕಾಲಕಾಲೇಶ್ವರ ವೃತ್ತ, ಬಸ್ ನಿಲ್ದಾಣ ರಸ್ತೆ, ಕುಷ್ಟಗಿ ರಸ್ತೆ, ರೋಣ ರಸ್ತೆಯ ದ್ವಿಪಥ ಇಕ್ಕೆಲಗಳ ಫುಟ್‌ಪಾತ್‌ನಲ್ಲಿ ಅನೇಕರು ವಾಹನ ಪಾರ್ಕಿಂಗ್ ಮಾಡಿಹೋಗುತ್ತಾರೆ. ಈ ಬಗ್ಗೆ ಹಾಗೂ ಸಂಬಂಧಪಟ್ಟ ಇಲಾಖೆಗಳು ಗಮನಹರಿಸಿ ನಿಷೇಧಿತ ಪ್ರದೇಶದಲ್ಲಿ ವಾಹನ ನಿಲುಗಡೆ ಮಾಡುವುದನ್ನು ತಡೆದು ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು ಎಂಬುದು ಸಾರ್ವಜನಿಕರ ಆಗ್ರಹವಾಗಿದೆ.

“ ಗಜೇಂದ್ರಗಡ ಪಟ್ಟಣದಲ್ಲಿ ವಾಹನ ಸಂಚಾರ ಹೆಚ್ಚುತ್ತಿದ್ದು ಪಾರ್ಕಿಂಗ್ ಸಮಸ್ಯೆ ಹೆಚ್ಚುತ್ತಿದೆ. ಪುರಸಭೆ ಹಾಗೂ ಪೊಲೀಸ್ ಇಲಾಖೆಯ ಸಹಯೋಗದಲ್ಲಿ ಪಾರ್ಕಿಂಗ್ ಹಾಗೂ ಪುಟ್‌ಪಾತ್ ಸಮಸ್ಯೆ ಬಗೆಹರಿಸಿ ಪಾದಾಚಾರಿಗಳಿಗೆ ವಾಹನ ಸವಾರರಿಗೆ ಸುಂಗಮ ಸಂಚಾರಕ್ಕೆ ಮುಂದಾಗಿ.

■ **ವಿನಾಯಕ ಜರತಾರಿ,** ಕರ್ನಾಟಕ ಅಭಿವೃದ್ಧಿ ವೇದಿಕೆ ರಾಜ್ಯಾಧ್ಯಕ್ಷ

“ ಎಲ್ಲೆದರಲ್ಲಿ ಬೇಕಾಬಿಟ್ಟಿ ಕಾರು, ಬೈಕ್, ಟಂಟಂ, ಆಟೋಗಳು ನಿಲ್ಲಿಸಿದ್ದು ಗಮನಕ್ಕೆ ಬಂದಿದೆ. ಶೀಘ್ರ ಕ್ರಮ ಕೈಗೊಂಡು ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗುವುದು.

■ **ಬಸವರಾಜ ಬಳಗಾನೂರ,** ಪುರಸಭೆ ಮುಖ್ಯಾಧಿಕಾರಿ

“ ಗಜೇಂದ್ರಗಡ ಪಟ್ಟಣವು ದಿನದಿಂದ ದಿನಕ್ಕೆ ಶೇರವೇಗದಲ್ಲಿ ಬೆಳೆಯುತ್ತಾ ಇದೆ. ಸ್ಥಳೀಯರಲ್ಲದೆ ಹೊರಗಡೆಯಿಂದ ವ್ಯಾಪಾರ ವಹಿವಾಟಿಗೆ ಜನರು ಆಗಮಿಸುತ್ತಾರೆ. ಅವರಿಗೆ ಪಾರ್ಕಿಂಗ್ ಬಗ್ಗೆ ಸೂಕ್ತ ಅರಿವು ಮೂಡಿಸಿ ಪಾರ್ಕಿಂಗ್ ಸಮಸ್ಯೆ ಬಗೆಹರಿಸಲಾಗುವುದು.

■ **ಪ್ರಕಾಶ ಡಿ.,** ಪಿಎಸ್ಐ

ಲೈಂಗಿಕ ಶೋಷಣೆ ವಿರುದ್ಧ ಸಮಗ್ರ ತನಿಖೆಗೆ ಆಗ್ರಹ

ಲಕ್ಷ್ಮೇಶ್ವರ: ಹುಬ್ಬಳ್ಳಿಯ ಫಿಟ್ನೆಸ್ ಜಿಮ್‌ನಲ್ಲಿ ನಡೆದ ಲವ್ ಜಿಹಾದ್ ಮತ್ತು ಲೈಂಗಿಕ ಶೋಷಣೆಯ ಆಘಾತಕಾರಿ. ಈ ಪ್ರಕರಣದಲ್ಲಿ ಪ್ರಮುಖ ಆರೋಪಿಗಳಾದ ಸಮೀರ್ ಮುಲ್ಲಾ ಮತ್ತು ಅವರ ಸಹೋದರಿ ತೈಸೀಮ್ ಮುಲ್ಲಾ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಹಿಂದೂ ಜನ ಜಾಗೃತಿ ಸಮಿತಿಯ ಶಂಕರ ಬ್ಯಾಡಗಿ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಅವರು ಗ್ರೇಡ್ 2ತಹಶೀಲ್ದಾರ್ ಮಂಜುನಾಥ ಅಮಾಸಿ ಅವರ ಮುಖಾಂತರ ಗ್ರಹ ಸಚಿವರಿಗೆ ಮನವಿ ಸಲ್ಲಿಸಿ ಮಾತನಾಡಿ, ಜಿಮ್ ನಡೆಸುತ್ತಿರುವ ಸಮೀರ್ ಮುಲ್ಲಾ ಎಂಬ ಮುಸ್ಲಿಂ ಯುವಕನು ಹಿಂದೂ ಯುವತಿಯರೊಂದಿಗೆಸ್ನೇಹ ಬೆಳೆಸಿ, ಬ್ಲ್ಯಾಕ್ ಮೇಲ್ ಮಾಡುತ್ತಾ, ಇಸ್ಲಾಂಗೆ ಮತಾಂತರಕ್ಕೆ ಒತ್ತಾಯ ಮಾಡುತ್ತಿದ್ದಾನೆ. ಪೊಲೀಸರ ತನಿಖೆಯಲ್ಲಿ ಸಮೀರ್ ಮುಲ್ಲಾನ ಮೊಬೈಲ್‌ನಲ್ಲಿ ಹಲವು ಹಿಂದೂ ಯುವತಿಯರ ಅರೆನಗ್ನ ಚಿತ್ರಗಳು ಪತ್ತೆಯಾಗಿವೆ. ಇದರಿಂದ ಜಿಮುಗಳ ಫಿಟ್ನೆಸ್ ಕೇಂದ್ರಗಳ ಹೆಸರಿನಲ್ಲಿ ಮತಾಂತರದ ಕೇಂದ್ರಗಳಾಗಿ ಮಾರ್ಪಟ್ಟಿರುವ ಆತಂಕ ಮೂಡಿದೆ. ಟ್ರೈನರ್‌ಗಳಿಂದ ಅಸಭ್ಯ ವರ್ತನೆ, ವ್ಯಾಯಾಮದ ಸಮಯದಲ್ಲಿ ಲೈಂಗಿಕ ಕಿರುಕುಳ, ನಿರಂತರ ಅತ್ಯಾಚಾರ, ಲಕ್ಷಾಂತರ ರೂಪಾಯಿ ಹಾಗೂ ಮಹಿಳೆಯರ ಚಿನ್ನ ದೋಚುವುದು ಮತ್ತು ಮೋಸದಿಂದ ಮತಾಂತರ ಮಾಡುವಂತಹ ಘಟನೆಗಳು ನಡೆಯುತ್ತಿದೆ. ಇದರ ವಿರುದ್ಧ ಸಮಗ್ರ ತನಿಖೆ ನಡೆಸಿ, ಜಿಮ್ ಸಿಬ್ಬಂದಿಗೆ ಪೊಲೀಸ್ ವೆರಿಫಿಕೇಶನ್ ಕಡ್ಡಾಯಗೊಳಿಸಿ, ಮಹಿಳಾ ವಿಭಾಗಗಳಿಗೆ ಮಹಿಳಾ ತರಬೇತುದಾರರನ್ನು ನೇಮಕ ಮಾಡಬೇಕು, ಶೋಷಣೆಗೆ ಒಳಗಾದ ಹಿಂದೂ ಯುವತಿಯ ಗೌಪ್ಯತೆಯನ್ನು ಕಾಪಾಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಅರುಣ ಮೆಕ್ಕಿ, ಪ್ರಕಾಶ ಗುತ್ತಲ, ವಿಶ್ವನಾಥ ವಾರದ, ಮಹಾದೇವಪ್ಪ ಕುಂದಗೋಳ, ಶಿವಾನಂದ ಹುಲಕೊಟಿ, ಶಾಂತಾಬಾಯಿ ಹುಲಕೋಟಿ, ಮಲ್ಲಮ್ಮ ಕಮಡೊಳ್ಳಿ, ಅನುಸೂಯಾ ಸಜ್ಜನ, ಎಫ್.ವಿ. ಪಾಟೀಲ್, ಸಿ.ಸಿ. ಹುಬ್ಬಳ್ಳಿ ಅನೇಕರು ಇದ್ದರು.



ರಾಜ್ಯದಲ್ಲಿ ಉಷ್ಣಾಂಶ ಏರಿಕೆ ಮುಂದುವರಿಕೆ

ಕಲಬುರಗಿಯಲ್ಲೇ ಅತ್ಯಧಿಕ 45 ಡಿ. ಗರಿಷ್ಠ ತಾಪಮಾನ ದಾಖಲು!

• ಕಲಬುರಗಿ: ರಾಜ್ಯಾದ್ಯಂತ ಉಷ್ಣಾಂಶ ಏರಿಕೆಯಾಗುತ್ತಿರುವ ಹಿನ್ನೆಲೆ ಕಲಬುರಗಿ ಜಿಲ್ಲೆಯ ಔರಾದ್ ಹೋಬಳಿಯಲ್ಲಿ ಬುಧವಾರ ಗರಿಷ್ಠ 45 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಇದು ರಾಜ್ಯದಲ್ಲೇ ಅತ್ಯಧಿಕ ತಾಪಮಾನವಾಗಿದ್ದು, ಬಿಸಿಲಿನ ತೀವ್ರತೆ ಹೆಚ್ಚುತ್ತಿರುವುದನ್ನು ಸೂಚಿಸುತ್ತದೆ.

ಕಲಬುರಗಿ ತಾಲೂಕಿನ ಔರಾದ್-45 ಡಿಗ್ರಿ ಸೆ, ಚಿಂಚೋಳಿಯ ತಾಲೂಕಿನ ಐನಾಪುರ ಹಾಗೂ ಅಫಜಲಪುರ ತಾಲೂಕಿನ ಅತನೂರದಲ್ಲಿ 44.3 ಡಿಗ್ರಿ ಸೆ, ಆಳಂದ ತಾಲೂಕಿನ ಮಾದನ ಹಿಪ್ಪರಗಾದಲ್ಲಿ 44.1 ಡಿಗ್ರಿ ಸೆಲ್ಸಿಯಸ್ ಅತ್ಯಧಿಕ ತಾಪಮಾನ ದಾಖಲಾಗಿದೆ ಎಂದು ಬುಧವಾರ ಭಾರತೀಯ ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಏ.14ರಂದು ಕಲಬುರಗಿ, ರಾಯಚೂರು, ಬೀದರ್ ಹಾಗೂ ವಿಜಯಪುರ ಜಿಲ್ಲೆಗಳ ಅನೇಕ ಪ್ರದೇಶಗಳಲ್ಲಿ 42 ಡಿಗ್ರಿ ಸೆಲ್ಸಿಯಸ್ ನಿಂದ 45 ಡಿಗ್ರಿ ಸೆಲ್ಸಿಯಸ್ ನಡುವೆ ತಾಪಮಾನ ದಾಖಲಾಗಿದೆ. ಯಾದಗಿರಿ ಹಾಗೂ ಬಾಗಲಕೋಟೆ ಜಿಲ್ಲೆಗಳ ಕೆಲವು ಕಡೆಗಳಲ್ಲಿ, ಬಳ್ಳಾರಿ, ಗದಗ, ಕೊಪ್ಪಳ, ಉತ್ತರ ಕನ್ನಡ, ಬೆಳಗಾವಿ, ಚಿತ್ರದುರ್ಗ, ಹಾವೇರಿ ಹಾಗೂ ವಿಜಯನಗರ ಜಿಲ್ಲೆಗಳ ಪ್ರತ್ಯೇಕ ಸ್ಥಳಗಳಲ್ಲಿ ಕೂಡ ಇದೇ ಮಟ್ಟದ ಉಷ್ಣಾಂಶ ಕಂಡು ಬಂದಿದೆ.



ಕಲಬುರಗಿ:ಕಲಬುರಗಿಯ (ಔರಾದ್)ನಲ್ಲಿ ದಾಖಲೆಯ 45 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾದ ಹಿನ್ನೆಲೆ, ಬಿಸಿಲಿನಿಂದ ತಮ್ಮನಿಗೆ ರಕ್ಷಣೆ ನೀಡುತ್ತಿರುವ ಅಕ್ಕ.



ಕಲಬುರಗಿ:ಕಲಬುರಗಿಯ (ಔರಾದ್)ನಲ್ಲಿ ದಾಖಲೆಯ 45 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾದ ಹಿನ್ನೆಲೆ, ಹಿರಿಯರೊಬ್ಬರು ಕೊಡೆ ಹಿಡಿದು ಬಿಸಿಲಿನಿಂದ ರಕ್ಷಣೆ ಪಡೆಯುತ್ತಿರುವುದು.

ಕರ್ನಾಟಕ ರಾಜ್ಯ ಪ್ರಕೃತಿ ವಿಕೋಪ ಮಾನಿಟರಿಂಗ್ ಕೇಂದ್ರ (ಕೆಎಸ್ಎನ್ಡಿಎಂಸಿ) ಮಾಹಿತಿ ಪ್ರಕಾರ, ಕಲಬುರಗಿ ಜಿಲ್ಲೆಯಲ್ಲಿ 24 ಸ್ಥಳಗಳು, ರಾಯಚೂರುದಲ್ಲಿ 22, ಬೀದರ್‌ನಲ್ಲಿ 18, ವಿಜಯಪುರದಲ್ಲಿ 14, ಯಾದಗಿರಿಯಲ್ಲಿ 11 ಹಾಗೂ ಬಾಗಲಕೋಟೆಯಲ್ಲಿ 7 ಸ್ಥಳಗಳಲ್ಲಿ 42ಲಿಅಕ್ಕಿಂತ ಹೆಚ್ಚು ತಾಪಮಾನ ದಾಖಲಾಗಿದೆ. ಬಳ್ಳಾರಿ, ಗದಗ, ಕೊಪ್ಪಳ ಮತ್ತು ಉತ್ತರ ಕನ್ನಡ ಜಿಲ್ಲೆಗಳ ತಲಾ 2 ಸ್ಥಳಗಳಲ್ಲಿ ಹಾಗೂ ಬೆಳಗಾವಿ, ಚಿತ್ರದುರ್ಗ, ಹಾವೇರಿ ಮತ್ತು ವಿಜಯನಗರ ಜಿಲ್ಲೆಗಳ ತಲಾ 1 ಸ್ಥಳದಲ್ಲಿ ಇದೇ ಸ್ಥಿತಿ ಕಂಡುಬಂದಿದೆ. ಮುಂದಿನ ದಿನಗಳಲ್ಲಿ ತಾಪಮಾನ ಇನ್ನಷ್ಟು ಏರಿಕೆಯಾಗುವ ಸಾಧ್ಯತೆಯಿದ್ದು ಜನರು ಬಿಸಿಲಿನಿಂದ ರಕ್ಷಿಸಿಕೊಳ್ಳಲು ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವುದು ಅಗತ್ಯ ಎಂದು ಸ್ಥಳೀಯ ಜಿಲ್ಲಾಡಳಿತ ತಿಳಿಸಿದೆ.

ಬಾಗಲಕೋಟೆ, ವಿಜಯಪುರ ಜಿಲ್ಲೆಗಳಷ್ಟೇ ಮುದ್ರಣ ನಗರಿಯಲ್ಲಿ ತಾಪಮಾನ ದಾಖಲು

ಗದಗ ಜಿಲ್ಲೆಗೂ ಬೇಕು ಸಮಯ ಬದಲಾವಣೆ

▸ ರುದ್ರಗೌಡ ಪಾಟೀಲ



ದಿಗಂತ ವಿಶೇಷ

• ಗದಗ: ಉತ್ತರ ಕರ್ನಾಟಕದಲ್ಲಿ ಸೂರ್ಯನ ಪ್ರತಾಪ ದಿನದಿಂದ ದಿನಕ್ಕೆ ಏರುತ್ತಿರುವ ಕಾರಣಕ್ಕೆ ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳ ಸರ್ಕಾರಿ ಕಚೇರಿಗಳ ಸಮಯವನ್ನು ಬದಲಾಯಿಸಿ ಸರ್ಕಾರ ಆದೇಶ ಹೊರಡಿಸಿದೆ.

ಬಾಗಲಕೋಟೆ ಜಿಲ್ಲೆಗೆ ಹೊಂದಿರುವ ಗದಗ ಜಿಲ್ಲೆಯನ್ನು ಸಮಯ ಬದಲಾವಣೆ ಪಟ್ಟಿಯಲ್ಲಿ ಪರಿಗಣಿಸುವಂತೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು ಸಹ ಬದಲಾವಣೆಯಾಗದ ಹಿನ್ನೆಲೆಯಲ್ಲಿ ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ.

ಸರ್ಕಾರವು ಈಚೆಗೆ ಹೊರಡಿಸಿದ ಆದೇಶದಂತೆ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳು ಹಾಗೂ ಬೆಳಗಾವಿ ವಿಭಾಗದ ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಿಗೆ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಬೆಳಗ್ಗೆ 8 ರಿಂದ ಮಧ್ಯಾಹ್ನ 1.30ರ ವರೆಗೆ ಕೆಲಸದ ಅವಧಿಯನ್ನು ನಿಗದಿಪಡಿಸಲಾಗಿದೆ. ಭೌಗೋಳಿಕವಾಗಿ ಬಾಗಲಕೋಟೆಗೆ ಹೊಂದಿಕೊಂಡಿರುವ ಮತ್ತು ಅಷ್ಟೇ ಪ್ರಮಾಣದ ತಾಪಮಾನ ದಾಖಲಾಗುವ ಗದಗ ಜಿಲ್ಲೆಯನ್ನು ಪರಿಗಣಿಸದಿರುವುದು ಈಗ ಚರ್ಚೆಗೆ ಕಾರಣವಾಗಿದೆ.

ವಿಜಯಪುರ ಮತ್ತು ಬಾಗಲಕೋಟ ಜಿಲ್ಲೆಗಳ ಮಾದರಿಯಲ್ಲಿಯೇ ಗದಗ ಜಿಲ್ಲೆಯಲ್ಲಿ ಪ್ರಸ್ತುತ ವರ್ಷ ಗರಿಷ್ಠ ಉಷ್ಣಾಂಶ ದಾಖಲಾಗಿದ್ದು, ದಿನದಿಂದ ದಿನಕ್ಕೆ ಬಿಸಿಲಿನ ತಾಪಮಾನದಲ್ಲಿ ಹೆಚ್ಚಳವಾಗುತ್ತಿದೆ. ಈ ಕಾರಣಕ್ಕೆ ಸರಕಾರಿ ನೌಕರರು ಹಳ್ಳಿಗಳಿಗೆ ಹೋಗಿ ಕರ್ತವ್ಯ ನಿರ್ವಹಿಸುವಲ್ಲಿ ಆರೋಗ್ಯ ತೊಂದರೆಯನ್ನು ಅನುಭವಿಸುತ್ತಿದ್ದಾರೆ.

> ಪ್ರತಿ ಬೇಸಿಗೆಯಲ್ಲೂ ಕಲಬುರ್ಗಿ ವಿಭಾಗದ ಜಿಲ್ಲೆಗಳ ಸಮಯ ಬದಲಾವಣೆ ಆಗುತ್ತದೆ. ಆದರೆ, ಜಿಲ್ಲೆಯಲ್ಲೂ ಸರ್ಕಾರಿ ಕಚೇರಿಗಳ ಸಮಯ ಬದಲಾವಣೆ ಆಗಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ನೌಕರರ ಆರೋಗ್ಯದ ದೃಷ್ಟಿಯಿಂದ ಕಚೇರಿ ಸಮಯವನ್ನು ಬೆಳಗ್ಗೆ 8ರಿಂದ ಮಧ್ಯಾಹ್ನ 1.30ರವರೆಗೆ ಬದಲಾವಣೆ ಮಾಡುವ ಮೂಲಕ ನೌಕರರ ಕರ್ತವ್ಯ ನಿರ್ವಹಣೆಗೆ ಅನುಕೂಲ ಕಲ್ಪಿಸಬೇಕು.
>
> ■ ಡಾ.ಬಸವರಾಜ ಬಳ್ಳಾರಿ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ, ಗದಗ

ಮಾರ್ಚ್ 2026ರ ಸರಾಸರಿ ತಾಪಮಾನ

ಜಿಲ್ಲೆ	ಕನಿಷ್ಠ	ಗರಿಷ್ಠ
ಬಾಗಲಕೋಟೆ	22-24	36 - 38
ವಿಜಯಪುರ	23- 25	37 - 39
ಗದಗ	22-24	36 - 38

ಹೆಚ್ಚಿದ ತಾಪಮಾನ: ಹವಾಮಾನ ಇಲಾಖೆಯ ಅಂಕಿ-ಅಂಶಗಳನ್ನು ಗಮನಿಸಿದರೆ, ಬಾಗಲಕೋಟೆ ಮತ್ತು ಗದಗ ಜಿಲ್ಲೆಗಳ ನಡುವೆ ಉಷ್ಣಾಂಶದಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಮಾರ್ಚ್ ತಿಂಗಳ ಒಟ್ಟಾರೆ ಸರಾಸರಿ ಪರಿಗಣಿಸಿದರೆ, ಬಾಗಲಕೋಟ ಜಿಲ್ಲೆಯಲ್ಲಿ ಇರುವಷ್ಟೇ ತಾಪಮಾನ ಗದಗ ಜಿಲ್ಲೆಯಲ್ಲೂ ದಾಖಲಾಗಿದೆ. ಹೀಗಾಗಿ ಗದಗ ಜಿಲ್ಲೆಯಲ್ಲೂ ಸರಕಾರಿ ಕಚೇರಿಗಳ ಸಮಯ ಬದಲಾವಣೆ ಮಾಡಬೇಕು.

ಸಾರ್ವಜನಿಕರಿಗೆ ಅನುಕೂಲ: ಗದಗ ಜಿಲ್ಲೆ ಬಾಗಲಕೋಟ ಮಾತ್ರವಲ್ಲದೇ, ಕೊಪ್ಪಳ, ವಿಜಯನಗರ ಜಿಲ್ಲೆಯ ಗಡಿಗೂ ಹೊಂದಿಕೊಂಡಿದೆ. ಹೀಗಾಗಿ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ತಾಪಮಾನ ಮತ್ತಷ್ಟು ಹೆಚ್ಚಿದೆ. ಸರಕಾರ ಮತ್ತು ನೌಕರರ ಸಂಘಟನೆಗಳು ಈ ನಿಟ್ಟಿನಲ್ಲಿ ಚರ್ಚೆ ನಡೆಸಿ, ಗದಗ ಜಿಲ್ಲೆಯಲ್ಲೂ ಸಮಯ ಬದಲಾವಣೆಗೆ ಕ್ರಮ ಕೈಗೊಂಡರೆ, ಗ್ರಾಮೀಣ ಭಾಗದ ಸಾರ್ವಜನಿಕರಿಗೂ ಅನುಕೂಲವಾಗಲಿದೆ ಎಂದು ಸರಕಾರಿ ನೌಕರರು ಅಭಿಪ್ರಾಯಪಟ್ಟಿದ್ದಾರೆ.

40 ಡಿಗ್ರಿ ಸಾಧ್ಯತೆ: ಹವಾಮಾನ ಇಲಾಖೆ ಪ್ರಕಾರ ಜಿಲ್ಲೆಯ ತಾಪಮಾನ ಗರಿಷ್ಠ 40 ಡಿಗ್ರಿ ಸೆಲ್ಸಿಯಸ್ ತಲುಪುವ ಸಾಧ್ಯತೆಯಿದೆ. ಅಲ್ಲದೇ ಮೇ ತಿಂಗಳಲ್ಲೂ ಗರಿಷ್ಠ ತಾಪಮಾನ ಇರುವ ಸಾಧ್ಯತೆಯಿದೆ. ಆಗ ಗದಗ ಜಿಲ್ಲೆಯೂ ಕಲಬುರ್ಗಿ ವಿಭಾಗದ ಜಿಲ್ಲೆಗಳ ರೀತಿಯಲ್ಲಿ ಕಾದ ಕಬ್ಬಿಣದ ರೀತಿಯಲ್ಲಿ ಭಾಸವಾಗಲಿದೆ. ಜಿಲ್ಲಾಡಳಿತ ಮತ್ತು ಜಿಲ್ಲಾ ಸರಕಾರಿ ನೌಕರರ ಸಂಘಟನೆಗಳು ಈ ಬಗ್ಗೆ ಪರಿಶೀಲನೆ ನಡೆಸಿ, ಸರಕಾರದ ಮೇಲೆ ಒತ್ತಡ ತಂದು ಸಮಯ ಬದಲಾವಣೆಗೆ ಪ್ರಯತ್ನಿಸಬೇಕು ಎಂದು ಹೆಸರು ಹೇಳಲು ಇಚ್ಛಿಸದ ಸರಕಾರಿ ನೌಕರರೊಬ್ಬರು ತಿಳಿಸಿದ್ದಾರೆ.

ಕಿರುಸುದ್ದಿ

ಹಣವಿದ್ದ ಬ್ಯಾಗ್ ಮರಳಿಸಿದ ಹೋಟೆಲ್ ಮಾಲೀಕ

• ಯಲ್ಲಾಪುರ: ಹೋಟೇಲ್‌ನಲ್ಲಿ ಬಿಟ್ಟು ಹೋಗಿದ್ದ ಹಣವಿದ್ದ ಬ್ಯಾಗನ್ನು ಮರಳಿಸಿ ಹೋಟೇಲ್ ಮಾಲೀಕ ವೆಂಕಟೇಶ ಶೇಟ್ ಮಾನವೀಯತೆ ಮೆರದಿದ್ದಾರೆ. ಪಟ್ಟಣದ ಚರ್ಚ ಕಾಂಪ್ಲೆಕ್ಸ್ ನಲ್ಲಿರುವ ವೆಂಕಟಶೇಟ್ ಅವರ ಹೋಟೆಲ್ ಗೆ ಬಂದಿದ್ದ ವ್ಯಕ್ತಿಯೊಬ್ಬರು ಹಣ ಹಾಗೂ ಲಗ್ನ ಪತ್ರಿಕೆ ಇರುವ ಬ್ಯಾಗನ್ನು ಮರೆತು ಬಿಟ್ಟು ಹೋಗಿದ್ದರು. ವೆಂಕಟೇಶ್ ಅವರು ಬ್ಯಾಗ್ ನ್ನು ಪರಿಶೀಲಿಸಿದಾಗ 12,000ರೂ ಹಾಗೂ ಲಗ್ನ ಪತ್ರಿಕೆಗಳು, ಗುರುತಿನ ಚೀಟಿ ಇರುವದು ಕಂಡುಬಂದಿತ್ತು. ಕೂಡಲೇ ಅದರಲ್ಲಿರುವ ಮೊಬೈಲ್ ನಂಬರ್ ಸಂಪರ್ಕಿಸಿ ಆ ವ್ಯಕ್ತಿ ಬ್ಯಾಗಿನ ಗುರುತು ಹೇಳಿದ ನಂತರ ವಾರಸುದಾರ ಆನ ಗೋಡಿನ ಶಂಭು ಮನೆಯ ವಾಸುದೇವ ಗಾ ವಂಕರ್ ಅವರಿಗೆ ಹಣವಿದ್ದ ಬ್ಯಾಗ ನ್ನು ನೀಡಿ ಹೋಟೆಲ್ ಮಾಲೀಕ ವೆಂಕಟೇಶ್ ಶೇಟ್ ಪ್ರಾಮಾಣಿಕತೆ ಮೆರೆದಿದ್ದಾರೆ.



ಮರ್ಯಾದಾ ಹತ್ಯೆ ಪ್ರಕರಣ

ಮೂವರು ಆರೋಪಿಗಳ ಬಂಧನ

• ಬೆಳಗಾವಿ: ಜಿಲ್ಲೆಯ ಯಮಕನಮರಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಮರ್ಯಾದಾ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಚಕ್ರಗತಿಯ ಕಾರ್ಯಾಚರಣೆ ನಡೆಸಿ ಯಮಕನಮರಡಿ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಎಸ್ಪಿ ಕೆ.ರಾಮರಾಜನ್ ಹೇಳಿದರು.



ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಎಸ್ಪಿ ಕೆ. ರಾಮರಾಜನ್ ಅವರು, ರಾಯಬಾಗ ತಾಲೂಕಿನ ಹಣಬರಟ್ಟಿ ಗ್ರಾಮದ ಸತ್ಯವ್ವ ಸಂತೋಷ ಹಳವಿ (24) ಎಂಬಾಕೆಯನ್ನು ಆಕೆಯ ಕುಟುಂಬದವರೇ ವಿಷವಿಕ್ಕಿ ಕೊಲೆ ಮಾಡಿ, ಸಾಕ್ಷ್ಯ ನಾಶಪಡಿಸಲು ಶವವನ್ನು ಸುಟ್ಟು ಹಾಕಿರುವ ಪ್ರಕರಣ ಬೆಳಕಿಗೆ ಬಂದಿತ್ತು. ಕೃಷ್ಣಾ ಸಹದೇವ ಪಾಟೀಲ ಅವರು ನೀಡಿದ ದೂರಿನ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು.

ಕೃಷ್ಣಾ ಸಹದೇವ ಪಾಟೀಲ ಮತ್ತು ಮೃತ ಸತ್ಯವ್ವಾ ಸಂತೋಷ ಹಳವರ ಇಬ್ಬರು ಹುಕ್ಕೇರಿ ತಾಲೂಕಿನ ನದಿಗುಡಿಕೇತ್ರದವರು, ಇಬ್ಬರು ಪರಸ್ಪರ ಪ್ರೀತಿಸುತ್ತಿದ್ದರು. ಸತ್ಯವ್ವಾಳಿಗೆ ಸಂತೋಷ್ ಹಳವಿ ಎಂಬಾತನೊಂದಿಗೆ ಮದುವೆಯಾದರೂ ಇವರ ಪ್ರೀತಿ ಮುಂದುವರೆದಿತ್ತು. ಈ ಹಿನ್ನೆಲೆ ಸತ್ಯವ್ವ ಕಳೆದ ಫೆಬ್ರವರಿ 17 ರಂದು ಆತನೊಂದಿಗೆ ಬೇರೆ ಮನೆ ಮಾಡಿ ಬೆಳವಡಿಯಲ್ಲಿ ವಾಸವಿದ್ದಳು. ಆದರೆ, ತವರು ಮನೆಯವರು ಈ ಬಗ್ಗೆ ಯಮಕನಮರಡಿ ಮತ್ತು ರಾಯಬಾಗ ಠಾಣೆಗಳಲ್ಲಿ ನಾಪತ್ತೆ ದೂರು ದಾಖಲಿಸಿದ್ದರು.

ವಿಷಯ ತಿಳಿದು ಆಕೆಯನ್ನು ಪತ್ತೆ ಹಚ್ಚಿ ಕರೆತಂದಿದ್ದ ಕುಟುಂಬಸ್ಥರು, ಜಾತಿ ಬೇರೆ ಎಂಬ ಕಾರಣಕ್ಕೆ ಬುದ್ಧಿವಾದ ಹೇಳಿದ್ದರು. ಆದರೂ ಆಕೆ ಅವರ ಮಾತನ್ನು ಕೇಳಲಿಲ್ಲ. ಮಾರ್ಚ್ 21 ರಂದು ಸಾಂಗ್ಲಿ ಜಿಲ್ಲೆಯ ಅರಗ ಗ್ರಾಮದಲ್ಲಿದ್ದಾಗ ಸತ್ಯವ್ವ ಮತ್ತೆ ಪ್ರಿಯಕರನ ಬಳಿಯೇ ಹೋಗುವುದಾಗಿ ಪಟ್ಟು ಹಿಡಿದಿದ್ದಾಳೆ. ಇದರಿಂದ ಆಕ್ರೋಶಗೊಂಡ ಆರೋಪಿಗಳು ಬಲವಂತವಾಗಿ ವಿಷ ಕುಡಿಸಿ ಆಕೆಯನ್ನು ಹತ್ಯೆ ಮಾಡಿದ್ದಾರೆ. ಅಂದೇ ರಾತ್ರಿ ಅರಗ ಗ್ರಾಮದ ಸ್ಮಶಾನದಲ್ಲಿ ಶವವನ್ನು ಸುಟ್ಟು ಹಾಕುವ ಮೂಲಕ ಸಾಕ್ಷ್ಯ ನಾಶಕ್ಕೆ ಯತ್ನಿಸಿದ್ದಾರೆ. ಈ ಬಗ್ಗೆ ಕೃಷ್ಣಾ ಪಾಟೀಲ ನೀಡಿದ ದೂರಿನನ್ವಯ ತನಿಖೆ ಕೈಗೊಂಡ ಯಮಕನಮರಡಿ ಪಿಐ ಜಾವೀದ ಎಫ್. ಮುಷಾಪುರಿ ಅವರು ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ಮೃತಳ ಚಿಕ್ಕಪ್ಪ ಪ್ರಕಾಶ ಭೀಮಪ್ಪ ಹಳವರ (46), ಸಹೋದರ ಶಾನೂರ ಸದಾಶಿವ ಹಳವರ (35) ಮತ್ತು ಭಾವ ಕಲ್ಲಪ್ಪ ಮಾಯಪ್ಪ ಹಳವಿ (40) ಎಂಬುವವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದರು.

ಪ್ರೀತಿಸಿ ಮದುವೆಯಾದ ಜೋಡಿಗೆ ಜೀವ ಭಯ

• ಬೆಳಗಾವಿ: ಪೋಷಕರ ವಿರೋಧದ ನಡುವೆಯೂ ಮದುವೆಯಾದ ನವ ಜೋಡಿ ಇದೀಗ ಭದ್ರತೆ ನೀಡುವಂತೆ ಕೋರಿ ಬೆಳಗಾವಿ ಎಸ್‌ಪಿ ಕಚೇರಿ ಮೆಟ್ಟಿಲೇರಿದೆ.

ಜಾತಿಗಳು ಬೇರೆಯಾದ ಹಿನ್ನಲೆಯಲ್ಲಿ ದೇವಸ್ಥಾನದಲ್ಲಿ ಮದುವೆಯಾಗಿದ್ದೇವೆ. ಇದೀಗ ನಮ್ಮಿಬ್ಬರಿಗೆ ಜೀವ ಭಯವಿದೆ. ಹಾಗಾಗಿ ಪೊಲೀಸರ ರಕ್ಷಣೆ ಬೇಕೆಂದು ಎಸ್ಪಿ ಕಚೇರಿಗೆ ಬಂದಿದ್ದೇವೆ ಎಂದು ಶಿವಪ್ಪ ಮೂಕಗೋಳ, ವಿಮಲಾ ಭೋವಿ ಮಾಧ್ಯಮಗಳ ಎದುರು ತಮ್ಮ ಅಳಲು ತೋಡಿಕೊಂಡಿದ್ದಾರೆ.

ಕಳೆದ ಎರಡು ವರ್ಷಗಳಿಂದ ಪ್ರೀತಿಸುತ್ತಿದ್ದು, ಇತ್ತೀಚೆಗೆ ಮನೆಯಲ್ಲಿ ತಿಳಿಯದಂತೆ ದೇವಸ್ಥಾನದಲ್ಲಿ ಮದುವೆ ಮಾಡಿಕೊಂಡಿದ್ದೇವೆ. ಈ ವಿಚಾರ ತಿಳಿದ ಬಳಿಕ ವಿಮಲಾ ಭೋವಿ ಕುಟುಂಬಸ್ಥರು ಆಕೆಯನ್ನು ಎಳೆದುಕೊಂಡು ಹೋಗಿ ಗೃಹ ಬಂಧನದಲ್ಲಿ ಇಟ್ಟಿದ್ದರು. ಇದೀಗ ಪೋಷಕರ ಕಣ್ತಪ್ಪಿಸಿಕೊಂಡು ಬಂದಿದ್ದೇವೆ. ನಮ್ಮಗೆ ನಮ್ಮ ಪ್ರೀತಿಗೆ ರಕ್ಷಣೆ ಬೇಕಿದೆ ಎಂದು ಶಿವಪ್ಪ ಮೂಕಗೋಳ ಹೇಳಿದರು.

ವಿಮಲಾ ಭೋವಿ ಮಾತನಾಡಿ , ನಾನು ಬಿಎ ಮೊದಲ ವರ್ಷದಲ್ಲಿ ಅಧ್ಯಯನ ಮಾಡುತ್ತಿದ್ದು, ನಮ್ಮ ಮನೆಯಲ್ಲಿ ಶಿವಪ್ಪನನ್ನು ಇಷ್ಟ ಪಡುತ್ತಿರಲಿಲ್ಲ. ಶಿವಪ್ಪನ ಮನೆಯಲ್ಲಿ ಒಪ್ಪಿಗೆ ಇದೇ, ನನ್ನನ್ನು ಮನೆಯಿಂದ ಬಿಡದೆ ಕೂಡು ಹಾಕಿದ್ದರು. ಹೇಗೋ ತಪ್ಪಿಸಿಕೊಂಡು ಬಂದಿದ್ದೇವೆ ಪೊಲೀಸರು ನಮಗೆ ರಕ್ಷಣೆ ನೀಡಬೇಕು ಎಂದು ಹೇಳಿದರು.

ಪ್ರೀತಿಸಿ ಮದುವೆಯಾದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಕ್ಕೆ ಸೇರಿದ ನವವಿವಾಹಿತ ಜೋಡಿಗಳಿಗೆ ಪೊಲೀಸ್ ಇಲಾಖೆಯು ರಕ್ಷಣೆ ನೀಡುವ ಭರವಸೆ ನೀಡಿದೆ.

ಸೂಲಿಬೆಲೆಗೆ ನಿಂದನೆ ಆರೋಪ

ಇಸ್ಮಾಯಲ್ ವಿರುದ್ಧ ಎಫ್‌ಐಆರ್ ದಾಖಲು

• ಧಾರವಾಡ: ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಕುರಿತು ಅವಹೇಳನಕಾರಿ ಪದ ಬಳಕೆ ಹಾಗೂ ಅವಾಚ್ಯ ಶಬ್ಧಗಳಿಂದ ನಿಂದಿಸಿದ ಆರೋಪದಡಿ ಅಂಜುಮನ್ ಸಂಸ್ಥೆಯ ಅಧ್ಯಕ್ಷ ಇಸ್ಮಾಯಲ್ ತಮಟಗಾರ ವಿರುದ್ಧ ಶಹರ ಠಾಣೆಯಲ್ಲಿ ಎಫ್ ಐಆರ್ ದಾಖಲಾಗಿದೆ.

ಭಜರಂಗದಳದ ಇಂಧುದರಸ್ವಾಮಿ ಹಿರೇಮಠ ನೀಡಿದ ದೂರಿನಡಿ ಪೊಲೀಸರು ಕ್ರಮ ಕೈಗೊಂಡಿದ್ದಾರೆ. ಲವ್ ಜಿಹಾದ್ ಕುರಿತಂತೆ ಇಸ್ಮಾಯಲ್ ತಮಟಗಾರ ಚಕ್ರವರ್ತಿ ವ್ಯಕ್ತಿತ್ವಕ್ಕೆ ಧಕ್ಕೆ ತರುವ ಅಸಭ್ಯ ಪದಗಳಿಂದ ನಿಂದಿಸಿದ್ದಾಗಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಚಕ್ರವರ್ತಿ ಸೂಲಿಬೆಲೆ ಅವರನ್ನು ಉದ್ದೇಶಿಸಿ ಇಸ್ಮಾಯಲ್ ತಮಟಗಾರ ಅತ್ಯಂತ ಕೀಳುಮಟ್ಟದ ಭಾಷೆ ಬಳಸಿ ನಿಂದಿದ್ದಾರೆ. ಈ ಮೂಲಕ ಸಮಾಜದಲ್ಲಿ ಕೋಮು-ಸೌಹಾರ್ದತೆ, ಶಾಂತಿ-ಸುವ್ಯವಸ್ಥೆ ಕದಡಲು ಯತ್ನಿಸಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಧಾರ್ಮಿಕ ಭಾವನೆಗೆ ಧಕ್ಕೆ: ಇಂತಹ ಹೇಳಿಕೆಗಳು ಕೇವಲ ವ್ಯಕ್ತಿಯೊಬ್ಬನ ನಿಂದನೆಯಲ್ಲದೆ, ಒಂದು ನಿರ್ದಿಷ್ಟ ಸಿದ್ಧಾಂತವನ್ನು ನಂಬುವ ಕಾರ್ಯಕರ್ತರ ಭಾವನೆಗಳಿಗೂ ಧಕ್ಕೆ ತಂದಿದೆ ಎಂದು ದೂರುದಾರರು ತಿಳಿಸಿದ್ದಾರೆ.

ಕಠಿಣ ಕ್ರಮಕ್ಕೆ ಆಗ್ರಹ: ಸಾಮಾಜಿಕ ಸ್ವಾಸ್ಥ್ಯ ಕೆಡಿಸುವ ಇಂತಹ ಕಿಡಿಗೇಡಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಭಜರಂಗದಳ ಕಾರ್ಯಕರ್ತರು ಒತ್ತಾಯಿಸಿದ್ದಾರೆ.

ಪೊಲೀಸ್ ಕ್ರಮ: ಇಂಧುದರಸ್ವಾಮಿ ಅವರ ದೂರನ್ನು ಸ್ವೀಕರಿಸಿರುವ ಧಾರವಾಡ ಶಹರ ಠಾಣೆಯ ಪೊಲೀಸರು, ಇಸ್ಮಾಯಲ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೂಕ್ತ ಕಲಂ ಅಡಿ ಎಫ್.ಐ.ಆರ್. ದಾಖಲಿಸಿಕೊಂಡಿದ್ದು, ಮುಂದಿನ ಕಾನೂನು ಕ್ರಮ ಕೈಗೊಳ್ಳುವುದಾಗಿ ಪೊಲೀಸರು ತಿಳಿಸಿದ್ದಾರೆ.

ಮುಸ್ಲಿಂ ಸಮುದಾಯ ಕಡೆಗಣನೆ

ಕಾಂಗ್ರೆಸ್‌ಗೆ ತಕ್ಕ ಪಾಠದ ಎಚ್ಚರಿಕೆ



• ಹುಬ್ಬಳ್ಳಿ: ಮುಸ್ಲಿಂ ಸಮುದಾಯವನ್ನು ದಾವಣಗೆರೆ ದಕ್ಷಿಣ ವಿಧಾನ ಸಭಾ ಉಪ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ನೀಡದೆ ಕಡೆಗಣಿಸಿ ಅನ್ಯಾಯ ಮಾಡಿದ್ದು, ಇದೇ ರೀತಿ ಮುಂದುವರಿದರೆ 2028ರ ಚುನಾವಣೆಯಲ್ಲಿ ಸಮುದಾಯ ಒಟ್ಟಾಗಿ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಲಿದೆ ಎಂದು ಕರ್ನಾಟಕ ಮುಸ್ಲಿಂ ಧ್ವನಿ ಸಂಘಟನೆ ಮುಖ್ಯಸ್ಥ ಅಬ್ದುಲ್ ಕರಿಮ್ ಎಚ್ಚರಿಕೆ ನೀಡಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಸ್ಲಿಂ ಸಮುದಾಯದ ಅಭ್ಯರ್ಥಿಗೆ ಕಾಂಗ್ರೆಸ್ ಟಿಕೆಟ್ ನೀಡದಿರುವುದು ರಾಜ್ಯಾದ್ಯಂತ ಅಸಮಾಧಾನಕ್ಕೆ ಕಾರಣವಾಗಿದೆ. ಮುಸ್ಲಿಂ ಸಮುದಾಯದವರ ಮುಗ್ಧತೆಯನ್ನು ಕಾಂಗ್ರೆಸ್ ದುರುಪಯೋಗ ಮಾಡಿಕೊಳ್ಳುತ್ತಿದೆ. ಆದರೆ ಸಮುದಾಯಕ್ಕೆ ಕಾಂಗ್ರೆಸ್ ಪಕ್ಷ ಒಂದೇ ಅನಿವಾರ್ಯ ಅಲ್ಲ ಎಂಬುವುದು ಮರೆಯಬಾರದು ಎಂದು ಕಿಡಿಕಾರಿದ್ದಾರೆ.

ಸಮುದಾಯ ರಾಜಕೀಯ ಪ್ರಾತಿನಿಧ್ಯ ಕೇಳುವುದು ನಮ್ಮ ಹಕ್ಕಾಗಿದೆ. ದಾವಣಗೆರೆಯಲ್ಲಿ ಮುಸ್ಲಿಮರು ಬಹುಮತವಿತ್ತು. ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ನೀಡಬೇಕೆಂದು ಮುಸ್ಲಿಮ್ ಮುಖಂಡರ ಒತ್ತಡವಿದ್ದರೂ ಕಾಂಗ್ರೆಸ್ ವರಿಷ್ಠರು ಅದ್ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ ಬೇರೆಯವರಿಗೆ ಟಿಕೆಟ್ ನೀಡಿದರು ಎಂದು ತಿಳಿಸಿದರು.

> ಮುಂಬರುವ ದಿನಗಳಲ್ಲಿ ಯಾವುದಾದರೂ ಜಾತ್ಯತೀತ ಪಕ್ಷ ನಮ್ಮಪರವಾಗಿ ನಿಂತರೆ, ಸಮಸ್ತ ಮುಸ್ಲಿಮರು ಅವರಿಗೆ ಬೆಂಬಲ ನೀಡಲು ಸಿದ್ಧರಿದ್ದಾರೆ. ಅದು ಬಿಜೆಪಿ ಆಗಲಿ ಅಥವಾ ಜೆಡಿಎಸ್ ಆಗಲಿ. ಯಾವ ಸಮುದಾಯವೂ ಯಾವ ಪಕ್ಷಕ್ಕೂ ಸೀಮಿತವಲ್ಲ, ಬಾಧ್ಯಸ್ಥವೂ ಅಲ್ಲ.
>
> ■ ಅಬ್ದುಲ್ ಕರಿಮ್, ಮುಸ್ಲಿಂ ಧ್ವನಿ ಸಂಘಟನೆ ಮುಖ್ಯಸ್ಥ

ಹೀಗಾಗಿ ಅಲ್ಲಿ ಮುಸ್ಲಿಮರ ಅಸ್ತಿತ್ವ ನಶಿಸುತ್ತಿದೆ. ಚುನಾವಣೆಯಲ್ಲಿ ಮುಸ್ಲಿಮ್ ಮುಖಂಡರು ಪಕ್ಷವಿರೋಧಿ ಕೆಲಸ ಮಾಡಿದ್ದಾರೆ ಎಂದು ಅವರಿಂದ ಬಲವಂತವಾಗಿ ರಾಜೀನಾಮೆ ಪಡೆದಿದ್ದಾರೆ. ಇದು ಮುಸ್ಲಿಮ್ ವಿರೋಧಿ ನಡೆಯಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖಂಡರಾದ ಅಶ್ರಫಲಿ ಬಶೀರ್‌ಅಹ್ಮದ್, ಆಹಿಕ್ ಅಹ್ಮದ್, ಬಶೀರ್‌ಅಹ್ಮದ ಜಹಗೀರ್ ಇದ್ದರು.

ಅಪರಿಚಿತ ವಾಹನ ಡಿಕ್ಕಿ: ಕರಡಿ ಸಾವು

• ವಿಜಯನಗರ: ಅಪರಿಚಿತ ವಾಹನ ಡಿಕ್ಕಿಯಾಗಿ ಕರಡಿಯೊಂದು ಮೃತಪಟ್ಟಿರುವ ಘಟನೆ ಹೊಸಪೇಟೆ ತಾಲೂಕಿನ ಭುವನಹಳ್ಳಿ ಗ್ರಾಮದ ಬಳಿ ನಡೆದಿದೆ. ಮಂಗಳವಾರ ತಡರಾತ್ರಿ ರಸ್ತೆ ದಾಟುತ್ತಿರುವಾಗ ವಾಹನವೊಂದು ಡಿಕ್ಕಿಹೊಡೆದಿದ್ದು, ಸ್ಥಳದಲ್ಲೇ ಸಾವನ್ನಪ್ಪಿದೆ. ಈ ಕುರಿತು ಅರಣ್ಯ ಮತ್ತು ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಿದರು.

ಹೊಸಪೇಟೆ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬ್ಯಾನರ್ ವಿಚಾರಕ್ಕೆ ಗಲಾಟೆ: ನಾಲ್ವರಿಗೆ ಗಾಯ

• ಬೆಳಗಾವಿ: ಜಿಲ್ಲೆಯ ಅಥಣಿ ತಾಲೂಕಿನ ಕೋಹಳ್ಳಿ ಗ್ರಾಮದಲ್ಲಿ ಡಾ.ಬಾಬಾ ಸಾಹೇಬ ಅಂಬೇಡ್ಕರ್ ಅವರ 135ನೇ ಜಯಂತಿಯ ಅಂಗವಾಗಿ ಅಥಣಿ ತಾಲೂಕಿನ ಕೋಹಳ್ಳಿ ಗ್ರಾಮದಲ್ಲಿ ಬ್ಯಾನರ್ ಹಚ್ಚುವ ವಿಚಾರಕ್ಕೆ ಎರಡು ಗುಂಪುಗಳ ನಡುವೆ ಮಾತಿನ ಚಕಮಕಿ ನಡೆದು, ಕೈ ಕೈ ಮಿಲಾಯಿಸುವ ಹಂತಕ್ಕೆ ಬೆಳೆದು ಮಾರಾ ಮಾರಿ ನಡೆದಿರುವ ಘಟನೆಯೊಂದು ನಡೆದಿದೆ.

ಪ್ರವೀಣ್ ಹಣಮಂತ ಭಜಂತ್ರಿ ಎಂಬುವರು ಬ್ಯಾನರ್ ಕಟ್ಟುತ್ತಿದ್ದಾಗ ಹೋಹನ್ ಚಿದಾನಂದ ಕಾಂಬಳೆ,ಚಿದಾನಂದ ರಾಮಪ್ಪ ಕಾಂಬಳೆ, ವಿವೇಕ ಚಿದಾನಂದ ಕಾಂಬಳೆ ಸೇರಿ ಹಲವರು ಬ್ಯಾನರ್ ಕಟ್ಟುವುದಕ್ಕೆ ಅಪೇಕ್ಷ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಮಾರಾ ಮಾರಿ ನಡೆದಿದೆ ಎನ್ನಲಾಗಿದೆ.

ಈ ವೇಳೆ ನಾಲ್ವರಿಗೆ ತಲೆಗೆ ಗಾಯಗಳಾಗಿದ್ದು ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ.



ಘಟನಾಸ್ಥಳಕ್ಕೆಅಥಣಿಪೊಲೀಸರುಭೇಟಿನೀಡಿಘಟನೆಯ ಮಾಹಿತಿ ಪಡೆದು ಮಾರಾ ಮಾರಿ ಮಾಡಿಕೊಂಡಿರುವವರ ವಿರುದ್ಧ ದೂರು ದಾಖಲಿಸಿಕೊಂಡಿದ್ದಾರೆ.

ಮಾಸಾಶನಕ್ಕೆ ವೃದ್ಧೆಯ ಅಲೆದಾಟ

84ರ ಅಜ್ಜಿಗೆ 48ರ 'ಆಧಾರ್ ಕಾರ್ಡ್'

▸ ಮಲ್ಲಿಕಾರ್ಜುನ ತುಂಗಳ

• ರಬಕವಿ-ಬನಹಟ್ಟಿ: ಕಳೆದೊಂದು ವರ್ಷದಿಂದ ಪಿಂಚಣಿಗಾಗಿ ಹಿರಿಯ ಜೀವ ಅಲೆದಾಟ, 84 ವಯಸ್ಸಾಗಿರುವ ಹಿರಿಯಜ್ಜಿಗೆ ಆಧಾರ್‌ನಲ್ಲಿ 48 ವರ್ಷ..! ಇಲ್ಲಿನ ತಾಲೂಕಾಡಳಿತ ಕಾರ್ಯಾಲಯಕ್ಕೆ ಅಲೆದು ವೃದ್ಧೆ ಸುಸ್ತಾಗಿದ್ದಾರೆ. ಇದು ತೇರದಾಳದ ದೇವರಾಜ ನಗರದಲ್ಲಿರುವ ವಯೋವೃದ್ಧೆ ಕುತಿಜಾಬಿ ರಾಜೇಸಾಬ ಪಠಾಯತ ನಡೆಸುತ್ತಿರುವ ಸಂಕಷ್ಟದ ಜೀವನ.





ಪಿಂಚಣಿಗಾಗಿ ಅಲೆದಾಟ: ಈತಳಿಗೆ ಪತಿ, ಮಕ್ಕಳು ಯಾರೂ ಇಲ್ಲ. ಈ ಮೊದಲು ಮಾಸಿಕ 1200 ರೂ.ಗಳಷ್ಟು ಪಿಂಚಣಿ ದೊರಕುತ್ತಿತ್ತು. ಕಳೆದ ವರ್ಷ ಸರ್ಕಾರದ ಆದೇಶದ ಮೆರೆಗೆ ಉಳ್ಳವರಪಾಲಾಗುತ್ತಿರುವ ಮಾಸಾಶನಕ್ಕೆ ಕಡಿತಗೊಳಿಸಿದ ಸಂದರ್ಭ ವೃದ್ಧೆಯ ಪಿಂಚಣಿಯೂ ಸ್ಥಗಿತಗೊಂಡಿದೆ. ಬಳಿಕ ಈ ಬಗ್ಗೆ ಹಲವು ಬಾರಿ ಸಂಬಂಧಿಸಿದವರಲ್ಲಿ ಕೇಳಿದ್ದಾರೆ. ಹಲವು ಬಾರಿ ಪಿಂಚಣಿಗಾಗಿ ಅರ್ಜಿ ಸಲ್ಲಿಸಿದ್ದರೂ ಆಧಾರ್‌ನಲ್ಲಿನ ವಯಸ್ಸು ತಪ್ಪಾಗಿ ಇರುವುದರಿಂದ ಪಿಂಚಣಿ ಮಾತ್ರ ಕೈ ಸೇರಿಲ್ಲವೆಂದು ಅಜ್ಜಿ ಕುತಿಜಾಬಿ ಬೇಸರ ವ್ಯಕ್ತಪಡಿಸಿದ್ದಾರೆ.

> '20 ವರ್ಷಗಳಿಂದ ಮಾಸಾಶನ ದೊರಕುತ್ತಿತ್ತು. ಕಳೆದೊಂದು ವರ್ಷದಿಂದ ಸ್ಥಗಿತಗೊಂಡಿದ್ದು, ಬದುಕು ನಿರ್ವಹಣೆ ಕಷ್ಟದಾಯಕವಾಗಿದೆ.
>
> ■ ಕುತಿಜಾಬಿ ರಾಜೇಸಾಬ ಪಠಾಯತ, ವಯೋವೃದ್ಧೆ.

ಪಾತ್ರೆ ತಿಕ್ಕುತ್ತ ಬದುಕು: ಇಳಿವಯಸ್ಸಿನ ವೃದ್ಧೆ ಕುತಿಜಾಬಿ ಪಠಾಯತ ಈ ಮೊದಲು ದಿನನಿತ್ಯ ಬೆಳಿಗ್ಗೆ ಮಾರುಕಟ್ಟೆಯಲ್ಲಿ ಕಾಯಿಪಲ್ಲೆ ಮಾರುತ್ತ ಬದುಕು ಸಾಗಿಸುತ್ತಿದ್ದಳು. ಕಳೆದೈದು ತಿಂಗಳಿಂದ ವಯೋಸಹಜ ಕಾರಣ ಕೆಲ ಮನೆಗಳಲ್ಲಿ ಪಾತ್ರೆ ತಿಕ್ಕುತ್ತ ನಿರ್ವಹಣೆಗಾಗಿ ಬದುಕು ಸವೆಸುತ್ತಿದ್ದಾಳೆ.

ಇದೀಗ ನಿತ್ಯ ಊಟಕ್ಕೆ ಹಾಗೂ ಔಷಧಿಗಾಗಿ ಆರ್ಥಿಕ ಸಮಸ್ಯೆ ಎದುರಿಸುತ್ತಿರುವ ಹಿರಿಯಜ್ಜಿಗೆ ಮಾಸಿಕ ಪಿಂಚಣಿ ಅತ್ಯವಶ್ಯವಿದೆ.

ಅಲೆದು ಸುಸ್ತು: ರಬಕವಿ-ಬನಹಟ್ಟಿ ತಹಶೀಲ್ದಾರ ಕಚೇರಿಗೆ ಏಳೆಂಟು ಬಾರಿ ಅಲೆದು ಪಿಂಚಣಿ ಸರಳೀಕರಣಕ್ಕಾಗಿ ಮನವಿ ಮಾಡಿಕೊಂಡರೂ ಯಾವುದೇ ಪ್ರಯೋಜನವಾಗಿಲ್ಲ. ಆಧಾರ್ ತಿದ್ದುಪಡಿಯಾಗದ ಕಾರಣ ಸ್ಥಗಿತಗೊಂಡಿರುವ ಪಿಂಚಣಿಗೆ ಸಂಬಂಧಪಟ್ಟ ಅಧಿಕಾರಿಗಳು ಸ್ಪಂದಿಸುವ ಅನಿವಾರ್ಯತೆಯಿದೆ.

ಏ.23ಕ್ಕೆ ಕವಿವಿಯ ಘಟಿಕೋತ್ಸವ

• ಧಾರವಾಡ: ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅಧ್ಯಕ್ಷತೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ವಾರ್ಷಿಕ ಘಟಿಕೋತ್ಸವ ಏ.23ರಂದು ಬೆಳಿಗ್ಗೆ 11ಕ್ಕೆ ನಗರದ ಕವಿವಿ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದೆ. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಇಸ್ರೋ ಮಾಜಿ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಘಟಿಕೋತ್ಸವದಲ್ಲಿ ಪದವಿ ಪ್ರಮಾಣಪತ್ರ ಪಡೆಯಲು ಉಪಸ್ಥಿತಿ ಎಂದು ಅರ್ಜಿ ಸಲ್ಲಿಸಿದರೆ, ಅಂತಹ ವಿದ್ಯಾರ್ಥಿಗಳಿಗೆ ಪರೀಕ್ಷಾ ವಿಭಾಗದಿಂದ ಘಟಿಕೋತ್ಸದ ಶಾಖೆಯಲ್ಲಿ ಏ.22 ಮತ್ತು 23ರಂದು ಪ್ರಮಾಣ ಪತ್ರ ವಿತರಿಸಲಿದ್ದು, ಅಂತಹ ವಿದ್ಯಾರ್ಥಿಗಳುತಮ್ಮಅಥವಾಮಹಾವಿದ್ಯಾಲಯದಗುರುತಿನ ಚೀಟಿಗಳನ್ನು ಹಾಜರಪಡಿಸಬೇಕು. ಪಿಎಚ್‌ಡಿ, ಸ್ನಾತಕ ಮತ್ತು ಸ್ನಾತಕೋತ್ತರ ರ್‍ಯಾಂಕ್ ಪಡೆದ ಪದವೀಧರರ ಸಮಾರಂಭಕ್ಕೆ ಖುದ್ದಾಗಿಯೇ ಹಾಜರಾಗಬೇಕು. ಏ.23ರ ಬೆಳಿಗ್ಗೆ 9.30ಕ್ಕೆ ಖಾದಿ ಬಿಳಿ ಉಡುಪು ಮತ್ತು ಗೌನ್ ಧರಿಸಬೇಕು. ಗೌನ್ ಪಡೆಯಲು ಏ.22ರಂದು ಪರೀಕ್ಷಾ ವಿಭಾಗದ ವಿಚಾರಣೆ ಮಳಿಗೆಯಲ್ಲಿ ಬೆಳಿಗ್ಗೆ 10.30ಕ್ಕೆ ವಿತರಿಸಲಿದೆ. ಅಭ್ಯರ್ಥಿಗಳು ರೂ.500 ಗೌನ್ ಶುಲ್ಕ ಭರಿಸಿ, ರಶೀದಿ ಕೂಡ ಪಡೆಯಬೇಕು. ಗೌನ್ ಧರಿಸದವರಿಗೆ ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಅವಕಾಶ ಇಲ್ಲ. ಘಟಿಕೋತ್ಸವದ ಬಳಿಕ ಗೌನ್ ಮರಳಿಸಿ, ರೂ.200 ಪಡೆಯುವಂತೆಯೂ ಮೌಲ್ಯಮಾಪನ ಕುಲಸಚಿವ ಡಾ.ಎನ್.ವೈ.ಮಟ್ಟಿಹಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಹೆಗಡೆಯವರಿಗೆ ಸನ್ಮಾನ

ಅಂಕೋಲಾ: ಅಂಕೋಲಾ ತಾಲೂಕಿನ ಅಚವೆ ಗ್ರಾಮ ಪಂಚಾಯತ ವ್ಯಾಪ್ತಿಗೆ ಸೇರಿದ ಅಂಗಡಿಬೈಲಿನ ಬಾಣಸಾಗರದ ಹೆಗಡೇರು ಎಂದೇ ಖ್ಯಾತರಾದ ಮಹಾಬಲೇಶ್ವರ ನಾರಾಯಣ ಹೆಗಡೆಯವರನ್ನು ಅವರ ಸ್ವಗೃಹದಲ್ಲಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಫಾಲ್ಗುಣ ಗೌಡ ಅವರು ಮಾತನಾಡಿ ಸನ್ಮಾನ ಪುರಸ್ಕಾರ ಏನನ್ನೂ ಇಚ್ಚಿಸದ ಇವರ ಮನೆತನ ಅನಾದಿಕಾಲದಿಂದಲೂ ಸಂದಿವಾತ, ಮೂಲವ್ಯಾಧಿ, ರಕ್ತ ಮೂಲವ್ಯಾದಿ, ನಘುಬಾಧೆ, ನರನಾಡಿಯ ಸಮಸ್ಯೆ, ಕಜ್ಜಿ, ತಾರಿ,ಗುತ್ತಿಗೆ, ಧಾತುಪುಷ್ಠಿ, ಹಾವು ಕಡಿತ, ಅಪಸ್ಮಾರ, ಉರಿಮೂತ್ರ, ಅಶಕ್ತತೆ, ಕುರು, ಸರ್ಪಸುತ್ತು, ವಿಶೇಷವಾಗಿ ಸ್ತ್ರೀಯರ ಬಿಳಿಜಡದ ಔಷಧ, ಮಕ್ಕಳಲ್ಲಿ ಮುಟ್ಟುದೋಷ,ಗರ್ಭ ಧರಿಸಲು ರಾಮಬಾಣ ಔಷಧ ನೀಡುತ್ತ ಬಂದಿದ್ದಾರೆ.ಎಲೆ ಮರೆಯ ಕಾಯಿಯಂತೆ ಪ್ರಚಾರದ ಯಾವ ಹಂಗೂ ಇಲ್ಲದೇ ಇದೊಂದು ದೇವರ ಸೇವೆ ಎಂದು ನಂಬಿ ನಾಟಿ ಮದ್ದು ನೀಡುವ ಕೆಲಸ ಮಾಡುತ್ತ ಬಂದಿದ್ದಾರೆ ಎಂದರು. ಅವರ ಕುಟುಂಬದ ನಿಸ್ವಾರ್ಥ ಸೇವೆಯನ್ನು ಗುರುತಿಸಿ ಚನಗಾರದ ಗೆಳೆಯರ ಬಳಗದ ವತಿಯಿಂದ ಸನ್ಮಾನಿಸಲಾಯಿತು.ಈ ಸಂದರ್ಭದಲ್ಲಿ ಅಚವೆ ಗ್ರಾಪಂಸದಸ್ಯ ಹನುಮ ಗೌಡ, ವಿಶ್ವನಾಥ ಗೌಡಉಪಸ್ಥಿತರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಕಾರವಾರ: ಕಾರವಾರ ಉಪ ವಿಭಾಗದ ವ್ಯಾಪ್ತಿಯಲ್ಲಿ ಹೆಚ್.ಟಿ ವಾಹಕ ಬದಲಾವಣೆ ಕಾಮಗಾರಿ ಇರುವುದರಿಂದ ಏ.16ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಬೈತ್‌ಕೋಲ ಫೀಡರಿನ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲ್ಲಿದ್ದು, ಗ್ರಾಹಕರು ಸಹಕರಿಸುವಂತೆ ಕಾರವಾರ ಹೆಸ್ಕಾಂ, ಕಾರ್ಯ ಮತ್ತು ಪಾಲನಾ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಳಿಯಾಳ: ಡಿಪ್ಲೋಮಾ ನಂತರ ಇಂಜಿನಿಯರಿಂಗ್ ಪದವಿ ಕೋರ್ಸ್ ಸೇರ ಬಯಸುವ ವಿದ್ಯಾರ್ಥಿಗಳಿಗೆ ಡಿಪ್ಲೋಮಾ ಸಾಮಾನ್ಯ ಪ್ರವೇಶಾತಿ ಪರೀಕ್ಷೆ (ಡಿಸಿಇಟಿ)ಗೆ ಉಚಿತ ತರಬೇತಿ ನೀಡುವ ಶಿಬಿರಕ್ಕೆ ಪಟ್ಟಣದ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯದಲ್ಲಿ ಚಾಲನೆ ನೀಡಲಾಯಿತು.

ಅಂಬೇಡ್ಕರರ 135ನೇ ಜಯಂತ್ಯುತ್ಸವ



ಮುಂಡಗೋಡ: ತಾಲೂಕಿನ ಮಳಗಿ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ಚಲವಾದಿ ಸಮಾಜದ ವತಿಯಿಂದ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು.ಅಂಬೇಡ್ಕರ್ ಅವರ ಭಾವಚಿತ್ರದೊಂದಿಗೆ ಗ್ರಾಮದ ಎಲ್ಲ ಬೀದಿಗಳಲ್ಲಿ ಡೊಳ್ಳಿನ ಮೆರವಣಿಗೆಯೊಂದಿಗೆ ಜೈಭೀಮ್ ಎಂಬ ಘೋಷಣೆ ಕೂಗುತ್ತಿರುವುದು ಕಂಡು ಬಂತು. ಸಮಾಜದ ಅಧ್ಯಕ್ಷ ನಾಗೇಂದ್ರ, ಹೆಚ್ ಕರಗಸ್ಕರ್, ಉಪಾಧ್ಯಕ್ಷ ಮಾದೇಶ್ ಹುಲ್ಲೂರು, ಕಾರ್ಯದರ್ಶಿ ಕೃಷ್ಣ ನಾಟಿನ್, ಹಿರಿಯರು ಹಾಗೂ ಮಾರ್ಗದರ್ಶಿಗಳಾದ ದ್ಯಾಮಣ್ಣ ಹಾನಗಲ್ಲ, ಯುವ ನಾಯಕ ಸುಭಾಸ ತಲಗಡ್ಡಿ, ದಯಾನಂದ ನಾಟಿನ, ಉಮೇಶ್ ಹಾರೋಹಳ್ಳಿ, ಚಂದ್ರು ಚೌಡರ್, ಫಕೀರಪ್ಪ ಜಡೆ, ಸಮಾಜದ ಗಣ್ಯರು, ಹಿರಿಯರು ಹಾಗೂ ಮಹಿಳೆಯರು ಮತ್ತು ತಾಯಂದಿರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	61005	71699
ಬಿಳಿಗೋಟು	27899	38099
ಕೆಂಪುಗೋಟು	31058	36899
ಬೆಟ್ಟೆ	41299	52399
ರಾಶಿ	48269	53899
ಚಾಲಿ	44200	48700



ಅಂಕೋಲಾ: ಅಂಕೋಲಾ ತಾಲೂಕಿನ ಅಚವೆ ಗ್ರಾಮ ಪಂಚಾಯತ ವ್ಯಾಪ್ತಿಗೆ ಸೇರಿದ ಅಂಗಡಿಬೈಲಿನ ಬಾಣಸಾಗರದ ಹೆಗಡೇರು ಎಂದೇ ಖ್ಯಾತರಾದ ಮಹಾಬಲೇಶ್ವರ ನಾರಾಯಣ ಹೆಗಡೆಯವರನ್ನು ಅವರ ಸ್ವಗೃಹದಲ್ಲಿ ಸನ್ಮಾನಿಸಲಾಯಿತು.

ಅಂಬೇಡ್ಕರರ ವಿಚಾರಧಾರೆ ಅಳವಡಿಸಿಕೊಳ್ಳಿ

ಸಿದ್ದಾಪುರ: ಎಲ್ಲಿಯವರೆಗೆ ನಮ್ಮ ಬದುಕಿಗೆ ಸರಿಯಾದ ದಾರಿಯಾಗುವುದಿಲ್ಲವೋ ಅಲ್ಲಿಯವರೆಗೆ ಅಭಿವೃದ್ಧಿ ಸಾಧ್ಯವಿಲ್ಲ. ಅಂಬೇಡ್ಕರ್ ಅವರ ವಿಚಾರಧಾರೆ ಹಾಗೂ ಬದುಕನ್ನು ನಮ್ಮೆಲ್ಲರ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶಿರಸಿಯ ನಿಲೇಕಣಿ ಸರ್ಕಾರಿ ಪಿಯು ಕಾಲೇಜಿನ ಉಪನ್ಯಾಸಕ ಉಮೇಶ ನಾಯ್ಕ ಹೇಳಿದರು. ತಾಲೂಕು ಆಡಳಿತ, ತಾಪಂ, ಸಮಾಜ ಕಲ್ಯಾಣ ಇಲಾಖೆ, ಪಪಂ ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಪಟ್ಟಣದ ಸಿದ್ಧಿ ವಿನಾಯಕ ಬಾಲಕಿಯರ ಪ್ರೌಢಶಾಲೆಯಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿಯಲ್ಲಿ ಅವರು ಉಪನ್ಯಾಸ ನೀಡದ್ದರು.ಉಪವಿಭಾಗ ಮಟ್ಟದ ದೌರ್ಜನ್ಯ ಸಮಿತಿ ಸದಸ್ಯ ಚಂದ್ರು ಕಾನಡೆ, ಅಂಬೇಡ್ಕರ್ ಶಕ್ತಿ ಸಂಘದ ಅಧ್ಯಕ್ಷ ನಂದನ ಬೋರಕರ್, ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ವೀರಭದ್ರ ನಾಯ್ಕ ಮಾತನಾಡಿದರು. ತಾಲೂಕು ದಂಡಾಧಿಕಾರಿ ಎಂ.ಆರ್.ಕುಲಕರ್ಣಿ ಅಧ್ಯಕ್ಷತೆ ವಹಿಸಿದ್ದರು. ತಾಪಂ ಇಓ ದೇವರಾಜ ಹಿತ್ತಲಕೊಪ್ಪ, ಪಪಂ ಮುಖ್ಯಾಧಿಕಾರಿ ಮಹಮ್ಮದ್ ಯಾಕೂಬ್ ಶೇಖ್, ಮುಕ್ರಿ ಸಮಾಜದ ಅಧ್ಯಕ್ಷ ವಿನಾಯಕ ಮುಕ್ರಿ, ಚಲವಾದಿ ಸಮಾಜದ ಅಧ್ಯಕ್ಷ ದೇವಪ್ಪ ಚಲವಾದಿ, ಭೋವಿ ಸಮಾಜದ ಅಧ್ಯಕ್ಷ ಪರಶುರಾಮ ಭೋವಿ, ಆರೋಗ್ಯ ರಕ್ಷಾ ಸಮಿತಿ ಸದಸ್ಯ ಮಂಜುನಾಥ ಹಸ್ಲರ್, ವಾಲ್ಮೀಕಿ ಸಮಾಜದ ರಮೇಶ ಬೇಡರ್ ಉಪಸ್ಥಿತರಿದ್ದರು.ಸಮಾಜ ಕಲ್ಯಾಣ ಇಲಾಖೆ ಕಚೇರಿ ಅಧೀಕ್ಷಕ ಶಿವರಾಯಪ್ಪ ಸ್ವಾಗತಿಸಿದರು. ಅರುಣ ಸುಂಕತ್ತಿ ಕಾರ್ಯಕ್ರಮ ನಿರೂಪಿಸಿದರು.ಪಟ್ಟಣದ ಅಂಬೇಡ್ಕರ್ ವೃತ್ತದಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರದೊಂದಿಗೆ ಸಿದ್ದಿವಿನಾಯಕ ಪ್ರೌಢಶಾಲೆಯವರೆಗೆ ಮೆರವಣಿಗೆ ನಡೆಯಿತು.



ಸಿದ್ದಾಪುರ: ತಾಲೂಕು ಆಡಳಿತ, ತಾಪಂ, ಸಮಾಜ ಕಲ್ಯಾಣ ಇಲಾಖೆ, ಪಪಂ ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಪಟ್ಟಣದ ಸಿದ್ಧಿ ವಿನಾಯಕ ಬಾಲಕಿಯರ ಪ್ರೌಢಶಾಲೆಯಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಆಚರಿಸಲಾಯಿತು.

ದೇವಾಲಯಗಳ ಸಂರಕ್ಷಣೆಗೆ ನಿರಂತರ ಪ್ರಯತ್ನ ಅವಶ್ಯ: ವಿದ್ವಾಂಸ ವೆಂಕಟೇಶ

ಹೊನ್ನಾವರ: ದೇಶವನ್ನು ಗುರುತಿಸುವ ಮೈಲುಗಲ್ಲುಗಳು ದೇವಾಲಯಗಳು, ಗುರುಕುಲಗಳು ಮತ್ತು ಆಯತಸ್ಥಳಗಳಾಗಿವೆ ಎಂದು ಖ್ಯಾತ ವಿದ್ವಾಂಸರಾದ ಮಲ್ಲೇಪುರಂ ಜಿ. ವೆಂಕಟೇಶ ಹೇಳಿದರು.

ತಾಲೂಕಿನ ಗುಣವಂತೆಯ ಶ್ರೀ ಶಂಭು ಶಂಭುಲಿಂಗೇಶ್ವರ ದೇವಾಲಯದ ನೂತನ ಶಿಲಾಮಯ ದೇವಾಲಯ ಲೋಕಾರ್ಪಣೆ, ಅಷ್ಟಬಂಧ ಮತ್ತು ಬ್ರಹ್ಮಕಲಶೋತ್ಸವ ಪ್ರಯುಕ್ತ ಧಾರ್ಮಿಕ ಸಭಾ ಕಾರ್ಯಕ್ರಮದ ಅಂಗವಾಗಿ ನಡೆದ ಧಾರ್ಮಿಕ ಸಭಾ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ವಿಷ್ಣು ಧರ್ಮೋತ್ತರ ಪುರಾಣದ ಉಲ್ಲೇಖಿಸಿ ದೇವಾಲಯದ ಉಗಮದ ವಾಸ್ತವ ಸತ್ಯವನ್ನು ತಿಳಿಸಿದರು. ಸಂಸ್ಕೃತಿ, ಸಂಸ್ಕಾರ ಮತ್ತು ಪರಂಪರೆಯ ವಿಸ್ತಾರಕ್ಕೆ ಕಾರಣವಾದ ದೇವಾಲಯಗಳನ್ನು ಸಂರಕ್ಷಿಸುವ ಮತ್ತು ಪಾವಿತ್ರ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ನಿರಂತರ ಪ್ರಯತ್ನ ಮಾಡಬೇಕು ಎಂದರು.

ಸಭಾಧ್ಯಕ್ಷತೆಯನ್ನು ವಹಿಸಿದ ಎಮ್.ವಿ.ಹೆಗಡೆ ಮಾತನಾಡಿ, ಸಮೃದ್ಧ ದೇಶವಾದ ನಮ್ಮ ಭರತ ಖಂಡವನ್ನು ನಾಶಮಾಡಲು ಪ್ರಯತ್ನಿಸಿದ ಪ್ರಧಾನ ಸಾನಿಧ್ಯ ದೇವಾಲಯಗಳು . ದೇವಾಲಯಗಳು ನಮ್ಮ ಸಂಸ್ಕೃತಿಯ ಅಸ್ಮಿತೆಗಳಾಗಿವೆ ಎಂದರು.



> ಮಹತ್ತರ ಸಂದರ್ಭದಲ್ಲಿ ಭಾಗವಹಿಸುತ್ತಿರುವ ನನಗೆ ಗುಣವಂತೆಯ ವಿದ್ಯಾ ಮಾಧವ ಪಂಡಿತರ ಮೇಲೆ ಮಾಡಿದ ಅಧ್ಯಯನದಿಂದ ಪಡೆದ ಡಾಕ್ಟರೇಟ್ ಪದವಿಯ ನೆನಪು ಆಗುತ್ತದೆ. ದೇವಾಲಯಗಳಿಂದ ಮನೋವಿಕಾರ ಮಾಯವಾಗಿ ಸದ್ಭಾವನೆ ಸದ್ಭಕ್ತನಲ್ಲಿ ಮೂಡಬೇಕಾದದ್ದು ಅಗತ್ಯ.
> ■ ಗೌರಿ ಹೆಗಡೆ, ವಿದುಷಿ

ಊರಿನ ಪುಟ್ಟ ಪುಟಾಣಿಗಳಿಂದ ಪ್ರಾರ್ಥನೆಯೊಂದಿಗೆ ಆರಂಭವಾದ ಧಾರ್ಮಿಕ ಸಭೆಯಲ್ಲಿ ಉಪಸ್ಥಿತರಿದ್ದ ಅತಿಥಿ, ಅಭ್ಯಾಗತರನ್ನು ಆಡಳಿತ ಮಂಡಳಿಯ ಪ್ರಧಾನ ಕಾರ್ಯದರ್ಶಿ ಎಮ್. ಎಸ್. ಹೆಗಡೆಯವರು ಪರಿಚಯಿಸಿ ಸ್ವಾಗತಿಸಿದರು. ಆಡಳಿತಮಂಡಳಿಯ ಸದಸ್ಯರು ಸೇರಿ ಶ್ರೀ ಮಲ್ಲೇಪುರಂ ಶ್ರೀ ವೆಂಕಟೇಶ ವರಿಗೆ ಸನ್ಮಾನಿಸಲಾಯಿತು.

ಸುಧೀಶ ನಾಯ್ಕ ಮತ್ತು ಐ.ವಿ.ಹೆಗಡೆ ಕಾರ್ಯಕ್ರಮ ನಿರೂಪಿಸಿದರು. ನಾಗಪ್ಪ ಗೌಡ ವಂದಿಸಿದರು.

ಎಂ.ಎಸ್.ಹೆಗಡೆ ನಿರ್ವಹಿಸಿದರು.

ಸಾಂಸ್ಕೃತಿಕ ವೈಭವದ ಭಾಗವಾಗಿ ಇಡಗುಂಜಿ ಮತ್ತು ಮಾಳ್ಕೋಡಿನ ಮಹಿಳೆಯರ ಜೈ ಹನುಮಾನ್ ಭಜನೆ ನೃತ್ಯ ತಂಡದಿಂದ ನೃತ್ಯ ಭಜನೆ ನಡೆಸಿಕೊಟ್ಟರು. ಯಕ್ಷ ಮಾಣಿಕ್ಯ ಚಿಂತನ ಹೆಗಡೆಯವರಿಂದ ಗಾನವೈಭವ ನಡೆಯಿತು. ಕುಮಾರಿ ಸಂಗೀತ ನಾಯ್ಕ ರವರಿಂದ ನಡೆದ ಭಕ್ತಿ ಸಂಗೀತ ಪ್ರೇಕ್ಷಕರಿಂದ ಮೆಚ್ಚುಗೆಗೆ ಪಾತ್ರವಾಯಿತು. ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಗುರುಪಾದರಾದ ಸ್ವಾಮಿ ಶ್ರೀ ಸೂರ್ಯಪಾದರು ಮತ್ತು ಅವರ ಶಿಷ್ಯ ಬಳಗದವರಿಂದ ಗಾನ, ಧ್ಯಾನ ಜ್ಞಾನ ಧಾರ್ಮಿಕ ಭಜನಾ ಕಾರ್ಯಕ್ರಮ ನಡೆಯಿತು.

ಕೋಮಾರಪಂಥ ಸಮುದಾಯ ಭವನ ಲೋಕಾರ್ಪಣೆ



ಕಾರವಾರ: ತಾಲೂಕಿನ ಕಾಜುಬಾಗ ಕೋಮಾರಪಂಥ ಸಮಾಜದ ಸಮುದಾಯ ಭವನದ ಮೇಲ್ಮಹಡಿ ಕಟ್ಟಡದ ಲೋಕಾರ್ಪಣಾ ಕಾರ್ಯ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನದ ದಕ್ಷಿಣಾಮ್ನಾಯ ಶೃಂಗೇರಿ ಶಾರದಾಪೀಠಾಧೀಶ್ವರ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಅಮೃತ ಹಸ್ತದಿಂದ ಬುಧವಾರ ನೆರವೇರಿತು.

ಮಹೋತ್ಸವ ಕಾರ್ಯಕ್ರಮದಲ್ಲಿ ರಾಜ್ಯ ಬಿಜೆಪಿ ಉಪಾಧ್ಯಕ್ಷರಾದ ರೂಪಾಲಿ. ಎಸ್.ನಾಯ್ಕ್ ಅವರು ಪಾಲ್ಗೊಂಡು ಶ್ರೀ ವಿಧುಶೇಖರ ಭಾರತೀ ಶ್ರೀಗಳ ಆಶೀರ್ವಾದ ಪಡೆದರು.

ಕೋಮಾರಪಂಥ ಸಮಾಜದ ಸಮುದಾಯ ಭವನದ ಮೇಲ್ಮಹಡಿ ಕಟ್ಟಡಕ್ಕೆ ನನ್ನ ಅಧಿಕಾರದ ಅವಧಿಯಲ್ಲಿ ಸರ್ಕಾರದಿಂದ ಎಪ್ಪತ್ತು ಲಕ್ಷ ರೂಪಾಯಿ ಅನುದಾನ ನೀಡಲಾಗಿತ್ತು, ಅದೇ ಕಟ್ಟಡದ ಲೋಕಾರ್ಪಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು, ನನಗೆ ಸಂತೋಷವಾಯಿತು ಎಂದು ಅವರು ಹೇಳಿದರು.

ಕೋಮಾರಪಂಥ ಸಮಾಜ ಬಾಂಧವರು ರೂಪಾಲಿಯವರನ್ನು ಗೌರವಿಸಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಮಗ ಪರ್ಬತ್ ನಾಯ್ಕ, ಕೋಮಾರಪಂಥ ಸಮಾಜದವರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಡಿಸಿಇಟಿ ತರಬೇತಿಗೆ ಚಾಲನೆ

ಹಳಿಯಾಳ: ಡಿಪ್ಲೋಮಾ ನಂತರ ಇಂಜಿನಿಯರಿಂಗ್ ಪದವಿ ಕೋರ್ಸ್ ಸೇರ ಬಯಸುವ ವಿದ್ಯಾರ್ಥಿಗಳಿಗೆ ಡಿಪ್ಲೋಮಾ ಸಾಮಾನ್ಯ ಪ್ರವೇಶಾತಿ ಪರೀಕ್ಷೆ (ಡಿಸಿಇಟಿ)ಗೆ ಉಚಿತ ತರಬೇತಿ ನೀಡುವ ಶಿಬಿರಕ್ಕೆ ಪಟ್ಟಣದ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯದಲ್ಲಿ ಚಾಲನೆ ನೀಡಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪ್ರಾ. ಡಾ.ವಿ.ಎ ಕುಲಕರ್ಣಿ ಮಹಾವಿದ್ಯಾಲಯವು ಇಂಜಿನಿಯರಿಂಗ್ ಆಕಾಂಕ್ಷಿತ ವಿದ್ಯಾರ್ಥಿಗಳಿಗೆ ಡಿಸಿಇಟಿ ಪರೀಕ್ಷೆಗೆ ಉಚಿತವಾಗಿ ತರಬೇತಿ, ಊಟ, ವಸತಿಯನ್ನು ನೀಡುತ್ತಿದ್ದು, ಇದರ ಸದುಪಯೋಗ ಪಡಿಸಿಕೊಂಡು ಪ್ರವೇಶ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿ ಉಜ್ವಲ ಭವಿಷ್ಯಹೊಂದಿರಿ ಎಂದರು. 3 ದಿನಗಳ ಕಾಲ ಜರುಗಲಿರುವ ಈ ತರಬೇತಿ ಶಿಬಿರದಲ್ಲಿ ಡಾ. ಗುರುರಾಜ ಹಟ್ಟಿ, ಡಾ. ಮೀನಾಲ್ ಕಲಿವಾಲ್, ಪ್ರೊ.ಸಂತೋಷ್ ಸವಣೂರ, ಪ್ರೊ.ದೀಪಕ್ ಶರ್ಮಾ, ಪ್ರೊ.ಪ್ರಕಾಶ್ ಚವಾಣ್, ಪ್ರೊ.ಪ್ರಾಣೇಶ್ ಕುಲಕರ್ಣಿ, ಪ್ರೊ.ರವೀಂದ್ರ ಪಾಟೀಲ್ ತರಬೇತುದಾರರಾಗಿದ್ದಾರೆ. ವಿವಿಧ ಕಾಲೇಜುಗಳಿಂದ 60ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದಾರೆ.

ಇಂದಿನಿಂದ ಮನೆಗಳ ಗಣತಿ ಕಾರ್ಯ



ಕಾರವಾರ: ಭಾರತೀಯ ಜನಗಣತಿ ಪ್ರಯುಕ್ತ ಮನೆಗಳ ಪಟ್ಟಿ ಮತ್ತು ಮನೆಗಳ ಗಣತಿ ಕಾರ್ಯವು ಏ.16 ರಿಂದ ಮೇ.15 ರವರೆಗೆ ನಡೆಯಲಿದ್ದು, ಸದ್ರಿ ಕಾರ್ಯಕ್ಕೆ ಗಣತಿದಾರರು ಮನೆ-ಮನೆಗೆ ಭೇಟಿ ನೀಡಲಿದ್ದು, ಉಕ ಜಿಲ್ಲೆಯಲ್ಲಿ ಒಟ್ಟು 3216 ಮನೆಯ ಪಟ್ಟಿಯ ಬ್ಲಾಕ್‌ಗಳಿದ್ದು, ಈ ಬ್ಲಾಕ್‌ಗಳಿಗೆ 3255 ಗಣತಿದಾರರು ಹಾಗೂ 586 ಮೇಲ್ವಿಚಾರಕರಿಗೆ ಗಣತಿ ಕಾರ್ಯವನ್ನು ನಿರ್ವಹಿಸಿಲು ನೇಮಕ ಮಾಡಲಾಗಿದೆ. ಸದ್ರಿಯವರು ಮನೆಗಳಿಗೆ ಭೇಟಿ ನೀಡಿದಾಗ ಸಾರ್ವಜನಿಕರು ಮಾಹಿತಿಯನ್ನುಯ ಒದಗಿಸಿ ಗಣತಿ ಕಾರ್ಯವನ್ನು ಯಶಸ್ವಿಗೊಳಿಸಲು ತಿಳಿಸಿದೆ. ಸಾರ್ವಜನಿಕರು ನೀಡಿದ ಮಾಹಿತಿಯು ಸುರಕ್ಷಿತ ಹಾಗೂ ಗೌಪ್ಯವಾಗಿ ಉಳಿಯುತ್ತದೆ. ಈ ಗಣತಿಯ ಮಾಹಿತಿಯನ್ನು ರಾಷ್ಟ್ರ ನಿರ್ಮಾಣಕ್ಕಾಗಿ ಮಾತ್ರ ಬಳಸಲಾಗುತ್ತದೆ ಎಂದು ಜಿಲ್ಲಾಧಿಕಾರಿ ಹಾಗೂ ಪ್ರಧಾನ ಗಣತಿ ಅಧಿಕಾರಿ ಕೆ. ಲಕ್ಷ್ಮೀಪ್ರಿಯಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ತಿರಸ್ಕೃತ ಅರ್ಜಿಗಳ ಮರುಪರಿಶೀಲನೆಗೆ ಒತ್ತಾಯ

ಯಲ್ಲಾಪುರ: ಆಡಳಿತಗಾರರು ಹಾಗೂ ಹೋರಾಟಗಾರರ ಇಚ್ಛಾಶಕ್ತಿಯ ಕೊರತೆಯಿಂದಾಗಿ ಜಿಲ್ಲೆಯ ಅರಣ್ಯ ಅತಿಕ್ರಮಣದಾರರ ಸಮಸ್ಯೆಗೆ ಮುಕ್ತಿ ದೊರಕುತ್ತಿಲ್ಲ, ಸರ್ಕಾರ ಕ್ರಮ ಕೈಗೊಳ್ಳುಲು ಸಿದ್ಧವಿದ್ದರೂ, ಸಮಸ್ಯೆ ಬಗೆಹರಿಸುವತ್ತ ಮುಖಂಡರೆಲ್ಲ ಒಟ್ಟಾಗಿ ಮರುಪರಿಶೀಲನೆಗೆ ಒತ್ತು ನೀಡಬೇಕಿದೆ ಎಂದು ಜಿಲ್ಲಾ ಜನಪರ ಸಂಘಟನೆಗಳ ಒಕ್ಕೂಟದ ಮುಖ್ಯಸ್ಥ ಡಾ. ನಾಗೇಶ ನಾಯ್ಕ ಕಾಗಾಲ ಹೇಳಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಾಸ್ತವ್ಯ ಮತ್ತು ಜೀವನೋಪಾಯಕ್ಕಾಗಿ ತಲತಲಾಂತರದಿಂದ ಅನಿವಾರ್ಯವಾಗಿ ಅವಲಂಬಿತರಾಗಿರುವ ಜಿಲ್ಲೆಯಲ್ಲಿನ 82,000 ಕ್ಕೂ ಅಧಿಕ ಅರಣ್ಯವಾಸಿ ಕುಟುಂಬಗಳ ಭೂಹಕ್ಕು ಮಾನ್ಯಗೊಳಿಸುವ ಹಿನ್ನೆಲೆಯಲ್ಲಿ ಈಗಾಗಲೇ ತಿರಸ್ಕೃತಗೊಂಡಿರುವ ಅರ್ಜಿಗಳ ಮರುಪರಿಶೀಲನೆಗಾಗಿ ಉಕ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ. ತಿರಸ್ಕೃತ ಅರ್ಜಿಗಳ ಮರುಪರಿಶೀಲನೆಯ ಭಾಗವಾಗಿರುವ ಜಂಟಿ ಸ್ಥಳ ಮಹಜರು ಸಮೀತಿ ನೀಡುವ ವರದಿಯು ಭೂಹಕ್ಕು ಮಾನ್ಯಗೊಳಿಸುವ ಪ್ರಕ್ರಿಯೆಯಲ್ಲಿ ಪ್ರಮುಖ ದಾಖಲೆಯಾಗಿ ಪರಿಗಣಿಸಲ್ಪಡುವುದು. ನಿಯೋಜಿಸಲ್ಪಟ್ಟಿರುವ ಜಂಟಿ ಸ್ಥಳಮಹಜರು ಸಮೀತಿಯು ಹಲವು ನ್ಯೂನತೆಗಳಿಂದ ಕೂಡಿದ್ದು, ಅನುಸರಿಸುತ್ತಿರುವ ಸ್ಥಳಮಹಜರು ವಿಧಾನಗಳೂ ಸಹ ಅರಣ್ಯಹಕ್ಕು ಕಾಯಿದೆಗೆ ಸಂಪೂರ್ಣ ವ್ಯತಿರಿಕ್ತವಾಗಿದ್ದು ಕಾಟಾಚಾರಕ್ಕೆ ಸೀಮಿತವಾಗಿದೆ. ಇದರಿಂದ ತಮಗೆ ಯಾವದೇ ನ್ಯಾಯ ಸಿಗಲಾರದು ಎಂಬುದು ಬಡ ಅರಣ್ಯವಾಸಿಗಳ ಆತಂಕವಾಗಿದೆ ಎಂದು ಆರೋಪಿಸಿದರು.

ಮರುಪರಿಶೀಲನೆ ಪ್ರಕ್ರಿಯೆಯ ಶೀಘ್ರ ಮತ್ತು ಪರಿಣಾಮಕಾರಿ ಅನುಷ್ಠಾನದ ಹಿನ್ನೆಲೆಯಲ್ಲಿ ಜಿಲ್ಲಾ ಉಸುವಾರಿ ಸಚಿವರು ತಕ್ಷಣ ಮಧ್ಯಪ್ರವೇಶಿಸಬೇಕು. ಸಚಿವರ ಉಪಸ್ಥಿತಿಯಲ್ಲಿ ಉಕ ಜಿಲ್ಲಾಧಿಕಾರಿಗಳೊಂದಿಗೆ ಸಂಬಂಧಿತ ಇಲಾಖೆಯ ಅಧಿಕಾರಿಗಳು ಹಾಗೂ ಹೋರಾಟ ಸಮಿತಿಗಳ ಮುಖಂಡರುಗಳನ್ನೊಳಗೊಂಡು ಸಭೆಯೊಂದನ್ನು ಏರ್ಪಡಿಸಿ ಜಂಟಿ ಪರಿಶೀಲನಾ ಸಮೀತಿಯು ಅನುಸರಿಸಬೇಕಾದ ಕ್ರಮಗಳನ್ನು ಸ್ಪಷ್ಟಗೊಳಿಸಬೇಕು. ಬಡ ಅರಣ್ಯವಾಸಿ ಕುಟುಂಬಗಳು ಅವಕಾಶ ಲಭ್ಯತೆಯಿಂದ ವಂಚಿತರಾಗದಂತೆ ಜಾಗೃತೆವಹಿಸಬೇಕು. ಈ ಮೂಲಕ ತಿರಸ್ಕೃತ ಅರ್ಜಿಗಳ ಮರುಪರಿಶೀಲನಾ ಆದೇಶವನ್ನು ಸಾಫಲ್ಯಗೊಳಿಸಬೇಕು ಎಂಬುದು ನಮ್ಮ ಆಗ್ರಹವಾಗಿದೆ ಎಂದರು.

ಸಂಘಟನೆಯ ಜಿಲ್ಲಾ ಉಪಾಧ್ಯಕ್ಷ ಬೆನಿತ್ ಸಿದ್ದಿ ಪ್ರಮುಖರಾದ ಸಂತೋಷ ಭೋವಿವಡ್ಡರ್, ಗಿರೀಶ್ ನಾಯ್ಕ ಹೆಮ್ಮಾಡಿ, ಗಣೇಶ ಪಟಗಾರ ಹೆಮ್ಮಾಡಿ, ಶಿವಾನಂದ ಪಿ. ನಾಯ್ಕ ಮದರೊಳ್ಳಿ, ಅಬ್ದುಲ್ ಕರೀಂ ಶೇಖ್ ಬನವಾಸಿ, ರವಿಂದ್ರ ಶೆಟ್ಟಿ ಉಪಸ್ಥಿತರಿದ್ದರು.



ಸಂಘಟನೆ, ಹೋರಾಟ, ಶಿಕ್ಷಣ ಅಂಬೇಡ್ಕರರ ಪ್ರಬಲ ಅಸ್ತ್ರ

ಮುಂಡಗೋಡ: ಸಂಘಟನೆ, ಹೋರಾಟ ಮತ್ತು ಶಿಕ್ಷಣ ಡಾ.ಬಿ.ಆರ್.ಅಂಬೇಡ್ಕರ್ ಅವರ ಮೂರು ಪ್ರಬಲ ಅಸ್ತ್ರಗಳಾಗಿದ್ದವು ಎಂದು ತಹಶೀಲ್ದಾರ್ ಶಂಕರ ಗೌಡಿ ಹೇಳಿದರು.ಇಲ್ಲಿನ ಪಪಂ ಟೌನ್ ಹಾಲ್‌ನಲ್ಲಿ ತಾಲೂಕು ಆಡಳಿತ, ತಾಪಂ, ಪಪಂ, ಸಮಾಜ ಕಲ್ಯಾಣ ಇಲಾಖೆ, ಪಜಾತಿ, ಪಪಂಗಡಗಳ ಮತ್ತು ವಿವಿಧ ಸಂಘ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಡಾ.ಬಾಬುಜಗಜೀವನರಾಂ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದಲ್ಲಿ ಅಸಮಾನತೆ ಹೋಗಲಾಡಿಸಲು ಅನೇಕ ಮಹಾನ್ ವ್ಯಕ್ತಿಗಳು ಬಂದು ಹೋಗಿದ್ದಾರೆ. ಭಗವಾನ್ ಬುದ್ಧ, ಜಗಜ್ಯೋತಿ ಬಸವೇಶ್ವರ, ಜ್ಯೋತಿಬಾ ಫುಲೆ ಹೀಗೆ ಹಲವರು ತಮ್ಮ ಅಮೂಲ್ಯ ಸೇವೆಯನ್ನು ಸಮಾಜಕ್ಕೆ ಸಲ್ಲಿಸಿದ್ದಾರೆ. ಡಾ.ಬಿ.ಆರ್.ಅಂಬೇಡ್ಕರ್ ಅಸಮಾನತೆ ವಿರುದ್ಧ ಅತ್ಯಂತ ಸಂಘಟಿತ ಮತ್ತು ವ್ಯವಸ್ಥಿತ ಹೋರಾಟ ಮಾಡಿದರು. ಜ್ಞಾನದ ಮೂಲಕ ಮಹಾಪುರುಷ ಎನಿಸಿಕೊಂಡರು.ಎಂದರು. ಸಾಹಿತಿ ಚಿದಾನಂದ ಪಾಟೀಲ ಉಪನ್ಯಾಸ ನೀಡಿದರು. ಜಿ.ಪಂ.ಮಾಜಿ ಸದಸ್ಯ ಎಲ್.ಟಿ.ಪಾಟೀಲ, ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಎಸ್.ಫಕ್ಕೀರಪ್ಪ, ಅಶೋಕ ಚಲವಾದಿ ಮಂಜುನಾಥ ಪಾಟೀಲ, ಸುರೇಶ ಕಳ್ಳೋಳ್ಳಿ ಮಾತನಾಡಿದರು. ಪ್ರಾಂಶುಪಾಲ ಪ್ರಸನ್ನಸಿಂಗ್ ಹಜೇರಿ ಸಂವಿಧಾನ ಪೀಠಿಕೆ ಓದಿದರು. ಎಸ್ಸೆಸ್ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ಎಸ್.ಸಿ. ವಿದ್ಯಾರ್ಥಿಗಳನ್ನು ಮತ್ತು ಉಪನ್ಯಾಸಕರನ್ನು ಸನ್ಮಾನಿಸಲಾಯಿತು.ಪಟ್ಟಣದ ಗಾಂಧಿನಗರದಲ್ಲಿ ಇರುವ ಅಂಬೇಡ್ಕರ್ ಮೂರ್ತಿಗೆ ಮಾಲಾರ್ಪಣೆ ಮಾಡಿ ಅವರ ಭಾವಚಿತ್ರಗಳ ಮೆರವಣಿಗೆ ಪ್ರಾರಂಭಗೊಂಡು ಅಂಬೇಡ್ಕರ್ ಸರ್ಕಲ್‌ನಲ್ಲಿ ಇರುವ ಅಂಬೇಡ್ಕರ್ ಮೂರ್ತಿಗೆ ಮಾಲಾರ್ಪಣೆ ಸಲ್ಲಿಸುವ ಮೂಲಕ ಬಸವನಬೀದಿಯಿಂದ ಟೌನ್ ಹಾಲ್‌ಗೆ ಮೆರವಣಿಗೆ ತಲುಪಿತು. ತಾಪಂ ಇಒ ಟಿ.ವೈ.ದಾಸನಕೊಪ್ಪ, ಪಪಂ ಮುಖ್ಯಾಧಿಕಾರಿ ಸಂತೋಷಕುಮಾರ ಎಚ್.ಸಿಪಿಐ ರಂಗನಾಥ ನೀಲಮ್ಮನವರ, ಸಿಡಿಪಿಒ ಸಂಜೀವ ಸದಲಗಿ, ಸಣ್ಣ ನೀರಾವರಿ ಇಲಾಖೆ ಎಇಇ ಆರ್. ಎಮ್. ದಫೇದಾರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇಂಜಿನಿಯರ ರಾಜೇಶ್ವರಿ ಕದಂ, ಪಿಡಬ್ಲ್ಯುಡಿ ಎಇಇ ಮಹದೇವಪ್ಪ ಹ್ಯಾಟಿ, ಸಮಾಜಕಲ್ಯಾಣ ಇಲಾಖೆಯ ಸಿದ್ದಯ್ಯನವರ, ವಸಂತ ಕೊಣಸಾಲಿ, ರಮೇಶ ಅಂಬಿಗೇರ, ಎನ್.ಡಿ. ಕಿತ್ತೂರ, ಸಲ್ಮಾ ಕಿರಣ ಶೇರಖಾನೆ ಇದ್ದರು. ಶಿಕ್ಷಕಿಯರು ಪ್ರಾರ್ಥಿಸಿದರು. ಬಿಇಒ ಸುಮಾ ಜಿ. ಸ್ವಾಗತಿಸಿದರು. ರಮೇಶ ಪವಾರ ನಿರೂಪಿಸಿದರು. ಅಂಬೇಡ್ಕರ್ ಅವರ ಜೀವನ ಚರಿತ್ರೆ ಕುರಿತು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಂದ ಕಿರು ನಾಟಕ ಪ್ರದರ್ಶನಗೊಂಡಿತು.



ಕೇರಿಕೊಪ್ಪಗಳ ನಡುವೆ ಕೃತಿ ಬಿಡುಗಡೆ

ಅಂಕೋಲಾ: ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನ ಅಂಕೋಲಾ ಇವರ ಆಶ್ರಯದಲ್ಲಿ ಹಿರಿಯ ಕತೆಗಾರ ಡಾ.ರಾಮಕೃಷ್ಣ ಗುಂದಿ ಅವರ ಆತ್ಮಕಥನ ಕೇರಿಕೊಪ್ಪಗಳ ನಡುವೆ ಕೃತಿ ಬಿಡುಗಡೆ ಕಾರ್ಯಕ್ರಮ ಗುಂದಿಯವರ ಮನೆಯಂಗಳ ಸೌಗಂಧಿಕಾದಲ್ಲಿ ನಡೆಯಿತು.ಕೃತಿ ಲೋಕಾರ್ಪಣೆಗೊಳಿಸಿದ ಖ್ಯಾತ ಲೇಖಕ ಮಹಾಬಲಮೂರ್ತಿ ಕೊಡ್ಲಕೆರೆ ಮಾತನಾಡಿ ಒಂದು ಸಮುದಾಯ ಎದುರಿಸಿದ ನೋವು ಸಂಕಷ್ಟಗಳ ಚಿತ್ರಣವಾಗಿ ಗುಂದಿಯವರ ಆತ್ಮಕಥನ ಮೂಡಿ ಬಂದಿದ್ದು, ಕೇರಿಕೊಪ್ಪಗಳ ನಡುವೆ ಅವರ ಬದುಕಿನ ವಾಸ್ತವ ಕೃತಿಯಲ್ಲಿ ಅನಾವರಣಗೊಂಡಿದೆ ಬದುಕಿನ ಘಟನೆಗಳನ್ನು ವಿವರಿಸುವಾಗ ಗುಂದಿಯವರು ಎಲ್ಲಿಯೂ ಭಾವಾವೇಷ, ಆಕ್ರೋಶಕ್ಕೆ ಒಳಗಾಗದಿರುವುದನ್ನು, ಸೌಜನ್ಯದ ಗಡಿ ದಾಟದಿರುವುದನ್ನು ಕೃತಿಯಲ್ಲಿ ಕಾಣಬಹುದು ಎಂದರು.ಕೃತಿ ಪರಿಚಯ ಮಾಡಿದ ಪ್ರಾ. ಸಿದ್ದಲಿಂಗಸ್ವಾಮಿ ವಸ್ತ್ರದ ಮಾತನಾಡಿ, ಗುಂದಿಯವರು ತಮ್ಮ ಆತ್ಮಕಥನದಲ್ಲಿ ದಮನಿತ ಸಮುದಾಯದ ಅಂತರಂಗ ಬಿಚ್ಚಿಟ್ಟಿದ್ದಾರೆ ಎಂದರು.ಕೃತಿಕಾರ ರಾಮಕೃಷ್ಣ ಗುಂದಿ ಮಾತನಾಡಿ, ಸಮುದಾಯ ನೀಡಿರುವ ಪ್ರೀತಿ ವಿಶ್ವಾಸ ಸದಾ ಸ್ಮರಣೀಯ ಎಂದರು.ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಾಹಿತಿ ಶಾಂತಾರಾಮ ನಾಯಕ ಹಿಚ್ಕಡ ಮಾತನಾಡಿ, ಯಾವುದೇ ರೀತಿಯ ಆತ್ಮವಂಚನೆ ಇಲ್ಲದೇ ಪ್ರಾಮಾಣಿಕವಾಗಿ ಗುಂದಿಯವರ ಆತ್ಮಕಥನ ಮೂಡಿ ಬಂದಿದ್ದು ಕನ್ನಡದ ಉತ್ತಮ ಆತ್ಮಕಥಗಳ ಸಾಲಿನಲ್ಲಿ ಗುಂದಿಯವರ ಕೇರಿಕೊಪ್ಪಗಳ ನಡುವೆ ನಿಲ್ಲಲಿದೆ ಎಂದರು.ಸಾಹಿತಿ ಮೋಹನ ಹಬ್ಬು ಮಾತನಾಡಿದರು, ಸಾಹಿತಿ ಮಹಾಬಲಮೂರ್ತಿ ಕೊಡ್ಲಕೆರೆ ಅವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನದ ಕಾರ್ಯದರ್ಶಿ ಜಗದೀಶ ನಾಯಕ ಹೊಸ್ಕೇರಿ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು ಶಿಕ್ಷಕ ಜಯಶೀಲ ಆಗೇರ ಕಾರ್ಯಕ್ರಮ ನಿರ್ವಹಿಸಿದರು, ಮಹಾಂತೇಶ ರೇವಡಿ ವಂದಿಸಿದರು.



ಲ್ಯಾಂಡ್ ಜಿಹಾದ್‌ನಿಂದ ಭೂ ಕಬಳಿಕೆ ತಂತ್ರ: ಮುತಾಲಿಕ್

ಅಂಕೋಲಾ: ಭೂನ್ಯಾಯ ಮಂಡಳಿ, ನ್ಯಾಯಾಲಯಗಳ ದಾಖಲೆಗಳ ಪ್ರಕಾರ ಹಿಂದೂ ರೈತ ಕುಟುಂಬಕ್ಕೆ ಸೇರಿರುವ ಜಮೀನೊಂದನ್ನು ಅಂಜುಮನ್ ಇಸ್ಲಾಂ ಸಂಸ್ಥೆ ಗೂಂಡಾಗಿರಿ ಮೂಲಕ ಅತಿಕ್ರಮಣ ಮಾಡಿದ್ದು ವ್ಯಾಜ್ಯ ಭೂನ್ಯಾಯ ಮಂಡಳಿಯಲ್ಲಿ ಬಾಕಿ ಇರುವಾಗಲೇ ಜಮೀನನ್ನು ಮುಸ್ಲಿಂ ಸ್ಮಶಾನ ಭೂಮಿಯಾಗಿ ಬಳಸಲಾಗುತ್ತಿದ್ದು ಲ್ಯಾಂಡ್ ಜಿಹಾದ್ ಮೂಲಕ ಭೂ ಕಬಳಿಕೆಯ ತಂತ್ರಗಾರಿಕೆ ನಡೆಯತೊಡಗಿದೆ ಎಂದು ಶ್ರೀರಾಮ ಸೇನೆಯ ಮುಖಂಡ ಪ್ರಮೋದ ಮುತಾಲಿಕ್ ಹೇಳಿದರು.

ಭೂ ಸಾಗುವಳಿದಾರ ರೈತರ ಮನವಿಯಂತೆ ಸ್ಥಳಕ್ಕೆ ಭೇಟಿ ನೀಡಿ ಸ್ಥಿತಿಗತಿಗಳನ್ನು ವೀಕ್ಷಿಸಿದ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೀಗ ಪುರಸಭೆ ವ್ಯಾಪ್ತಿಯಲ್ಲಿ ಬರುವ ಬೊಬ್ರವಾಡದ 5 ಎಕರೆ ಜಮೀನನ್ನು ರೈತ ಕುಟುಂಬಕ್ಕೆ ಗೇಣಿ ನೀಡಿದ್ದ ಜಮೀನಿನ ಮಾಲಕ ಶಂಸುದ್ದೀನ್ ಎನ್ನುವವರು ನಂತರ ಜಮೀನನ್ನು ರೈತ ಕುಟುಂಬದಿಂದ ಕ್ರಯ ಪಡೆದು ಅವರ ಹೆಸರಿಗೆ ನೋಂದಣಿ ಮಾಡಿರುತ್ತಾರೆ, ಅಲ್ಲಿಂದ ಇಲ್ಲಿಯ ವರೆಗೆ ಜಮೀನು ನಾಯ್ಕ ಕುಟುಂಬದ ರೈತರ ಹೆಸರಿನಲ್ಲಿದೆ. ಮಧ್ಯದಲ್ಲಿ ಅಂಜುಮನ್ ಇಸ್ಲಾಂ ಸಂಸ್ಥೆ ಮತ್ತು ವಕ್ಫ್ ಬೋರ್ಡ್

ಇದು ತಮಗೆ ಸಂಬಂಧಿಸಿದ ಜಾಗ ಎಂದು ದಾವೆ ಹೂಡಿದ್ದರಿಂದ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಜಮೀನು ರೈತರ ಕುಟುಂಬಕ್ಕೆ ಸಂಬಂಧಿಸಿದೆ ಎಂದು ತೀರ್ಪು ಬರುತ್ತದೆ ನ್ಯಾಯಾಲಯದ ತೀರ್ಪಿನ ಹೊರತಾಗಿಯೂ ಎರಡು ಎಕರೆ ಜಮೀನಿನ ಅತಿಕ್ರಮಣ ಮಾಡಲಾಗಿದ್ದು ಅಂಕೋಲಾದಲ್ಲಿ ಎರಡು ಮೂರು ಕಡೆಗಳಲ್ಲಿ ಅವರ ಸ್ಮಶಾನ ಭೂಮಿ ಇದ್ದರೂ ಹಿಂದುಗಳ ಜಮೀನನ್ನು ಕಬಳಿಸುವ ಉದ್ದೇಶದಿಂದಲೇ ಅತಿಕ್ರಮಣ ನಡೆಸಲಾಗಿದೆ ಎಂದು ಹೇಳಿದರು.

ಜಮೀನಿನ ಮಾಲಿಕರು ಅವರ ಜಮೀನಿನಲ್ಲಿ ಕಾಲಿಡದಂತ ಪರಿಸ್ಥಿತಿ ಎದುರಾಗಿದ್ದು ಸರ್ಕಾರ ಪೊಲೀಸ್ ಇಲಾಖೆ ಭೂ ಕಬಳಿಕೆ ಮಾಡಿದವರ ಪರವಾಗಿ ನಿಂತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು ಐದು ಎಕರೆ ಜಮೀನಿನ ದಾಖಲೆ ಆಧಾರದಲ್ಲಿ 1976 ರಲ್ಲಿ ಪಿ.ಎಲ್.ಡಿ ಬ್ಯಾಂಕ್ ಸಾಲ ನೀಡಲಾಗಿದ್ದು ಇದೀಗ ಉದ್ದೇಶಪೂರ್ವಕವಾಗಿ ಜಮೀನು ಕಬಳಿಸಿ ತೊಂದರೆ ಕೊಡುವುದು ಸರಿಯಲ್ಲ ಹಿಂದುಗಳ ಆಸ್ತಿಯನ್ನು ಕಬಳಿಸುವ ದಾದಾಗಿರಿಯ ಪ್ರವೃತ್ತಿ ವಿರುದ್ಧ ಶ್ರೀರಾಮ ಸೇನೆ ಹೋರಾಟ ನಡೆಸಲಿದೆ ಅತಿಕ್ರಮಣಮಾಡಿದವರಿಗೆ ಒಂದು ಇಂಚು ಜಾಗ ಬಿಟ್ಟು ಕೊಡುವುದಿಲ್ಲ ಈಗ ಇರುವ ಗೋರಿಗಳನ್ನು ಸಂಬಂಧಿಸಿದವರು ತೆರುವುಗೊಳಿಸುವ ಕೆಲಸ ಮಾಡಬೇಕು ಶಾಂತ ಇರುವ ಅಂಕೋಲಾದಲ್ಲಿ ಗಲಾಟೆಗೆ ಆಸ್ಪದ ಮಾಡಿಕೊಡದೆ ದಾಖಲೆಗಳ ಪ್ರಕಾರ ನಡೆದುಕೊಳ್ಳುವ ಅತಿಕ್ರಮಣಕಾರರು, ಸರ್ಕಾರ ಮತ್ತು ಪೊಲೀಸ್ ಇಲಾಖೆ ಮಾಡಲಿ ಜಮೀನು ರೈತರಿಗೆ ಸೇರಿದ್ದು ಎಂದು ಸಹಾಯಕ ಆಯುಕ್ತರು ಸ್ಪಷ್ಟ ಆದೇಶ ನೀಡಲಿ ಪೊಲೀಸರ ರಕ್ಷಣೆಯಲ್ಲಿ ಐದು ಎಕರೆ ಜಮೀನಿಗೆ ಬೇಲಿ ಹಾಕುವ ಕೆಲಸ ಆಗಲಿ ಎಂದು ಒತ್ತಾಯಿಸಿದರು. ಮುಂಬರುವ 15 ದಿನಗಳ ಒಳಗೆ ಅತಿಕ್ರಮಿತ 2 ಎಕರೆ ಜಮೀನು ಖುಲ್ಲಾಪಡಿಸುವ ಕೆಲಸ ಮಾಡದಿದ್ದರೆ ಮುಂದಿನ ಹೋರಾಟ ದೊಡ್ಡ ಪ್ರಮಾಣದಲ್ಲಿ ನಡೆಯಲಿದ್ದು ಅತಿಕ್ರಮಿತ ಜಮೀನನಲ್ಲಿ ನಿರ್ಮಾಣ ಮಾಡಲಾಗಿರುವ ಎಲ್ಲವನ್ನೂ ಕಿತ್ತು ಬಿಸಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಜಮೀನಿಗೆ ಸಂಬಂಧಿಸಿದ ರೈತ ಕುಟುಂಬದ ಹಿರಿಯ ಶಾಂತಾರಾಮ ಮರ್ತು ನಾಯ್ಕ, ವಿಷ್ಣು ಮರ್ತು ನಾಯ್ಕ, ಗಣಪತಿ ನಾಯ್ಕ, ಮಾದೇವ ನಾಯ್ಕ, ಹಿಂದೂ ಸಂಘಟನೆಗಳ ಪ್ರಮುಖರಾದ ನಿತ್ಯಾನಂದ ಗಾಂವಕರ, ಚಂದ್ರಕಾಂತ ನಾಯ್ಕ, ಧೀರಜ್ ಖಾರ್ವಿ, ವಿ.ಎಸ್.ಭಟ್ಟ ಮತ್ತಿತರರು ಇದ್ದರು.



> **ಸಮರ ಸಾರಲಿದ್ದೇವೆ**
> ಮತಾಂತರ ಪ್ರಕ್ರಿಯೆಗಳು ಎಲ್ಲಾ ಕಡೆಗಳಲ್ಲಿ ಹೆಚ್ಚುತ್ತಿದ್ದು ಹಳ್ಳಿ ಹಳ್ಳಿಗಳಿಗೆ ತೆರಳಿ ಮತಾಂತರ ಕೃತ್ಯಗಳನ್ನು ನಡೆಸಲಾಗುತ್ತಿದೆ.ಹಿಂದೂ ಸಂಘಟನೆಗಳು ಒಟ್ಟಾಗಿ ಹಿಂದೂ ರಾಷ್ಟ್ರ ಸಮನ್ವಯ ಸಮಿತಿಯನ್ನು ರಚಿಸಿಕೊಂಡಿದ್ದು, ಮತಾಂತರದ ವಿರುದ್ಧ ಸಮರ ಸಾರಲಿದ್ದೇವೆ ಎಂದು ಪ್ರಮೋದ ಮುತಾಲಿಕ್ ತಿಳಿಸಿದರು.

ಯಕ್ಷಗಾನ, ತಾಳಮದ್ದಲೆ ವ್ಯಕ್ತಿತ್ವ ಹೊರ ತರುವ ಕಲೆ

ಶಿರಸಿ: ಭಾರತ ಸಾವಿರ ಸಾವಿರ ವರ್ಷಗಳ ಸಂಸ್ಕೃತಿ ಹೊಂದಿರುವ ದೇಶ. ಇಡೀ ದೇಶಾದ್ಯಂತ ಎಲ್ಲ ಕಡೆ ಪೌರಾಣಿಕ ಕಥೆಗಳ ಮನನ ಸಮಾನವಾಗಿದೆ ಎಂದು ನಿವೃತ್ತ ಯೋಧ ಮೇ. ಗಣಪತಿ ಹೆಗಡೆ ಹೇಳಿದರು.

ಇಲ್ಲಿಯ ಯಕ್ಷ ಕಲಾ ಸಂಗಮದ ವಾರ್ಷಿಕೋತ್ಸವ ನಗರದ ರಂಗಧಾಮದಲ್ಲಿ ಬುಧವಾರ ನಡೆಯಿತು.

ಸಾಧಕರಿಗೆ ಸನ್ಮಾನ, ಯಕ್ಷಗಾನ ಪ್ರದರ್ಶನದ ಮೂಲಕ ಕಾರ್ಯಕ್ರಮ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅನಾದಿ ಕಾಲದಿಂದಲೂ ನಮ್ಮ ಪೌರಾಣಿಕ ಸಂಗತಿಗಳನ್ನು ಯುವ ಪೀಳಿಗೆಗೆ ದಾಟಿಸುವಲ್ಲಿ ಕಲೆ ಪ್ರಮುಖ ಪಾತ್ರ ವಹಿಸಿದೆ. ಯಕ್ಷಗಾನ ಕಲೆ ಮೂಲಕ ನಾವು ನೋಡಿದ, ಕೇಳಿದ ಪೌರಾಣಿಕ ಸಂಗತಿಗಳು ನಮ್ಮ ಜೀವನದುದ್ದಕ್ಕೂ ನೆನಪಿರುತ್ತವೆ. ಸೈನಿಕರು ಕೇವಲ ನಮ್ಮ ಗಡಿಗಳನ್ನು ಮಾತ್ರ ಕಾಯುತ್ತಿಲ್ಲ, ನಮ್ಮ ದೇಶದ ಸಂಸ್ಕೃತಿಯನ್ನು, ವೈವಿಧ್ಯತೆಯನ್ನೂ ರಕ್ಷಿಸುತ್ತಿದ್ದಾರೆ. ನಮ್ಮ ನಾಡಿನ ಸಂಸ್ಕೃತಿಗಳು ಸೈನಿಕನಿಗೂ ಬಲ ತುಂಬಿವೆ. ಯಕ್ಷಗಾನ ಮತ್ತು ತಾಳಮದ್ದಲೆ ಗಟ್ಟಿಯಾದ ವ್ಯಕ್ತಿತ್ವ ಹೊರ ತರುವ ಕಲೆಯಾಗಿದೆ ಎಂದರು.ನಿವೃತ್ತ ಶಿಕ್ಷಕಿ ಮತ್ತು ಯಕ್ಷಗಾನ ಕಲಾ ಪೋಷಕಿ ತುಂಗಭದ್ರಾ ಹೆಗಡೆ ಕುಂದಾಪುರ ಅವರನ್ನು ಸನ್ಮಾನಿಸಲಾಯಿತು.

ನಿವೃತ್ತ ಯೋಧ ಶ್ರೀಪಾದ ಭಟ್ ಇದ್ದರು. ಪ್ರಗತಿಪರ ಕೃಷಿಕ ವೇದಾ ಹೆಗಡೆ ನೀರ್ನಳ್ಳಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಯಕ್ಷ ಕಲಾ ಸಂಗಮದ ಅಧ್ಯಕ್ಷೆ ಸುಮಾ ಗಡಿಗೆಹೊಳೆ ಪ್ರಾಸ್ತಾವಿಕ ಮಾತನಾಡಿ ಸ್ವಾಗತಿಸಿದರು. ಕಾರ್ಯದರ್ಶಿ ಪ್ರೇಮಾ ಭಟ್ ಇತರರಿದ್ದರು.



ಕಿರುಸುದ್ದಿ

ಏ.18ಕ್ಕೆ ಗ್ರಾಹಕರ ಸಭೆ

ಹಾವೇರಿ: ಗ್ರಾಹಕರ ಸಂವಾದ ಸಭೆ ಏ.18ರಂದು ಮಧ್ಯಾಹ್ನ 3ರಿಂದ 5.30ರವರೆಗೆ ಶಿಗ್ಗಾಂವ ಹೆಸ್ಕಾಂ ಕಾರ್ಯ ಮತ್ತು ಪಾಲನಾ ಉಪ ವಿಭಾಗದ ಕಚೇರಿಯಲ್ಲಿ ಜರುಗಲಿದ್ದು, ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೆಸ್ಕಾಂ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.18ಕ್ಕೆ ವಿದ್ಯುತ್ ವ್ಯತ್ಯಯ

ಹಾವೇರಿ: ನಗರದ 110 ಕೆ.ವಿ.ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಇರುವುದರಿಂದ, ಏಪ್ರಿಲ್ 18 ರಂದು 110ಕೆವಿ ಹಾವೇರಿ, 33 ಕೆ.ವಿ ಕಿರಿಮತ್ತಿಹಳ್ಳಿ ಹಾಗೂ ಗಾಂಧೀಪುರ ಮತ್ತು 33 ಕೆವಿ ಆಡೂರು ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಲ್ಲಾ 11 ಕೆವಿ ಫೀಡರ್‌ಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 6ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಆದ್ದರಿಂದ ಈ ವಿದ್ಯುತ್ ವಿತರಣಾ ಕೇಂದ್ರ ವ್ಯಾಪ್ತಿಗೆ ಬರುವ ಸಂಪೂರ್ಣ ಹಾವೇರಿ ನಗರ, ಆಲದಕಟ್ಟಿ, ಚಿಕ್ಕಲಿಂಗದಹಳ್ಳಿ, ದೇವಗಿರಿ, ಡಿ.ಸಿ. ಆಫೀಸ್, ದೇವಗಿರಿ ಯಲ್ಲಾಪುರ, ನಾಗನೂರ, ಕೋಳೂರ, ಗಣಜೂರ, ಕರ್ಜಗಿ, ಯತ್ತಿನಹಳ್ಳಿ, ದೇವಿಹೊಸೂರ, ದಿಡಗೂರ, ಹಿರೇಲಿಂಗದಹಳ್ಳಿ, ಹೊಂಬರಡಿ, ಹೊಸಳ್ಳಿ, ಕಬ್ಬೂರು, ಕಲ್ಲಾಪುರ, ಕನಕಾಪುರ, ಕಿರಿಮತ್ತಿಹಳ್ಳಿ, ಸಂಗೂರ, ತೊಟದಯಲ್ಲಾಪುರ, ವೀರಾಪುರ, ವೆಂಕಟಾಪುರ, ಗೌರಾಪುರ, ಎಸ್.ಪಿ. ಆಫೀಸ್, ಕುರುಬಗೊಂಡ, ಬಿದರಗಡ್ಡಿ, ಕೋಡಿಹಳ್ಳಿ, ತಿಮ್ಮಾಪುರ, ಕುಳೇನೂರು, ಕಲ್ಲಾಪುರ, ಹೊಸೂರು ಈ ಫೀಡರ್ ವ್ಯಾಪ್ತಿಗೆ ಬರುವ ಎಲ್ಲಾ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವದು. ಸಾರ್ವಜನಿಕರು ಸಹಕರಿಸಬೇಕು ಎಂದು ಹಾವೇರಿ ಹೆಸ್ಕಾಂ ಕಾರ್ಯ ಮತ್ತು ಪಾಲನಾ ಉಪ ವಿಭಾಗದ ಕಚೇರಿ ಸಹಾಯಕ ಕಾರ್ಯನಿರ್ವಾಹಕ ಇಂಜನಿಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರು ಪಲ್ಟಿ : ನಾಲ್ವರಿಗೆ ಗಾಯ

ಹಾವೇರಿ: ಹಾವೇರಿ ಬೈಪಾಸ್ ರಸ್ತೆಯಿಂದ ಸರ್ವೀಸ್ ರಸ್ತೆಗೆ ಇಳಿಸುವಾಗ ಕಾರು ಪಲ್ಟಿಯಾಗಿ ನಾಲ್ವರು ಗಾಯಗೊಂಡಿರುವ ಘಟನೆ ನಗರದ ಹೊರವಲಯದಲ್ಲಿ ನಡೆದಿದೆ. ಬೆಂಗಳೂರು ಮೂಲದ ಕೃಷ್ಣಮೋಹನ್ ನಾಯ್ಡು ಎಂಬ ಕಾರು ಚಾಲಕನ ವಿರುದ್ಧ ದೂರು ದಾಖಲಾಗಿದೆ. ಇವರು ಹುಬ್ಬಳ್ಳಿ ಕಡೆಯಿಂದ ರಾಣೇಬೆನ್ನೂರ ಕಡೆಗೆ ಬೈಪಾಸ್ ರಸ್ತೆಯಲ್ಲಿ ಹೋಗುವಾಗ ಒಮ್ಮೆಲೆ ಸರ್ವೀಸ್ ರಸ್ತೆಗೆ ಕಾರು ಇಳಿಸಿದ ಪರಿಣಾಮ ಕಾರು ಪಲ್ಟಿಯಾಗಿದೆ. ಕಾರಿನಲ್ಲಿದ್ದ ಚಾಲಕ ಸೇರಿದಂತೆ ಆರವ್ ಕೃಷ್ಣಮೋಹನ್ ನಾಯ್ಡು, ಶೃತಿ ಯುವರಾಜ ಚವ್ಹಾಣ, ಸಾಧನಾ ಕೃಷ್ಣಮೋಹನ್ ನಾಯಕ್ ಅವರು ಗಾಯಗೊಂಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಈ ಕುರಿತು ಹಾವೇರಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್ ಕಳ್ಳತನ

ಹಾವೇರಿ: ಇಲ್ಲಿಯ ನಾಗೇಂದ್ರನಮಟ್ಟಿಯಲ್ಲಿ ರಸ್ತೆ ಬದಿ ನಿಲ್ಲಿಸಿದ್ದ ಬೈಕನ್ನು ಕಳ್ಳರು ಕಳ್ಳತನ ಮಾಡಿಕೊಂಡು ಪರಾರಿಯಾಗಿರುವ ಘಟನೆ ನಡೆದಿದೆ. ತಾಲೂಕಿನ ಹೊಂಬರಡಿ ಗ್ರಾಮದ ಗುಡ್ಡಪ್ಪ ನಿಂಗಪ್ಪ ಬುರಡಿಕಟ್ಟಿ ಎಂಬುವವರಿಗೆ ಸೇರಿದ ಸುಮಾರು 30ಸಾವಿರ ರೂ. ಮೌಲ್ಯದ ಬೈಕ್ ಇದಾಗಿದೆ. ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೂಜಾಟ: ಐವರ ವಿರುದ್ಧ ದೂರು ದಾಖಲು

ಹಾವೇರಿ: ತಾಲೂಕಿನ ಆಲದಕಟ್ಟಿ ಗ್ರಾಮದ ಕೋಡಿ ಬಸವೇಶ್ವರ ದೇವಸ್ಥಾನದ ಎದುರಿಗೆ ಇಸ್ಪೀಟ್ ಜೂಜಾಟ ಆಡುತ್ತಿದ್ದ ಐವರ ವಿರುದ್ಧ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆಲದಕಟ್ಟಿಯ ಮಂಜುನಾಥ ಹಾವಣಗಿ ಸೇರಿ ಇನ್ನೂ ನಾಲ್ವರ ವಿರುದ್ಧ ಕೇಸು ದಾಖಲಿಸಲಾಗಿದೆ. ಆರೋಪಿತರ ದೇವಸ್ಥಾನದ ಎದುರಿಗಿರುವ ಬಯಲು ಜಾಗೆಯಲ್ಲಿ ಗುಂಪಾಗಿ ಕುಳಿತುಕೊಂಡು ಇಸ್ಪೀಟ್ ಜೂಜಾಟ ಆಡುತ್ತಿದ್ದರೆಂದು ದೂರಿನಲ್ಲಿ ಆರೋಪಿಸಲಾಗಿದೆ.

ಪುರುಷ ಶವ ಪತ್ತೆ

ಹಾವೇರಿ: ಬ್ಯಾಡಗಿ-ದೇವರಗುಡ್ಡ ರೈಲ್ವೆ ನಿಲ್ದಾಣಗಳ ಮಧ್ಯೆ 35ರಿಂದ 40ವರ್ಷದ ಅಪರಿಚಿತ ಪುರುಷ ಚಲಿಸುತ್ತಿದ್ದ ರೈಲಿನಿಂದ ಬಿದ್ದು ಮೃತಪಟ್ಟಿದ್ದು, ಮೃತನ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿರುವುದಿಲ್ಲ. ಮೃತ ವ್ಯಕ್ತಿ 5ಅಡಿ ಎತ್ತರ, ಬಿಳಿ ಮೈಬಣ್ಣ, ನೇರ ಮೂಗು ಹೊಂದಿದ್ದು, ಬೂದು ಗಿಳಿ ಬಣ್ಣದ ರೆಡಿಮೆಡ್ ಶರ್ಟ್, ಬಿಳಿ ಬಣ್ಣದ ಬನಿಯನ್, ನೀಲಿ ಕಪ್ಪು ಬಣ್ಣದ ಪ್ಯಾಂಟ್, ಕಪ್ಪು ಬಣ್ಣದ ಇಲಾಸ್ಟಿಕ್ ಕಾಚಾ ಧರಿಸಿದ್ದು, ಬಲಗೈ ಮುಂಗೈ ಮೇಲೆ ಸಂಜಯ ಎಸ್.ಎಂ. ಮತ್ತು ನೇತ್ರಾ ಎಚ್.ಸಿ.ಎಂ. ಅಂತಾ ಹಾಗೂ ಹೂವಿನ ಚಿತ್ರದ ಹಚ್ಚೆ ಗುರುತು ಇರುತ್ತದೆ. ಮೃತ ವ್ಯಕ್ತಿಯ ವಾರಸುದಾರರು ಹುಬ್ಬಳ್ಳಿ ರೈಲ್ವೆ ಪೊಲೀಸ್ ಠಾಣೆ ಸಂಪರ್ಕಿಸಬಹುದೆಂದು ಹುಬ್ಬಳ್ಳಿ ರೈಲ್ವೆ ಪೊಲೀಸ್ ಠಾಣೆ ಪೊಲೀಸ್ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಾನಗಲ್ಲ: ಇಲ್ಲಿನ ಗುರುಭವನದಲ್ಲಿ ಹ್ಯುಮ್ಯಾನಿಟಿ ಫೌಂಡೇಶನ್‌ನ ಪರಿವರ್ತನ ಕಲಿಕಾ ಕೇಂದ್ರ ಆಯೋಜಿಸಿದ್ದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಶಾಲಾ ಪೂರ್ವ ಶೈಕ್ಷಣಿಕ ತರಬೇತಿ ಕಾರ್ಯಾಗಾರವನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ವಿ.ಚಿನ್ನಿಕಟ್ಟಿ ಉದ್ಘಾಟಿಸಿದರು.

ಮಕ್ಕಳಿಗೆ ಉತ್ತಮ ಮಾರ್ಗದರ್ಶನ ಅವಶ್ಯ

ಹಾನಗಲ್ಲ: ಗ್ರಾಮೀಣ ಮಕ್ಕಳ ಪ್ರತಿಭೆ ಪ್ರಶ್ನಾತೀತವಾಗಿದ್ದು, ಉತ್ತಮ ಶೈಕ್ಷಣಿಕ ಅವಕಾಶ ಕಲ್ಪಿಸಿದರೆ ಈ ಮಕ್ಕಳು ಬಹು ದೊಡ್ಡ ಸಾಧಕರಾಗಿ ಹೊರಹೊಮ್ಮುವ ಎಲ್ಲ ಅವಕಾಶಗಳಿವೆ. ಈ ನಿಟ್ಟಿನಲ್ಲಿ ಶಾಸಕ ಶ್ರೀನಿವಾಸ ಮಾನೆ ಅವರ ಮಾರ್ಗದರ್ಶನದಲ್ಲಿ ಪರಿವರ್ತನ ಕಲಿಕಾ ಕೇಂದ್ರ ಕಾರ್ಯಶೀಲವಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ವಿ.ಚಿನ್ನಿಕಟ್ಟಿ ಹೇಳಿದರು.

ಇಲ್ಲಿನ ಗುರುಭವನದಲ್ಲಿ ಹ್ಯುಮ್ಯಾನಿಟಿ ಫೌಂಡೇಶನ್‌ನ ಪರಿವರ್ತನ ಕಲಿಕಾ ಕೇಂದ್ರ ಆಯೋಜಿಸಿದ್ದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಶಾಲಾ ಪೂರ್ವ ಶೈಕ್ಷಣಿಕ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿ, ಪರಿಶ್ರಮಕ್ಕೆ ಯಾವಾಗಲೂ ಒಳ್ಳೆ ಫಲವಿದ್ದೇ ಇದೆ. ಶಾಲಾ ಹಂತದಲ್ಲಿ ಮಕ್ಕಳಿಗೆ ಉತ್ತಮ ಮಾರ್ಗದರ್ಶನದ ಅಗತ್ಯವಿದೆ. ಮಾನೆ ಅವರು ಉಚಿತವಾಗಿ ಎಲ್ಲ ಶಾಲೆಗಳಿಗೆ ನೀಡಿದ ಎಲ್ಲ ವಿಷಯಗಳ ಮಾಸ್ಟರ್ ಸ್ಕೋರರ್ ಪುಸ್ತಕ ಕೂಡ ಹೆಚ್ಚು ಸಹಕಾರಿಯಾಗಬಲ್ಲದು ಎಂದರು. ತರಬೇತುದಾರ ಶಿಕ್ಷಕ ಪ್ರದೀಪಕುಮಾರ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಪರಿವರ್ತನ ಕಲಿಕಾ ಕೇಂದ್ರದ ಆಡಳಿತಾಧಿಕಾರಿ ಪ್ರೊ.ಮಾರುತಿ ಶಿಡ್ಲಾಪೂರ ಮಾತನಾಡಿ, ಪರಿವರ್ತನ ಕಲಿಕಾ ಕೇಂದ್ರ ಶಾಲಾ ಹಂತದ ಶೈಕ್ಷಣಿಕ ಉನ್ನತಿಗೆ ಕಂಕಣಬದ್ಧವಾಗಿ ಕೆಲಸ ಮಾಡುತ್ತಿದೆ. ಹೊಸದನ್ನು ಕಲಿಯುವ ಎಲ್ಲರಿಗೂ ಮುಕ್ತ ಹಾಗೂ ಉಚಿತ ಅವಕಾಶವಿದೆ ಎಂದರು. ಕೇಂದ್ರದ ವ್ಯವಸ್ಥಾಪಕ ಗಿರೀಶ್ ಅಂಬಿಗೇರ ಸೇರಿದಂತೆ ಇನ್ನೂ ಹಲವರು ಇದ್ದರು.



ಹೊನ್ನಾವರ: ಬ್ರಹ್ಮಶ್ರೀನಾರಾಯಣ ಗುರುಗಳ ಹಿಂದುಳಿದ ವರ್ಗಗಳ ವೇದಿಕೆ, ಹೊನ್ನಾವರ ಹಾಗೂ ಹೊನ್ನಾವರ ತಾಲೂಕು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವೇದಿಕೆ ಆಶ್ರಯದಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರರವರ 135ನೇ ಜಯಂತ್ಯುತ್ಸವ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ಜಿಲ್ಲೆಯಲ್ಲಿ ಉಷ್ಣಾಂಶ ಉಲ್ಬಣ | ತಂಪು ಪಾನೀಯಕ್ಕೂ ಬೇಡಿಕೆ

ಮಡಕೆಗೆ ಹೆಚ್ಚಿದ ಬೇಡಿಕೆ

ಕಿರಣ ಮಾಸಣಗಿ

ದಿಗಂತ ವಿಶೇಷ

ಹಾವೇರಿ: ಜಿಲ್ಲಾದ್ಯಂತ ಬೇಸಿಗೆಯ ಉರಿ ಬಿಸಿಲಿನ ತಾಪ ದಿನೇ ದಿನೇ ಹೆಚ್ಚಳವಾಗುತ್ತಿದ್ದು, ನಗರ ಸೇರಿದಂತೆ ಜಿಲ್ಲೆಯ ಮಾರುಕಟ್ಟೆಯಲ್ಲಿ ಮಣ್ಣಿನ ಮಡಕೆಗಳಿಗೆ ಬೇಡಿಕೆ ಹೆಚ್ಚಾಗಿದೆ. ಜನ ಬಿಸಿಲಿನ ಬೇಗೆ ತಣಿಸಿಕೊಳ್ಳಲು ಮಡಕೆ ನೀರಿಗೆ ಮೊರೆ ಹೋಗುತ್ತಿದ್ದಾರೆ.

ಮಾರ್ಚನಿಂತ ಈಚೆಗೆ ಬಿಸಿಲಿನ ತಾಪಮಾನ ದಿನೇ ದಿನೇ ಹೆಚ್ಚಳಗೊಂಡಿದ್ದು, ಕಳೆದ 15 ದಿನಗಳ ಹಿಂದೆ ಜಿಲ್ಲೆಯ ವಿವಿಧೆಡೆ ಆಲಿಕಲ್ಲು ಸಹಿತ ಅಲ್ಲಲ್ಲಿ ಮಳೆಯಾಗಿದ್ದರೂ, ಉಷ್ಣಾಂಶ ಮತ್ತಷ್ಟು ಉಲ್ಬಣಗೊಳ್ಳುತ್ತಿದೆ. ಪ್ರಸ್ತುತ ಸರಾಸರಿ 35-39 ಡಿಗ್ರಿ ಗರಿಷ್ಠ ಉಷ್ಣಾಂಶ ದಾಖಲಾಗುತ್ತಿದೆ. ಸುಡು ಬಿಸಿಲಿನ ಜತೆಗೆ ವಾತಾವರಣದಲ್ಲಿ ತಾಪಮಾನ ಹೆಚ್ಚಾಗಿದ್ದು, ಸೆಖೆಯ ಬೇಗುದಿ ಹೆಚ್ಚಿದೆ. ತಂಪು ಪಾನೀಯ, ಎಳನೀರು, ಮಜ್ಜಿಗೆ ಸೇರಿದಂತೆ ತಂಪು ಪಾನೀಯಗಳ ವ್ಯಾಪಾರ ಜೋರಾಗಿದೆ. ಮಧ್ಯಮ ವರ್ಗ ಮಾತ್ರವಲ್ಲ ಉಳ್ಳವರೂ ಕೂಡ ಮನೆ, ಕಚೇರಿ, ಕಾರ್ಖಾನೆಗಳಲ್ಲಿ ತಂಪು ನೀರಿಗೆ ಮಡಿಕೆಗಳೇ ಉತ್ತಮ ಆಸರೆಯಾಗಿದೆ. ಈ ಹಿನ್ನೆಲೆಯಲ್ಲಿ ಜನ ಶುದ್ಧ ನೀರಿನ ಘಟಕಗಳಿಂದ ನೀರು ತಂದರೂ ಸಹ ಮಡಕೆಗಳಲ್ಲಿ ಸಂಗ್ರಹಿಸಿ ತಣ್ಣನೇ ನೀರು ಬಳಕಗೆ ಮುಂದಾಗುತ್ತಿದ್ದಾರೆ.

ಮಡಕೆ ನೀರು ಬಲು ಯೋಗ್ಯ: ಫ್ರಿಜ್‌ನ ತಣ್ಣನೇ ನೀರಿಗಿಂತ ಮಡಕೆ ನೀರು ಆರೋಗ್ಯಕ್ಕೆ ಒಳ್ಳೆಯದು ಎಂಬ ಅಭಿಪ್ರಾಯದ ಹಿನ್ನೆಲಯಲ್ಲಿ ಬಹುತೇಕರು ಮಡಕೆಗೆ ಆಕರ್ಷಿತರಾಗಿದ್ದಾರೆ. ಮಡಕೆಯ ನೀರು ನೈಸರ್ಗಿಕವಾಗಿ ತಂಪಾಗುವುದರಿಂದ ಹಾಗೂ ಅದರಲ್ಲಿ ಸಂಗ್ರಹಿಸಿಡುವ ನೀರಿನಲ್ಲಿ ಅನೇಕ ಖನಿಜಾಂಶಗಳು ಲಭ್ಯವಾಗುತ್ತವೆ ಎಂಬುದು ವೈದ್ಯರೊಬ್ಬರ ಅನಿಸಿಕೆ.

ಪ್ರಾಚೀನ ಕಾಲದಿಂದಲೂ ಮಣ್ಣಿನ ಮಡಕೆಗಳಿಗೆ ಅದರದ್ದೇ ಆದ ಪ್ರಾತಿನಿಧ್ಯ ಇದೆ. ಮೊದಲೆಲ್ಲ ಕುಟುಂಬದಲ್ಲಿ ಆಹಾರ ತಯಾರಿಕೆಗೆ ಮಡಕೆಗಳೇ ಹೆಚ್ಚಾಗಿ ಬಳಕೆಯಾಗುತ್ತಿದ್ದವು. ಕಳೆದ 3-4 ದಶಕಗಳಿಂದೀಚೆಗೆ ಸ್ಟೀಲ್ ಪಾತ್ರೆಗಳು ಬಂದ ಮೇಲೆ ಮಡಕೆಗಳಿಗೆ ಬೇಡಿಕೆ ಕಡಿಮೆಯಾಗಿದೆ. ಇತ್ತೀಚೆಗೆ ಆರೋಗ್ಯದ ವೈಪರಿತ್ಯದ ಹಿನ್ನೆಲೆಯಲ್ಲಿ ಮತ್ತೆ ಕುಡಿಯುವ ನೀರಿನ ಮಡಕೆಗಳಿಗೆ ಬೇಡಿಕೆ ಬಂದಿದ್ದು, ಜನರಲ್ಲಿ ಮಡಕೆ ಮೇಲಿನ ಪ್ರೀತಿ ಚಿಗುರಿದಂತಾಗಿದೆ.

ಮಡಕೆಗೆ ಹೆಚ್ಚಿದ ಡಿಮ್ಯಾಂಡ್: ಸ್ಥಳೀಯ ಮಾರುಕಟ್ಟೆಯಲ್ಲಿ ವಿವಿಧ ಅಳತೆಯ ಮಡಕೆಗಳು ಹೆಚ್ಚಾಗಿ ಮಾರಾಟವಾಗುತ್ತಿವೆ. ಮಡಕೆಗಳು ಲೋಹದ ಪಾತ್ರೆಗಳಿಗಿಂತ ಕಡಿಮೆ ಬೆಲೆ ಹಾಗೂ ಆಕರ್ಷಣೀಯ. ಸದ್ಯ ಮೂರು ಪ್ರಕಾರದ ಮಣ್ಣಿನ ಮಡಕೆಗಳು ಗಮನ ಸೆಳೆಯುತ್ತಿದ್ದು, ವೈವಿಧ್ಯಮಯ ಹೊರಾಂಗಣದಿಂದಾಗಿ ಹೆಚ್ಚು ಆಕರ್ಷಣೀಯವಾಗಿ ಗ್ರಾಹಕರನ್ನು ಸೆಳೆಯುತ್ತಿವೆ. ಆನರು ಕೂಡ ಇಷ್ಟಪಟ್ಟು ಚೌಕಾಸಿ ಮಾಡಿ ಮಡಕೆಗಳ ಖರೀದಿಗೆ ಮುಂದಾಗುತ್ತಿದ್ದಾರೆ.



> ಸದ್ಯ ಮಾರುಕಟ್ಟೆಯಲ್ಲಿ 10 ರಿಂದ 12 ಜನ ಮಡಕೆ ಮಾರಾಟ ಮಾಡುತ್ತಿದ್ದೇವೆ. ಕಳೆದೊಂದು ತಿಂಗಳಿನಿಂದ ಮಡಕೆಗೆ ಬೇಡಿಕೆ ಹೆಚ್ಚಿದೆ. ಮಡಕೆಗಳು ಬಣ್ಣಬಣ್ಣಗಳ ಚಿತ್ತಾರದಿಂದ ಕಂಗೊಳಿಸುತ್ತಿದ್ದು, ಗ್ರಾಹಕರನ್ನು ಆಕರ್ಷಿಸುತ್ತಿವೆ. ಪ್ರತಿ ದಿನಕ್ಕೆ ಒಬ್ಬ ವ್ಯಾಪಾರಿ ಸರಾಸರಿ 10-15 ಮಡಕೆ ಮಾರಾಟ ಮಾಡುತ್ತಿದ್ದೇವೆ.
> ■ ತಿಪ್ಪಣ್ಣ ಕುಂಬಾರ, ಮಡಕೆ ವ್ಯಾಪಾರಿ

> ಬೇಸಿಗೆಯಲ್ಲಿ ಪ್ಲಾಸ್ಟಿಕ್ ಬಾಟಲಿ ನೀರಿಗಿಂತ ಮಣ್ಣಿನ ಮಡಕೆಯಲ್ಲಿಟ್ಟ ನೀರು ಕುಡಿಯುವುದು ಆರೋಗ್ಯದ ದೃಷ್ಟಿಯಿಂದ ಬಹಳ ಒಳ್ಳೆಯದು. ಗಂಟಲನ್ನು ಶುದ್ಧಗೊಳಿಸುವುದರ ಜತೆಗೆ ಮಡಕೆ ನೀರು ದೇಹದಿಂದ ವಿ?ವನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ.
> ■ ಡಾ.ಎಂ. ಜಯಾನಂದ, ಡಿಎಚ್‌ಒ, ಹಾವೇರಿ.

ಸೋಲು-ಗೆಲುವು ಸಮಾನವಾಗಿ ಸ್ವೀಕರಿಸಿ

ಬ್ಯಾಡಗಿ: ಕ್ರೀಡೆಯಲ್ಲಿ ಕ್ರೀಡಾಭಿಮಾನಿಗಳು ಹೆಚ್ಚಬೇಕು ಆಗಲೇ ಕ್ರೀಡಾಪಟುಗಳಿಗೆ ಪ್ರೇರಣೆ ದೊರೆಯುತ್ತದೆ ಎಂದು ಹಾವೇರಿ ಜಿಲ್ಲಾ ಹಾಲು ಉತ್ಪಾದಕರ ಸಂಘದ ನಿರ್ದೇಶಕ ಪ್ರಕಾಶ ಬನ್ನಿಹಟ್ಟಿ ಹೇಳಿದರು.

ತಾಲೂಕಿನ ಮಾಸಣಗಿ ಗ್ರಾಮದ ಎಸ್ ಎಂಎಸ್ ಕ್ರಿಕೆಟ್ ಕ್ಲಬ್ ಆಯೋಜಿಸಿದ ರಾಜ್ಯ ಮಟ್ಟದ ಗ್ರಾಮೀಣ ಹಾರ್ಡ್ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದರು.

ಜೀವನದಲ್ಲಿ ಏಳುಬೀಳು, ಕ್ರೀಡೆಯಲ್ಲಿ ಸೋಲು ಗೆಲುವು ಸಹಜವಾಗಿ ಬರುತ್ತವೆ. ಇವುಗಳನ್ನು ನಾವು ಛಲದಿಂದ ಸ್ವೀಕರಿಸಬೇಕು. ಅಲ್ಲದೆ, ನಿರ್ದಿಷ್ಟ ಗುರಿ ಇಟ್ಟುಕೊಂಡು ಮುಂದುವರದಲ್ಲಿ ಯಶಸ್ಸು ಸಾಧ್ಯ ಎಂದರು.

ವಕೀಲ ಬಸವರಾಜ ಬನ್ನಿಹಟ್ಟಿ ಮಾತನಾಡಿ, ಇಂದಿನ ವೈಜ್ಞಾನಿಕ ಭರಾಟೆಯಲ್ಲಿ ಕ್ರೀಡೆಯ ಮಹತ್ವವನ್ನು ಕಳೆದುಕೊಳ್ಳುತ್ತಿದ್ದೇವೆ. ಸ್ಫೂರ್ತಿದಾಯಕವಾದ ಕ್ರೀಡಾ ಕ್ಷೇತ್ರವನ್ನು ಮುನ್ನಡೆಸಲು ಕ್ರೀಡಾಕೂಟದಲ್ಲಿ ಪಾಲ್ಗೊಂಡು ದೈಹಿಕ ಆರೋಗ್ಯ ಬೆಳವಣಿಗೆ ಮತ್ತು ಕ್ರೀಡಾ ಕ್ಷೇತ್ರದ ಬೆಳವಣಿಗೆಗಾಗಿ ಕ್ರೀಡಾಕೂಟಗಳನ್ನು ನಡೆಸಲಾಗುತ್ತದೆ. ಕ್ರೀಡೆಯ ಬಗ್ಗೆ ಆಸಕ್ತಿ ಮೂಡಿಸಿಕೊಂಡು ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಬೇಕು ಎಂದರು.

ಎಸ್‌ಎಮ್‌ಎಸ್ ಕ್ರಿಕೆಟ್ ಕ್ಲಬ್ ವತಿಯಿಂದ ವಿಶಿಷ್ಟಚೇತನ ಮಕ್ಕಳಿಗೆ ಆಹಾರದ ಕಿಟ್ ವಿತರಿಸಲಾಯಿತು.

ಈ ವೇಳೆ ಚಂದ್ರು ಮುಳಗುಂದ, ವಕೀಲ ಮಂಜುನಾಥ ಕುಮ್ಮೂರ, ಮಂಜುನಾಥ ಗಡ್ಡದವರ, ಸೋಮಪ್ಪ ಕಳಕನವರ, ಮಂಜಪ್ಪ ಕುಮ್ಮೂರ, ಮಂಜುನಾಥ ಹಾದಿಮನಿ, ಶಂಕ್ರು ಕುಮ್ಮೂರ ಸೇರಿದಂತೆ ಇತರರಿದ್ದರು.



ಸ್ವಯಂ ಜನಗಣತಿ: ಹಾವೇರಿಗೆ 14ನೇ ಸ್ಥಾನ

ಹಾವೇರಿ: ಕೇಂದ್ರ ಸರಕಾರದ 2027ರ ಜನಗಣತಿ ಹಿನ್ನೆಲೆ ಏ.1ರಿಂದ ಏ.15ರ ವರೆಗೆ ನಡೆದ ಸ್ವಯಂ ಗಣತಿ ಕಾರ್ಯದಲ್ಲಿ ರಾಜ್ಯದಲ್ಲಿ ಹಾವೇರಿ ಜಿಲ್ಲೆಯು 14ನೇ ಸ್ಥಾನದಲ್ಲಿದೆ.

ಜಿಲ್ಲೆಯಲ್ಲಿ ಸುಮಾರು 4,03,106 ಮನೆಗಳನ್ನು ಗಣತಿ ಕಾರ್ಯಕ್ಕೆ ಅರ್ಹವೆಂದು ಪರಿಗಣಿಸಿದ್ದು, ಏ.1ರಿಂದ ಬುಧವಾರ ಬೆಳಗ್ಗೆ 10ಗಂಟೆಯವರೆಗೆ 18,864 ಮನೆಗಳ ಸ್ವಯಂ ಗಣತಿ ಕಾರ್ಯ ನಡೆದಿದೆ. ಹಾವೇರಿ ಜಿಲ್ಲೆ ಶೇ.4.68ರಷ್ಟು ಪ್ರಗತಿಯನ್ನು ಸಾಧಿಸಿದೆ. ಬಳ್ಳಾರಿ ಜಿಲ್ಲೆ ಶೇ.16.71ರಷ್ಟು ಪ್ರಗತಿ ಸಾಧಿಸಿ ಮೊದಲ ಸ್ಥಾನದಲ್ಲಿದ್ದರೆ, ಕೋಲಾರ ಜಿಲ್ಲೆ ಶೇ.1.10ರಷ್ಟು ಮಾತ್ರ ಪ್ರಗತಿಯೊಂದಿಗೆ ಕೊನೆಯ ಸ್ಥಾನದಲ್ಲಿದೆ.

ರಾಜಕೀಯವಾಗಿ ಮುಗಿಸುವ ಹುನ್ನಾರ: ಚನ್ನಗೌಡ್ರ

ರಾಣೇಬೆನ್ನೂರ: ಬಿಜೆಪಿಯ ನಗರ ಹಾಗೂ ಗ್ರಾಮೀಣ ಮಟ್ಟದ ಪದಾಧಿಕಾರಿಗಳು ಜಿಪಂ ಮಾಜಿ ಸದಸ್ಯ ಸಂತೋಷಕುಮಾರ ಪಾಟೀಲ ಅವರನ್ನು ಎಲ್ಲ ಕಾರ್ಯಕ್ರಮಗಳಿಗೆ ಕಡೆಗಣಿಸುವ ಮೂಲಕ ರಾಜಕೀಯವಾಗಿ ಅವರನ್ನು ಮುಗಿಸುವ ಹುನ್ನಾರ ಮಾಡುತ್ತಿದ್ದಾರೆ. ಕೂಡಲೇ ಇಂಥ ವಿಚಾರಗಳನ್ನು ಕೈಬಿಡಬೇಕು. ಇಲ್ಲವಾದರೆ 2028ರ ಚುನಾವಣೆ ಮತ್ತೇ ನೋವಿನ ಸಂಗತಿಯಾಗಲಿದೆ ಎಂದು ಅವರ ಬೆಂಬಲಿಗ ವಕೀಲ ಹನುಮಂತರಾಜ ಚನ್ನಗೌಡ್ರ ಎಚ್ಚರಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂತೋಷಕುಮಾರ ಪಾಟೀಲ 2023ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ನೀಡದ ಕಾರಣ ಪಕ್ಷೇತರವಾಗಿ ಚುನಾವಣೆಗೆ ನಿಂತು 11 ಸಾವಿರ ಮತಗಳನ್ನು ಗಳಿಸಿದ್ದಾರೆ. ಲೋಕಸಭೆ ಚುನಾವಣೆ ಸಮಯದಲ್ಲಿ ಮಾಜಿ ಶಾಸಕ ಅರುಣಕುಮಾರ ಪೂಜಾರ ಅವರ ಮನೆಗೆ ಬಂದು ಪಕ್ಷಕ್ಕೆ ಬರುವಂತೆ ಕೇಳಿಕೊಂಡರು. ಹೀಗಾಗಿ ಅವರು ಬೆಂಬಲಿಗರ ಅಭಿಪ್ರಾಯ ಪಡೆದು ವಾಪಸ್ ಪಕ್ಷ ಸೇರ್ಪಡೆಯಾಗಿದ್ದಾರೆ. ಅಲ್ಲದೆ ಈ ಹಿಂದಿನಿಂದಲೂ ಬಿಜೆಪಿ ಕಟ್ಟಾಳು ಆಗಿ ಸೇವೆ ಸಲ್ಲಿಸಿದ್ದಾರೆ.

ಆದರೆ, ಪಕ್ಷದ ಹಿರಿಯರಲ್ಲಿ ಹಾಗೂ ಜನರಲ್ಲಿ ಸಂತೋಷಕುಮಾರ ಪಾಟೀಲ ಅವರಿಗೆ ಇರುವ ಗೌರವ ಮತ್ತು ಪ್ರೀತಿ ನೋಡಿದ ಇಲ್ಲಿಯ ಬಿಜೆಪಿ ಪದಾಧಿಕಾರಿಗಳು ಕೆಲವೊಬ್ಬರ ಮಾತು ಕೇಳಿ, ಮುಂದಿನ ಚುನಾವಣೆಯಲ್ಲಿ ಸಂತೋಷಕುಮಾರ ಪಕ್ಷದ ಟಿಕೆಟ್ ಕೇಳಬಾರದು. ರಾಜಕೀಯವಾಗಿ ಅವರನ್ನು ಮುಗಿಸಬೇಕು ಎಂದುಕೊಂಡು ಸ್ಥಳೀಯವಾಗಿ ನಡೆಯುವ ಬಿಜೆಪಿಯ ಯಾವ ಕಾರ್ಯಕ್ರಮಗಳಿಗೂ ಅವರನ್ನು ಕರೆಯುತ್ತಿಲ್ಲ ಎಂದು ಆರೋಪಿಸಿದರು.

ಈ ಕುರಿತು ಕೂಡಲೇ ನಾವು ಬಿಜೆಪಿ ಜಿಲ್ಲಾಧ್ಯಕ್ಷರಿಗೆ ದೂರು ನೀಡುತ್ತೇವೆ. ತಾಲೂಕಿನ ಪದಾಧಿಕಾರಿಗಳು ಕೂಡಲೇ ತಿದ್ದಿಕೊಂಡರೆ ಸರಿ. ಇಲ್ಲವಾದರೆ ಮುಂದಿನ ಚುನಾವಣೆಯಲ್ಲಿ ನೋವಿನ ಸಂಗತಿ ಅನುಭವಿಸುವುದು ಶತಸಿದ್ಧವಾಗಲಿದೆ ಎಂದು ಎಚ್ಚರಿಸಿದರು.

ಯುವರಾಜ ಬಾರಾಟಕ್ಕೆ, ಡಾ. ನಾಗರಾಜ ನಾಗೇಶಗೌಡರ, ರಮೇಶ ಹೊನ್ನಾಳ್ಳಿ, ಎಸ್.ಎಸ್. ಬೆಲ್ಲದ, ಪಾರ್ವತಿ ಗೋಣಿಬಸಮ್ಮನವರ, ಹನುಮಂತಪ್ಪ ನಾಗೇನಹಳ್ಳಿ, ಬಸಪ್ಪ ನೋಣಬ, ಮಹೇಶಪ್ಪ ಮಲ್ಲಾಪುರ, ಗಣೇಶ ನಾಡಗೇರ ಮತ್ತಿತರರಿದ್ದರು.



ಮಹಿಳಾ ಸಮಾನತೆಗೆ ಹೋರಾಡಿದ ವ್ಯಕ್ತಿ ಅಂಬೇಡ್ಕರ್

ಬ್ಯಾಡಗಿ: ಅಕ್ಷರವಂಚಿತರಾಗಿದ್ದ, ಮನೆಕೆಲಸಕ್ಕೆ ಸೀಮಿತವಾಗಿದ್ದ ಹೆಣ್ಣುಮಕ್ಕಳಿಗೆ ಶಿಕ್ಷಣ ಪಡೆಯುವ ಹಕ್ಕು ನೀಡಿದವರು ಡಾ.ಬಿ.ಆರ್.ಅಂಬೇಡ್ಕರ್ ಅವರು ಎಂದು ನಿಂಗರಾಜ್ ಶಿವಣ್ಣನವರ್ ಹೇಳಿದರು.

ಪಟ್ಟಣದ ಕರ್ನಾಟಕ ವಾಯುವ್ಯ ಸಾರಿಗೆ ಸಂಸ್ಥೆಯ ಘಟಕದಲ್ಲಿ ವಿವಿಧ ಸಂಘಟನೆಗಳು ಸೇರಿ ಹಮ್ಮಿಕೊಂಡಿದ್ದ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆಯಲ್ಲಿ ಬಾಬಾ ಸಾಹೇಬರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಸಂವಿಧಾನ ಶಿಲ್ಪಿಯ ಆಶಯದಂತೆ ಮೌಢ್ಯಗಳನ್ನು ತೊರೆದು ಶಿಕ್ಷಣಕ್ಕೆ ಪ್ರಾಧಾನ್ಯತೆ ನೀಡಿದಾಗ ಮಾತ್ರ ಅಭಿವೃದ್ಧಿ ಸಾಧ್ಯ. ಅಂಬೇಡ್ಕರ್ ಹೇಳಿರುವಂತೆ ಪ್ರತಿಯೊಬ್ಬರ ಏಳಿಗೆ ಉನ್ನತಿ ಅವರವರ ಪರಿಶ್ರಮದಿಂದ ಮಾತ್ರ ಸಾಧ್ಯ ಎಂಬುದನ್ನು ಅರಿಯಬೇಕು ಎಂದರು.



ಜಿಲ್ಲಾ ಕುರುಬ ಸಮಾಜದ ಅಧ್ಯಕ್ಷ ನಾಗರಾಜ ಆನ್ವೇರಿ ಮಾತನಾಡಿ ಶಿಕ್ಷಣದ ಪ್ರತಿರೂಪವಾಗಿದ್ದ ಅಂಬೇಡ್ಕರ್ ಜಗತ್ತಿಗೆ ಮಾದರಿಯಾಗಿ ನಿಂತಿದ್ದಾರೆ. ಮನುಷ್ಯನಿಗೆ ಶಿಕ್ಷಣದ ಜೊತೆ ಪ್ರಜ್ಞೆಯೂ ಅವಶ್ಯಕವಾಗಿದ್ದು, ಸತ್ಯ, ಸುಳ್ಳು ಅರಿಯುವ ಪ್ರಜ್ಞೆ ಬೆಳೆಸಿಕೊಳ್ಳಬೇಕು. ಮುಖ್ಯವಾಗಿ ಮಾನವೀಯತೆ, ಮನುಷ್ಯತ್ವ ಗುಣ ಇರಬೇಕು ಎಂದರು.

ಸಾರಿಗೆ ಘಟಕದ ವ್ಯವಸ್ಥಾಪಕ ಮ್ಯಾನೇಜರ್ ಜಿ.ಬಿ.ಅಡರಗಟ್ಟಿ ಮಾತನಾಡಿ, ದೇಶ ಕಟ್ಟುವಲ್ಲಿ ಮಹತ್ವದ ಪಾತ್ರ ವಹಿಸಿದರುವ ಅಂಬೇಡ್ಕರ್ ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡಿದರು. ಅವರ ಆಶಯದಂತೆ ಅವಕಾಶಗಳನ್ನು ಬಳಸಿಕೊಂಡು ಜ್ಞಾನ ಹೆಚ್ಚಿಸಿಕೊಳ್ಳಬೇಕು. ಮುಂದಿನ ಪೀಳಿಗೆಗೂ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆಗೆ ಪ್ರೇರೇಪಿಸಬೇಕು ಎಂದರು.

ಸಾರಿಗೆ ಘಟಕದ ಹೊನ್ನಪ್ಪ ಚಲವಾದಿ, ರವಿ ಹುಣಸಿಮರದ, ಮಸುರೇಶ ಬಾರ್ಕಿ, ಸಿ ಕೆ ನಾಗರಾಜ, ಮುಜಾಯತುಲ್ಲಾ ಸಾಲಿ ಹಾಗೂ ಸಾರಿಗೆ ಘಟಕದ ಸಿಬ್ಬಂದಿ ಉಪಸ್ಥಿತರಿದ್ದರು.

ಓದು ಬದುಕಿನ ಬೆಳಕಾಗಲಿ: ಡಾ.ವಿಜಯಮಹಾಂತೇಶ

ಹಾವೇರಿ: ಕನ್ನಡ ಪುಸ್ತಕ ಪ್ರಾಧಿಕಾರದ ಮನೆಗೊಂದು ಗ್ರಂಥಾಲಯ ಯೋಜನೆಯಡಿ ಡಾ.ಬಾಬಾಸಾಹೇಬ ಅಂಬೇಡ್ಕರರ ಜನ್ಮದಿನದಂದು ನಗರದಲ್ಲಿ ಮೂರು ಗ್ರಂಥಾಲಯ ಅನುಷ್ಠಾನದ ಸಮಾರೋಪ ನಡೆಯಿತು.

ಇಲ್ಲಿಯ ವಿಶ್ವೇಶ್ವರತೀರ್ಥ ನಗರದಲ್ಲಿರುವ ಸದಾನಂದ ನಿಲಯದಲ್ಲಿ ಜಿಲ್ಲಾಧಿಕಾರಿಗಳಾದ ಡಾ.ವಿಜಯಮಹಾಂತೇಶ ದಾನಮ್ಮನವರ ಮಾತನಾಡಿ, ಓದು ಬದುಕಿನ ಬೆಳಕಾಗಬೇಕು. ಅಕ್ಷರದ ಅರಿವು ಮೂಡಿದಾಗ ಸಮಾಜದಲ್ಲಿ ಬದಲಾವಣೆ ಬರಲು ಸಾಧ್ಯ, ಪುಸ್ತಕಗಳೇ ಇದಕ್ಕೆಲ್ಲ ಮುಖ್ಯ ಎಂದು ಅವರು ಹೇಳಿದರು.

ಜಾಗೃತಿ ಸಮಿತಿಯ ಸದಸ್ಯೆ, ಸಂಶೋಧನಾ ವಿದ್ಯಾರ್ಥಿನಿ ಅನಿತಾ ಮಂಜುನಾಥ ಅವರ ಮನೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಹಾವೇರಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಸುರೇಶ ಜಂಗಮಶೆಟ್ಟಿ ಮುಖ್ಯಅತಿಥಿಯಾಗಿ ಐವತ್ತಕ್ಕೂ ಹೆಚ್ಚು ಸ್ಪರ್ಧಾತ್ಮಕ ಪರೀಕ್ಷೆಗಳ ಪುಸ್ತಕಗಳನ್ನು ಗ್ರಂಥಾಲಯಕ್ಕೆ ನೀಡಿದರು.

ಪುಸ್ತಕಪ್ರಾಧಿಕಾರದ ಅಧ್ಯಕ್ಷರಾದ ಡಾ.ಮಾನಸ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.



ವೇದಿಕೆಯಲ್ಲಿ ಸಾಹಿತಿ ಡಾ.ಸತೀಶ ಕುಲಕರ್ಣಿ, ಜಿಲ್ಲಾ ಕಸಾಪ ಅಧ್ಯಕ್ಷ ಲಿಂಗಯ್ಯ ಹಿರೇಮಠ ಇದ್ದರು. ಸಮಾರಂಭದಲ್ಲಿ ಡಾ.ಅರವಿಂದ ಮೂಲಿಮನಿ, ದಾಕ್ಷಾಯಿಣಿ ಗಾಣಗೇರ, ಅಮೃತಕ್ಕ ಶೀಲವಂತರ, ರಾಜೇಶ್ವರಿ ಬಿಷ್ಟನಗೌಡರ, ಜಾಗೃತಿ ಸಮಿತಿಯ ಸದಸ್ಯರುಗಳಾದ ಸಿ.ಎಸ್. ಮರಳಿಹಳ್ಳಿ, ಡಾ.ಲಕ್ಷ್ಮೀಕಾಂತ ಮಿರಜಕರ, ಸೋಮಣ್ಣ ಡಂಬರಮತ್ತೂರ, ಚಂದ್ರಪ್ಪ ಇದ್ದರು. ಲಿಖಿತಾ ಮತ್ತು ಜೀವಿಕಾ ಪ್ರಾರ್ಥನೆ ಹಾಡಿದರು. ಸಮಿತಿಯ ಸದಸ್ಯರಾದ ಎಸ್.ಆರ್. ಹಿರೇಮಠ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಿದ್ದೇಶ್ವರಹುಣಸಿಕಟ್ಟೀಮಠ ನಿರೂಪಿಸಿದರು. ಡಾ.ಗೀತಾ ಸುತ್ತಕೋಟಿ ವಂದಿಸಿದರು.

ಸಚಿವ ಸಂಪುಟದಲ್ಲಿ ಅವಕಾಶ ಸಿಗುವ ಸಾಧ್ಯತೆ: ಶಾಸಕ ಮಾನೆ ವಿಶ್ವಾಸ

ಹಾನಗಲ್ಲ: ಕಳೆದ ಅನೇಕ ವರ್ಷಗಳಿಂದ ಕಾಂಗ್ರೆಸ್ ಪಕ್ಷ ನೀಡಿದ ಎಲ್ಲ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿಭಾಯಿಸಿದ್ದೇನೆ. ಎರಡು ಬಾರಿ ವಿಧಾನ ಪರಿಷತ್, ಎರಡು ಬಾರಿ ವಿಧಾನಸಭೆ ಪ್ರವೇಶಿಸಿರುವ ತಮಗೆ ಸಚಿವ ಸಂಪುಟ ವಿಸ್ತರಣೆಯಾದರೆ ಅವಕಾಶ ಸಿಗುವ ವಿಶ್ವಾಸವಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಪ್ರತಿಕ್ರಿಯಿಸಿದ್ದಾರೆ.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಾವೇರಿ ಜಿಲ್ಲೆಯ ಎಲ್ಲ ಆರೂ ಸ್ಥಾನಗಳಲ್ಲಿ ಸಹ ಕಾಂಗ್ರೆಸ್ ಶಾಸಕರಿದ್ದು ಜನರ ಆಶೀರ್ವಾದ ನಮ್ಮ ಮೇಲಿದೆ. ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಸಚಿವ ಬಿ.ಸಿ.ಪಾಟೀಲ ಸೇರಿದಂತೆ ಬಿಜೆಪಿಯ ಘಟಾನುಘಟಿಗಳು ಜಿಲ್ಲೆಯಲ್ಲಿದ್ದಾರೆ. ಇವರೆಲ್ಲರ ನಡುವೆ ಕಾಂಗ್ರೆಸ್ ಪಕ್ಷವನ್ನು ಇನ್ನಷ್ಟು ಬಲಪಡಿಸಿ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಮತ್ತೊಮ್ಮೆ ಎಲ್ಲ ಆರೂ ಸ್ಥಾನಗಳಲ್ಲಿ ಗೆಲ್ಲಿಸಬೇಕಿದೆ. ಹಾಗಾಗಿ ಜಿಲ್ಲೆಗೆ ಸಚಿವ ಸ್ಥಾನ ನೀಡುವ ಅಗತ್ಯ ಹೆಚ್ಚಿದೆ ಎಂದು ಅವರು ತಿಳಿಸಿದರು.

ಹಾವೇರಿ ಜಿಲ್ಲೆ ಬಿಜೆಪಿ ಮುಕ್ತವಾಗಿದ್ದು, ಜನ ಕಾಂಗ್ರೆಸ್ ಪಕ್ಷಕ್ಕೆ ಬಹುಮತ ನೀಡಿದ್ದಾರೆ. ಅಷ್ಟಾದರೂ ನಾವು ಸುಮ್ಮನೆ ಕೂಡುವಂತಿಲ್ಲ, ಜನರ ನಮ್ಮ ಮೇಲೆ ಇಟ್ಟಿರುವ ವಿಶ್ವಾಸ ಉಳಿಸಿ ಕೊಂಡು ಜಿಲ್ಲೆಯನ್ನು ಅಭಿವೃದ್ಧಿಪಥದತ್ತ ಕೊಂಡೊಯ್ಯಬೇಕಿದೆ.



> ಯುವ ಕಾಂಗ್ರೆಸ್‌ನಿಂದ ಪಕ್ಷದಲ್ಲಿ ಸಕ್ರಿಯನಾಗಿದ್ದು, ಅನೇಕ ಸಂದರ್ಭದಲ್ಲಿ ಪಕ್ಷ ವಹಿಸಿದ ಜವಾಬ್ದಾರಿ ಸಮರ್ಥವಾಗಿ ನಿಭಾಯಿಸಿದ್ದೇನೆ. ಸಚಿವ ಸಂಪುಟ ವಿಸ್ತರಣೆಯಾದರೆ ಈ ಬಾರಿ ನನಗೆ ಸ್ಥಾನ ಸಿಗುವ ವಿಶ್ವಾಸದಲ್ಲಿದ್ದೇನೆ.
> ■ ಶ್ರೀನಿವಾಸ ಮಾನೆ, ಶಾಸಕ

ಮುಂದಿನ ಎರಡು ವರ್ಷಗಳ ಅವಧಿಯಲ್ಲಿ ಸಾಕಷ್ಟು ಸವಾಲುಗಳು ನಮ್ಮ ಮುಂದಿವೆ. ಜಿಲ್ಲೆಯ ಒಬ್ಬರಿಗೆ ಸಚಿವ ಸ್ಥಾನ ಕೊಟ್ಟರೆ ಸವಾಲುಗಳನ್ನು ಎದುರಿಸಿ ಮುಂಬರುವ ಚುನಾವಣೆಗೆ ಸಿದ್ಧರಾಗಲು ಅನುಕೂಲವಾಗಲಿದೆ. ಈ ಎಲ್ಲ ಅಂಶಗಳನ್ನು ಹೈಕಮಾಂಡ್ ಪರಿಗಣಿಸುವ ವಿಶ್ವಾಸವಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಸಚಿವ ಸ್ಥಾನದ ವಿಚಾರದಲ್ಲಿ ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ, ಎಲ್ಲರೂ ಒಗ್ಗಟ್ಟಾಗಿದ್ದೇವೆ. ಹಿರಿಯ ನಾಯಕರ ಮುಂದಾಳತ್ವದಲ್ಲಿ ಮುನ್ನಡೆಯುತ್ತಿದ್ದೇವೆ. ಜಿಲ್ಲೆಯ ಯಾರಿಗಾದರೂ ಸ್ಥಾನ ಸಿಕ್ಕರೂ ಸಂತೋಷವಿದೆ. ಒಟ್ಟಾರೆ ಜಿಲ್ಲೆಗೆ ಸಚಿವ ಸ್ಥಾನ ಸಿಗಬೇಕು ಎನ್ನುವುದು ಹಕ್ಕೊತ್ತಾಯವಾಗಿದೆ ಎಂದು ವಿವರಿಸಿದರು.

ಲಘು, ಭಾರಿ ವಾಹನ ಚಾಲನಾ ತರಬೇತಿ

ಹಾವೇರಿ: ಬಾಕಿ ಉಳಿದ 2024-25ನೇ ಸಾಲಿನ ಎಸ್ಸಿಎಸ್ಪಿ, ಟಿಎಸ್ಪಿ ಯೋಜನೆಯಡಿಯಲ್ಲಿ ಪರಿಶಿಷ್ಟ ಅರ್ಹ ನಿರುದ್ಯೋಗಿ ಯುವಕ ಮತ್ತು ಯುವತಿಯರಿಗೆ ಊಟ- ಉಪಹಾರ ಹಾಗೂ ವಸತಿ ಸಹಿತ 30 ದಿನಗಳ ಲಘು ಮತ್ತು ಭಾರಿ ವಾಹನ ಚಾಲನಾ ತರಬೇತಿಯನ್ನು ಪರವಾನಿಗೆ ಪತ್ರದ ವ್ಯವಸ್ಥೆಯೊಂದಿಗೆ ಉಚಿತವಾಗಿ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಪ್ರಾದೇಶಿಕ ತರಬೇತಿ ಕೇಂದ್ರ, ಹುಬ್ಬಳ್ಳಿ ಹಾಗೂ ಶಿಗ್ಗಾಂವ ತರಬೇತಿ ಕೇಂದ್ರದಲ್ಲಿ ನೀಡಲಾಗುತ್ತಿದೆ.

ಭಾರಿ ವಾಹನ ಚಾಲನಾ ತರಬೇತಿಗೆ ಕನಿಷ್ಠ 20ವರ್ಷ ಹಾಗೂ ಲಘು ವಾಹನ ಚಾಲನಾ ತರಬೇತಿಗೆ ಕನಿಷ್ಠ 18 ವರ್ಷ ತುಂಬಿರಬೇಕು. ಎಸ್ಸೆಸ್ಸೆಲ್ಸಿ ಉತ್ತೀರ್ಣ, ಅನುತ್ತೀರ್ಣ ಅಥವಾ ಯಾವುದೇ ತರಗತಿಯ ಜನ್ಮ ದಿನಾಂಕ ಹೊಂದಿರುವ ಅಂಕಪಟ್ಟಿ, ಲಘು ವಾಹನಾ ಚಾಲನಾ ಪರವಾನಿಗೆ, ಆಧಾರ ಕಾರ್ಡ್, ಐದು (05) ಪಾಸ ಪೋರ್ಟ ಅಳತೆಯ ಫೋಟೊಗಳು ಹಾಗೂ ಚಾಲ್ತಿಯಲ್ಲಿರುವ ಅಥವಾ ಐದು ವರ್ಷ ಅವಧಿಯ ಒಳಗಿರುವ ಜಾತಿ ಪ್ರಮಾಣ ಪತ್ರದ ಝುರಾಕ್ಸ್ ಪ್ರತಿ ನೀಡಬೇಕು. ದ್ವಿಚಕ್ರ ವಾಹನಾ ಚಾಲನಾ ಪರವಾನಿಗೆಯನ್ನು ಹೊಂದಿದ್ದಲ್ಲಿ, ಈ ಪರವಾನಿಗೆಯ ಝುರಾಕ್ಸ್ ಪ್ರತಿ ನೀಡಬೇಕು. ಅರ್ಹ ಫಲಾನುಭವಿಗಳು ಹೆಚ್ಚಿನ ಮಾಹಿತಿಗಾಗಿ ಪ್ರಾದೇಶಿಕ ತರಬೇತಿ ಕೇಂದ್ರ, ಬಹುದಾಗಿದೆ ಎಂದು ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ವಾವಲಂಬಿ ಬದುಕಿಗೆ ವೃತ್ತಿ ತರಬೇತಿ ಸಹಾಯಕ

ಹಾನಗಲ್ಲ: ಉದ್ಯೋಗ ಸೃಷ್ಟಿಗೆ ಸಹಕಾರಿಯಾಗುವ ವೃತ್ತಿ ತರಬೇತಿಗಳು ಇಂದಿನ ಅಗತ್ಯವಾಗಿದ್ದು, ಸ್ವಯಂ ಉದ್ಯೋಗಕ್ಕೆ ಪ್ರೋತ್ಸಾಹಿಸುವ ಮೂಲಕ ಯುವಕರಿಗೆ ಸ್ವಾವಲಂಬಿ ಬದುಕು ಕಟ್ಟಿಕೊಡಬೇಕಾಗಿದೆ ಎಂದು ಲೋಯಲಾ ವಿಕಾಸ ಕೇಂದ್ರದ ಸಹಾಯಕ ನಿರ್ದೇಶಕ ಜೇಸನ್ ಪಾಯ್ ಹೇಳಿದರು.

ಇಲ್ಲಿನ ಲೋಯಲಾ ವಿಕಾಸ ಕೇಂದ್ರದಲ್ಲಿ ಹ್ಯುಮ್ಯಾನಿಟಿ ಫೌಂಡೇಶನ್‌ನ ಪರಿವರ್ತನಾ ಕಲಿಕಾ ಕೇಂದ್ರ ಎರಡು ತಿಂಗಳ ಅವಧಿಗಾಗಿ ಮಹಿಳೆಯರಿಗಾಗಿ ಆಯೋಜಿಸಿರುವ ಬ್ಯೂಟಿಷಿಯನ್ ತರಬೇತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ಈಗಾಗಲೇ ಆರೀ ಕಲೆ, ಸಿಇಟಿ ತರಬೇತಿ ಸೇರಿದಂತೆ ಹತ್ತು ಹಲವು ಉದ್ಯೋಗಾವಕಾಶಕ್ಕೆ ಪರಿವರ್ತನ ಕಲಿಕಾ ಕೇಂದ್ರ ಸಮರ್ಥವಾಗಿ ಕೆಲಸ ಮಾಡುತ್ತಿದೆ. ಹಾನಗಲ್ ತಾಲೂಕಿನ ಯುವಕರು, ಉದ್ಯೋಗಾಕಾಂಕ್ಷಿಗಳು ಸುಲಭವಾಗಿ ಮನೆಯಲ್ಲಿಯೇ ಕುಳಿತು ವಿವಿಧ ಉದ್ಯೋಗಗಳನ್ನು ಮಾಡಲು ಅವಕಾಶವಾಗುವಂತಹ ಆರೀ ಸೇರಿದಂತೆ ವಿವಿಧ ತರಬೇತಿ ನೀಡಿದೆ ಎಂದರು.



ಪರಿವರ್ತನ ಕಲಿಕಾ ಕೇಂದ್ರದ ಆಡಳಿತಾಧಿಕಾರಿ ಪ್ರೊ.ಮಾರುತಿ ಶಿಡ್ಲಾಪೂರ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಳೆದ 3 ವರ್ಷಗಳಿಂದ ಪರಿವರ್ತನ ಕಲಿಕಾ ಕೇಂದ್ರ ಶಾಸಕ ಶ್ರೀನಿವಾಸ ಮಾನೆ ಅವರ ಮಾರ್ಗದರ್ಶನದಲ್ಲಿ ಉದ್ಯೋಗಾಧಾರಿತ ಹಾಗೂ ಶೈಕ್ಷಣಿಕ ಅಭಿವೃದ್ಧಿ ಹಾಗೂ ತರಬೇತಿಗೆ ಒತ್ತು ನೀಡಿ ಕೆಲಸ ಮಾಡುತ್ತಿದೆ. ಸಿಇಟಿ, ನೀಟ್, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ತರಗತಿ ಪೂರ್ವ ಶಿಕ್ಷಣದಲ್ಲಿ ಸಾವಿರಾರು ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದಿದ್ದಾರೆ ಎಂದರು.

ಬ್ಯೂಟಿಷಿಯನ್ ತರಬೇತಿ ಶಿಕ್ಷಕಿ ಜೈಸಿಕಾ ಆಲದಕಟ್ಟಿ ಮಾತನಾಡಿ, ಈ ತರಬೇತಿಯಿಂದ ನಮ್ಮ ಬಿಡುವಿನ ಸಮಯವನ್ನು ಬಳಸಿಕೊಂಡು ಉತ್ತಮ ಆದಾಯ ಸಂಪಾದಿಸಲು ಸಾಧ್ಯ. ಈ ತರಬೇತಿ ಪಡೆದವರು ಪೂರ್ಣ ಪ್ರಮಾಣದ ಉದ್ಯೋಗವಾಗಿಯೂ ಇದನ್ನು ಲಾಭದ ಉದ್ಯೋಗವಾಗಿ ಬೆಳೆಸಿಕೊಳ್ಳಬಹುದು. ಬದಲಾದ ಕಾಲದಲ್ಲಿ ಬ್ಯೂಟಿಷಿಯನ್ ಕಲೆಗೆ ಹೆಚ್ಚು ಬೆಲೆ ಇದೆ. ಇದರ ಸದುಯೋಗ ಮಾಡಿಕೊಂಡು ಮಹಿಳೆಯರು, ಅದರಲ್ಲೂ ಯುವ ಪ್ರತಿಭಾವಂತರು ಈ ಮೂಲಕ ಉತ್ತಮ ಆದಾಯವನ್ನು ಪಡೆಯಬಹುದು ಎಂದರು. ವೀಣಾ ಮುಚ್ಚಂಡಿ, ಲಾವಣ್ಯ ಕಲಾಲ, ಎಸ್.ಬಿ.ಜಯಮ್ಮ, ಗಿರೀಶ ಅಂಬಿಗೇರ ಇದ್ದರು.

ಕಿರುಸುದ್ದಿ

ಅಂಬೇಡ್ಕರರ ಮಾರ್ಗದಲ್ಲಿ ಸಾಗೋಣ: ನಾಟಿಕಾರ



ಅಡಹಳ್ಳಿ: ಇಡೀ ಜಗತ್ತಿಗೆ ಸಂವಿಧಾನ ರಚನೆಯ ಮೂಲಕ ಪ್ರಜಾಪ್ರಭುತ್ವದ ಅರಿವು ಮೂಡಿಸಿದ ಡಾ. ಬಿ.ಆರ್. ಅಂಬೇಡ್ಕರ ಅವರ ಆದರ್ಶ ಮಾರ್ಗದಲ್ಲಿ ನಾವೆಲ್ಲರೂ ಸಾಗೋಣ ಎಂದು ಗ್ರಾಮದ ಹಿರಿಯ ವಿಠ್ಠಲ ನಾಟಿಕಾರ ಹೇಳಿದರು. ಅವರು ಗ್ರಾಮದ ಅಂಬೇಡ್ಕರ ವೃತ್ತದಲ್ಲಿ ಜರುಗಿದ ಅಂಬೇಡ್ಕರ ಜಯಂತಿ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿ, ಇಂದಿನ ಯುವಕರು ದುಶ್ಚಟಗಳಿಗೆ ಮಾರುಹೋಗದೆ ಅಂಬೇಡ್ಕರ ಅವರು ಹಾಕಿಕೊಟ್ಟ ಆದರ್ಶ ಮಾರ್ಗದಲ್ಲಿ ಸಾಗಬೇಕು ಎಂದು ಹೇಳಿದರು. ಈ ವೇಳೆ ಭೀಮು ಸೂರ್ಯವಂಶಿ, ಸುಭಾಸ ಸಿಂಗಿ, ಅಶೋಕ ಕಾಂಬಳೆ, ಅನಿಲ ಸಿಂಗಿ, ಶಂಕರ ನಾವಿ, ಮಾಹದೇವ ಸೂರ್ಯವಂಶಿ, ಮುತ್ತಪ್ಪ ಕಾಂಭಳೆ, ಜಗದೀಶ ಸೂರ್ಯವಂಶಿ, ಪುಟ್ಟು ಕಾಂಬಳೆ, ಚಿದಾನಂದ ನಾಟೀಕಾರ, ಅನಿಲ ನಾಟೀಕಾರ, ರವಿ ಸೂರ್ಯವಂಶಿ ಸೇರಿದಂತೆ ಅನೇಕರು ಇದ್ದರು.

ಸರ್ಕಾರಿ ಪಿಯು ಕಾಲೇಜಿಗೆ ಉತ್ತಮ ಫಲಿತಾಂಶ: ಸಚಿವರ ಹರ್ಷ



ಯಮಕನಮರಡಿ: ಸ್ಥಳೀಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು 2025-26ನೇ ಸಾಲಿನ ಸಾಧಿಸಿದ ಫಲಿತಾಂಶದ ವಿವರವನ್ನು ಕಾಲೇಜಿ ಅಭಿವೃದ್ಧಿ ಸಮಿತಿ ಅಧ್ಯಕ್ಷರು, ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರನ್ನು ಭೇಟಿಯಾಗಿ ಫಲಿತಾಂಶದ ವಿವರ ಸಲ್ಲಿಸಲಾಯಿತು. ಕಾಲೇಜು ಪ್ರಸಕ್ತ ವರ್ಷದಲ್ಲಿ 98% ಪ್ರತಿಶಯ ಫಲಿತಾಂಶ ದಾಖಲಿಸಿದ ವಿವರವನ್ನು ಪ್ರಾಚಾರ್ಯರು ವಿವರಿಸಿದರು. ಸದರಿ ಫಲಿತಾಂಶವನ್ನು ಕಂಡು ಸಚಿವರು ಬಹಳಷ್ಟು ಹರ್ಷ ವ್ಯಕ್ತಪಡಿಸಿ ಇದೇ ರೀತಿ ಫಲಿತಾಂಶ ಬರುವ ವರ್ಷಗಳಲ್ಲಿಯೂ ಕೂಡಾ ಬರಬೇಕು ಇನ್ನೂ ಉನ್ನತ ಮಟ್ಟದ ಸಾಧನೆ ನಮ್ಮ ಕಾಲೇಜಿನಿಂದ ಆಗಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ವೀರಣ್ಣ ಬಿಸಿರೊಟ್ಟಿ, ಸದಸ್ಯ ಸಿದ್ದಪ್ಪ ಶಿಳ್ಳಿ, ಪ್ರಾಚಾರ್ಯ ಎಸ್.ಎ ರಾಮನಕಟ್ಟಿ, ಉಪನ್ಯಾಸಕ ಎ.ಎ.ಕಿವಂಡಾ ಹಾಗೂ ಎಸ್.ಆರ್.ತಬರಿ ಹಾಜರಿದ್ದರು.

ಜಾನುವಾರು ಪ್ರದರ್ಶನಕ್ಕೆ ಚಾಲನೆ



ಬೈಲಹೊಂಗಲ: ತಾಲೂಕಿನ ನಯಾನಗರದಲ್ಲಿ ನಡೆಯುತ್ತಿರುವ ಶ್ರೀ ಸುಖದೇವಾನಂದ ಮಹಾಶಿವಯೋಗಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ಸ್ನೇಹ ಸರಪಳಿ ಗೆಳೆಯರ ಬಳಗ (2007ನೇ ಸಾಲಿನ ಎಸ್‌ಎಸ್‌ಎಲ್‌ಸಿ ಬ್ಯಾಚ್) ವತಿಯಿಂದ ಬುಧವಾರ ಸತತ ನಾಲ್ಕನೇ ವರ್ಷವೂ ಜಾನುವಾರು ಪ್ರದರ್ಶನವನ್ನು ಅದ್ದೂರಿಯಾಗಿ ಆಯೋಜಿಸಲಾಯಿತು. ಶ್ರೀ ಸುಖದೇವಾನಂದ ಮಠದ ಅಭಿನವ ಸಿದ್ದಲಿಂಗ ಸ್ವಾಮೀಜಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಗ್ರಾಮೀಣ ಸಂಸ್ಕೃತಿ ಹಾಗೂ ಕೃಷಿ ಪರಂಪರೆಯನ್ನು ಉಳಿಸುವಲ್ಲಿ ಇಂತಹ ಜಾನುವಾರು ಪ್ರದರ್ಶನಗಳ ಪಾತ್ರ ಮಹತ್ವದ್ದಾಗಿದೆ ಎಂದು ತಿಳಿಸಿದರು. ರೈತರು ತಮ್ಮ ಜಾನುವಾರುಗಳನ್ನು ಪ್ರೀತಿಯಿಂದ ಸಾಕುವ ಜೊತೆಗೆ ಇಂತಹ ವೇದಿಕೆಗಳ ಮೂಲಕ ಅವುಗಳ ವೈಶಿಷ್ಟ್ಯತೆಗಳನ್ನು ಪ್ರದರ್ಶಿಸುವ ಅವಕಾಶ ಸಿಗುವುದು ಶ್ಲಾಘನೀಯ ಎಂದರು. ಪ್ರದರ್ಶನದಲ್ಲಿ ತಾಲೂಕಿನ ವಿವಿಧ ಭಾಗಗಳಿಂದ ರೈತರು ತಮ್ಮ ಜೋಡೆತ್ತುಗಳನ್ನು ಅಂದವಾಗಿ ಶೃಂಗರಿಸಿ ತಂದು ಗಮನಸೆಳೆದರು. ಎತ್ತುಗಳಿಗೆ ಹೂಮಾಲೆ, ಬಣ್ಣದ ಕಂಗಣಗಳು ಹಾಗೂ ವಿವಿಧ ಅಲಂಕಾರಗಳ ಮೂಲಕ ಸಿಂಗರಿಸಲಾಗಿದ್ದು, ಗ್ರಾಮೀಣ ಸೊಬಗು ಮೆರೆಯಿತು. ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರುಗು ತಂದರು. ಈ ಸಂದರ್ಭದಲ್ಲಿ ಜಾತ್ರಾ ಸಮಿತಿ ಸದಸ್ಯರು, ಗ್ರಾಮಸ್ಥರು ಹಾಗೂ ಅನೇಕ ರೈತರು ಉಪಸ್ಥಿತರಿದ್ದು, ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.



ಗೋಕಾಕ: ಪ್ರಧಾನಿ ನರೇಂದ್ರ ಮೋದಿಯವರು ಮಹಿಳಾ ಮೀಸಲಾತಿ ವಿಧೇಯಕವನ್ನು ಜಾರಿಗೊಳಿಸುತ್ತಿರುವ ಹಿನ್ನಲೆ ಬಿಜೆಪಿ ನಗರ ಹಾಗೂ ಗ್ರಾಮೀಣ ಮಹಿಳಾ ಮೋರ್ಚಾ ಪದಾಧಿಕಾರಿಗಳು ಮಹಿಳಾ ಪಥಸಂಚಲನ ಕಾರ್ಯಕ್ರಮ ಆಯೋಜಿಸಿದ್ದರು. ಈ ಸಂದರ್ಭದಲ್ಲಿ ಮಹಿಳಾ ಮೋರ್ಚಾದ ರಾಜೇಶ್ವರಿ ಒಡೆಯರ ಸೇರಿದಂತೆ ಅನೇಕರು ಇದ್ದರು.

ಶ್ರೀಗಳ ವಿರುದ್ಧ ಷಡ್ಯಂತ್ರ: ಆರೋಪ

ರಾಮದುರ್ಗ: ಕೂಡಲಸಂಗಮ ಪಂಚಮಸಾಲಿ ಪೀಠದ ಅಧ್ಯಕ್ಷ ಬಸವಜಯ ಮೃತ್ಯುಂಜಯ ಶ್ರೀಗಳ ಮೇಲೆ ರಾಜಕೀಯ ವ್ಯಕ್ತಿಗಳು ಷಡ್ಯಂತ್ರ ನಡೆಸಿದ್ದಾರೆ. ಸಮಾಜ ಒಡೆಯುವ ಹುನ್ನಾರದಲ್ಲಿ ನಮ್ಮವರೇ ಮುಂಚೂಣಿಯಲ್ಲಿದ್ದಾರೆ ಎಂದು ಲಿಂಗಾಯತ ಪಂಚಮಸಾಲಿ ಪೀಠದ ಉಭಯ ಶ್ರೀಗಳ ಬೆಂಬಲಿಗರು ದೂರಿದರು. ಪಟ್ಟಣದ ಪ್ರೆಸ್‌ಕ್ಲಬ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಪಂಚಮಸಾಲಿ ಸಮಾಜದ ಬಂಧುಗಳು ಸಮಾಜ ಬೇಡಿಕೆಯಾಗಿದ್ದ 2ಎ ಮೀಸಲಾತಿ ಹೋರಾಟವನ್ನು ಹತ್ತಿಕ್ಕಲು ಕೆಲವರು ಕಳೆದ ಎರಡು ವರ್ಷಗಳಿಂದ ಶ್ರೀಗಳನ್ನು ಸಿಕ್ಕಿಸಲು ಯತ್ನಿಸುತ್ತಿದ್ದರು. ಸಮಾಜವನ್ನು ಒಡೆದು ಆಳುವ ಕೆಲಸಕ್ಕೆ ಮುಂದಾಗುತ್ತಿದ್ದಾರೆ. ಅದನ್ನು ತಪ್ಪಿಸಲು ಕಿಡಿಗೇಡಿಗಳನ್ನು ಹತೋಟಿಗೆ ತರಲು ಸರ್ಕಾರ ಸೂಕ್ತ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು. ಹರಿಹರ ಪೀಠದ ವಚನಾನಂದ ಶ್ರೀಗಳು ಪೀಠದ ಹಣಕಾಸಿನ ಮಾಹಿತಿ ಕೇಳಿದ್ದರಿಂದ ಅಲ್ಲಿದ್ದ ಟ್ರಸ್ಟಿಗಳು ವಿನಾಕಾರಣ ಆರೋಪ ಮಾಡಿ ದೂಷಣೆ ಮಾಡುತ್ತಿದ್ದಾರೆ. ಶ್ರೀಗಳಿಗೆ ಅಲ್ಲಿನ ಟ್ರಸ್ಟಿಗಳೇ ಮೋಸ ಮಾಡಿದ್ದಾರೆ. ಜೀವನದ ಕೊನೆ ಗಳಿಗೆಯಲ್ಲಿರುವ ವೃದ್ಧ ಟ್ರಸ್ಟಿಗಳು ಮನಸೋಇಚ್ಛೆ ವರ್ತಿಸುತ್ತಿದ್ದಾರೆ. ವೃದ್ಧರನ್ನು ಬದಲಾಯಿಸಿ ಯುವಕರ ಕೈಯಲ್ಲಿ ಟ್ರಸ್ಟ್‌ನ ಅಧಿಕಾರವನ್ನು ನೀಡಬೇಕು ಎಂದು ಆಗ್ರಹಿಸಿದರು. ಕೂಡಲ ಸಂಗಮ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅಭಿಮಾನಿ ಬಳಗದ ಜಿ.ವಿ. ನಾಡಗೌಡರ, ಮಲ್ಲಿಕಾರ್ಜುನ ರಾಮದುರ್ಗ, ಬಿ.ಎಲ್. ಸಂಕನಗೌಡರ, ಮಂಜುನಾಥ ನವಲಗುಂದ ಮತ್ತು ಪತ್ರೆಪ್ಪ ಹರಗೋಲ ಪತ್ರಿಕಾಗೋಷ್ಠಿಯಲ್ಲಿ ಇದ್ದರು.



ಗೋಕಾಕ: ನಗರದ ಕೆಎಲ್‌ಇ ಸಂಸ್ಥೆಯ ಸಿ ಎಸ್ ಅಂಗಡಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಡಾ.ಬಿ ಆರ್ ಅಂಬೇಡ್ಕರ ಅವರ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಆಡಳಿತಾಧಿಕಾರಿ ಜಿ. ಎಂ. ಅಂದಾನಿ, ಪ್ರಾಚಾರ್ಯರಾದ ಎಂ. ಎಸ್ ಕೌಜಲಗಿ, ಎಂ. ಎ. ಪಾಟೀಲ, ಪ್ರಶಾಂತ ಕಿವಟಿ, ಅರ್ಜುನಸಿಂಗ ಹಜಾರೆ ಇದ್ದರು.

ಭೂ ತಾಯಿ ರಕ್ಷಣೆ ಕಣ್ಗಾವಲು ಸಮಿತಿ ಸಭೆ | ಜಿಲ್ಲಾಧಿಕಾರಿ ರೋಷನ್ ಸೂಚನೆ

ಬೀಜ, ಗೊಬ್ಬರ ಕೊರತೆಯಾಗದಿರಲಿ

ಬೆಳಗಾವಿ: ಜಿಲ್ಲೆಯಲ್ಲಿ ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ರಸಗೊಬ್ಬರ ಹಾಗೂ ಬಿತ್ತನೆ ಬೀಜಗಳ ಕೊರತೆ ಆಗದಂತೆ ನಿಗಾವಹಿಸುವುದರ ಜೊತೆಗೆ ಸಾಧ್ಯವಾದಷ್ಟು ರಸಗೊಬ್ಬರಗಳ ಬಳಕೆ ಕಡಿಮೆ ಮಾಡುವಂತೆ ರೈತರಲ್ಲಿ ಜಾಗೃತಿ ಮೂಡಿಸಲು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದರು.

ಬುಧವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿಗೆ ರಸಗೊಬ್ಬರ ಹಾಗೂ ಬಿತ್ತನೆ ಬೀಜಗಳ ಸಮರ್ಪಕ ಪೂರೈಕೆ ಹಾಗೂ ಭೂ ತಾಯಿ ರಕ್ಷಣೆ ಕಣ್ಗಾವಲು ಸಮಿತಿ ಸಭೆಯಲ್ಲಿ ಮಾತನಾಡಿ, ಕಳೆದ ಬಾರಿ ಜಿಲ್ಲೆಯಲ್ಲಿ ರಸಗೊಬ್ಬರ ಪೂರೈಕೆಯಲ್ಲಿ ಯಾವುದೇ ತೊಂದರೆ ಆಗಿರುವುದಿಲ್ಲ ಈ ಬಾರಿಯು ಸಹ ಅದೇ ರೀತಿ ಪೂರೈಕೆಗೆ ಕ್ರಮ ವಹಿಸಬೇಕು. ಕಳೆದ ಬಾರಿ ಜಿಲ್ಲೆಯಲ್ಲಿ ರಸಗೊಬ್ಬರ ಬಳಕೆಯಲ್ಲಿ ಕಡಿಮೆ ಆಗಿದ್ದು, ಈ ಬಾರಿಯು ಅಧಿಕಾರಿಗಳು, ರಸಗೊಬ್ಬರ ಪೂರೈಕೆದಾರರು ಸಮನ್ವಯ ಸಾಧಿಸಿ ರೈತರಲ್ಲಿ ರಸಗೊಬ್ಬರ ಬಳಕೆ ಕಡಿಮೆ ಮಾಡಲು ಜಾಗೃತಿ ಮೂಡಿಸಬೇಕು ಎಂದರು.

ರಸಗೊಬ್ಬರ ಮಾರಾಟದಲ್ಲಿ ಕೃತಕ ಅಭಾವ, ಕಾಳಸಂತೆಯಲ್ಲಿ ಮಾರಾಟ ಮಾಡಬಾರದು. ಕಳೆದ ಬಾರಿ ಕೆಲ ಸ್ಥಳಗಳಲ್ಲಿ ನಿಗದಿತ ದರಕ್ಕಿಂತ ಹೆಚ್ಚಿನ ದರಕ್ಕೆ ಮಾರಾಟ ಮಾಡಿದರ ಕುರಿತು ದೂರುಗಳು ಬಂದಿದ್ದು ಈ ಬಾರಿ ಆ ರೀತಿ ಆಗದಂತೆ ನಿಗಾವಹಿಸಲು ತಿಳಿಸಿದರು.

ರಸಗೊಬ್ಬರ ದಾಸ್ತಾನು ಕುರಿತು ರೈತರಿಗೆ ಸರಿಯಾದ ಮಾಹಿತಿ ಒದಗಿಸಬೇಕು. ರೈತರಲ್ಲಿ ವಿನಾಕಾರಣ ಆತಂಕ ಮೂಡಿಸದೆ ರಸಗೊಬ್ಬರ ಹಾಗೂ ಬಿತ್ತನೆ ಬೀಜಗಳ ಕೊರತೆ ಆಗದಂತೆ



ನೋಡಿಕೊಳ್ಳಲು ಸೂಚಿಸಿದರು. ಇಲಾಖೆವತಿಯಿಂದ ರೈತರಿಗೆ ಎಲ್ಲ ರೀತಿಯ ಮಾಹಿತಿ ವಿನಿಮಯ ಮಾಡಬೇಕು. ರೈತ ಸಂಘಟನೆಗಳೊಂದಿಗೆ ನಿಯಮಿತವಾಗಿ ಸಭೆ ಜರುಗಿಸಿ ಪರಿಸ್ಥಿತಿಯ ವಿವರಗಳನ್ನು ಒದಗಿಸಲು ತಿಳಿಸಿದರು. ಜಿಲ್ಲಾ ವೀಚಕ್ಷಣ ತಂಡಗಳು ಅತೀ ಜಾಗೃತವಾಗಿ ಕಾರ್ಯ ನಿರ್ವಹಿಸಬೇಕು. ರಸಗೊಬ್ಬರ ಕುರಿತು ದೂರುಗಳು ಬಂದಾಗ ವೀಚಕ್ಷಣಾ ತಂಡಗಳು ತ್ವರಿತವಾಗಿ ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿಯ ನಿಖರ ವರದಿ ಒದಗಿಸಲು ಸೂಚಿಸಿದರು.

ಜಿಪಂ ಸಿಇಒ ರಾಹುಲ ಶಿಂಧೆ ಮಾತನಾಡಿ, ರೈತರು ಜಮೀನಿನಲ್ಲಿ ಯಾವ ಬೆಳೆ ಬೆಳೆಯಬೇಕು ಎನ್ನುವುದನ್ನು ರಸಗೊಬ್ಬರ ಅಂಗಡಿಗಳಿಗೆ ಭೇಟಿ ನೀಡುವಂತಹ ಸಂದರ್ಭದಲ್ಲಿ ಪೂರೈಕೆದಾರರು ರೈತರಿಗೆ ಉತ್ತಮ ಮಾರ್ಗದರ್ಶನ ನೀಡಬೇಕು. ಜಿಲ್ಲೆಯಲ್ಲಿ ರಸಗೊಬ್ಬರದ ಕೊರತೆ ಇರುವುದಿಲ್ಲ. ರಸಗೊಬ್ಬರ, ಬಿತ್ತನೆ ಬೀಜಗಳ ಕೃತಕ ಅಭಾವ ಅಥವಾ ಹೆಚ್ಚಿನ ದರಕ್ಕೆ ಮಾರಾಟ ಮಾಡಬಾರದು ಎಂದರು.

ರಸಗೊಬ್ಬರ ಮಾರಾಟಕ್ಕೆ ಸಂಬಂಧಿಸಿದಂತೆ ದಾಖಲೆಗಳ ಸರಿಯಾಗಿ ನಿರ್ವಹಿಸಬೇಕು. ರಸಗೊಬ್ಬರ ಮಾರಾಟಕ್ಕೆ ಸಂಬಂಧಿಸಿದಂತೆ ತೆರಿಗೆ ಇಲಾಖೆ, ವೀಚಕ್ಷಣಾ ತಂಡಗಳು ನಿರಂತರವಾಗಿ ನಿಗಾ ವಹಿಸುತ್ತಿದ್ದು ದಾಸ್ತಾನು ಹಾಗೂ ಮಾರಾಟದಲ್ಲಿ ಯಾವುದೆ ರೀತಿಯ ಸಮಸ್ಯೆಗಳಾಗದಂತೆ ನಿಗಾವಹಿಸಲು ತಿಳಿಸಿದರು.

ಜಂಟಿ ಕೃಷಿ ನಿರ್ದೇಶಕ ಎಚ್.ಡಿ.ಕೋಳೆಕರ ಮಾತನಾಡಿ, ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಗೆ ಬೇಕಾದಂತಹ ರಸಗೊಬ್ಬರ, ಬಿತ್ತನೆ ಬೀಜಗಳ ಸಮರ್ಪಕ ದಾಸ್ತಾನು ಹೊಂದಿದ್ದು ರಸಗೊಬ್ಬರ ಪೂರೈಕೆಮಾಡುವ ಸಂಸ್ಥೆಗಳ ಪ್ರತಿನಿಧಿ, ಸಾಗಾಣಿಕೆ ಸಂಸ್ಥೆಯೊಂದಿಗೆ ಸಭೆ ನಡೆಸಲಾಗಿದೆ ಎಂದರು.

ಜಿಲ್ಲಾ ಮಟ್ಟದಲ್ಲಿ 10 ಜನ ಹಿರಿಯ ಅಧಿಕಾರಿಗಳನ್ನೊಳಗೊಂಡ ರಸಗೊಬ್ಬರ ಮೇಲ್ವಿಚಾರಣೆ ಕೋಶ ರಚಿಸಿ ಮೇಲ್ವಿಚಾರಣೆ ಮಾಡಲು ಕ್ರಮವಹಿಸಲಾಗಿದ್ದು, ಕೃಷಿಯೇತರ ಚಟುವಟಿಕೆಗಳಿಗೆ ಯೂರಿಯಾ ಬಳಕೆಯಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ ಎಂದರು.

ಸಭೆಯಲ್ಲಿ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಮಹಾಂತೇಶ ಮುರಗೋಡ, ಕೃಷಿ ಅಧಿಕಾರಿಗಳು, ಕೃಷಿ ವಿಜ್ಞಾನ ಕೇಂದ್ರಗಳ ಮುಖ್ಯಸ್ಥರು, ರಸಗೊಬ್ಬರ, ಬಿತ್ತನೆ ಬೀಜ ಪೂರೈಕೆದಾರರು ಉಪಸ್ಥಿತರಿದ್ದರು.

ಅಂಬೇಡ್ಕರರ ಸಿದ್ಧಾಂತ ಅಳವಡಿಸಿಕೊಳ್ಳಿ

ಬೆಳಗಾವಿ : ಡಾ.ಬಿ.ಆರ್. ಅಂಬೇಡ್ಕರ್ ಜೀವನದ ತತ್ವ-ಸಿದ್ಧಾಂತಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು. ಬಡತನವು ಸಾಧನೆಗೆ ಅಡ್ಡಿಯಾಗುವುದಿಲ್ಲ ಎಂಬುದನ್ನು ಇವರ ಜೀವನವೇ ಸ್ಪಷ್ಟಪಡಿಸುತ್ತದೆ ಎಂದು ಉಪ ಮಹಾಪೌರ ಹನುಮಂತ ಕೊಂಗಾಲಿ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಉದ್ಯಾನವನದಲ್ಲಿ ಜಿಲ್ಲಾಡಳಿತ, ಜಿಪಂ, ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಬೆಳಗಾವಿ ಸಹಯೋಗದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಡಾ. ಅಂಬೇಡ್ಕರ್ ಅವರು ಬಡವರ ಹಾಗೂ ಹಿಂದುಳಿದ ವರ್ಗಗಳ ಉನ್ನತಿಗಾಗಿ ತಮ್ಮ ಸಂಪೂರ್ಣ ಜೀವನವನ್ನು ಅರ್ಪಿಸಿದ್ದು, ಸಮಾನತೆ ಆಧಾರಿತ ಸಮಾಜ ನಿರ್ಮಾಣಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ ಎಂದರು.

ಭಾರತೀಯ ಸಂವಿಧಾನವನ್ನು ರೂಪಿಸಿ ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಹಕ್ಕುಗಳನ್ನು ಕಲ್ಪಿಸಿದ ಮಹತ್ವದ ವ್ಯಕ್ತಿತ್ವ ಅವರದು. ಜಾತಿ ಪದ್ಧತಿಯನ್ನು ನಿರ್ಮೂಲಗೊಳಿಸಿ ಸಮಾನತೆ ಸ್ಥಾಪನೆಗೆ ಅವರು ಕೈಗೊಂಡ ಪ್ರಯತ್ನಗಳು ಶ್ಲಾಘನೀಯ ಎಂದರು. ಪೊಲೀಸ್ ಆಯುಕ್ತ ಭೋರಸೆ ಭೂಷಣ ಗುಲಾಬರಾವ್, ಪ್ರೊ. ಬಸವರಾಜ ಜಾಲವಾದಿ ಮಾತನಾಡಿದರು.

ಚಿತ್ರದುರ್ಗ ಛಲವಾದಿ ಜಗದ್ಗುರು ಪೀಠದ ಬಸವನಾಗಿದೇವಿ ಶ್ರೀಗಳು ಸಾನಿಧ್ಯ ವಹಿಸಿದ್ದ ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಾಮನಗೌಡ ಕನ್ನೊಳ್ಳಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ



ಬಸವರಾಜ ಕುರಿಹುಲಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಸವರಾಜ್ ಚನ್ನಯನವರ, ಮುಖಂಡರುಗಳಾದ ಮಲ್ಲೇಶ ಚೌಗಲೆ, ಮಲ್ಲೇಶಿ ಕುರಂಗಿ, ನಾಗೇಶ ಕಾಂಬಳೆ, ಸಿದ್ದರಾಯ ಮೇತ್ರಿ, ರಾಜ್ಯ ಸರಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಬಸವರಾಜ ರಾಯವ್ವಗೋಳ, ವಿವಿಧ ದಲಿತ ಸಂಘಟನೆಗಳ ಪದಾಧಿಕಾರಿಗಳು, ಗಣ್ಯರು, ಸಾರ್ವಜನಿಕರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಪರೀಕ್ಷೆಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳನ್ನು, ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮಕ್ಕೂ ಮುನ್ನ ಸಂವಿಧಾನ ಪಿಠೀಕೆ ಬೋಧಿಸಲಾಯಿತು.

ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಬೆಳಗಾವಿ ನಗರದ ಅಂಬೇಡ್ಕರ್ ಉದ್ಯಾನದಲ್ಲಿ ಡಾ.ಅಂಬೇಡ್ಕರ್ ಅವರ ಮೂರ್ತಿಗೆ ಮಾಲಾರ್ಪಣೆ ಮಾಡಿದರು.

ಶಾಸಕರಾದ ಆಸಿಫ್ ಸೇಠ್, ಮೇಯರ್ ಪ್ರೀತಿ ಕಾಮಕರ, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಜಿಪಂ ಸಿಇಒ ರಾಹುಲ್ ಶಿಂಧೆ, ಪೊಲೀಸ್ ಆಯುಕ್ತ ಬೊರಸೆ ಭೂಷಣ ಗುಲಾಬರಾವ್, ಗಣ್ಯರು, ಹಿರಿಯ ಅಧಿಕಾರಿಗಳು, ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಡಾ.ಅಂಬೇಡ್ಕರ್ ಮೂರ್ತಿಗೆ ಮಾಲಾರ್ಪಣೆ ಮಾಡಿದರು.

ಶ್ರೀಗಳ ವಿರುದ್ಧ ವ್ಯವಸ್ಥಿತ ಪಿತೂರಿ: ಗಂಗಾಧರ

ಘಟಪ್ರಭಾ: ಕೂಡಲಸಂಗಮ ಪಂಚಮಸಾಲಿ ಪೀಠಾಧಿಪತಿ ಬಸವಜಯ ಮೃತ್ಯುಂಜಯ ಮಹಾಸ್ವಾಮೀಜಿ ವಿರುದ್ಧ ಸಂಚು ರೂಪಿಸಿ ಲೈಂಗಿಕ ದೌರ್ಜನ್ಯ ಆರೋಪ ಮಾಡಲಾಗುತ್ತಿದೆ ಎಂದು ಗೋಕಾಕ ತಾಲೂಕಿನ ಪಂಚಮಸಾಲಿ ಸಮಾಜ ಕಿಡಿಕಾರಿದೆ.

ಗೋಕಾಕ ತಾಲೂಕು ಪಂಚಮಸಾಲಿ ಸಮಾಜದ ಅಧ್ಯಕ್ಷ ಹಾಗೂ ವಕೀಲ ಗಂಗಾಧರ ಬಡಕುಂದ್ರಿ ಘಟಪ್ರಭಾದಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಮಹಿಳೆಯನ್ನು ಮುಂದಿರಿಸಿ ಪೂಜ್ಯರ ವಿರುದ್ಧ ಸುಳ್ಳು ಆರೋಪ ಹೊರಿಸಿ ಅವರ ಗೌರವಕ್ಕೆ ಧಕ್ಕೆ ತರಲು ಯತ್ನಿಸಲಾಗುತ್ತಿದೆ. ಇದು ಪಂಚಮಸಾಲಿ ಸಮಾಜದಲ್ಲಿ ಪೂಜ್ಯರ ಬಗ್ಗೆ ಅವಿಶ್ವಾಸ ಮೂಡಿಸಲು ನಡೆಸಲಾಗುತ್ತಿರುವ ವ್ಯವಸ್ಥಿತ ಪಿತೂರಿ ಎಂದು ಆರೋಪಿಸಿದರು.

ಪಂಚಮಸಾಲಿ ಸಮುದಾಯದ ಮೀಸಲಾತಿ ಹೋರಾಟದಲ್ಲಿ ಪೂಜ್ಯರು ಸಕ್ರಿಯವಾಗಿ ಮುಂಚೂಣಿಯಲ್ಲಿ ಇರುವುದರಿಂದ ಕೆಲವರಿಗೆ ಅದು ಅಸಹ್ಯವಾಗಿದ್ದು, ಅವರ ಮನೋಬಲ ಕುಗ್ಗಿಸಲು ಈ ರೀತಿಯ ಪ್ರಯತ್ನ ನಡೆಯುತ್ತಿದೆ ಎಂದು ಹೇಳಿದರು. ಈ ಘಟನೆಯ ಹಿಂದೆ ಪ್ರಭಾವಿ ರಾಜಕೀಯ ವ್ಯಕ್ತಿಯ ಕೈವಾಡವಿದ್ದು, ಆತನ ಗುರುತು ಈಗಾಗಲೇ ಬಹಿರಂಗವಾಗಿದೆ ಎಂದರು.

ಈ ಪ್ರಕರಣದಲ್ಲಿ ಆರೋಪಕ್ಕೆ ಒಳಪಟ್ಟ ಮಹಿಳೆಯೇ ಇದೀಗ ಸಾಮಾಜಿಕ ಜಾಲತಾಣಗಳು ಹಾಗೂ ಮಾಧ್ಯಮಗಳ ಮುಂದೆ ಬಂದು, ''ಈ ಪ್ರಕರಣದಲ್ಲಿ ನನ್ನನ್ನು ಬಳಸಿಕೊಂಡು ಪೂಜ್ಯರ ವಿರುದ್ಧ ತೇಜೋವಧೆ ಮಾಡಲು ಯತ್ನಿಸಲಾಗಿದೆ. ನನ್ನ ಮೇಲೆ ಯಾವುದೇ ದೌರ್ಜನ್ಯ ನಡೆದಿಲ್ಲ'' ಎಂದು ಸ್ಪಷ್ಟಪಡಿಸಿದ್ದಾಳೆ ಎಂದರು.

ಈ ಪ್ರಕರಣದಲ್ಲಿ ಮಹಿಳೆ ಹಾಗೂ ಪೂಜ್ಯರಿಗೆ ನ್ಯಾಯ ದೊರಕಬೇಕು. ಜೊತೆಗೆ, ಇದರ ಹಿಂದೆ ಸಂಚು ರೂಪಿಸಿರುವವರನ್ನು ಬಂಧಿಸಬೇಕು ಎಂದು ಆಗ್ರಹಿಸಿದರು. ಈ ವಿಷಯವಾಗಿ ತಾಲೂಕು ಮಟ್ಟದಲ್ಲಿ ಭಾರೀ ಪ್ರತಿಭಟನೆ ನಡೆಸಲು ಪಂಚಮಸಾಲಿ ಸಮುದಾಯ ಸಿದ್ಧವಾಗಿದೆ ಎಂದು ತಿಳಿಸಿದರು. ಈ ವೇಳೆ ಕಲ್ಲಪ್ಪ ಕೊಂಕಣಿ, ಕೆಂಚಪ್ಪ ಪಾಟೀಲ, ಮಾರುತಿ ಶಿಂದ್ರಿ, ಮುತ್ತಣ್ಣ ಹತ್ತರವಾಟ, ಅಪ್ಪಾಜಿ ಹುದ್ದಾರ, ಮಾರುತಿ ಇಂಗಳಿಗಿ, ಶಿವರಾಜ ಬಡಕುಂದ್ರಿ, ವಿವೇಕಾನಂದ ಹುದ್ದಾರ, ಭೀಮಪ್ಪಾ ಮದಹಳ್ಳಿ, ಬಾಬು ಬಡಕುಂದ್ರಿ, ಶಿವಕುಮಾರ ಹತ್ತರವಾಟ ಹಾಗೂ ಭೀಮಪ್ಪಾ ಬಣನ್ನವರ ಉಪಸ್ಥಿತರಿದ್ದರು.



ಬೃಹತ್ ಮ್ಯಾರಥಾನ್ ಸ್ಪರ್ಧೆ: ಸುಶಾಂತ ಸರಗರ ಪ್ರಥಮ

ಯರಗಟ್ಟಿ: ಪಟ್ಟಣದಲ್ಲಿ ಮಂಗಳವಾರ ಭಾರತ ರತ್ನ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ನಿಮಿತ್ಯ ವಿಶ್ವಾಸ ಅಣ್ಣಾ ಅಭಿಮಾನಿ ಬಳಗ ಹಾಗೂ ಎಸ್. ಬಿ. ಫೌಂಡೇಶನ್ ಯರಗಟ್ಟಿ ಇವರ ಆಶ್ರಯದಲ್ಲಿ ಬೃಹತ್ ಮ್ಯಾರಥಾನ್ ಓಟದ ಸ್ಪರ್ಧೆ ಆಯೋಜಿಸಲಾಗಿತ್ತು.

ಸುಡು ಬಿಸಿಲನ್ನು ಲೆಕ್ಕಿಸದೆ ನೂರಾರು ಯುವಕರು ಮ್ಯಾರಥಾನ್‌ನಲ್ಲಿ ಪಾಲ್ಗೊಂಡು ಸಾಮಾಜಿಕ ಕಾಳಜಿ ಮೆರೆದರು. ಬೆಳಗ್ಗೆ 9.30ಕ್ಕೆ ಕಟಕೋಳ ರಸ್ತೆಯಲ್ಲಿ ನೆರೆದಿದ್ದ ಶಾಲಾ ಕಾಲೇಜಿನ ವಿದ್ಯಾರ್ಥಿಗಳು, 100ಕ್ಕೂ ಹೆಚ್ಚಿನ ಯುವಕರು ಮ್ಯಾರಥಾನ್‌ಗೆ ತಹಶೀಲ್ದಾರ ಎಂ. ವ್ಹಿ. ಗುಂಡಪ್ಪಗೋಳ ಬಾವುಟ ಬೀಸುವ ಮೂಲಕ ಚಾಲನೆ ನೀಡಿದರು.

5 ಕಿಮೀ ಮ್ಯಾರಥಾನ್ ಓಟ ಪೂರ್ಣಗೊಳಿಸಿ ಪ್ರಥಮ ಬಹುಮಾನ ಸುಶಾಂತ ಸರಗರ (ಮಹಾರಾಷ್ಟ್ರ)(16 ನಿಮಿಷ 10 ಸೆಕೆಂಡ್), ದ್ವಿತೀಯ ಬಹುಮಾನ ಸುನಿಲ ಬೆಳಗಾವಿ (17 ನಿಮಿಷ 15 ಸೆಕೆಂಡ್) ತೃತೀಯ ಬಹುಮಾನ ಈರಪ್ಪ ಬಿರಾದಾರ್ (17 ನಿಮಿಷ 50 ಸೆಕೆಂಡ್) ಯುವಕರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಈ ವೇಳೆ ರಾಜರಾಜೇಶ್ವರಿ ಆಶ್ರಮದ ಪೂಜ್ಯ



ಗಣಪತಿ ಮಹಾರಾಜರು ಸಾನಿಧ್ಯ ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಪ. ಪಂ. ಮುಖ್ಯಾಧಿಕಾರಿ ಮಹೇಶ ಭಜಂತ್ರಿ, ಎಸ್. ಬಿ. ಫೌಂಡೇಶನ್ ಅಧ್ಯಕ್ಷ ಸುರೇಶ ಭಜಂತ್ರಿ, ಕರವೇ ಅಧ್ಯಕ್ಷ ಡಿ.ಕೆ ರಫೀಕ, ಇಮ್ತಿಯಾಜ್ ಖಾದ್ರಿ, ಕಾಸಿಮಅಲಿ ನದಾಫ, ಫಾರುಕ್ ಅತ್ತಾರ, ಮಂಜುನಾಥ ತಡಸಲೂರ, ಜೆ. ರತ್ನಾಕರ ಶೆಟ್ಟಿ, ಸತೀಶ ತಡಸಲೂರು, ಎಸ್ ಜಿ ಕೆ ಡಿಫೆನ್ಸ್ ಅಕಾಡೆಮಿಯ ಕೊಟ್ರೇಶ ಎಚ್., ಮ್ಯಾರಥಾನ ವ್ಯವಸ್ಥಾಪಕರಾದ ರಾಜು ಕೊಂಜಾರ, ಮಹಾಂತೇಶ ಮಾದರ ಸೇರಿದಂತೆ ಅನೇರು ಇದ್ದರು.

ಸಂಭ್ರಮದ ಅಂಬೇಡ್ಕರ್ ಜಯಂತಿ

ನೇಸರಗಿ: ಸಂವಿಧಾನ ಶಿಲ್ಪಿ, ಮಹಾನ್ ಮಾನವತಾವಾದಿ, ಭಾರತ ರತ್ನ ಡಾ. ಬಾಬಾಸಾಹೇಬ ಅಂಬೇಡ್ಕರ ಅವರ 135ನೇ ಜಯಂತಿಯನ್ನು ನೇಸರಗಿ ಗ್ರಾಮದಲ್ಲಿ ಸಡಗರ, ಸಂಭ್ರಮದಿಂದ ಗ್ರಾಮದ ಬೀದಿಗಳಲ್ಲಿ ಡಾ. ಅಂಬೇಡ್ಕರ್ ಅವರ ಭಾವಚಿತ್ರ ಮೆರವಣಿಗೆ ಮಾಡಿ ಅದ್ದೂರಿಯಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಡಿಎಸ್‌ಎಸ್ ರಾಜ್ಯಾಧ್ಯಕ್ಷ ಸುರೇಶ ರಾಯಪ್ಪಗೋಳ ಮಾತನಾಡಿ, ದೇಶಕಂಡ ಅಪರೂಪದ ನಾಯಕರಾಗಿ ಶ್ರದ್ಧೆ, ಬುದ್ಧಿ, ಜ್ಞಾನದಿಂದ ಮುಂದೆ ಬಂದು ಸಮಾನತೆ ಸಾರಿದ ಮಹಾನ ಪುರುಷರಾಗಿ ಬೆಳೆದು ಬಂದು ದೇಶದ ಅದ್ಭುತ ಸಂವಿಧಾನ ಬರೆದು ಭಾರತ ದೇಶದ ಮಹಾನ ನಾಯಕರಾಗಿದ್ದರು ಎಂದರು. ಯುವ ಮುಖಂಡ ಸಚಿನ ಪಾಟೀಲ ಮಾತನಾಡಿ, 12ನೇ ಶತಮಾನದಲ್ಲಿ ಅಣ್ಣ ಬಸವಣ್ಣನವರು ಸಮಾನತೆಗಾಗಿ ಹೋರಾಟ ಮಾಡಿ ಅಡಿಪಾಯ ಹಾಕಿದ್ದರು. ಸ್ವಾತಂತ್ರ್ಯ ನಂತರ ಅದ್ಭುತ ಭಾರತ ಸಂವಿಧಾನ ರಚಿಸಿ ದೇಶ ಮುಂದೆ ಸಾಗಲು ನಡೆದುಕೊಳ್ಳುವ ಕಾನೂನು, ಸಮಾನತೆ, ಶಿಸ್ತು, ನಿಯಮ ಪಾಲನೆ ಕುರಿತು ಸವಿಸ್ತಾರವಾಗಿ ಬರೆದಿದ್ದಾರೆ



ಎಂದರು. ಸಿಪಿಐ ಗಜಾನನ ನಾಯಕ ಮಾತನಾಡಿ, ಡಾ. ಬಾಬಾಸಾಹೇಬ ಅಂಬೇಡ್ಕರ ಅವರು ನಡೆದು ಬಂದ ಹಾದಿಯಲ್ಲಿ ಇಂದಿನ ಯುವಕರು ಸಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಅಡಿವಪ್ಪ ಮಾಳನ್ನವರ, ನಿಂಗಪ್ಪ ಚಿಗರಿ, ಡಾ. ಪ್ರಕಾಶ ಹಳ್ಯಾಳ, ನಿಂಗಪ್ಪ ತಳವಾರ, ಶಿಕ್ಷಕ ಸಂತೋಷ ಪಾಟೀಲ, ಮಂಜು ಮದ್ದೇನ್ನವರ, ಮಲ್ಲಿಕಾರ್ಜುನ ಕಲ್ಲೋಳಿ, ಸುರೇಶ ಲೆಂಕನಟ್ಟಿ ನಟ್ಟಿ, ಡಾ. ಆರಿಫ್ ಜಮಾದಾರ, ಡಾ. ಬಸವಣ್ಣೆಪ್ಪ ಕುಂದರನಾಡು, ನೇಸರಗಿ ಗ್ರಾಮದ ಹಿರಿಯರು, ಡಿಎಸ್‌ಎಸ್ ಪದಾಧಿಕಾರಿಗಳು, ಯುವಕರು ಉಪಸ್ಥಿತರಿದ್ದರು.

ಪ್ರಶಿಕ್ಷಣ ವರ್ಗಮಹಾಭಿಯಾನಕ್ಕೆ ಚಾಲನೆ ನೀಡಿದ ಕತ್ತಿ

ಹುಕ್ಕೇರಿ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಪರಿವಾರ ದೇಶಾಭಿಮಾನ ಬೆಳೆಸುವುದರ ಜತೆಗೆ ಅಖಂಡತೆ ಉಳಿಸುವ ನಿಟ್ಟಿನಲ್ಲಿ ಶ್ರಮಿಸುತ್ತಿದೆ. ಶತಮಾನದ ಸಂಭ್ರಮದಲ್ಲಿ ಇರುವ ಸಂಘ ದೇಶದ ಆಗು ಹೋಗುವ ವಿದ್ಯಮಾನಗಳನ್ನು ಜನರ ಮನೆ ಮನಗಳಿಗೆ ತಿಳಿಸಿಕೊಡುತ್ತಿದೆ ಎಂದು ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ರಮೇಶ ಕತ್ತಿ ಹೇಳಿದರು.

ಮಂಗಳವಾರ ಅವರು ಪಟ್ಟಣದ ವಿಶ್ವರಾಜ ಭವನದಲ್ಲಿ ಭಾರತೀಯ ಜನತಾ ಪಕ್ಷದಿಂದ ಹಮ್ಮಿಕೊಂಡ 3 ದಿನಗಳ ಪ್ರಶಿಕ್ಷಣ ವರ್ಗಮಹಾಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿ, ದೇಶದ ಸ್ವಾತಂತ್ರ್ಯಕ್ಕಾಗಿ ಜನಸಂಘ ಸ್ಥಾಪಿತವಾಯಿತು. ಸ್ವಾತಂತ್ರ್ಯದ ನಂತರ ಆಡಳಿತ ವ್ಯವಸ್ಥೆಯಲ್ಲಿ ಸೂಕ್ತ ನಿರ್ಣಯ ತೆಗೆದುಕೊಳ್ಳಲು ಸಹಕಾರಿ ಆಗಲಿ ಎಂದು ಭಾರತೀಯ ಜನತಾ ಪಕ್ಷಸ್ಥಾಪಿಸಿದರು.

ಆರ್.ಎಸ್.ಎಸ್ ದೇಶದ ಆಡಳಿತಾತ್ಮಕ ಜನಪರ ನಿರ್ಣಯಗಳನ್ನು ತೆಗೆದುಕೊಳ್ಳಲು ಮಾರ್ಗದರ್ಶನ ಮತ್ತು ಸಲಹೆ ನೀಡುತ್ತಿದೆ. ಅದರ ಪ್ರತಿಫಲ ಇದೀಗ ಜಗತ್ತಿನಲ್ಲಿ



ನಮ್ಮ ದೇಶ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ನಾಲ್ಕನೇಯ ಸ್ಥಾನ ಪಡೆದಿದೆ. ಮುಂಬರುವ ದಿನಗಳಲ್ಲಿ ಮೊದಲೆರಡು ಸ್ಥಾನ ಅಲಂಕರಿಸುವುದು ನಿಶ್ಚಿತವೆಂದರು.

ರಾಷ್ಟ್ರೀಯತೆ ಜತೆಗೆ ಸನಾತನ ಹಿಂದೂ ಧರ್ಮದ ತತ್ವ ಸಿದ್ಧಾಂತ ಉಳಿಸಲು ಹೋರಾಡುತ್ತಿದೆ. ನಮ್ಮ ದೇಶದ ಸನಾತನ ಸಂಸ್ಕೃತಿ ಜಗತ್ತಿನಲ್ಲಿ ಹೆಸರಾಗಿದೆ. ಈಗಿನ ಮುಸ್ಲಿಮರು ಮೂಲತಃ ಹಿಂದೂಗಳಾಗಿದ್ದರು. ಅವರನ್ನು ಮರಳಿ ಹಿಂದೂ ಧರ್ಮಕ್ಕೆ ಕರೆ ತರುವ ಕಾರ್ಯ ನಡೆಯುತ್ತಿದೆ ಎಂದರು.

ಶಾಸಕ ನಿಖಿಲ ಕತ್ತಿ ಮಾತನಾಡಿ, ಭಾರತೀಯ ಜನತಾ ಪಕ್ಷ ಮಹಿಳಾ ಮೀಸಲಾತಿಯನ್ನು ಶೇ 33ಕ್ಕೆ ಏರಿಸುವ ದಿಟ್ಟ ನಿರ್ಧಾರ ತೆಗೆದುಕೊಂಡಿದೆ. ಇಂತಹ ಪಕ್ಷವನ್ನು ಬೆಳೆಸಿದರೆ ನಾವು ಬೆಳೆಯುತ್ತೇವೆ. ಅತ್ಯಂತ ಸುರಕ್ಷಿತ ರಾಷ್ಟ್ರಗಳೆಂದು ಕರೆಸಿಕೊಳ್ಳುವ ಕೆಲವು ದೇಶಗಳು ಇದೀಗ ಅಲ್ಲಿನ ಜನರ ಜೀವ ಉಳಿಸಿಕೊಳ್ಳಲು ಹೋರಾಡುತ್ತಿವೆ. ಅದಕ್ಕಾಗಿ ಜಗತ್ತಿನ ಪ್ರತಿಯೊಬ್ಬರು ಹಿಂದೂ ರಾಷ್ಟ್ರ ಅತ್ಯಂತ ಸುರಕ್ಷಿತವೆಂದು ತಿಳಿದುಕೊಂಡಿದ್ದಾರೆ ಎಂದರು. ಜನಸಂಘ ಸ್ಥಾಪಕರ ಭಾವಚಿತ್ರಗಳಿಗೆ ಗೌರವಿಸಿ,

> ಅಲ್ಪಸಂಖ್ಯಾತರ ಓಲೈಕೆ ಇದೇ ರೀತಿ ಮುಂದುವರೆದಲ್ಲಿ ಹಿಂದೂಗಳು ಅಲ್ಪಸಂಖ್ಯಾತರಾಗುತ್ತಾರೆ. ಇತಿಹಾಸದಶಾಲಾ ಪಾಠಗಳಲ್ಲಿ ಇಸ್ಲಾಂ ವೈಭವೀಕರಣ ಮಾಡಲಾಗಿದೆ. ಹಿಂದೂರಾಜ ಮಹಾರಾಜರ ಸಾಧನೆಗಳನ್ನು ಕಡೆಗಣಿಸಲಾಗಿದೆ.
>
> ■ ರಮೇಶ ಕತ್ತಿ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ

ನಂತರ ಅತಿಥಿಗಳನ್ನು ಸನ್ಮಾನಿಸಿದರು.

ಬಿಜೆಪಿ ಮಹಿಳಾ ಘಟಕದ ರಾಜ್ಯ ಉಪಾಧ್ಯಕ್ಷೆ ಶಾಂಭವಿ ಅಶ್ವತ್ಥಪುರ, ಚಿಕ್ಕೋಡಿ ಜಿಲ್ಲಾಧ್ಯಕ್ಷ ಸತೀಶ ಅಪ್ಪಾಜಿಗೋಳ, ಉಪಾಧ್ಯಕ್ಷ ಸತ್ತೆಪ್ಪಾ ನಾಯಿಕ, ಕಾರ್ಯದರ್ಶಿ ಶಿವಾನಂದ ನವನಿಹಾಳ, ಶಕುಂತಲಾ ದೋನವಾಡೆ, ಗುರುಕುಲಕರ್ಣಿ, ಶರ್ಮಿಳಾ ಬಡಮಲ್ಲನವರ ವೇದಿಕೆಯಲ್ಲಿದ್ದರು. ಮಂಡಲ ಅಧ್ಯಕ್ಷ ರಾಚಯ್ಯಾ ಹಿರೇಮಠ ಸ್ವಾಗತಿಸಿ, ಶ್ರೀಶೈಲ ಮಠಪತಿ ನಿರೂಪಿಸಿ, ಬಿ.ಎಲ್.ಎ 1 ಶೀತಲ ಬ್ಯಾಳಿ ವಂದಿಸಿದರು.

ಅಂಬೇಡ್ಕರರು ಒಬ್ಬ ವಿಶ್ವಜ್ಞಾನಿ: ಪ್ರೊ.ವಿನೋದ

ಮೂಡಲಗಿ: 14 ತಳ ಸಮುದಾಯದಲ್ಲಿ ಹುಟ್ಟಿ ಬಂದು ಜಾತಿ ತಾರತಮ್ಯತೆ ಅನುಭವಿಸಿ, ಸಮಾನತೆ ಪಡೆಯಲು ಶಿಕ್ಷಣ ಒಂದೇ ಅಸ್ತ್ರ ಎಂದರಿತು. ಆ ಕಾಲದ ವಿಶ್ವದ ಉನ್ನತೋನ್ನತ ಶಿಕ್ಷಣ ಪಡೆದು ಒಬ್ಬ ವಿಶ್ವಜ್ಞಾನಿಯಾಗಿ ಹೊರಹೊಮ್ಮಿದವರು ಡಾ. ಬಿ.ಆರ್.ಅಂಬೇಡ್ಕರ್ ಎಂದು ಮೂಡಲಗಿಯ ಶ್ರೀಪಾದ ಬೋಧ ಸ್ವಾಮೀಜಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆಂಗ್ಲ ಭಾಷಾ ಪ್ರಾಧ್ಯಾಪಕ ಪ್ರೊ.ವಿನೋದ ಬೈರನಟ್ಟಿ ಹೇಳಿದರು.

ಮೂಡಲಗಿ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ ಡಾ ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಪ್ರಯುಕ್ತ 'ಮನೆ ಮನೆಗೆ ಮನ ಮನಕೆ ಬಾಬಾ ಸಾಹೇಬರು' ಎಂಬ ಅಭಿಯಾನದಲ್ಲಿ ಮಾತನಾಡಿದರು.

ಸಂಸ್ಥೆಯ ಅಧ್ಯಕ್ಷ ವೆಂಕಟೇಶ್ ಸೋನವಾಲ್ಕರ್ ಮಾತನಾಡಿ,



ಅಂಬೇಡ್ಕರ್‌ರರು ಸಮಾನತೆ ಅಡಿಯಲ್ಲಿ ದೇಶಕ್ಕೆ ಒಂದು ಒಳ್ಳೆಯ ಸಂವಿಧಾನ ನೀಡಿದ ಕಾರಣ ಇಂದು ನಾವು ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗಿದೆ. ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯವು ಮುದ್ರಿಸಿ ನೀಡುತ್ತಿರುವ ' ಬಾಬಾ ಸಾಹೇಬ ಅಂಬೇಡ್ಕರ್' ಅವರ ಪುಸ್ತಕ ವಿದ್ಯಾರ್ಥಿಗ ಕೈ ಸೇರಿದ ಮೇಲೆ ಪ್ರಬಂಧ ಸ್ಪರ್ಧೆ ಏರ್ಪಡಿಸಲು ಸಲಹೆ ನೀಡಿದರು.

ಈ ವೇಳೆ ಪ್ರೊ.ಎಲ್ .ಪಿ.ಹಿಡಕಲ್, ಪ್ರೊ.ಪಿ.ಬಿ.ಚೌಡಕಿ, ಪ್ರೊ.ಎಂ.ಎಸ್.ಕುಂದರಗಿ, ಪ್ರೊ. ಕೆ.ಪಿ.ಡೋಣಿ, ಡಾ.ಬಸವಂತ ಬರಗಾಲಿ, ಅಧ್ಯಕ್ಷೆ ಪ್ರೊ.ವೇದಾ. ಆರ್.ದೇಶಪಾಂಡೆ, ಬಿ.ಎಂ. ತಳವಾರ, ಪ್ರೊ.ಸವಿತಾ ಕೊತ್ತಲ, ಪ್ರೊ.ಪಿ.ಬಿ.ಬೆಳಗಲಿ, ಪ್ರೊ. ಎಲ್.ಎಸ್.ಹೊಸಟ್ಟಿ, ಪ್ರೊ. ಎಸ್.ಪಿ.ಕಾಂಬಳೆ, ಮನೋಹರ ಲಮಾನಿ, ರಮೇಶ ಖಾನಪ್ಪಗೋಳ, ಕಲ್ಮೇಶ ಇಂಗಳೆ ಹಾಗೂ ಇತರರಿದ್ದರು. ಪ್ರೊ.ವಿ.ಆರ್ .ದೇಶಪಾಂಡೆ ಸ್ವಾಗತಿಸಿದರು. ಡಾ.ಪವನ್ ಕುಮಾರ್.ಕೆ. ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರೊ.ಎಸ್.ಕೆ.ಅಂಗಡಿ ನಿರೂಪಿಸಿದರು. ಪ್ರೊ.ಎ.ಎಸ್. ಮಿಸಿ ನಾಯಿಕ ವಂದಿಸಿದರು.

ಕಿರುಸುದ್ದಿ

ಆರೋಗ್ಯ ತಪಾಸಣಾ ಶಿಬಿರ ಇಂದು

ರಾಯಬಾಗ: ತಾಲೂಕು ವಕೀಲರ ಸಂಘ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಶಾಖೆ ರಾಯಬಾಗ ಇವುಗಳ ಸಂಯುಕ್ತ ಆಶ್ರಯದಲ್ಲಿ ಏ.16ರಂದು ಬೆಳಿಗ್ಗೆ 10.30 ರಿಂದ ಸಂಜೆ 5:30ರವರೆಗೆ ನ್ಯಾಯಾಲಯದ ಆವರಣದಲ್ಲಿರುವ ವಕೀಲರ ಸಭಾಂಗಣದಲ್ಲಿ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದ್ದು, ಸದರಿ ಶಿಬಿರದಲ್ಲಿ ಜನರಲ್ ಮೆಡಿಸಿನ್, ಚರ್ಮರೋಗ, ನೇತ್ರ ಚಿಕಿತ್ಸೆ, ಮೂಳೆ ಚಿಕಿತ್ಸೆ, ಮಕ್ಕಳ ಚಿಕಿತ್ಸೆ, ಪ್ರಸೂತಿ ಮತ್ತು ಸ್ತ್ರೀರೋಗ ಇತರೆ ವಿಭಾಗಗಳಿಗೆ ಸಂಬಂಧಿಸಿದಂತೆ, ನುರಿತ ತಜ್ಞರ ಹಾಗೂ ಸಿಬ್ಬಂದಿಗಳಿಂದ ಉಚಿತ ಔಷಧೋಪಚಾರದೊಂದಿಗೆ ತಪಾಸಣೆ ಜರುಗಲಿದ್ದು, ಕಾರಣ ರಾಯಬಾಗ ತಾಲೂಕಿನ ಸಮಸ್ತ ಸರ್ಕಾರಿ ನೌಕರರು ಸದರಿ ಶಿಬಿರದ ಪ್ರಯೋಜನವನ್ನು ಪಡೆದುಕೊಳ್ಳಲು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ತಾಲೂಕ ಘಟಕದ ಅಧ್ಯಕ್ಷ ಉಮೇಶ ಭುಜಾಲ ಪೋಳ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ನೇಹಾಗೆ ಶೇ.97.16 ಅಂಕ

ಕಕಮರಿ: ಗ್ರಾಮದ ನಿವಾಸಿ ಸ್ನೇಹಾ ಗುರಪ್ಪ ತಳಕಟ್ಟಿ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಶೇ.97.16 ಫಲಿತಾಂಶ ಪಡೆದು ಸಾಧನೆ ಮಾಡಿದ್ದಾಳೆ. ಭೌತಶಾಸ್ತ್ರ 99, ರಸಾಯನಶಾಸ್ತ್ರ 98, ಜೀವಶಾಸ್ತ್ರ 99, ಗಣಿತ ವಿಷಯದಲ್ಲಿ 98, ಅಂಕಗಳನ್ನು ಪಡೆದು ಕಾಲೇಜಿಗೆ, ಊರಿನ ಕೀರ್ತಿ ತಂದಿದ್ದಾಳೆ. ವಿದ್ಯಾರ್ಥಿನಿಯನ್ನು ಕಾಲೇಜಿನ ಆಡಳಿತ ಮಂಡಳಿ, ಪೋಷಕರು, ಗ್ರಾಮಸ್ಥರು ಅಭಿನಂದಿಸಿದ್ದಾರೆ.



ಬಸವ ವೃತ್ತ ನಿರ್ಮಾಣಕ್ಕೆ ಮನವಿ




ಸಂಕೇಶ್ವರ: ನಿಡಸೋಸಿ ರಸ್ತೆಯಲ್ಲಿನ ರಾಯಲ್ ಕಾಲೋನಿಯಲ್ಲಿನ ಪುರಸಭೆಯ ಜಾಗೆಯಲ್ಲಿ ಬಸವ ವೃತ್ತ ನಿರ್ಮಿಸಲು ಅನುಮತಿ ನೀಡಬೇಕು ಎಂದು ರಾಯಲ್ ಕಾಲೋನಿ ನಿವಾಸಿಗಳು ಪುರಸಭೆಯ ಮುಖ್ಯಾಧಿಕಾರಿ ಪ್ರಕಾಶ ಮಠದ ಅವರಿಗೆ ಮನವಿ ಸಲ್ಲಿಸಿದರು. ಪಟ್ಟಣದ ವಾರ್ಡ್ ನಂ.1ರಲ್ಲಿರುವ ಪುರಸಭೆ ಜಾಗೆ ಸರ್ವೆ ನಂ.266/2ರಲ್ಲಿ ಬಸವ ವೃತ್ತ ನಿರ್ಮಿಸಲು ಅಲ್ಲಿನ ನಿವಾಸಿಗಳು ಸಭೆ ನಡೆಸಿ, ವೃತ್ತ ನಿರ್ಮಾಣ ಮಾಡಲು ಎಲ್ಲರು ತೀರ್ಮಾನಿಸಿದ್ದು, ಮುಖ್ಯಾಧಿಕಾರಿಗಳು ಬಸವ ವೃತ್ತ ನಿರ್ಮಾಣಕ್ಕೆ ಅನುಮತಿ ನೀಡಬೇಕು ಎಂದು ಮನವಿ ಸಲ್ಲಿಸಿದರು. ಪುರಸಭೆಯ ಮುಖ್ಯಾಧಿಕಾರಿಗಳು ಮನವಿ ಸ್ವೀಕರಿಸಿ, ಮಾತನಾಡಿ, ತಮ್ಮ ಮನವಿಯನ್ನು ಆಡಳಿತಾಧಿಕಾರಿಗಳ, ಉಪವಿಭಾಧಿಕಾರಿಗಳ ಗಮನಕ್ಕೆ ತರುವುಲಾಗುವುದು ಎಂದರು. ಮುಖಂಡರಾದ ಶ್ರೀಕಾಂತ ಪರೀಟ, ಬಿ.ಬಿ.ಚಂಡಕಿ, ದುಂಡಪ್ಪಾ ವಾಳಕಿ, ಕಾಡಪ್ಪಾ ನಾಯಕ, ಸತೀಶ ಭಾವಚಿ ಇದ್ದರು.

ಬೇಸಿಗೆ ನೀರು ಪೂರೈಕೆಗೆ ಕ್ರಮ

ಚನ್ನಮ್ಮನ ಕಿತ್ತೂರು: ಬೇಸಿಗೆ ಕಾಲ ಆರಂಭವಾಗಿರುವ ಹಿನ್ನೆಲೆಯಲ್ಲಿ ಗ್ರಾಮಗಳಲ್ಲಿ ಕುಡಿಯುವ ನೀರು ಸರಬರಾಜು ವ್ಯತ್ಯಯವಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ತಾಪಂ ಕಾರ್ಯನಿರ್ವಾಹಕ ಅಧಿಕಾರಿ ನಿಂಗಪ್ಪ ಮಸಳಿ ಹೇಳಿದರು. ಬುಧವಾರ ತಾಪಂ ಸಭಾಭವನದಲ್ಲಿ ನಡೆದ ಪಿಡಿಒಗಳ ಸಭೆಯಲ್ಲಿ ಮಾತನಾಡಿ, ಪ್ರತಿ ತಿಂಗಳು ಎಫ್‌ಟಿಕೆ ಕಿಟ್ ಮೂಲಕ ಗ್ರಾಪಂಗಳ ಜಲ ಮೂಲಗಳ ಪರಿಶೀಲನೆ ನಡೆಸುವಂತೆ ಸೂಚಿಸಿದರು. ನೀರಿನ ಟ್ಯಾಂಕರ್‌ಗಳು, ಮೇಲ್ಮಟ್ಟದ ಜಲ ಸಂಗ್ರಹಣಾ ಗಾರಗಳು ಸೇರಿದಂತೆ ಕುಡಿಯುವ ನೀರಿನ ಘಟಕಗಳನ್ನು ನಿಯಮಿತವಾಗಿ ಶುಚಿಗೊಳಿಸಿ ದಿನಾಂಕ ನಮೂದಿಸುವುದು ಕಡ್ಡಾಯಗೊಳಿಸಲಾಗಿದೆ ಎಂದರು. ಕೊಳವೆ ಬಾವಿ, ತೆರೆದ ಬಾವಿಗಳ ಸುತ್ತಮುತ್ತ ಸ್ವಚ್ಛತೆ ಕಾಪಾಡಬೇಕು. ನೀರಿನ ಅಭಾವ ಎದುರಿಸುವ ಹಳ್ಳಿಗಳಲ್ಲಿ ಖಾಸಗಿ ಕೊಳವೆ ಬಾವಿಗಳನ್ನು ಗುರುತಿಸಿ ಬಾಡಿಗೆ ಆಧಾರದ ಮೇಲೆ ಬಳಸಿಕೊಳ್ಳಬೇಕು. ಅಗತ್ಯವಿದ್ದರೆ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲು ಸಿದ್ಧತೆ ಕೈಗೊಳ್ಳಬೇಕು ಎಂದರು. ತಾಲೂಕಿನ ಯಾವುದೇ ಗ್ರಾಮದಲ್ಲಿ ನೀರಿನ ಸಮಸ್ಯೆ ಎದುರಾದಲ್ಲಿ ಸಾರ್ವಜನಿಕರು ಸಹಾಯವಾಣಿ ಸಂಖ್ಯೆ 8618002635, 9535583925, 7848038266, 08288-287030 ಗೆ ಕರೆ ಮಾಡಿ ದೂರು ದಾಖಲಿಸಿ ಪರಿಹಾರ ಪಡೆಯಬಹುದು ಎಂದರು. ಸಹಾಯಕ ನಿರ್ದೇಶಕರು ವಿಜಯ ಪಾಟೀಲ್, ಮಹಮ್ಮದ್ ಗೌಸ್ ರಿಸಲ್ದಾರ್, ತಾಲೂಕಿನ ಎಲ್ಲಾ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಕುಡಿಯುವ ನೀರು ನೈರ್ಮಲ್ಯ ಇಲಾಖೆ ಸಿಬ್ಬಂದಿ ಇದ್ದರು.

ಶಕುಂತಲಾ ಪಾಟೀಲ ನಿಧನ

ಬೈಲಹೊಂಗಲ: ಪಟ್ಟಣದ ಮುರಗೋಡ ರಸ್ತೆಯ ಬಸವನಗರದ 6ನೇ ರಸ್ತೆ ನಿವಾಸಿ ಶಕುಂತಲಾ ಬಸನಗೌಡ ಪಾಟೀಲ(90) ನಿಧನರಾದರು. ಮೃತರಿಗೆ ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದರು.





ಬೆಳಗಾವಿ : ಕೆಎಲ್ಎಸ್ ಸಂಸ್ಥೆಯ ರಾಜಾ ಲಖಮಗೌಡ ಕಾನೂನು ಮಹಾವಿದ್ಯಾಲಯದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಆಚರಿಸಲಾಯಿತು. ಈ ವೇಳೆ ಕಾಲೇಜಿನ ಶಿಕ್ಷಕರು, ವಿದ್ಯಾರ್ಥಿಗಳು ಸೇರಿದಂತೆ ಅನೇಕರಿದ್ದರು.

ದುರ್ಗಾದೇವಿ ಜಾತ್ರಾ ಮಹೋತ್ಸವ ನಾಳೆ

ತೆಲಸಂಗ: ಗ್ರಾಮದ ಶ್ರೀ ದುರ್ಗಾದೇವಿ ಜಾತ್ರಾ ಮಹೋತ್ಸವ ಏ.17, 18ರಂದು ವಿಜೃಂಭಣೆಯಿಂದ ಜರುಗಲಿದೆ ಎಂದು ವಕೀಲ ಅಮೋಘ ಖೊಬ್ರಿ ತಿಳಿಸಿದರು. ಗ್ರಾಮದ ದುರ್ಗಾದೇವಿ ಜಾತ್ರೆಯ ನಿಮಿತ್ತ ಇತ್ತೀಚಿಗೆ ಕಮಿಟಿ ಸದಸ್ಯರು ಆಯೋಜಿಸಿದ ಸಭೆಯಲ್ಲಿ ಕರಪತ್ರ ಬಿಡುಗಡೆಗೊಳಿಸಿ ಮಾತನಾಡಿ, ಏ.17ರಂದು ಬೆಳಗ್ಗೆ 6ಕ್ಕೆ ದೇವಿಗೆ ರುದ್ರಾಭಿಷೇಕ, ಮಹಾಪೂಜೆ, ಮಂಗಳವಾದ್ಯಗಳೊಂದಿಗೆ ದೇವಿಯ ಪಲ್ಲಕ್ಕಿ ಮೆರವಣಿಗೆ ನಡೆಯಲಿದೆ. ದೇವಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಲಿದೆ. ರಾತ್ರಿ 9.30ಕ್ಕೆ ಇಂಗಳೇಶ್ವರದ ರೇಣುಕಾ ಯಲ್ಲಮ್ಮದೇವಿ ಚೌಡಕಿ ಸಂಘದವರಿಂದ ಆಕರ್ಷಕ ನೃತ್ಯ ಪ್ರದರ್ಶನಗೊಳ್ಳುವುದು. ಏ.18 ಬೆಳಗ್ಗೆ 10ಕ್ಕೆ ಜಮಖಂಡಿಯ ಭಾಗ್ಯ ಮೈತ್ರಿ, ಅಲ್ಲೇಲರ ಬಸವರಾಜು ಅಂಬ್ಯಾ ತಳವಾರ ತಂಡದವರಿಂದ ಗೀಗೀ ಪದಗಳ ಜುಗಲಬಂದಿ, ಸಂಜೆ 7ಕ್ಕೆ ಸ್ಥಳೀಯ ಕಲಾವಿದರಿಂದ ರಸಮಂಜರಿ ಕಾರ್ಯಕ್ರಮ ಜರುಗಲಿದೆ. ಅಥಣಿ ಶಾಸಕ ಲಕ್ಷ್ಮಣ ಸವದಿ, ಮಾಜಿ ಶಾಸಕ ಮಹೇಶ ಕುಮಟಳ್ಳಿ, ಸದಾಶಿವ ಬುಟಾಳಿ, ಅಮೋಘಸಿದ್ದ ಖೊಬ್ರಿ, ಅರವಿಂದ ಉಂಡೋಡಿ, ಗಿರೀಶ ಬುಟಾಳಿ, ಸಂತೋಷಕುಮಾರ ಶೆಟ್ಟಿ, ಗ್ರಾಮದ ಪ್ರಮುಖರು, ಅಧಿಕಾರಿಗಳು, ಸಮಾಜದ ಗಣ್ಯರು ಭಾಗವಹಿಸುವರು ಎಂದರು. ಮಾಜಿ ತಾಪಂ ಸದಸ್ಯ ಶ್ರೀಶೈಲ ಶೆಲ್ಲೆಪ್ಪಗೋಳ, ಸಿದ್ದರಾಮ ಮಾದರ, ಸುನೀಲ ಮಾದರ, ಶ್ರವಣ ಸೂರ್ಯವಂಶಿ, ರಾಜು ಪರ್ನಾಕರ, ರಾಜು ಹೊಸಾಂಟಿಲೆ, ಸಂಜು ಮಾದರ, ಉಮೇಶ ಸೂರ್ಯವಂಶಿ, ಧರೆಪ್ಪಾ ಮಾಳಿ, ರಮೇಶ ಹತ್ತಿ, ಅಪ್ಪು ಜಮಾದರ, ಗುಂಡು ಪವಾರ, ಲಕ್ಷ್ಮಣ ನಾಟೀಕಾರ, ಮಾರು ಬಾಣಿ, ಚಂದು ಪರ್ನಾಕರ, ರಫಿಕ ಉಂಡೋಡಿ, ಆನಂದ ಕೈತಾಳ, ಮುತ್ತು ಡೆಂಗಿ ಇದ್ದರು.



ಖಾನಾಪುರ: ಪಟ್ಟಣದ ಕೇಂದ್ರೀಯ ಗ್ರಾಮೀಣ ಕುಂಬಾರಿಕೆ ಸಂಸ್ಥೆಯಲ್ಲಿ ಬುಧವಾರ ಸಂತ ಗೋರಾ ಕುಂಬಾರ ಪುಣ್ಯತಿಥಿ ಆಚರಿಸಲಾಯಿತು. ಸಂಸ್ಥೆಯ ಹಿರಿಯ ಅಧಿಕಾರಿ ಎಸ್.ಎನ್ ದೇಶಪಾಂಡೆ ಗೋರಾ ಕುಂಬಾರ ಮತ್ತು ಮಹಾತ್ಮಾ ಗಾಂಧೀಜಿ ಭಾವಚಿತ್ರಗಳಿಗೆ ಪೂಜೆ ಸಲ್ಲಿಸಿಲಾಯಿತು. ತರಬೇತಿ ಅಧಿಕಾರಿ ವೆಂಕಟೇಶ ಕುಂಬಾರ, ದೀಪಾ, ಮಹೇಶ ರಾಚಣ್ಣವರ, ಶ್ರೀಕಾಂತ ಪಾಟೀಲ, ಸಂಸ್ಥೆಯ ಅಧಿಕಾರಿಗಳು, ಪ್ರಶಿಕ್ಷಣಾರ್ಥಿಗಳು, ಸಿಬ್ಬಂದಿ ಇದ್ದರು.

ಪ್ರಗತಿ ಪರಿಶೀಲನಾ ಸಭೆ | ಯು. ನಿಸಾರ್ ಅಹಮ್ಮದ್ ಸೂಚನೆ

ಯೋಜನೆ ತಲುಪುವಂತೆ ಕಾರ್ಯ ನಿರ್ವಹಿಸಿ

ಬೆಳಗಾವಿ: ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸಂಬಂಧಿಸಿದ ಅಧಿಕಾರಿಗಳು ಶ್ರಮ ವಹಿಸಬೇಕು. ಅಲ್ಪಸಂಖ್ಯಾತರಿಗೆ ಸರ್ಕಾರದಿಂದ ದೊರೆಯಬೇಕಿರುವ ಎಲ್ಲ ಸೌಕರ್ಯಗಳು ಕಡ್ಡಾಯವಾಗಿ ತಲುಪುವಂತೆ ಕಾರ್ಯನಿರ್ವಹಿಸಬೇಕು ಎಂದು ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷ ಯು. ನಿಸಾರ್ ಅಹಮ್ಮದ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಪ್ರಧಾನ ಮಂತ್ರಿಗಳ ಹೊಸ 15ಅಂಶಗಳ ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳ 2025-26ನೇ 3ನೇ ಮತ್ತು 4ನೇ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಮಕ್ಕಳ ಮಾಹಿತಿ ಪಡೆದು 1ನೇ ತರಗತಿ ಪ್ರವೇಶಕ್ಕೆ ಅರ್ಹ ಮಕ್ಕಳನ್ನು ಶಾಲೆಗಳಿಗೆ ಸೇರ್ಪಡೆಗೊಳಿಸುವಂತೆ ಶಿಕ್ಷಣ ಇಲಾಖೆ ಅಧಿಕಾರಿಗಳು ಮುತುವರ್ಜಿ ವಹಿಸಬೇಕು. ಯಾವುದೇ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು. ಮನೆ ಮನೆಗಳನ್ನು ಸಮೀಕ್ಷೆ ನಡೆಸಿ ಅವರನ್ನು ಶಾಲೆಗಳಿಗೆ ಸೇರ್ಪಡೆಗೊಳಿಸುವಂತೆ ಸೂಚಿಸಬೇಕು ಎಂದರು.

ರಾಜ್ಯದ ಯಾವುದೇ ಮಗು ಶಿಕ್ಷಣದಿಂದ ವಂಚಿತವಾಗಬಾರದು ಎಂಬುದು ಸರ್ಕಾರದ ಸದಾಶಯವಾಗಿದ್ದು, ಈ ನಿಟ್ಟಿನಲ್ಲಿ ಅಧಿಕಾರಿಗಳು ಮುತುವರ್ಜಿಯಿಂದ ಕಾರ್ಯ ನಿರ್ವಹಿಸಬೇಕು.



ವಿಶೇಷವಾಗಿ ಅಲ್ಪಸಂಖ್ಯಾತ ಸಮುದಾಯದ ಮಕ್ಕಳು ಶಿಕ್ಷಣದಿಂದ ದೂರವಾಗದಂತೆ ಜಾಗೃತಿ ಮೂಡಿಸಬೇಕು ಎಂದರು.

ವಲಸೆ ಹೋದ ಮಕ್ಕಳನ್ನು ಸ್ಯಾಟ್ಸ್ ಆಯ್.ಡಿ. ಮೂಲಕ ಗುರುತಿಸಿ ಮರಳಿ ಶಾಲೆಗೆ ತರುವಂತಹ ಕಾರ್ಯವಾಗಬೇಕು. ಶಾಲೆಗಳಲ್ಲಿನ ಶೌಚಾಲಯಗಳ ದುರಸ್ತಿ ಕೈಗೊಳ್ಳಬೇಕು. ಆಯೋಗದ ಸದಸ್ಯರು ಅನೀರಿಕ್ಷಿತವಾಗಿ ಶಾಲೆಗಳಿಗೆ ಭೇಟಿ ನೀಡಿ ಪರಿಸ್ಥಿತಿಯನ್ನು ಅವಲೋಕಿಸಲು ತಿಳಿಸಿದರು.

ಕೌಶಲ್ಯ ಅಭಿವೃದ್ಧಿ ಇಲಾಖೆ ವತಿಯಿಂದ ಜಿಲ್ಲೆಯಲ್ಲಿನ ಯುವಕರಲ್ಲಿನ ಕೌಶಲ್ಯಗಳನ್ನು ಗುರುತಿಸಿ ಅವರಿಗೆ ಸೂಕ್ತ ತರಬೇತಿ ನೀಡಬೇಕು. ಕಟ್ಟಡ ಕಾರ್ಮಿಕರಿಗೆ ಇರುವಂತಹ ಸೌಲಭ್ಯಗಳ ಕುರಿತು ಜಾಗೃತಿ ಮೂಡಿಸುವ ಕಾರ್ಯವಾಗಬೇಕು. ಜಿಲ್ಲೆಯ ಎಲ್ಲ ಕೋಳಗೇರಿ ಪ್ರದೇಶಗಳಲ್ಲಿ ಸಮೀಕ್ಷೆ ಜರುಗಿಸಿ ಪ್ರತಿಯೊಬ್ಬ ವಿಕಲಚೇತನರಿಗೆ ಸರ್ಕಾರದ ಸೌಲಭ್ಯ ದೊರಕಿಸಿಕೊಡಲು ತಿಳಿಸಿದರು.

ಆಯೋಗಕ್ಕೆ ನೇಮಕವಾದಂತಹ ನಾಮನಿರ್ದೇಶಿತ ಸದಸ್ಯರುಗಳು ನಿಯಮಿತವಾಗಿ ಸಭೆಗಳನ್ನು ಜರುಗಿಸಿ ಕುಂದು ಕೊರತೆಗಳನ್ನು ಆಲಿಸಿ ಆಯೋಗದ ಸಭೆಯಲ್ಲಿ ತಮ್ಮ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳ ಮಾಹಿತಿ ನೀಡಬೇಕು ಎಂದರು.

ಜಿಪಂ ಸಿಇಒ ರಾಹುಲ್ ಶಿಂಧೆ ಮಾತನಾಡಿ, ಶಾಲೆಗಳಲ್ಲಿನ ಶೌಚಾಲಯ ನಿರ್ಮಾಣಕ್ಕೆ ಹಾಗೂ ದುರಸ್ತಿಗೆ ಕ್ರಮ ಕೈಗೊಳ್ಳಲಾಗಿದೆ. ಶಾಲಾ ಮಕ್ಕಳಿಗಾಗಿ ಬೆಂಚ್ ಖರೀದಿ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. ಕೊಳಗೇರಿ ಪ್ರದೇಶಗಳಲ್ಲಿನ ವಿಕಲಚೇತನರ ಸಮೀಕ್ಷಾ ಕಾರ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಸಹಕಾರ ಪಡೆದುಕೊಳ್ಳುವಂತೆ ತಿಳಿಸಿದರು.

ಶಾಸಕ ಆಸೀಫ್ ಸೇಠ, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಮಾತನಾಡಿದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾಧಿಕಾರಿ ಎಫ್. ಯು ಪೂಜೇರ ಸಭೆ ನಿರ್ವಹಿಸಿದರು.

ಜಿಪಂ ಮುಖ್ಯ ಯೋಜನಾ ನಿರ್ದೇಶಕ ಗಂಗಾಧರ ದಿವಟರ, ಯೋಜನಾ ನಿರ್ದೇಶಕ ರವಿ ಬಂಗಾರಪ್ಪನವರ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಎಚ್.ಡಿ ಕೋಳೇಕರ, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಮಹಾಂತೇಶ ಮುರಗೋಡ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಚೇತನಕುಮಾರ, ಡಿಡಿಪಿಐ ಲೀಲಾವತಿ ಹಿರೇಮಠ, ಕಾರ್ಮಿಕ ಇಲಾಖೆ ಅಧಿಕಾರಿಗಳು, ಆಯೋಗದ ನಾಮನಿರ್ದೇಶಿತ ಸದಸ್ಯರು ಸಭೆಯಲ್ಲಿ ಹಾಜರಿದ್ದರು.

ಡಾ. ಬಿ.ಆರ್. ಅಂಬೇಡ್ಕರ್ ಜಯಂತ್ಯುತ್ಸವ

ಕಾಗವಾಡ: ಶೋಷಿತರ, ದೀನದಲಿತರ, ಅಸ್ಪೃಶ್ಯರ, ಬಡವರ, ನೊಂದವರ ಧ್ವನಿಯಾಗಿ, ಅವರಿಗೆಲ್ಲ ಶಕ್ತಿ ತುಂಬುವ ಕಾರ್ಯವನ್ನು ಡಾ. ಬಿ.ಆರ್. ಅಂಬೇಡ್ಕರ್ ಮಾಡಿದರು ಎಂದು ಶಿಕ್ಷಕ ಶಿವಗೌಡ ಚೌಗಲಾ ಹೇಳಿದರು.

ಅವರು ತಾಲೂಕಿನ ಐನಾಪುರ ಪಟ್ಟಣದ ಭೀಮನಗರದಲ್ಲಿ ವಿವಿಧ ದಲಿತ ಸಂಘಟನೆ ಒಕ್ಕೂಟ ಆಯೋಜಿಸಿದ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ಮಹಾ ಮಾನವತಾವಾದಿ, ಈ ದೇಶ ಕಂಡ ಅಪರೂಪದ ವ್ಯಕ್ತಿ, ಭಾರತರತ್ನ, ಸಂವಿಧಾನ ಶಿಲ್ಪಿ ಡಾ.ಬಿ ಆರ್. ಅಂಬೇಡ್ಕರ್ ಅವರು ಸಂವಿಧಾನವನ್ನು ಬರೆಯದೆ ಹೋಗಿದ್ದರೆ, ನಾವ್ಯಾರು ಈ ವೇದಿಕೆ ಮೇಲೆ ಆಸೀನರಾಗಲು ಸಾಧ್ಯವೇ ಆಗುತ್ತಿರಲಿಲ್ಲ, ಸ್ವತಂತ್ರವಾಗಿ ಮಾತನಾಡುವ ಸಾಮರ್ಥ್ಯವು ಬರುತ್ತಿರಲಿಲ್ಲ, ಅದಿಕಾರವು ನಮಗಿತ್ತಿರಲಿಲ್ಲ, ನಾವೇನಾದರೂ ಇಷ್ಟೊಂದು ಧೈರ್ಯಶಾಲಿಯಾಗಿ ಈ ವೇದಿಕೆಯ ಮೇಲೆ ಮಾತನಾಡಬೇಕಾದರೆ ಅಂಬೇಡ್ಕರ್ ಅವರು ಪುಣ್ಯ ಎಂದರು. ಪಪಂ ಸದಸ್ಯ ಅರುಣ ಗಾಣಿಗೇರ ಮಾತನಾಡಿ, ಡಾ.ಬಿ.ಆರ್. ಅಂಬೇಡ್ಕರವರು ಈ ದೇಶ ಕಂಡ ಮಹಾನ್ ತತ್ವಜ್ಞಾನಿ. ಅನ್ನದ ಹಸಿವಿಗಿಂತ ಜ್ಞಾನದ ಹಸಿವು ದೊಡ್ಡದು ಎಂಬುದನ್ನು ತಮ್ಮ ಬದುಕಿನುದ್ದಕ್ಕೂ ಸಾರಿದ ಮೇಧಾವಿ. ಬುದ್ಧ, ಬಸವೇಶ್ವರ, ಮಹಾವೀರ ಮುಂತಾದ ದಾರ್ಶನಿಕರ ತತ್ವಗಳನ್ನು ಸಂವಿಧಾನದಲ್ಲಿ ಅಳವಡಿಸಿ ಭಾರತದ ನಾಗರೀಕರು ಮೌಲ್ಯಯುತವಾಗಿ ಬದುಕುವಂತೆ ಮಾಡಿದ ಡಾ. ಬಿ.ಆರ್. ಅಂಬೇಡ್ಕರರ ಆದರ್ಶವಾಗಿದ್ದಾರೆ ಎಂದರು.

ಮುಂಜಾನೆ ನ್ಯಾಯವಾದಿ ಸಂಜಯ ಕುಚನೂರೆ ಧ್ವಜಾರೋಹಣ ನೆರವೇರಿಸಿದರು. ನಂತರ ಕರುಣಾ ಬೌದ್ಧ ವಿಹಾರದಲ್ಲಿ ಧ ಬುಧಿಷ್ಟ ಸೊಸೈಟಿ ಆಫ್ ಇಂಡಿಯಾ ತಥಾ ಭಾರತೀಯ ಬೌದ್ಧ ಮಹಾಸಭಾರವರ ಸಂಯುಕ್ತಾಶ್ರಯದಲ್ಲಿ ತಥಾಗತ ಕಾರ್ಯಕ್ರಮವನ್ನು ಬುದ್ಧ, ಅಂಬೇಡ್ಕರರ ಪ್ರತಿಮೆಯ ಪೂಜೆಯೊಂದಿಗೆ ದೀಪ ಬೆಳಗಿಸಿ, ಕೇಕ ಕತ್ತರಿಸುವ ಮೂಲಕ ಅಂಬೇಡ್ಕರ್ ಜನ್ಮ ದಿನಾಚರಣೆ ಆಚರಿಸಿದರು.

ಪಪಂ ಸದಸ್ಯ ಕುಮಾರ ಜಯಕರ, ಸುರೇಶ ಅಡಿಸೇರಿ, ಉಮಾಜಿ ನಡೋಣಿ, ನ್ಯಾಯವಾದಿ ಶಶಿಕಾಂತ ನಡೋಣಿ, ರಾಜು ಅಸೋದೆ, ಉಮೇಶ ಮನೋಜ, ಲಖನ ಕಾಂಬಳೆ, ದೇವೃಷಿಸರ್, ಹಣಮಂತಮದಾಳೆ, ಶಂಕರ ನಾಯಿಕ, ಜಾನು ಮನೋಜ, ನಗರದ ನೂರಾರು ಮಹಿಳೆಯರು ಇತರರು ಇದ್ದರು.



ಅಂಬೇಡ್ಕರರು ಸರ್ವ ಸಮಾಜದ ನಾಯಕ

ರಾಮದುರ್ಗ: ಡಾ. ಬಿ.ಆರ್.ಅಂಬೇಡ್ಕರರು ಸಂವಿಧಾನನ್ನು ಕೇವಲ ಪರಿಶಿಷ್ಟ ಜಾತಿಯ ಜನರಿಗಾಗಿ ಮಾತ್ರ ಸಂವಿಧಾನ ರಚನೆ ಮಾಡಲಿಲ್ಲ, ಸಮಾಜದಲ್ಲಿ ತುಳಿತಕ್ಕೊಳಗಾದ ಜನರ ಜೊತೆಗೆ ಎಲ್ಲ ಜನಾಂಗದವರ ಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡು ಸಂವಿಧಾನ ರಚಿಸಿದ್ದರಿಂದ ಎಲ್ಲ ಸಮಾಜಗಳ ಕಣ್ಮಣಿಯಾಗಿ ಅವರನ್ನು ಬಿಂಬಿಸಲಾಗಿದೆ ಎಂದು ಸಿ.ಎಸ್.ಬೆಂಬಳಗಿ ಕಾಲೇಜ್‌ನ ಇಂಗ್ಲೀಷ್ ವಿಭಾಗದ ಮುಖ್ಯಸ್ಥ ಸಿದ್ಲಿಂಗಪ್ಪ ರಂಗಪ್ಪಗೋಳ ಹೇಳಿದರು.

ಪಟ್ಟಣದ ಗುರು ಭವನದಲ್ಲಿ ಇತ್ತೀಚಿಗೆ ತಾಲೂಕಾ ಆಡಳಿತ ಆಯೋಜಿಸಿದ ಡಾ.ಬಿ.ಆರ್. ಅಂಬೇಡ್ಕರರ ಜಯಂತ್ಯುತ್ಸವದಲ್ಲಿ ಮಾತನಾಡಿ, ಸರ್ವ ಜನಾಂಗದ ಕಲ್ಯಾಣಕ್ಕಾಗಿ ಸಂವಿಧಾನ ರಚನೆ ಮಾಡಿದರೂ ಸಹಿತ ಕೆಲವರು ಮೀಸಲಾತಿ ವಿಷಯದಲ್ಲಿ ಅಪಸ್ವರ ಎತ್ತುತ್ತಿರುವದಕ್ಕೆ ಅಸಮಧಾನ ವ್ಯಕ್ತಪಡಿಸಿದರು.

ಅಂಬೇಡ್ಕರರು ತಮ್ಮ ಸಮಕಾಲೀನ ಸಮಯದಲ್ಲಿ ಎದುರಿಸಿದ ಜಾತಿ ಪದ್ಧತಿ ಇಂದಿಗೂ ಕೆಲವಡೆ ಜೀವಂತವಾಗಿರುವುದಕ್ಕೆ ಅಸಮಧಾನ ವ್ಯಕ್ತಪಡಿಸಿದರಲ್ಲದೆ ಸಾಕಷ್ಟು ವರ್ಷಗಳು ಗತಿಸಿದರೂ ಸಮಾಜದಲ್ಲಿ ಜಾತಿ ಪದ್ಧತಿ ಇನ್ನೂ ಜೀವಂತವಾಗಿದೆ ಎನ್ನುವುದಕ್ಕೆ ನಮ್ಮಂತ ನೌಕರಿ ಮಾಡುವ ಪರಿಶಿಷ್ಟ ಜನಾಂಗವರಿಗೆ ಮನೆ ಬಾಡಿಗೆ ಸಿಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ತಹಶೀಲ್ದಾರ್ ಪ್ರಕಾಶ ಹೊಳೆಪ್ಪಗೋಳ ಮಾತನಾಡಿ, ಮಹಾನ್ ವ್ಯಕ್ತಿಗಳ ಜನ್ಮ ದಿನಾಚರಣೆಗೆ ಉಳಿದ ಜನಾಂಗದವರು ಗೈರು ಉಳಿಯುವುದು ಸಾಮಾನ್ಯ. ಕಳೆದ 15 ದಿನಗಳಿಂದ ಜನರನ್ನು ಸೇರಿಸಲು ತಾಲ್ಲೂಕು ಆಡಳಿವೇ ಪ್ರಯತ್ನ ಪಟ್ಟರೂ ಅಂಬೇಡ್ಕರರ ಜಯಂತಿಗೆ ಜನರನ್ನು ಸೇರಿಸಲು ನಾಯಕರು ವಿಫಲರಾಗಿರುವುದು ನೋವುಂಟು ಮಾಡಿದೆ ಎಂದು ವಿಷಾದಿಸಿದರು. ಡಿಎಸ್‌ಪಿ ಚಿದಂಬರ ಮಡಿವಾಳರ, ತಾಲೂಕಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಜಿ.ಬಿ.ರಂಗನಗೌಡರ, ಕ್ಷೇತ್ರ ಶಿಕ್ಷಣಾಧಿಕಾರಿ ಸುರೇಂದ್ರ ಕಾಂಬಳೆ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಹನಮಂತ ವಕ್ಕುಂದ ಇದ್ದರು.



ಸಮಾನತೆಯೇ ಅಭಿವೃದ್ಧಿಗೆ ಪೂರಕ: ಜಿ.ಎನ್.ಕಸಾಳೆ

ಚನ್ನಮ್ಮನ ಕಿತ್ತೂರು: ಸಮಾಜದಲ್ಲಿ ಎಲ್ಲ ವರ್ಗದವನ್ನು ಸಮಾನತೆಯಿಂದ ಕಂಡಾಗ ಮಾತ್ರದೇಶ ಅಭಿವೃದ್ಧಿ ಸಾಧ್ಯವೆಂದು ಸಂವಿಧಾನದ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಮೂಲ ಕನಸಾಗಿತ್ತು ಎಂದು ಸ.ಪ್ರ.ದ. ಉಪನ್ಯಾಸಕ ಜಿ.ಎನ್. ಕಸಾಳೆ ಹೇಳಿದರು.

ಕಿ.ನಾ.ವಿ.ವ ಸಂಘದ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಜನ್ಮ ದಿನಾಚರಣೆ ನಿಮಿತ್ತ ಆಯೋಜಿಸಿದ್ದ ಮನೆ ಮನೆಗೆ ಮನ ಮನಕೆ ಡಾ.ಬಾಬಾಸಾಹೇಬರು ಅಭಿಯಾನ ಉದ್ಘಾಟಿಸಿ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ ಸಾಮಾಜಿಕ ಸುಧಾರಕ, ಸಮಾನತೆಯ ಪ್ರತಿಪಾದಕರಾಗಿದ್ದಾರೆ. ನಮ್ಮ ಸಂವಿಧಾನ ಸಾಮಾಜಿಕವಾಗಿ ಹಿಂದುಳಿದ ವರ್ಗದವರು ರಾಷ್ಟ್ರೀಯ ಮೂಲವಾಹಿನಿಗೆ ತರಬೇಕು ಎಂದನ್ನು ಉಲ್ಲೇಖಿಸಿ ಸರ್ವಜನಾಂಗದ ಅಭಿವೃದ್ಧಿಗೆ ಪೂರಕವಾಗಿ ಪ್ರಪಂಚದಲ್ಲಿಯೇ ಅತ್ಯಂತ ಶ್ರೇಷ್ಠ ಸಂವಿಧಾನವಾಗಿದೆ ಎಂದರು.

ಪ್ರಾಚಾರ್ಯ ನಾಗರಾಜ.ಎಚ್.ಕೆ. ಮಾತನಾಡಿ, ಬಾಬಾ ಸಾಹೇಬರ ಚಿಂತನೆಗಳು ಪ್ರತಿಯೊಬ್ಬರ ಮನಕ್ಕೆ ಮುಟ್ಟಿಸಬೇಕಾಗಿದೆ. ಸಮಾನತೆ ಸಮಾಜದ ಅಭಿವೃದ್ಧಿಗೆ ಪೂರಕ ಎಂದು ಇಂದು ಎಲ್ಲರೂ ಅರಿತುಕೊಳ್ಳಿ ಎಂದರು.



ಪ್ರಾಸ್ತಾವಿಕವಾಗಿ ಡಾ.ಹೊನ್ನರಾಜು ಎಸ್.ವ್ಹಿ. ಮಾತನಾಡಿ, ಸರ್ಕಾರ ಮತ್ತು ರಾಣಿ ಚನ್ನಮ್ಮ ವಿವಿಯ ಆದೇಶದಂತೆ ಇಂದಿನಿಂದ ಒಂದು ವಾರದವರೆಗೆ ವಿವಿಯ ವಿವಿಧ ಘಟಕಗಳ ಸಹಯೋಗದಲ್ಲಿ ಮನೆ ಮನೆಗೆ ಮನ ಮನಕೆ ಡಾ.ಬಾಬಾ ಸಾಹೇಬರ ಅಭಿಯಾನ ಆಯೋಜಿಸಿದೆ ಎಂದರು.

ಡಾ.ಅಂಬೇಡ್ಕರರ ಭಾವಚಿತ್ರಕ್ಕೆ ಪೂಜೆಸಲ್ಲಿಸಿ, ವಿದ್ಯಾರ್ಥಿಗಳಿಗೆ ಸಂವಿಧಾನ ಪೀಠಿಕೆ ಓದಿಸಲಾಯಿತು. ಪ್ರಿಯಾಂಕಾ ಧಾಮೋಣೆ, ರವಿ ಹಾವಿನಾಳ, ಆನಂದಕರೆಪ್ಪನವರ, ಪಿ.ಸಿ.ಶಿವನವ್ವನವರ ಇದ್ದರು. ಸುಮಂಗಲಾ ಕಟ್ಟಿ ಪ್ರಾರ್ಥಿಸಿದರು. ಹಣಮಂತ ಶಿಗೀಹಳ್ಳಿ ಸ್ವಾಗತಿಸಿದರು. ನೀಲಾ ಗದ್ದಿಗಾಲ ಅತಿಥಿಗಳನ್ನು ಪರಿಚಯಿಸಿದರು. ಸುಜಾತಾ ಜುಟ್ಟಿ ವಂದಿಸಿದರು. ವಿಜಯಲಕ್ಷ್ಮೀ ಕೇರಾಳಿ ನಿರೂಪಿಸಿದರು.

ಅಂಬೇಡ್ಕರರ ಚಿಂತನೆಗಳು ಜೀವನದಲ್ಲಿ ಅಳವಡಿಸಿಕೊಳ್ಳಿ: ಸಂಗಮೇಶ

ಮೂಡಲಗಿ: ಡಾ.ಬಿ.ಆರ್.ಅಂಬೇಡ್ಕರರು ಸಂಘಟನೆ, ಶಿಕ್ಷಣ, ಸಮುದಾಯದ ಏಕತೆಯ ಚಿಂತಕರಾಗಿ ಮಹತ್ವದ ಪಾತ್ರವಹಿದರು. ಸಂವಿಧಾನ ರಚನೆಯಲ್ಲಿ ಅಗ್ರಗಣ್ಯರಾಗಿ ಗುರ್ತಿಸಿಲ್ಪಟ್ಟಿದ್ದು, ಸಂವಿಧಾನ ಪ್ರತಿ ನಾಗರಿಕರಿಗೆ ಸಮಾನತೆ ಒದಗಿಸುವಲ್ಲಿ ಅಂಬೇಡ್ಕರರ ಪಾತ್ರ ಮಹತ್ವದ್ದು ಎಂದು ಮೂಡಲಗಿ ಆರ್‌ಡಿಎಸ್ ಪಿಯು ಕಾಲೇಜಿನ ಉಪನ್ಯಾಸಕ ಸಂಗಮೇಶ ಕುಂಬಾರ ಹೇಳಿದರು.

ಪಟ್ಟಣದ ಆರ್‌ಡಿಎಸ್ ಕಲಾ, ವಾಣಿಜ್ಯ, ವಿಜ್ಞಾನ, ಸಮಾಜ ಕಾರ್ಯ ಪದವಿ ಮಹಾವಿದ್ಯಾಲಯ ಹಾಗೂ ಬೆಳಗಾವಿ ರಾಣಿ ಚೆನ್ನಮ್ಮ ವಿವಿ ಹಾಗೂ ಪಿಯು ಕಾಲೇಜ ಶ್ರೀವಿದ್ಯಾನಿಕೇತನ ಪ್ರಾ.ಪ್ರೌ ಶಾಲಾ ಸಹಯೋಗದಲ್ಲಿ ನಡೆದ ಅಂಬೇಡ್ಕರರ ಜಯಂತಿಯಲ್ಲಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.



ಶ್ರೀವಿದ್ಯಾನಿಕೇತನಶಾಲೆಯಮುಖ್ಯೋಪಾಧ್ಯಾಯ ಸಂಗಮೇಶ ಹಳ್ಳೂರ ಮಾತನಾಡಿ, ಅಂಬೇಡ್ಕರರ ಚಿಂತನೆ, ವಿಚಾರಗಳು ಜೀವದಲ್ಲಿ ಅಳವಡಿಸಿಕೊಳ್ಳಬೇಕು. ಅವರು ಸಮಾಜದ ದೌರ್ಜನ್ಯಗಳನ್ನು ಹೋಗಲಾಡಿಸಿ ಸಾಮಾಜಿಕ ಭದ್ರತೆಗೆ ಸ್ಫೂರ್ತಿ ತುಂಬಿದ ಮಹಾನ್ ವ್ಯಕ್ತಿಯಾಗಿದ್ದಾರೆ ಎಂದರು.

ಪ್ರಾಚಾರ್ಯ ಸತೀಶ ಗೋಟೂರೆ ಮಾತನಾಡಿದರು.

ಪ್ರಾಚಾರ್ಯ ಶಿವಾನಂದ ಸತ್ತಿಗೇರಿ ಅಧ್ಯಕ್ಷತೆ ವಹಿಸಿದರು. ಎನ್‌ಎಸ್‌ಎಸ್ ಘಟಕಾಧಿಕಾರಿ ರಾಜು ಪತ್ತಾರ, ರೆಡ್ ಕ್ರಾಸ್ ಘಟಕಾಧಿಕಾರಿ ಮುತ್ತಣ್ಣ ಒಡೆಯರ, ಸುಭಾಸ ಮಾಲೋಜಿ, ಉಮೇಶ ಪುಟ್ಟಿ, ಸಂಜೀವ ಮಂಟೂರ ಹಾಗೂ ಮತ್ತಿತರರು ಹಾಜರಿದ್ದರು. ಉಪನ್ಯಾಸಕ ಮುತ್ತಣ್ಣ ಒಡೆಯರ ಸ್ವಾಗತಿಸಿದರು. ಮಲ್ಲಪ್ಪ ಪಾಟೀಲ ನಿರೂಪಿಸಿ, ವಂದಿಸಿದರು.

ಎಲ್ಲ ಸಂಪತ್ತುಗಳಲ್ಲಿ ಆರೋಗ್ಯವೇ ಶ್ರೇಷ್ಠ

ಅಥಣಿ: ಚಂಚಲವಾದ ಮನಸ್ಸನ್ನು ಇಷ್ಟಲಿಂಗ ಪೂಜೆಯ ಮೂಲಕ ಹತೋಟಿಯಲ್ಲಿ ಇಟ್ಟುಕೊಳ್ಳಬೇಕು. ಇಷ್ಟಲಿಂಗ ಪೂಜೆ ಮಾಡಿಕೊಳ್ಳುವುದರಿಂದ ಏಕಾಗ್ರತೆ ಪ್ರಾಪ್ತಿಯಾಗುತ್ತದೆ. ಬಸವಾದಿ ಶರಣರು ಅರಿವೇ ಗುರು ಎಂದು ಹೇಳಿದ್ದಾರೆಂದು ಸವದಿ-ಇಳಕಲ್ ಮಠದ ಮಹಾಂತ ಶ್ರೀಗಳು ಹೇಳಿದರು.


ಪಟ್ಟಣದ ಸಾಯಿ ನಗರದ ಬಸವ ಉದ್ಯಾನವನದಲ್ಲಿ ಜರುಗಿದ ಶರಣರ ಜೀವನ ದರ್ಶನ ಪ್ರವಚನ ಕಾರ್ಯಕ್ರಮದಲ್ಲಿ ಮಾತನಾಡಿ, ಮನುಷ್ಯ ಎಷ್ಟೇ ಉನ್ನತ ಪದವಿ ಹೊಂದಿದರೂ ಅರಿವು ಎಂಬುದು ಇರಬೇಕು. ಎಲ್ಲ ಸಂಪತ್ತುಗಳಲ್ಲಿ ಆರೋಗ್ಯವೇ ಶ್ರೇಷ್ಠವಾದದ್ದು, ಆರೋಗ್ಯ, ಆರ್ಥಿಕ ಹಿತದೃಷ್ಟಿಯಿಂದ ದುಶ್ಚಟಗಳಿಗೆ ಬಲಿಯಾಗಬೇಡಿ ಎಂದರು.

ಜನವಾಡ ಅಲ್ಲಮಪ್ರಭು ಆಶ್ರಮದ ಮಲ್ಲಿಕಾರ್ಜುನ ಶ್ರೀಗಳು ಮಾತನಾಡಿ, ಇಂದಿನ ಒತ್ತಡ ಜೀವನದಲ್ಲಿ ಮನಸ್ಸನ್ನು ಹಗುರವಾಗಿಟ್ಟುಕೊಳ್ಳಬೇಕು. ಒಳ್ಳೆಯದಕ್ಕೂ ಕೆಟ್ಟದಕ್ಕೂ ಮನಸ್ಸೇ ಮುಖ್ಯ. ಮನಸ್ಸು ಗೆದ್ದವರು ಎಲ್ಲವನ್ನೂ ಗೆದ್ದಂತೆ ಎಂದರು.

ಈ ವೇಳೆ ಅಭಿಯಂತರ ರಾಜಶೇಖರ ಟೋಪಿಗಿ, ಬಸಪ್ಪ ಬಳವಾಡ, ಸಂಗಣ್ಣ ಗೂಗವಾಡ, ಅಶೋಕ ಡಾಬಳ್ಳಿ, ಲಾಯಪ್ಪ ಮಾಳಶೆಟ್ಟಿ, ಮಚೇಂದ್ರ ಭೋಸಲೆ, ಸಿದರಾಯ ಪುಟಾಣಿ, ರಾಜು ಬಿಸುಗುಪ್ಪಿ, ಡಾ. ಸುರೇಶ ಬಂಡಗಾರ, ಡಾ. ಸುರೇಶ ಮೈಗೂರ, ಬಸಗೊಂಡ ಕಾರಜಣಗಿ ಸೇರಿದಂತೆ ಅನೇಕರಿದ್ದರು. ಕೆಂಪಟ್ಟಿ ಹಾಗೂ ದೇಸಾಯಿ ಸಂಗೀತ ಬಳಗ ವಚನ ಪ್ರಾರ್ಥನೆ ಮಾಡಿದರು. ಎಲ್ಲರಿಗೂ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು.



ನಾರಿಶಕ್ತಿ ವಂದನ್: ಪ್ರಜಾಪ್ರಭುತ್ವಕ್ಕೆ ಶಕ್ತಿ



ಚಿಕ್ಕೋಡಿ: ಲೋಕಸಭೆ ಹಾಗೂ ವಿಧಾನಸಭೆಯಲ್ಲಿ ಮಹಿಳಾ ಮೀಸಲಾತಿ ತರಲು ನಾರಿಶಕ್ತಿ ವಂದನ್ ಮಸೂದೆ ಜಾರಿಗೊಳಿಸುತ್ತಿರುವುದು ಮೋದಿ ಸರ್ಕಾರದ ದಿಟ್ಟ ನಿರ್ಧಾರವಾಗಿದೆ. ಈ ಕಾಯ್ದೆಯಿಂದ ಪ್ರಜಾಪ್ರಭುತ್ವಕ್ಕೆ ಮತ್ತಷ್ಟು ಶಕ್ತಿ ಬಂದಂತಾಗಿದೆ ಎಂದು ಬಿಜೆಪಿ ರಾಜ್ಯ ಮಹಿಳಾ ಮೋರ್ಚಾ ಉಪಾಧ್ಯಕ್ಷೆ ಶಾಂಭವಿ ಅಶ್ವತ್ಥಪೂರ ಹೇಳಿದರು.

ಪಟ್ಟಣದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಹಿಳಾ ಮೀಸಲು ಕಾಯ್ದೆ ದೇಶದ ಮಹಿಳೆಯರ ದೀರ್ಘಕಾಲದ ಹೋರಾಟದ ಫಲವಾಗಿದೆ. ಇಲ್ಲಿಯವರೆಗೆ ಆಡಳಿತ ನಡೆಸಿದ ಯಾವ ಪಕ್ಷಗಳು ಮಸೂದೆ ಜಾರಿಗೆ ಮನಸ್ಸು ಮಾಡಿರಲಿಲ್ಲ, ಪ್ರದಾನಿ ನರೇಂದ್ರ ಮೋದಿ ಅವರ ನೇತೃತ್ವದ ಬಿಜೆಪಿ ಸರ್ಕಾರ ದಿಟ್ಟ ಹೆಜ್ಜೆ ಇರಿಸಿದೆ ಎಂರು.

ಕೇಂದ್ರದಲ್ಲಿ ಕಳೆದ 12 ವರ್ಷಗಳಿಂದ ಅಧಿಕಾರದ ಚುಕ್ಕಾಣಿ ಹಿಡಿದಿರುವ ಬಿಜೆಪಿ ಸರ್ಕಾರ ಮಹಿಳೆಯರಿಗಾಗಿ ಸಾಕಷ್ಟು ಅನುಕೂಲತೆ ಮಾಡಿದೆ. ಮಹಿಳೆಯರಿಗಾಗಿ ಶೌಚಾಲಯ, ಮನೆ, ಅಡುಗೆ ಅನಿಲ ಮುಂತಾದ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತಂದಿದ್ದು, ಇದೀಗ ನಾರಿಶಕ್ತಿ ವಂದನ್ ಮೂಲಕ ಮಹಿಳೆಯರು ರಾಜಕೀಯದಲ್ಲಿ ಬಲಿಷ್ಠತೆ ಸಾಧಿಸಲು ಸಾಧ್ಯವಾಗಲಿದೆ ಎಂದರು.


ಈ ವೇಳೆ ಚಿಕ್ಕೋಡಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಸತೀಶ ಅಪ್ಪಾಜಿಗೋಳ, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಶಕುಂತಲಾ ಡೋಣವಾಡೆ, ಜಿಲ್ಲಾ ಪ್ರದಾನ ಕಾರ್ಯದರ್ಶಿ ಅಮೃತ ಕುಲಕರ್ಣಿ ಇದ್ದರು.

ಅಂಬೇಡ್ಕರ್ ಜಯಂತ್ಯುತ್ಸವ : ಸತ್ಕಾರ

ಹಳ್ಳೂರ: ಸಮೀಪದ ಖಾನಟ್ಟಿ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತ್ಯುತ್ಸವ ಅಂಗವಾಗಿ ದಲಿತ ಸಂಘರ್ಷ ಸಮಿತಿ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಆಚರಿಸಿದರು. ಇತ್ತೀಚೆಗೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಖಾನಟ್ಟಿ ಗ್ರಾಮದ ವಿದ್ಯಾರ್ಥಿನಿ ಸೃಷ್ಟಿ ಅಶೋಕ ಮೇತ್ರಿ ಇವರು ಶೇ.97% ಫಲಿತಾಂಶ ಪಡೆದು ಸಾಧನೆ ಮಾಡಿದರಿಂದ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ ಅನುರಾಧ ಭಜಂತ್ರಿ ಹಾಗೂ ಗ್ರಾಮಸ್ಥರು ಸತ್ಕರಿಸಿ ಗೌರವಿಸಿದರು. ಅಶೋಕ ಮೇತ್ರಿ ಸದ್ಯ ಟೋರಿಕ್ಷಾ ಚಾಲನೆ ಮಾಡುತ್ತಿದ್ದು, ಚಾಲಕರ ಮಗಳು ಸಾಧನೆ ಕಂಡು ಗ್ರಾಮಸ್ಥರು ಬಡತನದಲ್ಲಿ ಅರಳಿದ ಪ್ರತಿಭೆ ಕಂಡು ಸಂತಸ ವ್ಯಕ್ತ ಪಡಿಸಿದರು. ಈ ವೇಳೆ ಮುಖಂಡರಾದ ಚೇತನ ರಡೇರಟ್ಟಿ, ವೆಂಕನಗೌಡ ಪಾಟೀಲ, ಜಗದೀಶ ಬಳಿಗಾರ, ಗುರು ಪಾಟೀಲ, ರವಿಂದ್ರ ತುಪ್ಪದ, ಮಹಾಂತೇಶ ರಡೇರಟ್ಟಿ, ಶಿವನಪ್ಪ ತುಪ್ಪದ, ರಾಮಪ್ಪ ಕುಂದರಗಿ, ಶಿವನಪ್ಪ ಗುದಗನ್ನವರ, ಮಹಾದೇವ ದಾನನ್ನವರ, ರಮೇಶ ಮೇತ್ರಿ, ಮಹಾದೇವ ಲಂಗೋಟ್ಟಿ, ತಾನಾಜಿ ಮಾದರ, ಮುದಕಪ್ಪ ಪೋತರಾಜ, ಶಿದ್ದಪ್ಪ ಹಾದಿಮನಿ, ಲಕ್ಷ್ಮಣ ಹಣಮಪ್ಪಗೋಳ, ಖಾನಟ್ಟಿ ಗ್ರಾಮದ ಪ್ರಮುಖರು ಪಾಲ್ಗೊಂಡಿದ್ದರು.



ಖರ್ಗೆ ವಿರುದ್ಧ ಕ್ರಮಕ್ಕೆ ಆಗ್ರಹ



ಗೋಕಾಕ: ಆರ್‌ಎಸ್‌ಎಸ್ ಕಾರ್ಯಕರ್ತರು ಮತ್ತು ಬಿಜೆಪಿಯು ಕೋಟ್ಯಾಂತರ ಕಾರ್ಯಕರ್ತರನ್ನು ಹೊಂದಿದ್ದು ದೇಶದ ತುರ್ತು ಸಂದರ್ಭಗಳಲ್ಲಿ ರಾಷ್ಟ್ರ ಸೇವೆಗಾಗಿ ಅನೇಕ ಸಂಘ ಪರಿವಾರದ ಸೇವಕರು ತಮ್ಮ ಅಮೂಲ್ಯ ಜೀವನವನ್ನು ದೇಶಕ್ಕಾಗಿ ಮುಡಿಪಾಗಿಟ್ಟಿದ್ದಾರೆ. ಆರ್‌ಎಸ್‌ಎಸ್ ಮತ್ತು ಬಿಜೆಪಿ ಕಾರ್ಯಕರ್ತರ ಬಗ್ಗೆ ಹಗುರವಾಗಿ ಮಾತನಾಡಿದ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಗೋಕಾಕ ಸಿಪಿಐ ಸುರೇಶಬಾಬು.ಆರ್.ಬಿ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇತ್ತೀಚೆಗೆ ಅಸ್ಸಾಂ ಚುನಾವಣಾ ಪ್ರಚಾರ ಸಭೆಯಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರು ಮತ್ತು ಬಿಜೆಪಿ ಕಾರ್ಯಕರ್ತರನ್ನು ವಿಷ ಸರ್ಪವಿದ್ದಂತೆ ಅವರನ್ನು ಕೊಲ್ಲಬೇಕು ಎಂದು ಪ್ರಚೋದನಕಾರಿ ಭಾಷಣದ ವಿರುದ್ಧ ಬಿಜೆಪಿ ಯುವ ಮೋರ್ಚಾ ನಗರ ಮಂಡಲ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ವೇಳೆ ನಗರ ಬಿಜೆಪಿ ಮಂಡಲ ಅಧ್ಯಕ್ಷ ಭೀಮಶಿ ಭರಮಣ್ಣವರ, ಯುವ ಮೋರ್ಚಾ ನಗರ ಅಧ್ಯಕ್ಷ ಈರಣ್ಣ ಅಂಬಲಿ, ರಾಜೇಶ್ವರಿ ವಡೇಯರ, ಪ್ರಭು ರಾವಳೋಜಿ, ಕೆ.ಎಸ್.ಸುಭಂಜಿ, ಮೋಹನ ವಾಳವೇಕರ, ದರ್ಶನ ಗುಡ್ಡಾಕಾರ, ಗೋಪಾಲ ಗೋಣಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕಿರುಸುದ್ದಿ



ಬಾದಾಮಿ: ನಗರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಡಾ.ಅಂಬೇಡ್ಕರ ಅವರ ಭಾವಚಿತ್ರಕ್ಕೆ ಪೂಜೆ ಮಾಡುವ ಮೂಲಕ ನಗರದ ಪ್ರಮುಖ ರಸ್ತೆಯಲ್ಲಿ ಅಭಿಮಾನಿಗಳು ಮೆರವಣಿಗೆ ನಡೆಸಿದರು.

ಅತ್ಯುತ್ತಮ ಫಲಿತಾಂಶ



ಜಮಖಂಡಿ: 2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ-1ರಲ್ಲಿ ತಾಲೂಕಿನ ತುಂಗಳ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಶೇ.96.15ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿ ಅತ್ಯುತ್ತಮ ಫಲಿತಾಂಶ ನೀಡಿದ್ದಾರೆ ಎಂದು ಪ್ರಾಚಾರ್ಯರು ತಿಳಿಸಿದ್ದಾರೆ. ಉತ್ತೀರ್ಣರಾದ ವಿದ್ಯಾರ್ಥಿಗಳಲ್ಲಿ 22 ಡಿಸ್ಟಿಂಕ್ಷನ್, 22 ಪ್ರಥಮ ಶ್ರೇಣಿ, 4 ದ್ವಿತೀಯ ಶ್ರೇಣಿಯಲ್ಲಿದ್ದಾರೆ. ಕಲಾ ವಿಭಾಗದ ಯೋಗಿತಾ ಯಾದವ ಶೇ.98.66, ಐಶ್ವರ್ಯ ಗಿರಡ್ಡಿ ಶೇ.98 ಹಾಗೂ ಮಾಯವ್ವ ಮುಧೋಳ ಶೇ.96.83 ಅಂಕ ಗಳಿಸಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಹಯಾತಬಿ ಮುಜಾವರ ಶೇ.96.16, ಸುಜಾತಾ ಕರಿಗಾರ ಶೇ.95.83, ಸುಶ್ಮಿತಾ ಹಿರೇಮಠ ಶೇ.95.66, ಭಾಗ್ಯಲಕ್ಷ್ಮೀ ವಡ್ರಾಳ ಶೇ.94.50, ಲಕ್ಷ್ಮೀ ಬುದ್ನಿ, ಲಕ್ಷ್ಮೀ ಹಲಗಲಿ, ಲಕ್ಷ್ಮೀ ಕರೋಶಿ, ತಾಯವ್ವ ಸಿಂಧೂರ (ಎಲ್ಲರೂ ಶೇ.93.33), ಕಾರ್ತಿಕಾ ಸಾಳುಂಕೆ, ಸಾವಿತ್ರಿ ಗಿರಡ್ಡಿ (ಇಬ್ಬರೂ ಶೇ.92.83), ಲಕ್ಷ್ಮೀ ಮಮದಾಪೂರ, ಸೃಷ್ಟಿ ನ್ಯಾಮಗೌಡ (ಇಬ್ಬರೂ ಶೇ.91.66) ಉತ್ತಮ ಸಾಧನೆ ಮಾಡಿದ್ದಾರೆ. ಕಾಲೇಜು ಅಭಿವೃದ್ಧಿ ಸಮಿತಿ ಪದಾಧಿಕಾರಿಗಳು, ಸದಸ್ಯರು ಹಾಗೂ ಗ್ರಾಮಸ್ಥರು ವಿದ್ಯಾರ್ಥಿಗಳ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಇಂದು ರಥೋತ್ಸವ

ಗುಳೇದಗುಡ್ಡ: ಪಟ್ಟಣದ ಶ್ರೀಕಾಡಸಿದ್ದೇಶ್ವರ ಮರಡಿ ಮಠದ 10ನೇ ಕಾಡಸಿದ್ದೇಶ್ವರರ ಪುಣ್ಯಸ್ಮರಣೋತ್ಸವ ಹಾಗೂ ರಥೋತ್ಸವ ಏ.16ರಂದು ನಡೆಯಲಿದೆ. ಅಂದು ಬೆಳಗ್ಗೆ 5.30ಕ್ಕೆ ಕತೃ ಕಾಡಸಿದ್ದೇಶ್ವರ ಗದ್ದುಗೆಗೆ ಮಾರುದ್ರಾಭಿಷೇಕ, ಬಳಿಕ ಅಯ್ಯಾಚಾರ ಹಾಗೂ ಶಿವದೀಕ್ಷೆ ನಡೆಯಲಿದೆ. ಇದೇ ಸಂದರ್ಭದಲ್ಲಿ ತಿಮ್ಮಸಾಗರ ಗ್ರಾಮದ ಪಿ.ಎಂ.ಬ್ಯಾಳಿ ಅವರು ರಚಿಸಿದ ಕಾಡಸಿದ್ದೇಶ್ವರ ಮಹಿಮೆ ನಾಟಕ ಪುಸ್ತಕ ಲೋಕಾರ್ಪಣೆಗೊಳ್ಳಲಿದೆ. ಶ್ರೀಮಠದ ಶ್ರೀ ಅಭಿನವ ಕಾಡಸಿದ್ದೇಶ್ವರ ಸ್ವಾಮೀಜಿಗಳ ನೇತೃತ್ವದಲ್ಲಿ ವಿವಿಧ ಮಠಾಧೀಶರ ಸಾನಿಧ್ಯದಲ್ಲಿ ಸಂಜೆ 6 ಗಂಟೆಗೆ ಕಾಡಸಿದ್ದೇಶ್ವರರ ರಥೋತ್ಸವ ನಡೆಯಲಿದೆ ಎಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.

ನಿಧನ ಸುದ್ದಿ

ಗುರುರಾಜ ಬಾಜಿ



ಮುಧೋಳ: ಬ್ರಾಹ್ಮಣ ಗಲ್ಲಿ ನಿವಾಸಿ ಹಿರಿಯರಾಗಿದ್ದ ಗುರುರಾಜ ಬಾಜಿ(79) ನಿಧನರಾಗಿದ್ದಾರೆ. ಮೃತರಿಗೆ ಪತ್ನಿ, ಓರ್ವ ಪುತ್ರ, ಶಿಕ್ಷಕ ಪ್ರವೀಣ ಬಾಜಿ ಮತ್ತು ಅಪಾರ ಬಳಗ ಇದ್ದಾರೆ. ಸಚಿವ ಆರ್.ಬಿ.ತಿಮ್ಮಾಪುರ, ಸಂಸದ ಗೋವಿಂದ ಕಾರಜೋಳ, ಮಾಜಿ ಸಚಿವ ಮುರುಗೇಶ ನಿರಾಣಿ, ಶಿಕ್ಷಣ ಪ್ರೇಮಿ ಎಸ್.ಎಸ್.ಮಲಘಾಣ ಹಾಗೂ ವಿಪ್ರ ಸಮಾಜ ಬಾಂಧವರು ಸಂತಾಪ ವ್ಯಕ್ತಪಡಿಸಿದ್ದಾರೆ.

ಗುರುಪಾದಪ್ಪ ರಾಚಪ್ಪ ಕುದರಿ



ಕೆರೂರ: ಪಟ್ಟಣದ ನೆಹರು ನಗರದ ನಿವಾಸಿ ದೇವಾಂಗ ಸಮಾಜದ ಹಿರಿಯರಾದ ಗುರುಪಾದಪ್ಪ ರಾಚಪ್ಪ ಕುದರಿ(82) ಬುಧವಾರ ನಿಧನರಾದರು. ಮೃತರಿಗೆ ನಾಲ್ವರು ಪುತ್ರರು, ಓರ್ವ ಪುತ್ರಿ ಇದ್ದಾರೆ.



ಬಾದಾಮಿ: ತಾಲೂಕಿನ ಸುಳ್ಳ ಗ್ರಾಮದಲ್ಲಿ ಸಂವಿಧಾನ ಶಿಲ್ಪಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತಿ ಆಚರಿಸಲಾಯಿತು. ರಾಜ್ಯ ಉಪಾಧ್ಯಕ್ಷ ತುಳಸಪ್ಪ ಪಾತ್ರೋಟಿ, ಡಿಎಸ್‌ಎಸ್ ಸಂಘದ ಅಧ್ಯಕ್ಷ ಶೇಕಪ್ಪ ಗಾಜಿ, ಗ್ರಾಪಂ ಮಾಜಿ ಸದಸ್ಯ ಸಾಬಣ್ಣ ವಡ್ಡರ, ಗ್ರಾಮದ ಹಿರಿಯರಾದ ಪುಂಡ್ಲಿಕಪ್ಪ ಜಲ್ಲಿ, ಎಗಪ್ಪ ಕೊಂಡದ, ದ್ಯಾಮಪ್ಪ ಗಾಜಿ, ದುರಗಪ್ಪ ಹಾವಳಿ, ಮಜುನಾಥ ಕೊಂಡದ, ಕರಿಯಪ್ಪ ಪೂಜಾರ ಉಪಸ್ಥಿತರಿದ್ದರು.

ಗವಿಮಠ ಪ್ರತಿಷ್ಠಾನದ ಕಾರ್ಯ ಶ್ಲಾಘನೀಯ

ಜಮಖಂಡಿ: ಎಲೆ ಮರೆ ಕಾಯಿಯಾಗಿ ಯಾವುದೇ ಫಲಾಪೇಕ್ಷೆ ಇಲ್ಲದೆ ಕೆಲಸ ಮಾಡುವ ಶಿಕ್ಷಕರನ್ನು ಹುಡುಕಿ ಸತತ 26 ವರ್ಷಗಳಿಂದ ಶಿಕ್ಷಕರಿಗೆ ಪ್ರಶಸ್ತಿ ನೀಡುತ್ತಿರುವ ಮಧುರಖಂಡಿ ಗವಿಮಠ ಪ್ರತಿಷ್ಠಾನದ ಕಾರ್ಯ ಶ್ಲಾಘನೀಯ ಎಂದು ವಿಜಯಪುರ ಜಿಲ್ಲಾ ಕಾರ್ಮಿಕ ಅಧಿಕಾರಿ ಉಮಾಶ್ರೀ ಕೋಳಿ ಹೇಳಿದರು. ಸಮೀಪದ ಮಧುರಖಂಡಿ ಗ್ರಾಮದಲ್ಲಿ ಗವಿಮಠ ಪ್ರತಿಷ್ಠಾನ, ಕನ್ನಡ ಸಾಹಿತ್ಯ ಪರಿಷತ್ ಸಹಯೋದಲ್ಲಿ ಲಿಂ.ಕೊಟ್ರಯ್ಯ ಗವಿಮಠ, ಲಿಂ.ಪಂಪಾವತಿ ಗವಿಮಠ ಅವರ ಹೆಸರಿನಲ್ಲಿ ದತ್ತಿನಿಧಿ ಉಪನ್ಯಾಸ, ಶಿಕ್ಷಕ-ಶಿಕ್ಷಕಿಯರಿಗೆ ಪ್ರಶಸ್ತಿ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾನೂ ಗವಿಮಠ ಪರಿವಾರದ ಶಿಕ್ಷಕರ ಮಾರ್ಗದರ್ಶನದಲ್ಲಿ ಬೆಳೆದಿದ್ದು, ಕೆಎಎಸ್ ಪರೀಕ್ಷೆ ಪಾಸಾಗಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಈ ಸಾಧನೆಗೆ ಶಿಕ್ಷಕರ ಪಾತ್ರ ಮಹತ್ವದ್ದು ಎಂದು ತಿಳಿಸಿದರು. ವಿಜಯಪುರದ ಸಾಹಿತಿ ಶಂಕರ ಬೈಚಬಾಳ, ಬಾಗಲಕೋಟೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶಿವಾನಂದ ಶೇಲ್ಲಿಕೇರಿ, ಗಿರಮಲ್ಲಯ್ಯ ಮಠಪತಿ ಮಾತನಾಡಿದರು. ಪಪೂ ಓಲೆಮಠದ ಆನಂದದೇವರು ಸಾನ್ನಿಧ್ಯ ವಹಿಸಿದ್ದರು. ಪ್ರಸಾದಯ್ಯಾ ಹಿರೇಮಠ, ಡಾ.ಸಿದ್ದು ದಿವಾನ, ಡಾ.ಟಿ.ಪಿ.ಗಿರಡ್ಡಿ, ಪ್ರೊ.ಬಿ.ಕಡ್ಡಿ, ವಂಕಟೇಶ ಇನಾಮದಾರ, ಪ್ರಭು ಮಾಲಗಿತ್ತಿಮಠ, ಜೆ.ಕೆ.ಹುಸೇನಭಾಯಿ, ತಾಲೂಕು ಕಸಾಪ ಅಧ್ಯಕ್ಷ ಸಂತೋಷ ತಳಕೇರಿ, ಗವಿಸಿದ್ದಯ್ಯ ಗವಿಮಠ, ಡಾ.ಮೃತ್ಯುಂಜಯ ಗವಿಮಠ, ಉಮೇಶ ಸಿದರಡ್ಡಿ, ಪ್ರಭು ಹಿಡಕಲ್, ಬಸಲಿಂಗಯ್ಯ ಹಿಡಕಲ್, ಐಶ್ವರ್ಯ, ಕಾವ್ಯ ಗವಿಮಠ, ಡಾ.ಬಸವರಾಜ ಗವಿಮಠ, ಡಾ.ಪ್ರಕಾಶ ಖಾಡೆ, ರಶ್ಮಿ ಗವಿಮಠ, ಡಾ.ಲಿಂಗಾನಂದ ಗವಿಮಠ ಇದ್ದರು.



ಜಮಖಂಡಿ: ಸಮೀಪದ ಮಧುರಖಂಡಿ ಗ್ರಾಮದಲ್ಲಿ ಗವಿಮಠ ಪ್ರತಿಷ್ಠಾನ, ಕನ್ನಡ ಸಾಹಿತ್ಯ ಪರಿಷತ್ ಸಹಯೋದಲ್ಲಿ ಲಿಂ.ಕೊಟ್ರಯ್ಯ ಗವಿಮಠ, ಲಿಂ.ಪಂಪಾವತಿ ಗವಿಮಠ ಅವರ ಹೆಸರಿನಲ್ಲಿ ದತ್ತಿನಿಧಿ ಉಪನ್ಯಾಸ, ಶಿಕ್ಷಕ-ಶಿಕ್ಷಕಿಯರಿಗೆ ಪ್ರಶಸ್ತಿ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು. ವಿಜಯಪುರ ಜಿಲ್ಲಾ ಕಾರ್ಮಿಕ ಅಧಿಕಾರಿ ಉಮಾಶ್ರೀ ಕೋಳಿ, ವಿಜಯಪುರದ ಸಾಹಿತಿ ಶಂಕರ ಬೈಚಬಾಳ, ಬಾಗಲಕೋಟೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶಿವಾನಂದ ಶೇಲ್ಲಿಕೇರಿ, ಗಿರಮಲ್ಲಯ್ಯ ಮಠಪತಿ ಇದ್ದರು.

ಯೂರಿಯಾ ಖರೀದಿಗೆ ಎಫ್‌ಐಡಿ ಕಡ್ಡಾಯ | ಡಿಸಿ ಸಂಗಪ್ಪ ಸೂಚನೆ

ಬೀಜ, ರಸಗೊಬ್ಬರ ಪೂರೈಕೆಗೆ ಕ್ರಮ

ಬಾಗಲಕೋಟೆ: ಪ್ರಸಕ್ತ ಮುಂಗಾರು ಹಂಗಾಮಿಗೆ ರೈತರಿಗೆ ಅಗತ್ಯವಾದ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳ ಸಮರ್ಪಕ ಪೂರೈಕೆಗೆ ಅಗತ್ಯ ಕ್ರಮಕೈಗೊಳ್ಳಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದರು.

ಜಿಲ್ಲಾಧಿಕಾರಿ ಸಭಾಂಗಣದಲ್ಲಿಂದು ಪ್ರಸಕ್ತ ಹಂಗಾಮಿಗೆ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಪೂರೈಕೆ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಪ್ರಸಕ್ತ ಸಾಲಿಗೆ ಜಿಲ್ಲೆಯಲ್ಲಿ 3.17 ಲಕ್ಷ ಹೆಕ್ಟೇರ್ ಕ್ಷೇತ್ರ ಬಿತ್ತನೆಗೆ ಗುರಿ ಹೊಂದಲಾಗಿದೆ. ರೈತರಿಗೆ ಯಾವುದೇ ಕೊರತೆ ಉಂಟಾಗದಂತೆ ಅಗತ್ಯ ಪ್ರಮಾಣದ ಬೀಜ ಮತ್ತು ಗೊಬ್ಬರಗಳನ್ನು ಸಂಗ್ರಹಿಸಲಾಗಿದ್ದು, ರಿಯಾಯಿತಿ ದರದಲ್ಲಿ ವಿತರಣೆಗೆ ಕ್ರಮಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಜಿಲ್ಲೆಯ ಸಹಕಾರಿ ಸಂಘಗಳು, ಕೃಷಿ ಇಲಾಖೆ ಕೇಂದ್ರಗಳು ಹಾಗೂ ಖಾಸಗಿ ಮಾರಾಟ ಮಳಿಗೆಗಳ ಮೂಲಕ ಪ್ರಮಾಣಿತ ಹಾಗೂ ಉತ್ತಮ ಗುಣಮಟ್ಟದ ಬೀಜಗಳನ್ನು ರೈತರಿಗೆ ಲಭ್ಯವಾಗುವಂತೆ ಕ್ರಮಕೈಗೊಳ್ಳಲಾಗಿದೆ. ಏಕದಳ, ದ್ವಿದಳ, ಆಹಾರ ಧಾನ್ಯ, ಎಣ್ಣೆ ಕಾಳು ಬೆಳೆಗಳು ಸೇರಿದಂತೆ ಪ್ರಮುಖ ಬೆಳೆಗಳ ಬೀಜಗಳು ಸಮರ್ಪಕವಾಗಿ ಲಭ್ಯವಿವೆ ಎಂದು ತಿಳಿಸಿದರು.

ರಸಗೊಬ್ಬರಗಳ ಪೂರೈಕೆಯಲ್ಲಿಯೂ ಯಾವುದೇ ಕೊರತೆ ಇಲ್ಲದಂತೆ ಯೂರಿಯಾ, ಡಿಎಪಿ, ಎನ್‌ಪಿಕೆ ಸೇರಿದಂತೆ ಅಗತ್ಯ ಗೊಬ್ಬರಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹಿಸಲಾಗಿದ್ದು, ಬೇಡಿಕೆಗೆ ಅನುಗುಣವಾಗಿ ಸರಬರಾಜು ಮಾತನಾಡಲಾಗುತ್ತದೆ. ಜಿಲ್ಲೆಯಲ್ಲಿ ಈಗಾಗಲೇ ಯೂರಿಯಾ 13456 ಮೆ.ಟನ್, ಡಿಎಪಿ 5954 ಮೆ.ಟನ್, ಕಾಂಪ್ಲೆಕ್ಸ್ 14202 ಮೆ.ಟನ್, ಎಂ.ಓ.ಪಿ 3183 ಮೆ.ಟನ್, ಎಸ್.ಎಸ್.ಪಿ 1747 ಮೆ.ಟನ್ ಸೇರಿ ಒಟ್ಟು 38742 ಮೆ.ಟನ್ ದಾಸ್ತಾನು ಲಭ್ಯವಿರುವುದಾಗಿ ತಿಳಿಸಿದರು.

ಜಿಪಂ ಸಿಇಒ ಶಶಿಧರ ಕುರೇರ ಮಾತನಾಡಿ, ಕೃಷಿ ಇಲಾಖೆಯ ಅಧಿಕಾರಿಗಳು ಗ್ರಾಮ ಮಟ್ಟದಲ್ಲಿ ಭೇಟಿ ನೀಡಿ ರೈತರಿಗೆ ತಾಂತ್ರಿಕ ಮಾರ್ಗದರ್ಶನ ನೀಡಬೇಕು. ಸಮತೋಲನ ಗೊಬ್ಬರ ಬಳಕೆ ಹಾಗೂ ಶಿಫಾರಸ್ಸು ಮಾಡಿದ ಬೀಜ ಬಳಕೆ ಕುರಿತು ಜಾಗೃತಿ ಮೂಡಿಸುವ ಕೆಲಸವಾಗಬೇಕು. ರೈತರು ಅನಾವಶ್ಯಕವಾಗಿ ಗೊಬ್ಬರ ಸಂಗ್ರಹಿಸದೇ ಅಗತ್ಯವಿರುವಷ್ಟು ಮಾತ್ರ ಪಡೆಯಬೇಕು. ಕಳೆದ ಸಾಲಿನಲ್ಲಿ ರೈತರು ವಿವಿಧ ಬೆಳೆಗಳಿಗೆ ವಿಮೆ ಒಳಪಡಿಸಿದ ಹಾಗೂ ಆ ಪೈಕಿ ಪರಿಹಾರ ವಿತರಣೆ ಮಾಡಲಾದ ಮಾಹಿತಿಯನ್ನು ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಕೃಷಿ ಜಂಟಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ, ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ರವೀಂದ್ರ ಹಕಾಟಿ ಸೇರಿದಂತೆ ತಾಲೂಕಾ ಮಟ್ಟದ ಅಧಿಕಾರಿಗಳು ಹಾಗೂ ಜಿಲ್ಲೆಯ ವಿವಿಧ ಬೀಜ, ರಸಗೊಬ್ಬರ ಮಾರಾಟಗಾರರ ಪ್ರತಿನಿಧಿಗಳು ಉಪಸ್ಥಿತರಿದ್ದರು.



ಖರೀದಿಗೆ ಎಫ್‌ಐಡಿ ಕಡ್ಡಾಯ

ರೈತರಿಗೆ ಯೂರಿಯಾ ರಸಗೊಬ್ಬರವನ್ನು ಕೆ.ಕಿಸಾನ್ ತಂತ್ರಾಂಶದ ಮೂಲಕವೇ ವಿತರಣೆ ಮಾಡಲಾಗುತ್ತಿದ್ದು, ಯೂರಿಯಾ ಖರೀದಿಗೆ ಎಫ್‌ಐಡಿ ಕಡ್ಡಾಯವಾಗಿದೆ. ರೈತರ ಹೆಸರಿನಲ್ಲಿ ರಸಗೊಬ್ಬರ ಖರೀದಿಸಿ, ಕಾಳಸಂತೆಯಲ್ಲಿ ಹೆಚ್ಚಿನ ದರದಲ್ಲಿ ಮಾರಾಟ ಮಾಡುವುದನ್ನು ನಿಯಂತ್ರಿಸಲು ಮತ್ತು ರೈತರು ಸಹ ಮಿತವಾಗಿ ರಸಗೊಬ್ಬರ ಬಳಕೆ ಮಾಡುವಂತಾಗಬೇಕು ಎನ್ನುವ ಕಾರಣಕ್ಕಾಗಿ ಕೆ.ಕಿಸಾನ್ ತಂತ್ರಾಂಶದ ಮೂಲಕ ರಸಗೊಬ್ಬರ ವಿತರಣೆ ಮಾಡಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದ್ದಾರೆ.

ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ

ಬಾಗಲಕೋಟೆ: ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯ ವಸತಿ ಕಾಲೇಜು ವಿದ್ಯಾರ್ಥಿಗಳನ್ನು ಜಿಲ್ಲಾಧಿಕಾರಿ ಸಂಗಪ್ಪ ಹಾಗೂ ಜಿಪಂ ಸಿಇಒ ಶಶಿಧರ ಕುರೇರ ಸನ್ಮಾನಿಸಿದರು.

ವಿಜ್ಞಾನ ವಿಭಾಗದಲ್ಲಿ ಬಾಗಲಕೋಟೆ ತಾಲೂಕಿನಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಾದ (ಬಾಲಕರ ವಿಭಾಗದಲ್ಲಿ) ಭೀಮಪ್ಪ ಬಿರ್ಲಿ 600ಕ್ಕೆ 590 ಅಂಕ (ಶೇ.98.33) ಪಡೆದರೆ, ಹರೀಶ ಬಾಲರಡ್ಡಿ 600ಕ್ಕೆ 583 ಅಂಕ (ಶೇ.97.17), ಸಂಗಮೇಶ ಪಟ್ಟಣದ 600ಕ್ಕೆ 580 ಅಂಕ (ಶೇ.96.67) ಪಡೆದುಕೊಂಡಿದ್ದಾರೆ. ಕಲಾ ವಿಭಾಗದಲ್ಲಿ ದೇವಮ್ಮ ಯಡಹಳ್ಳಿ 600ಕ್ಕೆ 594 ಅಂಕ (ಶೇ.99), ಶ್ವೇತಾ ಹೊರಕೇರಿ 600ಕ್ಕೆ 579 ಅಂಕ (ಶೇ.96.50), ವಾಣಿಜ್ಯ ವಿಭಾಗದಲ್ಲಿ ಸಂಗೀತಾ ಗಾಡದಾರ 600ಕ್ಕೆ 593 ಅಂಕ (ಶೇ.98.83), ಲಕ್ಷ್ಮೀ ಭೂಮಾರ 600ಕ್ಕೆ 587 ಅಂಕ (ಶೇ.97.83), ತೇಜಶ್ವಿನಿ ದೊರೆಗೊಳ 600ಕ್ಕೆ 577 ಅಂಕ (ಶೇ.96.17) ಅಂಕ ಪಡೆದುಕೊಂಡವರನ್ನು ಸನ್ಮಾನಿಸಲಾಯಿತು.

ವಿದ್ಯಾರ್ಥಿಗಳು ಸಾಧಿಸಿರುವ ಉತ್ತಮ ಫಲಿತಾಂಶ ಜಿಲ್ಲೆಗೆ ಹೆಮ್ಮೆಯ ವಿಷಯವಾಗಿದೆ. ಕಠಿಣ ಪರಿಶ್ರಮ ಹಾಗೂ ಶಿಸ್ತುಬದ್ಧ ಅಧ್ಯಯನದಿಂದ ಈ ಸಾಧನೆ ಸಾಧ್ಯವಾಗಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದರು.

ಜಿಪಂ ಸಿಇಒ ಶಶಿಧರ ಕುರೇರ ಮಾತನಾಡಿ, ವಿದ್ಯಾರ್ಥಿಗಳು ಶಿಕ್ಷಣದ ಮೂಲಕ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು. ಸರ್ಕಾರ ನೀಡುತ್ತಿರುವ ಸೌಲಭ್ಯಗಳ ಸದುಪಯೋಗ ಪಡಿಸಿಕೊಂಡು ಇನ್ನಷ್ಟು ಉತ್ತಮ ಸಾಧನೆ ಮಾಡುವಂತೆ ಪ್ರೋತ್ಸಾಹಿಸಿದರು.

ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪಂಕಜ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಣುಕಾ ಎಂ, ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.



ಏ.18ರಂದು ಸ್ನೇಹ ಸಮ್ಮಿಲನ

ಬಾದಾಮಿ: ಇಲ್ಲಿನ ವೀರಪುಲಕೇಶಿ ಪ್ರೌಢಶಾಲೆ 1979ನೇ ಸಾಲಿನಲ್ಲಿ 10ನೇ ತರಗತಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಂದ ಏ.18ರಂದು ಶನಿವಾರ ಪಟ್ಟಣದ ಆನಂದನಗರದ ಗಣೇಶ ದೇವಸ್ಥಾನದಲ್ಲಿ ಗುರುವಂದನೆ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮವನ್ನು ಬೆಳಗ್ಗೆ 10 ಗಂಟೆಗೆ ಆಯೋಜಿಸಲಾಗಿದೆ. ಬಿ.ಎಲ್.ಪಾಟೀಲ, ಎಸ್.ಎಲ್.ಹುಲ್ಲಮ್ಮನವರ ಮತ್ತು ಗುರುಮಾತೆಯಾದ ಸರೋಜಾ ಪಿ.ಗುಬ್ಬಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ನಿವೃತ್ತ ಪ್ರಾಚಾರ್ಯ ಎ.ಎಸ್ ವಸ್ತ್ರದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಸ್ನೇಹ ಬಳಗದ ಗೌರವಾಧ್ಯಕ್ಷ ಚಂದ್ರಶೇಖರ ಮಿಟ್ಟಲಕೋಡ ಹಾಗೂ ಗೌರವ ಕಾರ್ಯದರ್ಶಿ ಎಸ್.ಡಿ.ಮುತಾಲಿಕ ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಯು ಫಲಿತಾಂಶ: ವಿದ್ಯಾರ್ಥಿಗಳ ಉತ್ತಮ ಸಾಧನೆ



ಬಾದಾಮಿ: ತಾಲೂಕಿನ ಚೊಳಚಗುಡ್ಡ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು 2025-2026ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಸಹನಾ ಛಲವಾದಿ (92%) ಪ್ರಥಮ, ತನು ಮರಡಿತೋಟ (90%) ದ್ವಿತೀಯ, ಮತ್ತು ಸವಿತಾ ಹುರಕಡ್ಲಿ (84%) ಅಂಕ ಗಳಿಸಿ ತೃತೀಯ ಸ್ಥಾನ ಪಡೆದಿದ್ದಾರೆ.

ಕಲಾ ವಿಭಾಗದಲ್ಲಿ ಸಂಜಯ ಮುದಗಲ್ಲ (88%)ಅಂಕ ಗಳಿಸಿ ಕಾಲೇಜ್‌ಗೆ ಪ್ರಥಮ, ವಿಜಯಮಹಾಂತೇಶ ಹಡಪದ (87.66%) ಅಂಕ ಗಳಿಸಿ ಕಾಲೇಜ್‌ಗೆ ದ್ವಿತೀಯ, ಯಲ್ಲಮ್ಮ ಯಾಕನಾಳ (87%) ಅಂಕ ಗಳಿಸಿ ಕಾಲೇಜ್‌ಗೆ ತೃತೀಯ ಸ್ಥಾನ ಪಡೆದಿದ್ದಾರೆ.

ಕಾಲೇಜಿನ ಫಲಿತಾಂಶ 64.28%ರಷ್ಟು ಆಗಿದ್ದು, ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಪ್ರಾಚಾರ್ಯರು, ಉಪನ್ಯಾಸಕರು, ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಅಭಿನಂದಿಸಿದ್ದಾರೆ.

ಡಾ.ಬಾಬು ಜಗಜೀವನರಾಂ, ಡಾ.ಅಂಬೇಡ್ಕರ್ ಜಯಂತಿ ನಾಳೆ



ಬೀಳಗಿ: ತಾಲೂಕಿನ ಅನಗವಾಡಿ ಗ್ರಾಮದಲ್ಲಿ ಏ.17ರಂದು ಶುಕ್ರವಾರ ಸಂಜೆ 5 ಗಂಟೆಗೆ ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನರಾಂರವರ 119ನೇ ಮತ್ತು ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್‌ರವರ 135ನೇ ಜಯಂತ್ಯೋತ್ಸವ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ಎಂದು ಮಾದಿಗ ಮೀಸಲಾತಿ ಹೋರಾಟ ಸಮಿತಿ ರಾಜ್ಯ ಕಾರ್ಯದರ್ಶಿ ಸೋಮು ಚೂರಿ ತಿಳಿಸಿದರು.

ಪತ್ರಿಕೆಯೊಂದಿಗೆ ಮಾತನಾಡಿ, ಚಿತ್ರದುರ್ಗದ ಪೀಠಾಧ್ಯಕ್ಷ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳು, ಪೂರ್ಣಾನಂದ ಆಶ್ರಮದ ಮಾತೋಶ್ರೀ ಅನಸೂಯಾ ತಾಯಿ ಸಾನ್ನಿಧ್ಯ ವಹಿಸುವರು. ಉದ್ಯಮಿ ಪ್ರವೀಣ ಪಾಟೀಲ ಉದ್ಘಾಟಿಸುವರು. ಕರ್ನಾಟಕ ಗ್ರಾಮೀಣ ಬ್ಯಾಂಕ ವ್ಯವಸ್ಥಾಪಕ ಸಂಜು ಎಂ ಅನಗವಾಡಿ ಅಧ್ಯಕ್ಷತೆ ವಹಿಸುವರು. ಮಾದಿಗ ಮೀಸಲಾತಿ ಹೋರಾಟ ಸಮಿತಿ (ಸಂಸ್ಥಾಪಕ) ರಾಜ್ಯಾಧ್ಯಕ್ಷ ಶಿವರಾಯ ಅಕ್ಕರಕಿ ದೇವದುರ್ಗ ಉಪನ್ಯಾಸ ನೀಡುವರು. ಮಹನಿಯರ ಭಾವಚಿತ್ರಕ್ಕೆ ಡಾ.ರಮೇಶ ಅಕ್ಕಿಮರಡಿ ಪುಷ್ಪಾರ್ಚನೆ ಮಾಡುವರು.

ಮುಖ್ಯ ಅತಿಥಿಯಾಗಿ ಫಕೀರಯ್ಯ ಮಠಪತಿ, ತಾಪಂ ಮಾಜಿ ಸದಸ್ಯ ಮಿಥುನ ನಾಯಕ, ನಿವೃತ್ತ ತಹಶೀಲ್ದಾರ ಮೆಹಬೂಬ್ ಜಮಖಂಡಿ, ಹಾಲು ಉತ್ಪಾದಕ ಸಹಕಾರಿ ಸಂಘದ ಅಧ್ಯಕ್ಷ ಮಲ್ಲಪ್ಪಗೌಡ ಮೇಟಿ, ಬೆಳಗಾವಿ ವಿಭಾಗದ ಟೆಲಿಕಾಂ ಸಲಹಾ ಸಮಿತಿ ಸದಸ್ಯ ಮುತ್ತಣ್ಣ ಅಂಗಡಿ, ಮಾದಿಗ ಮಹಾಸಭಾ ರಾಜ್ಯಾಧ್ಯಕ್ಷ ಮುತ್ತಣ್ಣ ಬೆಣ್ಣೂರ, ರಾಜ್ಯ ಮಾದಿಗ ಮುಖಂಡ ವೈ.ವೈ.ತಿಮ್ಮಾಪುರ, ಮಾದಿಗ ದಂಡೋರ ಜಿಲ್ಲಾಧ್ಯಕ್ಷ ಕೃಷ್ಣಾ ಮಾದರ, ಡ್ರಿವೆಇರ್ ಹೊಟೇಲ್ ಮಾಲಿಕ ಪೀರಪ್ಪ ಮ್ಯಾಗೇರಿ, ಬೆಳಗಾವಿ ವಿಭಾಗಿ ಡಿಎಸ್‌ಎಸ್ ರಾಜ್ಯ ಸಂಚಾಲಕ ಮಹೇಶ ಹುಗ್ಗಿ, ಮಾದಿಗ ಮಹಾಸಭಾ ಜಿಲ್ಲಾಧ್ಯಕ್ಷ ಶಿವಾನಂದ ಬಿಸನಾಳ, ಬೀಳಗಿ ಪಪಂ ಮಾಜಿ ಸದಸ್ಯ ಸಿದ್ದು ಮಾದರ, ಶಿವಾನಂದ ಬೀಳಗಿ ಭಾಗವಹಿಸಲಿದ್ದಾರೆಂದು ತಿಳಿಸಿದರು. ರಾತ್ರಿ 9ಗಂಟೆಗೆ ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲೂಕಿನ ಅರಳದಿನ್ನಿ ಗ್ರಾಮದ ಶಿವು ಅರಳದಿನ್ನಿ ಅವರ ನೇತೃತ್ವದಲ್ಲಿ ಸೂಪರ್ ಸ್ಟಾರ್ ಮೆಲೋಡಿಸ್ ಕಲಾ ತಂಡದಿಂದ ರಸಮಂಜರಿ ಕಾರ್ಯಕ್ರಮ ಜರಗುವುದು.



ಬಾದಾಮಿ: ಸಂವಿಧಾನ ಶಿಲ್ಪಿ, ಮಹಾಮಾನವತಾವಾದಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆಯನ್ನು ಸ್ಥಳೀಯ ಶಿವಶರಣ ಹರಳಯ್ಯ ಸಮಗಾರ ಸಮಾಜ ಅಧ್ಯಕ್ಷ ನಾಗರಾಜ ಹ ಹೊಸಮನಿ ಅಧ್ಯಕ್ಷತೆಯಲ್ಲಿ, ಸಮಾಜ ಬಾಂಧವರೊಂದಿಗೆ ಆಚರಿಸಲಾಯಿತು.

ಸಾವಯವ ಕೃಷಿ ಪರಂಪರೆಗೆ ಗೋವುಗಳ ಸಂರಕ್ಷಣೆ ಅಗತ್ಯ: ಗಾಳಿ

ಬಾಗಲಕೋಟೆ: ದೇಶಿಯ ಕೃಷಿ ಪರಂಪರೆ, ಸಂಸ್ಕೃತಿಯಲ್ಲಿ ಹಸುಗಳನ್ನು ಸಾಕುವುದು, ಪೋಷಿಸುವುದು ಅಗತ್ಯವಾಗಿದ್ದು, ಸಾವಯವ ಕೃಷಿ ಪರಂಪರೆಯ ಸಂಸ್ಕೃತಿಯಲ್ಲಿ ಗೋ ಸಂರಕ್ಷಣೆ ಮಾಡುವುದು ಅಗತ್ಯವಾಗಿದೆ ಎಂದು ಪ್ರಾಂಶುಪಾಲ ಡಾ.ಅರುಣಕುಮಾರ ಗಾಳಿ ಹೇಳಿದರು.

ತಾಲೂಕಿನ ಮುಚಖಂಡಿ ಗ್ರಾಮದಲ್ಲಿ ನಡೆದ ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದ 2025-26ರ ವಾರ್ಷಿಕ ವಿಶೇಷ ಶಿಬಿರದ ಮೂರನೇ ದಿನದ ಶ್ರಮದಾನದಲ್ಲಿ ಪಾಂಜರ ಪೋಳೆಯ ಗೋಶಾಲೆಯ ಪರಿಸರದ ಸ್ವಚ್ಛತೆ ಹಾಗೂ ಹಸುಗಳ ಪೋಷಣೆ ಕುರಿತು ಪ್ರಾಯೋಗಿಕ ಕಾರ್ಯದಲ್ಲಿ ಪಾಲ್ಗೊಂಡು, ಮಾತನಾಡಿದರು. ನಮ್ಮ ಕೃಷಿಮೂಲ ಪರಂಪರೆಗೆ ಆಧಾರವಾಗಿದ್ದ ಗೋವುಗಳ ಸೆಗಣಿ, ಗೋಮೂತ್ರ, ನೈಸರ್ಗಿಕ ಗೊಬ್ಬರ ಸಾವಯವ ಕೃಷಿಗೆ ಮುಖ್ಯವಾಗಿವೆ. ನಮ್ಮ ದೇಶಿಯ ಆಹಾರ ಪದ್ಧತಿಯಲ್ಲಿ ಹಸುಗಳ ಹಾಲು, ಮೊಸರು, ತುಪ್ಪ ಆರೋಗ್ಯ ವೃದ್ಧಿಯ ಜೊತೆಗೂ ಆರ್ಥಿಕ ಬಲವರ್ಧನೆ ಕಾರಣವಾಗಿವೆ ಎಂದು ಹೇಳಿದರು. ಕೃಷಿಕ ನೀಲಪ್ಪ ಕುರಿ ಮಾತನಾಡಿ, ನಮ್ಮ ಗ್ರಾಮೀಣ ಕುಟುಂಬಗಳಿಗೆ ಹೈನುಗಾರಿಕೆ ಜೀವನೋಪಾಯದ ಪದ್ಧತಿಯಾಗಿ ರೂಢಿಯಲ್ಲಿದೆ. ಹಸುಗಳ ಹಾಲಿನ ಉತ್ಪನ್ನಗಳಿಗೆ ಇಂದಿನ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಾಗಿದ್ದು ಹಾಗೂ ಹಸುಗಳ ಸೆಗಣಿಯಿಂದ ಬಯೋಗ್ಯಾಸ್, ಗೋಬರ್ ಗ್ಯಾಸ್ ಉತ್ಪಾದಿಸಿ, ಅಡುಗೆ ಅನಿಲ, ವಿದ್ಯುತ್ ಸಹ ನಾವು ಪಡೆಯಬಹುದು. ಇಂದಿನ ಕೃಷಿ ಸಮಾಜದಲ್ಲಿ ರೈತರಾಗಲು ಬಯಸುವವರು ವೈಜ್ಞಾನಿಕ ಹೈನುಗಾರಿಕೆ ಕಲಿತು ಸ್ವಾವಲಂಬಿಗಳಾಗಿ ಬದುಕು ರೂಪಿಸಿಕೊಳ್ಳಲು ಸಾಧ್ಯವಿದೆ ಎಂದರು.

ಶ್ರಮದಾನದಲ್ಲಿ ಎನ್‌ಎಸ್‌ಎಸ್ ಘಟಕದ ಕಾರ್ಯಕ್ರಮಾಧಿಕಾರಿ ಪ್ರೊ.ಸಂಪತ್ತ ಲಮಾಣಿ, ಐಕ್ಯೂಎಸಿ ಸಂಚಾಲಕ ಡಾ.ಬಸವರಾಜ ಬೀಳಗಿ, ಡಾ.ಚಂದ್ರಶೇಖರ ಕಾಳನ್ನವರ, ಶಿವಶಂಕರ ಪ್ರಸಾದ, ಪ್ರೇಮಾ ಗೆಜ್ಜಿ ಗೋಶಾಲೆಯ ಗೋವುಗಳನ್ನು ಮೈತೊಳೆಯುವ ಕಾರ್ಯದಲ್ಲಿ ಪಾಲ್ಗೊಂಡಿದ್ದರು.



ರಾಜಕೀಯವಾಗಿ ಮಹಿಳೆಯರಿಗೆ ಶಕ್ತಿ ತುಂಬಲಿರುವ ಮೀಸಲಾತಿ

ಬಾಗಲಕೋಟೆ: ದೇಶದ ಮಹಿಳೆಯರ ಪರವಾಗಿ ಪ್ರಧಾನಿ ನರೇಂದ್ರ ಮೋದಿಯವರು ನಾರೀ ಶಕ್ತಿ ವಂದನ ಅಧಿನಿಯಮ ಜಾರಿಗೆ ತರುತ್ತಿರುವುದು ಸ್ವಾಗತಾರ್ಹ ಹಾಗೂ ಮಹಿಳೆಯರಿಗೆ ಶಕ್ತಿ ತುಂಬುವ ಕೆಲಸವನ್ನು ಪ್ರಧಾನಿಯವರು ಮಾಡುತ್ತಿದ್ದಾರೆ. ಈ ಕಾಯ್ದೆಯನ್ನು ದೇಶದ ಮಹಿಳೆಯರು ಬೆಂಬಲಿಸಬೇಕು ಎಂದು ಮಹಿಳಾ ಮೋರ್ಚಾ ರಾಜ್ಯ ಉಪಾಧ್ಯಕ್ಷೆ ಡಾ.ವಿಜಯಲಕ್ಷ್ಮೀ ತುಂಗಳ ಹೇಳಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.16 ಮತ್ತು 17ರಂದು ನಾರಿ ಶಕ್ತಿ ವಂದನ್ ಅಧಿನಿಯಮ ಕುರಿತು ಲೋಕಸಭೆಯಲ್ಲಿ ಚರ್ಚೆಯಾಗಿ ಮಸೂದೆಯು ಜಾರಿಯಾಗಲಿದೆ. ದೇಶದ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ರಾಜಕೀಯ ಕ್ಷೇತ್ರದಲ್ಲಿ ಸಿಗಲಿದೆ ಎಂದು ಹೇಳಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದ ಬಳಿಕ ಇದುವರೆಗೂ ಮಹಿಳಾ ಮೀಸಲಾತಿಯನ್ನು ಜಾರಿ ಮಾಡಿಲ್ಲ. ಹಿಂದೆ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಮೀಸಲಾತಿ ಕುರಿತು ಕಾಯ್ದೆ ಚರ್ಚೆಗೆ ಬಂದಾಗ ಕಾಗದಗಳನ್ನು ವಿರೋಧ ಪಕ್ಷದವರು ಹರಿದು ಹಾಕಿದ್ದ ಉದಾಹರಣೆ ಇದೆ. ಕಾಯ್ದೆಗಳನ್ನು ಮಾಡುವ ಮೂಲಕ ನಿರ್ಣಾಯಕ ಸ್ಥಳದಲ್ಲಿ ಈಗ ಮಹಿಳೆಯರು ಸ್ಥಾನವನ್ನು ಅಲಂಕರಿಸಲು ಪ್ರಧಾನಿ ಮೋದಿಯವರು ಅವಕಾಶ ಮಾಡಿಕೊಡುವ ಮೂಲಕ ಎಸ್ಸಿ,ಎಸ್ಟಿ ಮತ್ತು ಇನ್ನೂಳಿದ ಒಳಪಂಗಡಗಳಿಗೆ ಅನುಕೂಲವಾಗುವಂತೆ ಶೇ.33ರಷ್ಟು ಮೀಸಲಾತಿಗೆ ಅಂಗೀಕಾರ ದೊರೆಯಲಿದ್ದು ಇದರಿಂದ ಮಹಿಳೆಯರು ಹರ್ಷವಾಗಲಿದ್ದಾರೆ ಎಂದು ಹೇಳಿದರು.

ಮಹಿಳಾ ಸಶಕ್ತೀಕರಣಕ್ಕೆ ಮೋದಿಯವರು ಕೆಲಸ ಮಾಡುತ್ತಿದ್ದು ಮಹಿಳೆಯರಿಗಾಗಿಯೇ ಕೇಂದ್ರ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೆ ತಂದ ಪರಿಣಾಮ ಇವತ್ತು ಹೆಣ್ಣು ಭ್ರೂಣ ಹತ್ಯೆ, ತಾಯಂದಿರ ಮರಣ ಪ್ರಮಾಣ ಕಡಿಮೆಯಾಗಿವೆ. ಮಹಿಳೆಯರಿಗೆ ಅಧಿಕಾರ ನೀಡಿದರೆ ಶೈಕ್ಷಣಿಕ, ಆರೋಗ್ಯ, ನೈರ್ಮಲ್ಯದ ಪರ ಯೋಜನೆಗಳು ಅನುಷ್ಠಾನವಾಗಲಿವೆ ಎಂದರು.

ಚಂದ್ರಯಾನ ಯಶಸ್ವಿಯಾಗುವ ಸಂದರ್ಭದಲ್ಲಿ ಶೇ.60ರಷ್ಟು ಮಹಿಳೆಯರು ಕೆಲಸ ಮಾಡಿದ್ದಾರೆ. ಸೈನಿಕರಾಗಿಯೂ ಕೂಡ ಮಹಿಳೆಯರು ಮುಂದೆ ಇದ್ದಾರೆ. ಎಲ್ಲಾ ರಂಗದಲ್ಲಿ ಮಹಿಳೆಯರು ಮುಂದೆ ಇರುವ ದೇಶದಲ್ಲಿ ಈಗ ಮೀಸಲಾತಿಯನ್ನು ರಾಜಕೀಯವಾಗಿ ಕಲ್ಪಿಸಿಕೊಡುವ ಮೂಲಕ ಮಹಿಳೆಯರಿಗೆ ರಾಜಕೀಯ ಬಲವನ್ನು ಕೂಡ ಕೇಂದ್ರ ಸರ್ಕಾರ ನೀಡುತ್ತಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿಯವರು ದೇಶದ ಎಲ್ಲ ಮಹಿಳೆಯರಿಗೆ ರಾಜಕೀಯವಾಗಿ ಶಕ್ತಿ ತುಂಬಲು ಶೇ.33ರಷ್ಟು ಮೀಸಲಾತಿ ಜಾರಿಗೆ ತರುತ್ತಿದ್ದು 96671713333 ಗೆ ಮಿಸ್ ಕಾಲ ಕೊಟ್ಟು ಕಾಯ್ದೆಯನ್ನು ಬೆಂಬಲಿಸಬೇಕು ಎಂದರು. ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಡಾ.ಸುಮೇದಾ ಮಾನೆ ಮಾತನಾಡಿ, ದೇಶದಲ್ಲಿ ಪ್ರಧಾನಿ ಮೋದಿಯವರು ಮಹಿಳಾ ಮೀಸಲಾತಿಯನ್ನು ಜಾರಿಗೆ ತರುತ್ತಿದ್ದು ಈ ಹಿನ್ನಲೆಯಲ್ಲಿ ಏ.18ರಂದು ಬಾಗಲಕೋಟೆ ಜಿಲ್ಲೆಯ ಪ್ರತಿ ಮಂಡಲದಲ್ಲಿ ಮಹಿಳೆಯರಿಂದ ಸ್ಕೂಟಿ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ. 19ರಂದು ಇಳಕಲ್‌ದಲ್ಲಿ ಮಹಿಳಾ ಸಮಾವೇಶ, ಸಹಿ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ, ಜಿಲ್ಲಾ ವಕ್ತಾರ ಸತ್ಯನಾರಾಯಣ ಹೇಮಾದ್ರಿ, ಮಂಡಲ ಅಧ್ಯಕ್ಷೆ ಶಶಿಕಲಾ ಮಜ್ಜಗಿ, ಸುಜಾತಾ ಸಿಂಧೆ, ವೈಷ್ಣವಿ ಇದ್ದರು.



ಡಾ.ಅಂಬೇಡ್ಕರ್ ಜಯಂತಿ ಆಚರಣೆ

ಬಾದಾಮಿ: ತಾಲೂಕಿನ ಚೊಳಚಗುಡ್ಡ ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಡಾ.ಅಂಬೇಡ್ಕರ್ ಅವರ ಭಾವಚಿತ್ರವನ್ನು ಗ್ರಾಮದ ಪ್ರಮುಖ ರಸ್ತೆಯಲ್ಲಿ ಮೆರವಣಿಗೆ ಮಾಡಲಾಯಿತು. ನಂತರ ನಡೆದ ಕಾರ್ಯಕ್ರಮದಲ್ಲಿ ರೈತರಿಗೆ ಸನ್ಮಾನ ಮಾಡುವ ಮೂಲಕ ಆಚರಣೆ ಮಾಡಲಾಯಿತು.

ಅಮರಪ್ಪ ಬಿ. ಹೊಸಮನಿ,ಮ ಪರಶುರಾಮ ಎಲ್.ದೊಡ್ಡಮನಿ, ಶಂಕ್ರಪ್ಪ ನಿಂ. ದೊಡ್ಡಮನಿ, ಮನೋಜ ಪತ್ತಾರ ಶೇಖರಪ್ಪ ಭೀ.ಗಡಗಿ, ವೀರಣ್ಣ ಯು. ಗಡಗಿ, ಮಲ್ಲಪ್ಪ ಪ. ಮೇಟಿ, ತೀರ್ಥಪ್ಪ ಪೀ.ದೊಡ್ಡಮನಿ, ಡಿ.ಕೆ.ಬಿಮಣಿ, ಬರಮು ಪೂಜಾರ, ಮಾಗುಂಡಪ್ಪ ಗಡಗಿ, ನಾಗೇಶ ಶಂ.ದೊಡ್ಡಮನಿ, ಆನಂದ ಎಲ್. ದೊಡ್ಡಮನಿ, ಲೋಕಪ್ಪ ಜಲವಾದಿ, ರಂಗನಾಥ ಜಿ. ದೊಡ್ಡಮನಿ (ಅಧ್ಯಕ್ಷರು ಅಂಬೇಡ್ಕರ್ ಯುವಕ ಮಂಡಳ ಚೋಳಚಗುಡ್ಡ), ಅಶೋಕ ಡವಣಿ, ಬಸವರಾಜ ಕೃ. ಜಲವಾದಿ, ವಿಷ್ಣುವರ್ಧನ ಸ.ಗಡಗಿ, ಕಿರಣ ಕುಲಕರ್ಣಿ, ವೀರೇಶ ಭದ್ರಗೌಡರ, ಶರಣಪ್ಪ ಹೂಗಾರ, ರಯೀಸ್ ಪಟೇಲ್, ಗುರುನಾಥ ಪೂಜಾರಿ, ಲೋಕಪ್ಪ ಚಲವಾದಿ, ನಾಗರಾಜ ಚಲವಾದಿ, ಗುರುನಾಥ ಪೂಜಾರಿ, ಪ್ರವೀಣ ಚಲವಾದಿ, ಪ್ರಕಾಶ ಹೊಸಮನಿ, ಅಶೋಕ ದಮಣಿ ಸೇರಿದಂತೆ ಇತರರು ಇದ್ದರು.



ದೇವಾಂಗ ಜ್ಯೋತಿ ರಥಕ್ಕೆ ಸ್ವಾಗತ

ಕೆರೂರ: ಅಖಿಲ ಭಾರತ ದೇವಾಂಗ ಜಗದ್ಗುರು ದಯಾನಂದಪುರಿ ಸ್ವಾಮಿಗಳ 36ನೇ ಪಟ್ಟಾಭಿಷೇಕ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ದೇವಾಂಗ ಜ್ಯೋತಿ ರಥವನ್ನು ಅದ್ದೂರಿಯಾಗಿ ಸ್ವಾಗತಿಸಲಾಯಿತು.

ಮೆ 8, 9ರಂದು ಬದಾಮಿ ತಾಲೂಕಿನ ಬನಶಂಕರಿಯಲ್ಲಿ ನಡೆಯಲಿರುವ ಪೂಜ್ಯರ ಪಟ್ಟಾಭಿಷೇಕ ಹಾಗೂ ದೇವಾಂಗ ಜಾಗೃತಿ ಸಮಾವೇಶಕ್ಕೆ ಸಮಾಜ ಭಾಂದವರಲ್ಲಿ ಜಾಗೃತಿ ಮೂಡಿಸಲು, ದೇವಾಂಗ ಜ್ಯೋತಿ ರಥವು ಪಟ್ಟಣಕ್ಕೆ ಆಗಮಿಸಿತು. ಪಟ್ಟಣಕ್ಕೆ ಆಗಮಿಸಿದ ದೇವಾಂಗ ಜ್ಯೋತಿ ರಥಕ್ಕೆ ದೇವಾಂಗಮಠದ ಮುದ್ದಸಂಗ ಸ್ವಾಮಿಜಿ ಹಾಗೂ ಸಮಾಜ ಭಾಂದವರು ಸೇರಿಕೊಂಡು ಪೂಜೆ ಸಲ್ಲಿಸಿದರು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ದೇವಾಂಗ ಜ್ಯೋತಿ ರಥವು ಸಂಚರಿ ಬನಶಂಕರಿ ದೇವಸ್ಥಾನದ ಆವರಣದಲ್ಲಿ ಪ್ರಚಾರವನ್ನು ಪೂರ್ಣಗೊಳಿಸಿತು. ದೇವಾಂಗ ಸಮಾಜದ ಅಧ್ಯಕ್ಷ ಸಂಕಣ್ಣ ಹೊಸಮನಿ, ಯಂಕಣ್ಣ ಗುಡಿಸಾಗರ, ಶಿವಪ್ಪ ಹೆಬ್ಬಳ್ಳಿ, ಶ್ರೀಕಾಂತ ಪರದೇಶಿ, ಸುರೇಶ ಜಾಲಿಹಾಳ, ಪಾಂಡಪ್ಪ ಅಂಕದ, ವಿಷ್ಣು ಅಂಕದ, ಮಹೇಶ ಮುಗಳಿ, ಶಂಕ್ರಪ್ಪ ಗದಗಿನ, ವಿಠ್ಠಲ ಸಣ್ಣಕ್ಕಿ ಇದ್ದರು.



ಕಿರುಸುದ್ದಿ

ಬಿ.ಎಸ್.ಪಾಟೀಲ ಕಾಲೇಜಿಗೆ ಶೇ.92.68ರಷ್ಟು ಫಲಿತಾಂಶ






ಬಸವನಬಾಗೇವಾಡಿ: ತಾಲೂಕಿನ ಮನಗೂಳಿಯ ದಿ.ಜನತಾ ಎಜ್ಯೂಕೇಶನ ಸೊಸೈಟಿ ಅಡಿಯಲ್ಲಿ ನಡೆಯುತ್ತಿರುವ ಬಿ.ಎಸ್.ಪಾಟೀಲ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದಿಂದ ಹಾಜರಾದ 82 ವಿದ್ಯಾರ್ಥಿಗಳಲ್ಲಿ 12 ಡಿಸ್ಟಿಂಕ್ಸನ್ 46 ಪ್ರಥಮ ದರ್ಜೆ, 13 ದ್ವಿತೀಯ ದರ್ಜೆ, 5ವಿದ್ಯಾರ್ಥಿಗಳು ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದು, ಕಾಲೇಜಿನ ಫಲಿತಾಂಶ ಶೇ.92.68ರಷ್ಟಾಗಿದೆ. ಕಲಾ ವಿಭಾಗದಲ್ಲಿ ಶೇ.90.16ರಷ್ಟು ಫಲಿತಾಂಶ, ವಾಣಿಜ್ಯ ವಿಭಾಗದಲ್ಲಿ ಶೇ.100ರಷ್ಟು ಫಲಿತಾಂಶ. ಕಲಾ ವಿಭಾಗದಲ್ಲಿ ಸುರಮ್ಮ ರೇವಣ್ಣವರ 557(92.83) ಅಂಕ ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ. ಅಕ್ಷತಾ ಮನಗೂಳಿ 545(90.83) ಅಂಕ ಪಡೆದು ದ್ವಿತೀಯ ಸ್ಥಾನ, ರೇವತಿ ಬಾಗೇವಾಡಿ 532 (88.66) ತೃತೀಯ ಸ್ಥಾನ. ವಾಣಿಜ್ಯ ವಿಭಾಗದಲ್ಲಿ ವರ್ಷಾ ಮಾನಕರ 554 (92.33) ಅಂಕ ಪಡೆದು ಕಾಲೇಜಿಗೆ ಪ್ರಥಮ ಸ್ಥಾನ, ರೇಖಾ ಬಿರಾದಾರ 543 (90.50) ಅಂಕ ಪಡೆದು ದ್ವಿತೀಯ ಸ್ಥಾನ, ರೇಣುಕಾ ಕರಡಿ 532 (88.66) ಅಂಕ ಪಡೆದು ಕಾಲೇಜಿಗೆ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಸುರಮ್ಮ ರೇವಣ್ಣವರ, ಭಾಗ್ಯಶ್ರೀ ಸದಾಶಿವ ದಿನ್ನಿ, ಭಾಗ್ಯಶ್ರೀ ಶರಣಪ್ಪ ದಿನ್ನಿ 3ಜನ ವಿದ್ಯಾರ್ಥಿನಿಯರು ಶಿಕ್ಷಣಶಾಸ್ತ್ರ ವಿಷಯದಲ್ಲಿ 100ಕ್ಕೆ 100ರಷ್ಟು ಅಂಕಗಳನ್ನು ಗಳಿಸಿದ್ದಾರೆ. ಭಾಗ್ಯಶ್ರೀ ಸದಾಶಿವ ದಿನ್ನಿ, ಭಾಗ್ಯಶ್ರೀ ಶರಣಪ್ಪ ದಿನ್ನಿ, ಅಕ್ಷತಾ ಮನಗೂಳಿ 3ಜನ ಭೂಗೋಳಶಾಸ್ತ್ರ ವಿಷಯದಲ್ಲಿ 100ಕ್ಕೆ 100ರಷ್ಟು ಅಂಕಗಳನ್ನು ಗಳಿಸಿದ್ದಾರೆ. ಸುರಮ್ಮ ರೇವಣ್ಣವರ ಇತಿಹಾಸ ವಿಷಯದಲ್ಲಿ 100ಕ್ಕೆ 100ರಷ್ಟು ಅಂಕಗಳನ್ನು ಗಳಿಸಿದ್ದಾರೆ. ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷ ಸುಭಾಸಗೌಡ ಪಾಟೀಲ ಹಾಗೂ ಆಡಳಿತ ಮಂಡಳಿಯ ಎಲ್ಲ ಸದಸ್ಯರು ಮತ್ತು ಕಾಲೇಜಿನ ಪ್ರಾಚಾರ್ಯರಾದ ಪಿ.ಟಿ.ರಾಠೋಡ, ಉಪನ್ಯಾಸಕರು ಸೇರಿ ಬೋಧಕೇತರ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ದೇಶಮುಖ ಪ್ರೀಮಿಯರ್ ಲೀಗ್‌ಗೆ ಚಾಲನೆ



ನಾಲತವಾಡ: ಪಟ್ಟಣದ ಜೆ.ಎಸ್.ದೇಶಮುಖ ಕ್ರೀಡಾಂಗಣದಲ್ಲಿ ದೇಶಮುಖ ಪ್ರೀಮಿಯರ್ ಲೀಗ್‌ಗೆ ಮಹಾರಾಷ್ಟ್ರದ ಯಾವತಮಲ್ ಮಾಜಿ ಶಾಸಕಿ ದೇಶಮುಖ ಅವರ ಪುತ್ರಿ ನಂದಿನಿ ದೇಶಮುಖ ಕಾರ್ಯಕ್ರಮ ಉದ್ಘಾಟಿಸಿ ಟೂರ್ನಾಮೆಂಟ್‌ಗೆ ಚಾಲನೆ ನೀಡಿದರು.
ಉದ್ಘಾಟನೆ ಬಳಿಕ ಮಾತನಾಡಿದ ಸಿದ್ದಣ್ಣ ಆಲಕೊಪ್ಪರ, ದೇಶಮುಖ ಕುಟುಂಬದ ಪ್ರೋತ್ಸಾಹದಿಂದಲೇ ಯುವಕರ ಬೇಡಿಕೆಯ ಮೇರೆಗೆ ಈ ಕ್ರಿಕೆಟ್ ಟೂರ್ನಾಮೆಂಟ್ ಆಯೋಜನೆ ಸಾಧ್ಯವಾಗಿದೆ ಎಂದು ಹೇಳಿದರು. ನಂದಿನಿ ದೇಶಮುಖ ಅವರು ಪ್ರಥಮ ಬಹುಮಾನವಾಗಿ 1 ಲಕ್ಷ ರೂ.ಹಾಗೂ ದ್ವಿತೀಯ ಬಹುಮಾನವಾಗಿ 50 ಸಾವಿರ ಘೋಷಿಸಿದ್ದು, ಯುವಕರಿಗೆ ಸದಾ ಬೆಂಬಲವಾಗಿ ನಿಲ್ಲುವುದಾಗಿ ಭರವಸೆ ನೀಡಿದ್ದಾರೆ. ಟೂರ್ನಾಮೆಂಟ್ ಮುಂಚೆಯೇ ಆರಂಭವಾಗಬೇಕಾಗಿದ್ದರೂ ಕೆಲವು ಕಾರಣಗಳಿಂದ ತಡವಾಗಿದ್ದು, ಈಗ ಅದ್ದೂರಿಯಾಗಿ ಪ್ರಾರಂಭವಾಗಿದೆ ಎಂದು ಹೇಳಿದರು.
ಲೋಟಗೇರಿ ಗ್ರಾಮದ ಗುರುಮೂರ್ತಿ ಕಣಕಾಲಮಠ ಮಾತನಾಡಿ, ದೇಶಮುಖ ಕುಟುಂಬವು ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಪ್ರಭಾವಿ ಸ್ಥಾನ ಹೊಂದಿದ್ದು, ಇಂತಹ ಕುಟುಂಬದಿಂದ ಕ್ರೀಡಾ ಟೂರ್ನಾಮೆಂಟ್ ಆಯೋಜನೆ ಮಾಡಿರುವುದು ಸಂತೋಷದ ಸಂಗತಿ ಎಂದರು. ಪಪಂ ಮಾಜಿ ಅಧ್ಯಕ್ಷ ಹಾಗೂ ಸದಸ್ಯ ಪೃಥ್ವಿರಾಜ್ ನಾಡಗೌಡ, ಶಂಕರರಾವ ದೇಶಮುಖ, ಗುರು ಪ್ರಸಾದ ದೇಶಮುಖ, ಅಮರ ದೇಶಮುಖ, ಚಂದ್ರಶೇಖರ ಮೇಟಿ, ಮಹಾಂತೇಶ ಗಂಗನಗೌಡರ, ಪಪಂ ಉಪಾಧ್ಯಕ್ಷ ಬಸವರಾಜ ಗಂಗನಗೌಡರ, ಶಿಕ್ಷಕ ಬಸವರಾಜ ಮೇಲಶೀಮಿ, ಪ.ಪಂ ಸದಸ್ಯ ರಮೇಶ್ ಆಲಕೊಪ್ಪರ, ಮಾರುತಿ ಗುರಿಕಾರ, ಗುರು ತಂಗಡಗಿ, ಅಬುಬಕರ ರಕ್ಕಸಗಿ, ಮುತ್ತು ಗಡ್ಡಿ ಉಪಸ್ಥಿತರಿದ್ದರು.



ಬಸವನಬಾಗೇವಾಡಿ: ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್‌ನಲ್ಲಿ ಭಾರತ ರತ್ನ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ ನಿಮಿತ್ತ ಅಂಬೇಡ್ಕರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಪೂಜೆ ಸಲ್ಲಿಸಿದರು. ಕಾಲೇಜು ಪ್ರಾಂಶುಪಾಲ ಡಾ.ನೀಲಪ್ಪ ಹೊಸಮನಿ, ಪ್ರೊ.ಲೀಲಾವತಿ ಸಿ, ಡಾ. ಎಚ್. ಎಂ.ನಾಟೀಕಾರ, ಪ್ರೊ.ಇಸ್ಮಾಯಿಲ್, ಪ್ರೊ.ರೇಣುಕಾ ಅಂಬಲಿ, ಪ್ರಿಯಾಂಕಾ ಜಿಂದೆ, ಅತಿಥಿ ಉಪನ್ಯಾಸಕರಾದ ಸುಮಾ ಕಲ್ಲೂರ, ಗೀತಾ ಬೆಳೊಂಡಗಿ, ಶೀಲಾ ರಾಮತೀರ್ಥ ಇದ್ದರು.

ಡಾ.ಅಂಬೇಡ್ಕರ್ ಸಿದ್ಧಾಂತ ಅಳವಡಿಸಿಕೊಳ್ಳಿ

ಸಿಂದಗಿ: ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತ್ಯೋತ್ಸವ ನಿಮಿತ್ಯ ಪಟ್ಟಣದ ಅಂಬೇಡ್ಕರ್ ಅವರ ಅಭಿಮಾನಿ ಬಳಗ ಹಾಗೂ ದಲಿತ ಸಂಘಟನೆಗಳ ನೇತೃತ್ವದಲ್ಲಿ ಮೆರವಣಿಗೆ ನಡೆಯಿತು. ಮೆರವಣಿಗೆಗೆ ಶಾಸಕ ಅಶೋಕ ಮನಗೂಳಿ, ಪ್ರಥಮ ದರ್ಜೆ ಗುತ್ತಿಗೆದಾರ ಎಂ.ಎಂ.ಮುಂಡೇವಾಡಗಿ, ಕಾಂಗ್ರೆಸ್ ಮುಖಂಡರಾದ ಕುಮಾರ ದೇಸಾಯಿ, ಸತೀಶ ಬಿರಾದಾರ, ಬಿಜೆಪಿ ಮುಖಂಡ ಶ್ರೀಶೈಲಗೌಡ ಬಿರಾದಾರ ಮಾಗಣಗೇರಿ, ರಾಜಶೇಖರ ಕೂಚಬಾಳ ಚಾಲನೆ ನೀಡಿದರು. ಬೃಹದಾಕಾರದ ಸಂಸತ್ತಿನ ಭವನ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ತಳಿಯನ್ನು ಸ್ಥಾಪಿಸಿ ಮೆರವಣಿಗೆ ನಡೆಸಲಾಯಿತು. ಶಾಸಕ ಅಶೋಕ ಮನಗೂಳಿ ಮಾತನಾಡಿ, ಡಾ.ಅಂಬೇಡ್ಕರ್ ಅವರ ಈ ಜಗತ್ತಿನ ಬಹು ದೊಡ್ಡ ಜ್ಞಾನಿ ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಆಯಾ ದೇಶಗಳ ಸರ್ಕಾರಗಳು ಇವರ ಪುತ್ತಳಿಯನ್ನು ನಿರ್ಮಾಣ ಮಾಡಿ ಇಂದು ಅವರ ಜಯಂತಿ ಮಾಡುತ್ತಿದ್ದಾರೆ ಅಂದರೆ ಅದು ಅವರ ವ್ಯಕ್ತಿತ್ವ ಹಾಗೂ ಜ್ಞಾನಕ್ಕೆ ನೀಡಿದ ಗೌರವ ಇದರಿಂದ ಭಾರತದ ಕೀರ್ತಿ ಸಾಗರದಾಚೆಗೆ ಪಸರಿಸುತ್ತಿದೆ. ಅವರ ಸಿದ್ಧಾಂತಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಅವರು ನೀಡಿದ ಸನ್ಮಾರ್ಗದಲ್ಲಿ ನಾವೆಲ್ಲ ಸಾಗಬೇಕು ಎಂದರು. ಮೆರವಣಿಗೆ ಅಂಬೇಡ್ಕರ್ ವೃತ್ತದಿಂದ ಪ್ರಾರಂಭಗೊಂಡು ಅಂಬಿಗರ ಚೌಡಯ್ಯ ವೃತ್ತ, ಸಂಗೊಳ್ಳಿ ರಾಯಣ್ಣ ವೃತ್ತದ ಮೂಲಕ ಸಾಗಿ ದಿ.ರೆ.ಚ.ರೇವಡಿಗಾರ ರಸ್ತೆಯ ಮೂಲಕ ಸಾಗಿ ಬಸವೇಶ್ವರ ವೃತ್ತದ ವರೆಗೆ ಸಾಗಿ ಬಂದಿತು.



ಸಿಂದಗಿ: ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತ್ಯೋತ್ಸವ ನಿಮಿತ್ಯ ಪಟ್ಟಣದ ಅಂಬೇಡ್ಕರ್ ಅವರ ಅಭಿಮಾನಿ ಬಳಗ ಹಾಗೂ ದಲಿತ ಸಂಘಟನೆಗಳ ನೇತೃತ್ವದಲ್ಲಿ ಮೆರವಣಿಗೆ ನಡೆಯಿತು. ಮೆರವಣಿಗೆಯಲ್ಲಿ ಮಲ್ಲಿಕಾರ್ಜುನ ಕೂಚಬಾಳ, ರವಿ ಹೊಳಿ ನಿಂಗರಾಜ ಗುಡಿಮನಿ, ಸಾಯಬಣ್ಣ ಪುರದಾಳ ಸೇರಿದಂತೆ ಅನೇಕ ಯುವಕರು, ಮಹಿಳೆಯರು, ಮಕ್ಕಳು ಭಾಗವಹಿಸಿದ್ದರು.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ | ಜಿಲ್ಲಾಧಿಕಾರಿ ಸಲಹೆ

ವಿದ್ಯಾರ್ಥಿಗಳು ಅಧ್ಯಯನಶೀಲರಾಗಲಿ

ವಿಜಯಪುರ: ವಿದ್ಯಾರ್ಥಿಗಳು ಸತತ ಅಧ್ಯಯನಶೀಲರಾದಾಗ ಮಾತ್ರ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಉನ್ನತ ಜೀವನ ನಡೆಸಬಹುದಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಆನಂದ ಕೆ. ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡ ಸಮಾರಂಭದಲ್ಲಿ ಪ್ರಸಕ್ತ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿ ಜಿಲ್ಲೆಗೆ ಕ್ರಮವಾಗಿ ಸ್ಥಾನ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಜಿಲ್ಲಾಡಳಿತದಿಂದ ಸನ್ಮಾನಿಸಿ ಅವರು ಮಾತನಾಡಿದರು. ಈ ದಿಸೆಯಲ್ಲಿ ವಿದ್ಯಾರ್ಥಿಗಳು ಆಯಾ ಶೈಕ್ಷಣಿಕ ವರ್ಷಾರಂಭದಿಂದಲೇ ಆಸಕ್ತಿಯಿಂದ ಓದಲಾರಂಭಿಸಿದರೆ ಪರೀಕ್ಷೆ ಯಶಸ್ಸು ನೀರು ಕುಡಿದಷ್ಟೇ ಸುಲಭವಾಗುತ್ತದೆ ಎಂದರು.



ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಕಠಿಣ ಅಧ್ಯಯನ ಶೈಲಿ ರೂಢಿಸಿಕೊಳ್ಳಬೇಕು. ವಿಷಯ ಕರಗತ ಮಾಡಿಕೊಂಡು ಮನನ ಮಾಡಿಕೊಳ್ಳುವ ಮೂಲಕ ತಮ್ಮನ್ನು ತಾವು ಮೌಲ್ಯಮಾಪನಕ್ಕೊಳಡಿಸಿ ಕೊಂಡರೆ, ಓದಿದ್ದೆಲ್ಲವೂ ಸ್ಮೃತಿಪಟಲದಲ್ಲಿ ಉಳಿಯುತ್ತದೆ ಎಂದರು.

ವಾಣಿಜ್ಯ ವಿಭಾಗದಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ಸೇಂಟ್ ಜೋಸೆಫ್ ಪಿಯು ಕಾಲೇಜ್‌ನ ಪ್ರಜ್ಞಾ ಗಲಗಲಿ, ದ್ವಿತೀಯ ಸ್ಥಾನ ಪಡೆದ ವಿಬಿ ದರಬಾರ ಪಿಯು ಕಾಲೇಜಿನ ಸರ್ವಜ್ಞ ಗುರ್ಜಾಲ ಹಾಗೂ ತೃತೀಯ ಸ್ಥಾನ ಪಡೆದ ಬಿ.ಎಂ.ಪಾಟೀಲ ಕಾಲೇಜಿನ ಕನಿಶಾ ಕಮಲೇಶ ಪೋರವಾಲ, ವಿಜ್ಞಾನ ವಿಭಾಗದಲ್ಲಿ ಕ್ರಮವಾಗಿ ಪ್ರಥಮ ಸ್ಥಾನ ಪಡೆದ ನಗರದ ರೇಡಿಯಂಟ್ ಪಿಯು ಕಾಲೇಜಿನ ನುರುಖಾತ ಫಾತಿಮಾ ತಾಳಿಕೋಟಿ, ದ್ವಿತೀಯ ಸ್ಥಾನ ಪಡೆದ ಆಕ್ಸಫರ್ಡ್ ಪಿಯು ಕಾಲೇಜಿನ ಲಕ್ಷ್ಮಿ ಪರಸಪ್ಪ ಅಡಿಗಿಮನಿ ಹಾಗೂ ತೃತೀಯ ಸ್ಥಾನ ಪಡೆದ ಶಾಂತಿನಿಕೇತನ ಪಿಯು ಕಾಲೇಜಿನ ವಿದ್ಯಾಶ್ರೀ ಪ್ರಕಾಶ ಕಾಮನಕೇರಿ, ಆಕ್ಸಫರ್ಡ್ ಪಿಯು ಕಾಲೇಜಿನ ಭಾಗ್ಯ ಪುಂಡಲಿಕಪ್ಪ ಹೊಸಮನಿ, ಇದೇ ಕಾಲೇಜಿನ ನಂದಿತಾ, ಶಾಂತಿನಿಕೇತನ ಪಿಯು ಕಾಲೇಜಿನ ಪೂಜಾ ಈಟಿ, ತುಂಗಳ ಸೈನ್ಸ್ ಪಿಯು ಕಾಲೇಜಿನ ಪೃಥ್ವಿ ಪತ್ತಾರ, ಸೇಂಟ್ ಜೋಸೆಫ್ ಪಿಯು ಕಾಲೇಜಿನ ಸಿದ್ಧಿ ತೋನ್ಸಿವಾಲ್ ಹಾಗೂ ತುಂಗಳ ಸೈನ್ಸ್ ಪಿಯು ಕಾಲೇಜಿನ ಸುಶ್ಮಿತಾ ಈರಪ್ಪ ಕೊಪ್ಪಳ ನಿದರ್ಶನವಾಗಿದ್ದಾರೆ ಎಂದರು.

ಇದಕ್ಕೂ ಮುನ್ನ ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಕ್ರಮವಾಗಿ ಜಿಲ್ಲೆಗೆ ಸ್ಥಾನ ಪಡೆದ ಈ ವಿದ್ಯಾರ್ಥಿಗಳಿಗೆ ಶಾಲು ಹೊದಿಸಿ, ಸ್ಮರಣಿಕೆ ಹಾಗೂ ಪುಷ್ಪಗುಚ್ಛ ನೀಡಿ ಗೌರವಿಸಿ ಅಭಿನಂದಿಸಿದರು.

ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸಿ.ಕೆ. ಹೊಸಮನಿ ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಅವರು, ಈ ಸಾಧಕ ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ಆರ್ಥಿಕ ಸಹಾಯ ಒದಗಿಸಿ, ಈ ಮಕ್ಕಳ ಭವಿಷ್ಯ ಉಜ್ವಲವಾಗಲಿ ಎಂದು ಶುಭ ಹಾರೈಸಿದ್ದಾರೆ ಎಂದು ಅವರು ಹೇಳಿದರು.

ಜಿಪಂ ಸಿಇಒ ರಿಷಿ ಆನಂದ, ಪದವಿ ಪೂರ್ವ ಶಿಕ್ಷಣ ಇಲಾಖೆ ಅಧಿಕಾರಿಗಳು, ಕಾಲೇಜುಗಳ ಪ್ರಾಂಶುಪಾಲರು, ಶಿಕ್ಷಕರು, ಪೋಷಕರು ಮತ್ತು ಗಣ್ಯರು ಇದ್ದರು.

ಸಮಾನತೆ ಸಂದೇಶ ಸಾರಿದ ಡಾ.ಅಂಬೇಡ್ಕರ್

ಚಡಚಣ: ತಾಲೂಕಾಡಳಿತ, ತಾಪಂ, ಪಟ್ಟಣ ಪಂಚಾಯತಿ ಹಾಗೂ ಸಮಾಜಕಲ್ಯಾಣ ಇಲಾಖೆವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಪಟ್ಟಣದ ತಹಶೀಲ್ದಾರ್ ಕಚೇರಿ ಆವರಣದಲ್ಲಿ ಆಚರಿಸಲಾಯಿತು.

ಅಧ್ಯಕ್ಷತೆ ವಹಿಸಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ವಿಠ್ಠಲ ಕಟಕಧೋಂಡ ಅವರು, ಅಂಬೇಡ್ಕರ್ ಅವರು ಕೇವಲ ಭಾರತದ ಸಂವಿಧಾನದ ಶಿಲ್ಪಿಯಷ್ಟೇ ಅಲ್ಲದೆ ವಿಶ್ವಕ್ಕೆ ಮಾದರಿಯಾಗಿದ್ದಾರೆ. ಸಮಾಜದಲ್ಲಿಯ ಅಂಕು ಡೊಂಕುಗಳನ್ನು ತಿದ್ದುವ ಮತ್ತು ಸಮಾನತೆ, ಸ್ವಾತಂತ್ರ್ಯ ಮತ್ತು ನ್ಯಾಯದ ಮೌಲ್ಯಗಳನ್ನು ಬಿತ್ತಿದ ಮಹಾನ್ ಚಿಂತಕರು ಎಂದು ಹೇಳಿದರು.

ಉಪನ್ಯಾಸಕ ಡಾ. ಸಂಜೀವಕುಮಾರ ಪೋತೆ ಅವರು ಅಂಬೇಡ್ಕರ್ ಅವರ ಜೀವನಚರಿತ್ರೆಯನ್ನು ಸವಿಸ್ತಾರವಾಗಿ ಪರಿಚಯಿಸಿದರು. ಅವರು ಭಾರತದ ಸಂವಿಧಾನ ರಚನೆಯಲ್ಲಿ ಪ್ರಮುಖ ಪಾತ್ರವಹಿಸಿ, ದೇಶದ ಮೊದಲ ಕಾನೂನು ಸಚಿವರಾಗಿ ಸೇವೆ ಸಲ್ಲಿಸಿದರು ಎಂದು ವಿವರಿಸಿದರು.

ತಹಶೀಲ್ದಾರ್ ಸಂಜಯ ಇಂಗಳೆ ಮಾತನಾಡಿದರು. ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆಸಲ್ಲಿಸಿ, ಅವರತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ



ಸಂಕಲ್ಪ ಮಾಡಲಾಯಿತು. ಸಂವಿಧಾನದ ಪೀಠಿಕೆ ಓದಲಾಯಿತು ಹಾಗೂಸಾಂಸ್ಕೃತಿಕಕಾರ್ಯಕ್ರಮಗಳ ಮೂಲಕ ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಪ್ರತಿಪಾದಿಸಿದರು.

ತಹಶೀಲ್ದಾರ್ ಸಂಜಯ ಇಂಗಳೆ, ಪಪಂ ಅಧ್ಯಕ್ಷ ಮಲ್ಲಿಕಾರ್ಜುನ ಧೋತ್ರೆ, ಪಪಂ ಉಪಾಧ್ಯಕ್ಷ ಇಲಾಹಿಸಾಬ ನದಾಫ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಅಶೋಕಕುಮಾರ ರಾಠೋಡ, ಪಪಂ ಮುಖ್ಯಾಧಿಕಾರಿ ಬಿ.ಕೆ. ತಾವಸೆ, ಸಹಾಯಕ ನಿರ್ದೇಶಕ ಸಮಾಜ ಕಲ್ಯಾಣ ಇಲಾಖೆ ಉಮೇಶ ಲಮಾಣಿ, ಸಿಪಿಐ ಪರಶುರಾಮ ಮನಗೂಳಿ, ಪಿಎಸ್ಐ ಸೋಮೇಶ ಗೆಜ್ಜಿ, ಮುಖಂಡ ಕಾಂತುಗೌಡ ಪಾಟೀಲ, ಮಹಾದೇವ ಬನಸೋಡೆ, ಧರ್ಮಣ್ಣ ಬನಸೋಡೆ, ಸೋಮು ಬಡಿಗೇರ, ಚೇತನ ನೀರಾಳೆ, ನಾಗೇಶ ಗಾಯಕವಾಡ, ವಿವಿಧ ಸಂಘಟನೆಗಳ ಮುಖಂಡರು, ಪಪಂ ಸದಸ್ಯರು ಭಾಗವಹಿಸಿದ್ದರು.

ಸಾಹಿತ್ಯ ಮನಸ್ಸಿನ ನಿಜ ಸ್ವರೂಪ ಬಿಂಬಿಸುವ ಕನ್ನಡಿ

ವಿಜಯಪುರ: ಸಾಹಿತ್ಯ ಎಂಬುದು ಕೇವಲ ಪದಗಳ ಜೋಡಣೆಯಲ್ಲ, ಅದು ಮನಸ್ಸಿನ ನಿಜ ಸ್ವರೂಪವನ್ನು ಪ್ರತಿಬಿಂಬಿಸುವ ಕನ್ನಡಿಯಾಗಿದೆ. ಅನುಭವಗಳ ಆಳ ಭಾವಗಳ ವ್ಯಾಪ್ತಿ ಜೀವನಗಳ ಸತ್ಯ ಸೌಂದರ್ಯಗಳ ಸಂಗಮವೇ ಕಾವ್ಯವಾಗಿದೆ ಎಂದು ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ರಾಹುಲ್‌ಕುಮಾರ್ ಭಾವಿದೊಡ್ಡಿ ಹೇಳಿದರು.

ನಗರದ ಸರ್ಕಾರಿ ಆರ್ಟ್ಸ್ ಗ್ಯಾಲರಿಯಲ್ಲಿ ಬುಧವಾರ ಹಮ್ಮಿಕೊಂಡ ಲೇಖಕಿ ಸಂಗೀತಾ ತೇಲಿ ಅವರ ಬಯಕೆಯ ಬಳ್ಳಿ ಕವನ ಸಂಕಲನ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮಣ್ಣು ಮತ್ತು ಸಸಿ ಹಣ್ಣುಗಳ ಸಂರಕ್ಷಣೆ ಮತ್ತು ಪೋಷಣೆಯಲ್ಲಿ ತೊಡಗಿಸಿಕೊಂಡಿರುವ ಸಂಗೀತ ತೇಲಿ ಅವರು ಸಾಹಿತ್ಯದೊಂದಿಗೆ ಆಸಕ್ತಿ ಹೊಂದಿ ತಮ್ಮ ಚೊಚ್ಚಲ ಪುಸ್ತಕವನ್ನು ರಚಿಸಿದ ಅವರ ಸಾಹಿತ್ಯ ಪಯಣ ಯಶಸ್ವಿಯಾಗಲಿ, ಕನ್ನಡ ಸಾಂಸ್ಕೃತಿಕ ವಲಯದಲ್ಲಿ ಇವರು ಗುರುತಿಸಿಕೊಳ್ಳಲಿ ಎಂದರು.

ಸಾಹಿತಿ ಮನು ಪತ್ತಾರ ಮಾತನಾಡಿ, ಬಯಕೆಯ ಬಳ್ಳಿಯಲ್ಲಿ 30 ಕವನಗಳು ಮಲ್ಲಿಗೆ ಹೂವಿನ ಪರಿಮಳ ಸೂಸುವ ಹಾಗೂ ಸತ್ಯ, ಮಿಥ್ಯಗಳ ನಂಬಿಕೆ ಅನಾವರಣಗೊಳಿಸುತ್ತವೆ. ಜಿಲ್ಲೆಯಲ್ಲಿ ಮಹಿಳೆಯರು ಸಾಹಿತ್ಯಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದು, ಕವಿತೆ ಓದುಗರಿಗೆ ಆಳವಾದ ಅನುಭಾವ ಸೃಷ್ಟಿಮಾಡುತ್ತದೆ. ಪ್ರೇರಣೆ ಕವಿತೆ ಶಬ್ದಗಳೆಲ್ಲ ಅನುಭವದ ಜೊತೆಗೆ ಅನುಭಾವ ಕಟ್ಟಿಕೊಡುತ್ತದೆ ಎಂದರು.

ಪತ್ರಕರ್ತ ಪರಶುರಾಮ ಬಾಸಗಿ ಮಾತನಾಡಿ, ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಂಡರೆ ಜ್ಞಾನ ಹೆಚ್ಚುತ್ತವೆ. ಕವಿತೆಗಳು ಭಾವನೆಗಳ ಪ್ರತಿಬಿಂಬವಾಗಿವೆ ಎಂದರು.

ಮುಖಂಡ ಆರ್.ಎಸ್.ಪಾಟೀಲ ಕೂಚಬಾಳ, ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಬಸನಗೌಡ ಪಾಟೀಲ ಮಾತನಾಡಿ, ಹೂ ಬಳ್ಳಿಗಳ ಸಂರಕ್ಷಿಸುವ ಕಾರ್ಯದಲ್ಲಿ ಸಾಹಿತ್ಯ ರಚನೆಯ ಹೂ ಹಣ್ಣು ನೀಡುವ ಮೂಲಕ ಲೇಖಕಿ ಸಂಗೀತಾ ತೇಲಿ ಅವರು ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡಿರುವುದು ವಿಶೇಷ ಎಂದರು.

ಲೇಖಕಿ ಸಂಗೀತಾ ತೇಲಿ ಮಾತನಾಡಿ, ನನ್ನ ಬಯಕೆಯ ಬಳ್ಳಿ ಕವನ ಸಂಕಲನ ಚೊಚ್ಚಲ ಸಂಕಲನವಾಗಿದ್ದು, ಈ ಕೃತಿಯಲ್ಲಿ ನನ್ನ ಮನದಾಳದ ಭಾವನೆಗಳ ಜೊತೆಗೆ ಬದುಕಿನ ವಿವಿಧ ಅನುಭವ, ನೋವುಗಳು ಪ್ರತಿಬಿಂಬಿಸಿರುವೆ ಎಂದರು.

ಸಹಾಯಕ ತೋಟಗಾರಿಕೆ ನಿರ್ದೇಶಕ ಭಗವಂತ ಜಿಗಜಿಣಗಿ, ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದಶಕ ಅರವಿಂದ ಹೂಗಾರ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ಅಮರೇಶ ದೊಡಮನಿ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕಿ ಶಾಲಿನಿ ತಳಕೇರಿ ಇತರರು ಇದ್ದರು.



ಉತ್ತಮ ದೇಶ, ಸಮಾಜ ನಿರ್ಮಾಣಕ್ಕೆ ಅಂಬೇಡ್ಕರ್ ಕೊಡುಗೆ ಅಪಾರ

ಮುದ್ದೇಬಿಹಾಳ: ಮಹಾತ್ಮ ಗಾಂಧೀಜಿ ಭಾರತ ದೇಶದ ಪಿತಾಮಹ. ಆದರೆ ಡಾ.ಅಂಬೇಡ್ಕರ್ ಅವರು ಈ ದೇಶದ ಆತ್ಮವಾಗಿದ್ದಾರೆ. ದೇಶದಲ್ಲಿ ಪರ, ವಿರೋಧ ವಿಚಾರ ಹುಟ್ಟುಹಾಕುವ ಜನ ಇದ್ದಾರೆ. ಆದರ ಬಗ್ಗೆ ವಿಮರ್ಶೆ ಮಾಡಿದಷ್ಟು ಭಿನ್ನಾಭಿಪ್ರಾಯಗಳು ಹುಟ್ಟುತ್ತವೆ. ಆದರೆ ಮಾನವ ಸಮಾಜ ಅಖಂಡವಾಗಿ ಉಳಿಯಬೇಕು ಎಂದು ಅವರು ತಮ್ಮ ಧ್ವನಿಯನ್ನು ಎತ್ತಿದರು ಎಂದು ಶಾಸಕ ನಾಡಗೌಡ ಹೇಳಿದರು.

ತಾಲೂಕು ಆಡಳಿತದ ವತಿಯಿಂದ ಹಮ್ಮಿಕೊಳ್ಳಲಾದ 135ನೇ ಅಂಬೇಡ್ಕರ್ ಅವರ ಜಯಂತ್ಯುತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಭಾರತವನ್ನು ಜಾತಿ ಧರ್ಮದ ಆಧಾರದಲ್ಲಿ ಒಡೆಯಲಾಯಿತು. ಅದರಂತೆ ದಲಿತರಿಗೆ ಬೇರೊಂದು ದೇಶ ಬೇಕು ಎಂದು ವಿಚಾರ ಮಾಡಿದ್ದರೆ ದೇಶದ ಪರಿಸ್ಥಿತಿ ಎಲ್ಲಿಗೆ ಬರುತ್ತಿತ್ತು. ಅಂಬೇಡ್ಕರ್ ಮುಂದಾಲೋಚನೆಯಿಂದ ದೇಶ ನಿರ್ಮಾಣ ಹಾಗೂ ಸಮಾಜ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದರು. ಸಂವಿಧಾನದ ಆಶಯ ಇಟ್ಟುಕೊಂಡು ಸಾಮಾಜಿಕ ಸುಧಾರಣೆ ಮಾಡಲು ಎಂದು ಮುಂದಾದಾಗ ಎಲ್ಲಾ ಪಕ್ಷಗಳು ರಾಜಕೀಯವಾಗಿ ಅನುಭವಿಸಿವೆ ಆದರೆ ಮೂಲ ಆಶಯಕ್ಕೆ ಚ್ಯುತಿ ಬರಲು ಸಾಧ್ಯವಿಲ್ಲ. ದಲಿತ ಮುಖಂಡರು ಮಕ್ಕಳಿಗೆ ಶಿಕ್ಷಣ ಕೊಟ್ಟು ಈ ಕುರಿತು ಒಮ್ಮತ ರೂಪಿಸಬೇಕು ಎಂದು ಹೇಳಿದರು.



ಉಪನ್ಯಾಸ ನೀಡಿದ ಕನ್ನಡ ಉಪನ್ಯಾಸಕಿ ಡಾ.ಸುಜಾತ ಚಲವಾದಿ ಮಾತನಾಡಿ, ಸಂವಿಧಾನದ ಮೂಲ ಆಶಯಗಳು ಇಲ್ಲದೆ ಹೋದರೆ ದಲಿತರು ಮತ್ತೆ ಶೋಷಣೆಗೆ ಒಳಗಾಗುತ್ತಾರೆ ಆದ್ದರಿಂದ ಅಂಬೇಡ್ಕರ್ ಸಿದ್ಧಾಂತಗಳು ನಮ್ಮ ಬದುಕು ಆಗಬೇಕು. ಅನಗತ್ಯ ಕಾರಣಗಳಿಗಾಗಿ ತಪ್ಪು ಸಂದೇಶಗಳು ಹರಡುತ್ತಿವೆ ಇದನ್ನು ತಪ್ಪಿಸಲು ಸಂವಿಧಾನದ ಓದಿನ ಮೂಲಕ ಅರಿವು ಪಡೆದುಕೊಳ್ಳೋಣ ಎಂದು ಹೇಳಿದರು. ತಾಲೂಕು ದಂಡಾಧಿಕಾರಿ ಕೀರ್ತಿ ಚಾಲಕ್, ಸಿಪಿಐ ಮಹಮ್ಮದ್ ಪಸಿಹುದ್ದೀನ್, ನೌಕರರ ಸಂಘದ ಅಧ್ಯಕ್ಷ ಆನಂದ ಹೂಗಾರ, ಸೋಮನಗೌಡ ಬಿರಾದಾರ, ವೈ.ಎಚ್.ವಿಜಯಕರ, ಗುರುನಾಥ ತಾರನಾಳ, ಮಹಾಂತಪ್ಪ ನಾವದಗಿ, ಚನ್ನಪ್ಪ ವಿಜಯಕರ, ಹರೀಶ್ ನಾಟಿಕರ, ಸತೀಶ್ ಓಸ್ವಾಲ್, ಟಿ.ಡಿ.ಲಮಾಣಿ ಇದ್ದರು.

ಹಲವು ಸೌಲಭ್ಯ ನೀಡಿದ ಅಂಬೇಡ್ಕರ್

ಬಸವನಬಾಗೇವಾಡಿ: ಶಿಕ್ಷಣ, ಸ್ವಾತಂತ್ರ್ಯ, ಸಮಾನತೆ ಹೀಗೆ ಎಲ್ಲ ಸೌಲಭ್ಯಗಳನ್ನು ಸಾರ್ವತ್ರಿಕವಾಗಿ ಸಮಾಜದ ಕಟ್ಟ ಕಡೆಯ ವ್ಯಕ್ತಿ ಅನುಭವಿಸಲು ಅವಕಾಶ ಮಾಡಿ ಕೊಟ್ಟ ಶ್ರೇಯಸ್ಸು ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ ಎಂದು ಐಕ್ಯೂಎಸಿ ಯ ಸಹಸಂಯೋಜಕ ಡಾ.ಎಸ್.ಎಂ.ಬಿಜಾಪುರ ಹೇಳಿದರು.

ಪಟ್ಟಣದ ಬಿಎಲ್‌ಡಿಇ ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ ಹಾಗೂ ಎನ್‌ಎಸ್‌ಎಸ್ ಘಟಕಗಳ ಸಹಯೋಗದಲ್ಲಿ ಡಾ.ಬಿ.ಆರ್.ಅಂಬೇಡ್ಕರವರ ಜಯಂತಿ ನಿಮಿತ್ತ ಮನೆ ಮನೆಗೆ, ಮನ ಮನಕೆ ಡಾ.ಬಾಬಾಸಾಹೇಬರು ಎಂಬ ಅಭಿಯಾನದ ಅಡಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಾಚೀನ ಭಾರತೀಯ ಸಮಾಜದಲ್ಲಿ ಸಾಮಾಜಿಕ ಸ್ಥಿತಿಗತಿಗಳು ತುಂಬಾ ಕೆಳಮಟ್ಟದಲ್ಲಿದ್ದವು. ಶೋಷಿತರು ಹಾಗೂ ಕೆಳವರ್ಗದ ಜನಸಮುದಾಯವು ಹೀನ ಸ್ಥಿತಿಯಲ್ಲಿ ಜೀವನ ಸಾಗಿಸುತ್ತಿದ್ದರು. ಈ ಬಗೆಯ ದಾರುಣ ಚಿತ್ರಣವನ್ನು ಕಣ್ಣಾರೆ ಕಂಡು ಸ್ವತಃ ಅನುಭವಿಸಿದ ಅಂಬೇಡ್ಕರ್ ಅವರು ಇದಕ್ಕೊಂದು ಅಂತ್ಯ ಹಾಡುವುದಕ್ಕೆ ಪಣತೊಟ್ಟು ಸಂವಿಧಾನದಲ್ಲಿ ಅವಕಾಶ ಮಾಡಿಕೊಟ್ಟ ಕೀರ್ತಿ ಅಂಬೇಡ್ಕರರಿಗೆ



ಸಲ್ಲುತ್ತದೆ ಎಂದು ಹೇಳಿದರು.

ಎನ್‌ಎಸ್‌ಎಸ್ ಘಟಕ, ಸಮಾಜಶಾಸ್ತ್ರದ ಮುಖ್ಯಸ್ಥ ಡಾ.ವೈ.ಬಿ.ನಾಯಕ ಸಂವಿಧಾನದ ಅನೇಕ ಪರಿಚ್ಛೇದಗಳು ಕೆಳವರ್ಗದವರಿಗೆ ಸರ್ವಸಮ್ಮತವಾದ ನ್ಯಾಯ ಒದಗಿಸುವಲ್ಲಿ ಯಶಸ್ವಿಯಾಗಿವೆ ಎಂದರು.

ಪ್ರಾಚಾರ್ಯ ಡಾ.ಎ.ವಿ.ಸೂರ್ಯವಂಶಿ ಅಧ್ಯಕ್ಷತೆ ವಹಿಸಿ ಮಾತನಾಡಿ ಬಾಬಾಸಾಹೇಬರು ಪ್ರಾಮಾಣಿಕ ಹಾಗೂ ಶ್ರದ್ಧೆಯಿಂದ ಅಧ್ಯನಮಾಡಿ ಬಾಲ್ಯದಲ್ಲಿ ತಾವು ಹಾಗೂ ತಮ್ಮ ಸಮುದಾಯ ಅನುಭವಿಸಿದ್ದ ನೋವಿನಿಂದ ಮುಕ್ತಗೊಳಿಸಿ ಅವರೆಲ್ಲರಿಗೂ ನ್ಯಾಯಒದಗಿಸಿಕೊಟ್ಟ ಮಹಾನ್ ಚೇತನ ಇವರಾಗಿದ್ದರೆಂದು ಹೇಳಿದರು. ಸಾಂಸ್ಕೃತಿಕ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಬಿ.ಎಂ.ಸಾಲವಾಡಗಿ ನಿರೂಪಿಸಿದರು.

ಏ.30ರೊಳಗೆ ಆರೋಗ್ಯ ಕೇಂದ್ರ ಉದ್ಘಾಟನೆಗೆ ಆಗ್ರಹ

ದೇವರ ಹಿಪ್ಪರಗಿ: ಪಟ್ಟಣದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಸಮುದಾಯ ಆರೋಗ್ಯ ಕೇಂದ್ರದ ಕಟ್ಟಡ ಸುಮಾರು ಆರು ತಿಂಗಳಾದರೂ ಉದ್ಘಾಟನೆಯಾಗದೆ ಇರುವುದರಿಂದ ಸಾರ್ವಜನಿಕರಿಗೆ ಅನಾನುಕೂಲ ಉಂಟಾಗಿದೆ. ಆದ್ದರಿಂದ ಶೀಘ್ರ ನೂತನ ಕಟ್ಟಡ ಉದ್ಘಾಟನೆ ಮಾಡಬೇಕೆಂದು ತಹಶೀಲ್ದಾರ್ ನಿಂಗಣ್ಣ ಬಿರಾದಾರ ಅವರಿಗೆ ಮನವಿ ಸಲ್ಲಿಸಿದರು.

ಸಮುದಾಯ ಆರೋಗ್ಯ ಕೇಂದ್ರದ ಕಟ್ಟಡವನ್ನು ಏ.30ರೊಳಗೆ ಉದ್ಘಾಟನೆ ದಿನಾಂಕ ನಿಗದಿ ಮಾಡಬೇಕು. ಇಲ್ಲದಿದ್ದರೆ ನಮ್ಮ ಕರ್ನಾಟಕ ಸೇನೆ ಹಾಗೂ ಇತರ ಪ್ರಗತಿಪರ ಸಂಘಟನೆಗಳೊಂದಿಗೆ ದೇವರ ಹಿಪ್ಪರಗಿ ತಹಶೀಲ್ದಾರ್ ಕಚೇರಿ ಮುಂದೆ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳುವುದಾಗಿ ಕರ್ನಾಟಕ ರಾಜ್ಯ ರೈತ ಸಂಘದ ಯುವ ಸಂಚಾಲಕ ಸಿದ್ದನಗೌಡ ಪಾಟೀಲ



ಹಾಗೂ ನಮ್ಮ ಕರ್ನಾಟಕ ಸೇನೆ ತಾಲೂಕಾಧ್ಯಕ್ಷ ಹಸನ್ ನದಾಫ ನೇತೃತ್ವದಲ್ಲಿ ಪದಾಧಿಕಾರಿಗಳು ಹಾಗೂ ಮುಖಂಡರು ಆಗ್ರಹಿಸಿದರು.

ಬಳಿಕ ಮಾತನಾಡಿದ ಪಟ್ಟಣದ ಅವುಗೇಶ್ವರ ತಪೋಧಾಮ ಪರದೇಶಿ ಮಠದ ಶಿವಯೋಗಿ ಸ್ವಾಮಿಗಳು ಕೂಡಲೇ ಸುಸಜ್ಜಿತವಾಗಿ ನಿರ್ಮಿಸಲಾಗಿರುವ ಸಮುದಾಯ ಆರೋಗ್ಯ ಕೇಂದ್ರ ಕಟ್ಟಡ ಉದ್ಘಾಟಿಸಿ ಬಡ ಜನತೆಗೆ ಆರೋಗ್ಯ ಸೇವೆ ಪಡೆಯಲು ಅನುವು ಮಾಡಿಕೊಡಬೇಕು. ಏನೇ ರಾಜಕೀಯ ವ್ಯತ್ಯಾಸಗಳಿದ್ದರೂ ಸಹ ಬಡಜನರ ಆರೋಗ್ಯ ಸೇವೆಯಅನುಕೂಲಕ್ಕಾಗಿ ಕೂಡಲೇ ಉದ್ಘಾಟನೆ ನೆರವೇರಿಸಿ ಆರೋಗ್ಯ ಭಾಗ್ಯ ದೊರಕಿಸಿ ಕೊಡಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಉತ್ತರ ಕರ್ನಾಟಕ ರಾಜ್ಯ ರೈತ ಸಂಘದಅಧ್ಯಕ್ಷ ಶಂಕರಗೌಡ ಹಿರೇಗೌಡರ, ಅಮೀದ್ ಮುಲ್ಲಾ, ಚಿದಾನಂದ ಭಜಂತ್ರಿ, ದಾವಲ್ ಸಾಬ್ ಹೆಬ್ಬಾಳ, ಸಂಗನಗೌಡ ಬಿರಾದಾರ, ಮಲಕು ಭಜಂತ್ರಿ, ದಾದಾ ಬೇಪಾರಿ, ಅಬೂಬಕರ್ ಯಲಗಾರ, ಮಲ್ಲು ಬಿರಾದಾರ ಸೇರಿದಂತೆ ನಮ್ಮ ಕರ್ನಾಟಕ ಸೇನೆ ಪದಾಧಿಕಾರಿಗಳು, ಮುಖಂಡರು ಹಾಜರಿದ್ದರು.

ರಸಗೊಬ್ಬರ ಪರಿಶೀಲಿಸಿದ ಅಧಿಕಾರಿಗಳು

ಇಂಡಿ: ನಗರಗಳಲ್ಲಿರುವ ಕೆಲವು ರಾಸಾಯನಿಕ ಗೊಬ್ಬರ ದಾಸ್ತಾನು ಅಂಗಡಿಗಳಿಗೆ ಕೃಷಿ ಉಪ ನಿರ್ದೇಶಕ ಚಂದ್ರಕಾಂತ ಪವಾರ ಅವರ ನೇತೃತ್ವದಲ್ಲಿ ಭೇಟಿ ನೀಡಿ ರಸಗೊಬ್ಬರ ಪರಿಶೀಲನೆ ಮಾಡಿ ಸರ್ಕಾರ ನಿಗದಿ ಪಡಿಸಿದ ದರಕ್ಕೆ ಕೃಷಿ ಪರಿಕರಗಳನ್ನು ನೀಡಬೇಕು. ದಾಸ್ತಾನು ಸ್ಟಾಕು ಲಗ್ತಿಸಬೇಕು ಎಂದರು.

ನಗರದ ರೈಲು ನಿಲ್ದಾಣ ರಸ್ತೆಯಲ್ಲಿರುವ ರಾಸಾಯನಿಕ ಗೊಬ್ಬರ ದಾಸ್ತಾನು ಅಂಗಡಿಗಳ ಕೇಲವು ಅಂಗಡಿಗಳ ಮಾಲಿಕರಾದ ಎ.ಸಿ.ಧನಶೆಟ್ಟಿ, ಸಿಂದಗಿ ರಸ್ತೆಯ ಶಾಂತು ಧನಶೆಟ್ಟಿ ಮತ್ತು ಪ್ರಕಾಶಗೌಡ ಬಿರಾದಾರ ಇವರ ಮಳಿಗೆಗಳಿಗೆ ಭೇಟಿ ದಾಸ್ತಾನುಗಳ ಬಗ್ಗೆ ಪರಿಶಿಲನೆ ಮಾಡಿದರು.

ಈಗಾಗಲೇ ತಾಲೂಕಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ಗೊಬ್ಬರ ಸಂಗ್ರಹವಿದೆ. ಸರಿಯಾದ ದರಕ್ಕೆ ಗೊಬ್ಬರ ನೀಡಿ ದರ ಪಟ್ಟಿ ಪ್ರಕಟಿಸಬೇಕು. ಅವಧಿ ಮುಗಿದ ಗೊಬ್ಬರ, ಕೀಟನಾಶಕಗಳನ್ನು ಯಾವುದೆ ಕಾರಣಕ್ಕೂ ರೈತರಿಗೆ ನೀಡಬಾರದು. ಒಂದು ವೇಳೆ ಹಾಗೆ ಕಂಡು ಬಂದಲ್ಲಿ ಕಾನೂನು ಕ್ರಮ ಜರುಗಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಹಾಯಕ ಕೃಷಿ ನಿರ್ದೇಶಕ ಮಹಾದೇವಪ್ಪ ಏವೂರ, ಕೃಷಿ ಅಧಿಕಾರಿ ಮಹಾಂತೇಶ ಶೆಟ್ಟೆಣ್ಣವರ ಮತ್ತಿತರಿದ್ದರು.



ಪ್ರಜಾಸೌಧ ಸ್ಥಳಾಂತರ: 51ನೇ ದಿನಕ್ಕೆ ಕಾಲಿಟ್ಟ ಹೋರಾಟ

ತಾಳಿಕೋಟೆ: ತಾಲೂಕಿನ ಮೈಲೇಶ್ವರ ಗ್ರಾಮದ ಬಳಿ ನಿರ್ಜನ ಪ್ರದೇಶದಲ್ಲಿ 'ಪ್ರಜಾಸೌಧ' ನಿರ್ಮಿಸಲು ಹೊರಟಿರುವ ಸರ್ಕಾರದ ಹಠಮಾರಿತನದ ವಿರುದ್ಧ ಸಾರ್ವಜನಿಕ ಆಕ್ರೋಶ ಸ್ಫೋಟಗೊಂಡಿದೆ. ಬುಧವಾರದ ವೇಳೆಗೆ ಧರಣಿ ಸತ್ಯಾಗ್ರಹವು ಯಶಸ್ವಿಯಾಗಿ 50 ದಿನಗಳನ್ನು ಪೂರೈಸಿ, 51ನೇ ದಿನಕ್ಕೆ ಕಾಲಿಟ್ಟಿದ್ದು, ಹೋರಾಟದ ಕಿಚ್ಚು ತಾಲೂಕಿನಾದ್ಯಂತ ಹಬ್ಬುತ್ತಿದೆ.

ಬುಧವಾರ ನಡೆದ ಪ್ರತಿಭಟನೆಯಲ್ಲಿ ಹೀರೂರ ಹಾಗೂ ಚೋಕ್ಕಾವಿ ಗ್ರಾಮದ ನೂರಾರು ಗ್ರಾಮಸ್ಥರು ಭಾಗವಹಿಸಿ ತಮ್ಮ ಸಂಪೂರ್ಣಬೆಂಬಲಘೋಷಿಸಿದರು. ಈ ವೇಳೆ ಮಾತನಾಡಿದ ಯುವ ಮುಖಂಡ ಸಂಗಮೇಶ ಕೊಪ್ಪದ, ನಿರ್ಜನ ಪ್ರದೇಶದಲ್ಲಿ ಸೌಧ ನಿರ್ಮಿಸುವ ನಿರ್ಧಾರದ ಹಿಂದೆ ಭೂ-ಮಾಫಿಯಾದ ಕೈವಾಡವಿದೆ. ದಾನ ನೀಡಿದವರ ಸ್ವಹಿತಾಸಕ್ತಿಗಾಗಿ ಸಾವಿರಾರು ಜನರ ಅನುಕೂಲವನ್ನು ಬಲಿ ಕೊಡಲಾಗುತ್ತಿದೆ. ಇದು ಕೇವಲ ಕಚೇರಿ ನಿರ್ಮಾಣವಲ್ಲ, ಸಾರ್ವಜನಿಕರ ಹಿತಾಸಕ್ತಿಯ ಹತ್ಯೆ ಎಂದು ಖಂಡಿಸಿದರು.



ಹೀರೂರ ಹಾಗೂ ಚೋಕ್ಕಾವಿ ಗ್ರಾಮದ ಹಿರಿಯರಾದ ಗುರಣ್ಣ ಚೌದರಿ, ಬಸವರಾಜ ಹೊಸಮನಿ, ಖಾಜಾಸಾಬ ಮಕಂದರ ಸಿದ್ದನಗೌಡ ಬಿರಾದಾರ, ಉಮೇಶ ಬಿರಾದಾರ ಸೋಮನಗೌಡ ಬೂದಿಹಾಳ, ರಾಮನಗೌಡ ಪಾಟೀಲ, ಭೀಮಣ್ಣ ಬಂಡಿವಡ್ಡರ, ಮಡಿವಾಳಪ್ಪ ಲಾಳಸಂಗಿಶಾಂತಗೌಡಜೈನಾಪುರ, ಶಾಂತಪ್ಪ ಸಜ್ಜನ, ರೇವಣಸಿದ್ದ ಇಂಗಳೇಶ್ವರ, ಗೌಡಪ್ಪ ವಂದಾಲ, ಸಂಗಣ್ಣ ತಳವಾರ, ಗುರುಣ್ಣ ತಮ್ಮದಡ್ಡಿ, ಅನೇಕರು ಹಾಜರಿದ್ದರು.

ಹೋರಾಟ ಸಮಿತಿಯ ಅಧ್ಯಕ್ಷ ದಶರಥಸಿಂಗ್ ಮನಗೂಳಿ, ಎಸ್.ಬಿ. ಕಟ್ಟಿಮನಿ, ಆರ್ ಎಸ್ ಪಾಟೀಲ (ಕುಚಬಾಳ) ಮುತ್ತಪ್ಪ ಚಮಲಾಪುರ, ಕಾಶೀನಾಥ ಮುರಾಳ, ಮುರಿಗೆಪ್ಪ ಸರಶೆಟ್ಟಿ, ದತ್ತು ಹೆಬಸೂರ, ಪರಶುರಾಮ ತಂಗಡಗಿ, ನಾಗೇಶ ಕಟ್ಟಿಮನಿ, ದೇವೇಂದ್ರ ಹಾದಿಮನಿ, ವಿಜಯಸಿಂಗ್ ಹಜೇರಿ, ಮಹೇಶ ಛಲವಾದಿ, ಪ್ರಕಾಶ್ ಹಜೇರಿ ಮುದಕಪ್ಪ ಬಡಿಗೇರ, ಸಿರಸಕುಮಾರ ಹಜೇರಿ, ಮಲ್ಲು ಮೇಟಿ, ಸದ್ದಾಂ ಹುಸೇನ್ ಬೀಳಗಿ, ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಕಿರುಸುದ್ದಿ

ವಿದ್ಯುತ್ ಪರಿವರ್ತಕಗಳ ಸುತ್ತ ತಂತಿ ಬೇಲಿ ಹಾಕಿ



ಕುಷ್ಟಗಿ: ಪಟ್ಟಣದ ವಿವಿಧ ಕಡೆ ಇರುವ ವಿದ್ಯುತ್ ಪರಿವರ್ತಕಗಳ ಸುತ್ತಲೂ ತಂತಿಬೇಲಿ ಹಾಕುವಂತೆ ಸಾಮಾಜಿಕ ಕಾರ್ಯಕರ್ತ ಮುತ್ತುರಾಜ ಕಟ್ಟಿಮನಿ ಗುಲಬುರ್ಗಾ ವಿದ್ಯುತ್ ಸರಬರಾಜು ಕಂಪನಿಯ ಕುಷ್ಟಗಿ ಉಪ ವಿಭಾಗ ಸಹಾಯಕ ಕಾರ್ಯಪಾಲಕ ಅಭಿಯಂತರ ಕೆಂಚಪ್ಪ ಭಾವಿಮನಿ ಅವರಿಗೆ ಮನವಿ ಸಲ್ಲಿಸಿದರು.

ಸಾರ್ವಜನಿಕರ ಸುರಕ್ಷತೆಗಾಗಿ ಪಟ್ಟಣದ ವಿವಿಧ ಕಡೆ ಇರುವ ವಿದ್ಯುತ್ ಪರಿವರ್ತಕ (ಟಿಸಿ)ಗಳಿಂದ ಆಕಸ್ಮಿಕ ವಿದ್ಯುತ್ ಅವಘಡಗಳು ಮತ್ತು ಅಪಾಯಗಳು ಆಗುವ ಸಾಧ್ಯತೆವಿದ್ದು, ಸುತ್ತಲೂ ಸಾರ್ವಜನಿಕರ ಸುರಕ್ಷತೆ ಹಿತದೃಷ್ಟಿಯಿಂದ ತಂತಿ ಬೇಲಿ ಹಾಕುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರ ಕೆಂಚಪ್ಪ ಭಾವಿಮನಿ ಅವರಿಗೆ ಸಮಾಜಿಕ ಕಾರ್ಯಕರ್ತ ಮುತ್ತುರಾಜ ಡಿ.ಕಟ್ಟಿಮನಿ ಮನವಿ ಸಲ್ಲಿಸಿದರು.

ಆರೋಗ್ಯಕ್ಕೆ ವಿಜ್ಞಾನದ ಜೊತೆ ನಿಲ್ಲೋಣ: ಶೋಭಾ



ಕುಕನೂರು: ಆರೋಗ್ಯಕ್ಕಾಗಿ ವಿಜ್ಞಾನದೊಂದಿಗೆ ನಿಲ್ಲೋಣ ಎಂಬುದು ಈ ವರ್ಷದ ಘೋಷವಾಕ್ಯವಾಗಿದೆ. ಜಾಗತಿಕ ಆರೋಗ್ಯ ಸಮಸ್ಯೆಗಳನ್ನು ಬೆಳಕಿಗೆ ತಂದು ಆರೋಗ್ಯ ಜಾಗೃತಿ ಮೂಡಿಸುವುದು ಇದರ ಉದ್ದೇಶವಾಗಿದೆ ಎಂದು ಪ್ರಾಚಾರ್ಯ ಶೋಭಾ ಹೇಳಿದರು.

ತಾಲೂಕಿನ ತಳಕಲ್ ಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ ಸಹಯೋಗದಲ್ಲಿ ನಡೆದವಿಶ್ವ ಆರೋಗ್ಯ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಇಂದಿನ ದಿನಗಳಲ್ಲಿ ಅನೇಕರು ಫಾಸ್ಟ್‌ಫುಡ್ ಕಡೆಗೆ ಆಕರ್ಷಿತರಾಗುತ್ತಿದ್ದಾರೆ. ಇದರಿಂದ ಅನಾರೋಗ್ಯ ಸಮಸ್ಯೆ ಕಾಡುತ್ತಿವೆ' ಆದಕ್ಕೆ ಯಾವ ರೀತಿಯಾದ ವಿದ್ಯಾರ್ಥಿಗಳು ಆರೋಗ್ಯವನ್ನು ಕೆಡಿಸಿಕೊಳ್ಳದೆ ಉತ್ತಮ ಆರೋಗ್ಯದೊಂದಿಗೆ ಉತ್ತಮ ಶಿಕ್ಷಣ ಪಡೆಯಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ಆರೋಗ್ಯಕ್ಕೆ ಆಪ್ತ ಸಮಾಲೋಚಕ ಕನಕರಾಯ ಭಜಂತ್ರಿ. ಉಪನ್ಯಾಸಕರಾದ ಇ.ಆರ್.ಲಗಳೂರ್, ಬೀರಪ್ಪ ಹಾಗೂ ಇತರೆ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿದ್ದರು.

ನೂತನ ರಥೋತವಕ್ಕೆ ಆರತಿ ಬೆಳಗಿ ಸ್ವಾಗತಿಸಿದ ಭಕ್ತರು

ಕುಕನೂರ: ತಾಲೂಕಿನ ಭಟಪನಹಳ್ಳಿ ಗ್ರಾಮದ ಶ್ರೀಭೀಮಾಂಬಿಕಾದೇವಿಯ 29ನೇ ಜಾತ್ರೋತ್ಸವದಂಗವಾಗಿ ಎ.18ರಂದು ಸಂಜೆ 5.30ಕ್ಕೆ ನೂತನ ರಥೋತ್ಸವ ಜರುಗುವುದು. ಯಲಬುರ್ಗಾ ತಾಲೂಕಿನ ನರಸಾಪೂರ ಗ್ರಾಮದ ಶ್ರೀಮೌನ ಜ್ಯೋತಿ ಶಿಲ್ಪಾ ಕಲಾ ಕೇಂದ್ರದ ಶಿಲ್ಪಿ ಶರಣಕುಮಾರ ಬಡಿಗೇರ ಹಾಗೂ ಸಂಘಡಿಗರಿಂದ ತಯಾರದ ಸುಂದರ ರಥೋತ್ಸವಕ್ಕೆ ಪೂಜಾ ವಿಧಾನಗಳಿಂದ ಪೂಜಿಸಿ, ಭಟಪನಹಳ್ಳಿಯ ಭಜನಾ ಸಂಘ ಹಾಗೂ ಮಹಿಳೆಯರು ಕುಂಭ ಕಳಸದೊಂದಿಗೆ ಸಕಲ ವಾದ್ಯಾಗಳೊಂದಿಗೆ ಮೇರವಣಿಗೆ ಮುಖಾಂತರವಾಗಿ ಗುರು ಹಿರಿಯರು ಆರತಿ ಬೆಳಗಿ ಸ್ವಾಗತಕೋರಿದರು. ಭೀಮಾಂಬಿಕಾದೇವಿ ಪುರಾಣ ಸಮಿತಿಯವರು ಹಾಗೂಭಕ್ತರು ಭಾಗವಹಿಸಿದ್ದರು.





ಕುಷ್ಟಗಿ: ಪಟ್ಟಣದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಚೇರಿಯಲ್ಲಿ ಮಂಗಳವಾರ ಡಾ.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಸಿಡಿಪಿಒ ಯಲ್ಲಮ್ಮ ಹಂಡಿ, ಹಿರಿಯ ಮೇಲ್ವಿಚಾರಕಿ ಭುವನೇಶ್ವರಿ ಸುಂಕನಹಟ್ಟಿ ವಲಯ ಮೇಲ್ವಿಚಾರಕ ನಾಗಮ್ಮ ಗುಂಡೂರು, ಪುಷ್ಪಾ, ಅನ್ನಪೂರ್ಣ ಪಾಟೀಲ, ರೂಪಾ, ಯಮನಮ್ಮ ಗಟ್ಟಿ, ಸಾವಿತ್ರಿ, ಕಲಾವತಿ ಬಕನಕೊಪ್ಪ, ಶಕುಂತಲಾ ಪೂಜಾರಿ, ಶೋಭಾ ನಾಯಕ್, ಭಾಗ್ಯಶ್ರೀ ಹೊಸ್ಮನಿ, ಲತಾ, ಸಿಬ್ಬಂದಿ ಹೊಳೆಯಪ್ಪ ಹಲಗಿ, ವೆಂಕಟೇಶ್ ಇತರರಿದ್ದರು.

ಡಾ.ಬಿ.ಆರ್.ಅಂಬೇಡ್ಕರ್ ಜಯಂತ್ಯುತ್ಸವ

ಮಸ್ಕಿ: ಭಾರತದಲ್ಲಿ ಜಾತಿ ವ್ಯವಸ್ಥೆ ಮೂರು ಕಾಲಕ್ಕೂ ಅಸ್ಪೃಶ್ಯರಿಗೆ ಶಾಪವಾಗಿದೆ. ಅದ್ದರಿಂದಲೇ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಜಾತಿ ನಿರ್ಮೂಲನೆಗೆ ಹೋರಾಡಿದರು ಎಂದು ಆರ್.ಮಾನಸಯ್ಯ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಭ್ರಮರಾಂಬ ದೇವಸ್ಥಾನದ ಆವರಣದಲ್ಲಿ ತಾಲೂಕು ಆಡಳಿತ, ತಾಪಂ, ಪುರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ನಡೆದ ಡಾ.ಬಾಬು ಜಗಜೀವನ ರಾಂ ರವರ 119ನೇ ಜಯಂತಿ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ರವರ 135 ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ ಮಾತನಾಡಿದರು. ನಾನು ಶಾಸಕನಾಗಿ ಆಯ್ಕೆಯಾಗಿ ನಿಮ್ಮ ಮುಂದೆ ನಿಲ್ಲಬೇಕಾದರೆ ಇದಕ್ಕೆ ಮೂಲ ಕಾರಣ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಬರೆದ ಸಂವಿಧಾನವೇ ಮೂಲ ಕಾರಣ ಎಂದು ಶಾಸಕ ಆರ್.ಬಸನಗೌಡ ತುರವಿಹಾಳ ಅವರು ಹೇಳಿದರು.

ಇನ್ನೂ ಈ ಇಬ್ಬರು ಮಹಾನ್ ನಾಯಕರುಗಳ ಜಯಂತೋತ್ಸವದ ಅಂಗವಾಗಿ ಪಟ್ಟಣದಲ್ಲಿ ಕಳೆದ ಮೂರು ದಿನಗಳಿಂದ ಪಟ್ಟಣದ ಗಾಂಧಿನಗರದಿಂದ ಬಸವೇಶ್ವರ ವೃತ್ತವರೆಗೆ ರಾಷ್ಟ್ರೀಯ ಹೆದ್ದಾರಿಯ ದಾರಿಯುದ್ದಕ್ಕೂ ಎರಡು ಬದಿಗಳ ವಿದ್ಯುತ್ ದೀಪಗಳಿಗೆ ನೀಲಿ ಬಣ್ಣದ ಬಾವುಟ ಹಾಗೂ ಬಂಟಿಂಗ್ಸ್ ಗಳನ್ನು ಪುರಸಭೆ ಸಿಬ್ಬಂದಿಗಳು ಕಟ್ಟಿ ಪಟ್ಟಣವನ್ನು ಮದುವಣಗಿತ್ತಿಯಂತೆ ನೀಲಿಮಯವಾಗಿ ಸಿಂಗಾರಗೊಳಿಸಲಾಗಿತ್ತು. ಈ ವೇಳೆ ಅನೇಕ ಮುಖಂಡರು,ಅಧಿಕಾರಿಗಳು ಭಾಗವಹಿಸಿದ್ದರು.



ಮಸ್ಕಿ: ಪಟ್ಟಣದ ಭ್ರಮರಾಂಬ ದೇವಸ್ಥಾನದ ಆವರಣದಲ್ಲಿ ತಾಲೂಕು ಆಡಳಿತ, ತಾಪಂ, ಪುರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ನಡೆದ ಡಾ.ಬಾಬು ಜಗಜೀವನ ರಾಂ ರವರ 119ನೇ ಜಯಂತಿ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ದಾಸೋಹ ಮಹಾ ಮನೆಯಲ್ಲಿ ಶಾಸಕ ಬಿ.ಆರ್.ಪಾಟೀಲ ಹೇಳಿಕೆ

ಇಂದಿನಿಂದ ಬಸವ ಜಯಂತ್ಯುತ್ಸವ

ಕಲಬುರಗಿ: ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣನವರ 893ನೇ ಜಯಂತಿ ಮಹೋತ್ಸವದ ಅಂಗವಾಗಿ ನಗರದಲ್ಲಿ ಇಂದಿನಿಂದ ಬಸವ ಜಯಂತಿ ಉತ್ಸವ-2026 ಅತ್ಯಂತ ವೈಭವ ಅರ್ಥಪೂರ್ಣವಾಗಿ ಜಯಂತಿ ಜರುಗಲಿದೆ ಎಂದು ಉತ್ಸವ ಸಮಿತಿಯ ಅಧ್ಯಕ್ಷ ಹಾಗೂ ಶಾಸಕ ಬಿ.ಆರ್.ಪಾಟೀಲ ತಿಳಿಸಿದರು.

ಬುಧವಾರ ನಗರದ ಶರಣಬಸವೇಶ್ವರ ಸಂಸ್ಥಾನದ ದಾಸೋಹ ಮಹಾಮನೆಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು,ಇಂದಿನಿಂದ ಮೂರು ದಿನಗಳ ವರೆಗೆ ವಿಶೇಷ ಉಪನ್ಯಾಸ ನಡೆಯಲಿವೆ. ಏ.16ರಂದು ಪೂಜ್ಯ ಪ್ರಭುಶ್ರೀ ಮಾತಾಜಿ ಅಕ್ಕಮಹಾದೇವಿ, ಏ.17ರಂದು ಗದ್ದುಗೆಮಠದ ಚರಲಿಂಗ ಶ್ರೀಗಳು ಹಾಗೂ ಏ.18ರಂದು ಗುರುಮಿಠಕಲ್‌ನ ಶಾಂತವೀರ ಶಿವಾಚಾರ್ಯರು ಬಸವ ತತ್ವದ ವಿವಿಧ ಆಯಾಮಗಳ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಉತ್ಸವದ ಪ್ರಮುಖ ಘಟ್ಟವಾದ ಏ.19ರಂದು ಇಲಕಲ್ ಚಿತ್ತರಗಿ ವಿಜಯ ಮಾಂತೇಶ್ವರ್ ಶ್ರೀಗಳ ನೇತೃತ್ವದಲ್ಲಿ ಬೆ.6:30ಕ್ಕೆ ಅಖಿಲ ಭಾರತ ಶಿವಾನುಭವ ಮಂಟಪದಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ, ಲಿಂಗದೀಕ್ಷೆ ಕಾರ್ಯಕ್ರಮ ನಡೆಯಲಿದೆ. ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ.ದಾಕ್ಷಾಯಣಿ ಅಪ್ಪ ಚಾಲನೆ ನೀಡಲಿದ್ದಾರೆ. ಶರಣಬಸವೇಶ್ವರ ಸಂಸ್ಥಾನದ 9ನೇ ಪೀಠಾಧಿಪತಿ ದೊಡ್ಡಪ್ಪ ಎಸ್.ಅಪ್ಪ ಅವರು ಗೌರವ ಉಪಸ್ಥಿತರಿರಲಿದ್ದಾರೆ. ಅದೇ ದಿನ ಬೆಳಗ್ಗೆ 9:30ಕ್ಕೆ ಕಾರ್ ರ‍್ಯಾಲಿ, ಮಹಿಳೆಯರ ಬೈಕ್ ರ‍್ಯಾಲಿ ಜರುಗಲಿದ್ದು, ಸಂಜೆ 5 ಗಂಟೆಗೆ ಜಾತ್ರಾ ಮೈದಾನದಲ್ಲಿ ಬಹಿರಂಗ ಸಭೆ ನಡೆಯಲಿದ್ದು, ಸಚಿವ ಈಶ್ವರ ಖಂಡ್ರೆ ವಿಶೇಷವಾಗಿ ಸನ್ಮಾನಿಸಲಾಗುವುದು ಎಂದರು.

ಸಚಿವ ಶರಣಬಸಪ್ಪಾ ದರ್ಶನಾಪುರ ಮಾತನಾಡಿದರು.

9ನೇ ಪೀಠಾಧೀಪತಿ ದೊಡ್ಡಪ್ಪ ಅಪ್ಪಾ, ಬಸವರಾಜ ದೇಶಮುಖ, ಸಮಿತಿ ಕಾರ್ಯಾಧ್ಯಕ್ಷ ಬಿ.ಜಿ.ಪಾಟೀಲ, ಶಾಸಕ ಎಂ.ವೈ.ಪಾಟೀಲ, ಶಶೀಲ್ ಜಿ.ನಮೋಶಿ, ಅಖಿಲ ಮಹಾಸಭಾದ ಜಿಲ್ಲಾಧ್ಯಕ್ಷ ಶರಣಕುಮಾರ ಮೋದಿ, ಡಾ.ಭೀಮಾಶಂಕರ ಬಿಲಗುಂದಿ, ದೊಡ್ಡಪ್ಪಗೌಡ ಪಾಟೀಲ, ಅರುಣಕುಮಾರ ಪಾಟೀಲ ಕೂಡಲಹಂಗರಗಾ, ಚಂದು ಪಾಟೀಲ, ಪ್ರವೀಣ ಪಾಟೀಲ ಹರವಾಳ, ಡಾ.ಕಿರಣ ದೇಶಮುಖ, ಸಂಗಮೇಶ ನಾಗನಳ್ಳಿ, ಆರ್.ಜಿ.ಶೆಟಗಾರ, ರವೀಂದ್ರ ಶಾಬಾದಿ, ಶಿವಕಾಂತ ಮಹಾಜನ, ಸೋಮಶೇಖರ ಹಿರೇಮಠ, ಸಂತೋಷ್ ಲಂಗರ್, ಗೌರಿ ಚಿಚಕೋಟಿ, ಸಾವಿತ್ರಿ ಕುಳಗೇರಿ, ಅಶೋಕ್ ಪಾಟೀಲ್ ಸೇರಿ ಅನೇಕ ಬಸವಾಭಿಮಾನಿಗಳು ಉಪಸ್ಥಿತರಿದ್ದರು.



> ಲಿಂಗ, ಜಾತಿ ಮತ್ತು ವರ್ಗ ತಾರತಮ್ಯವಿಲ್ಲದೆ ಎಲ್ಲರಿಗೂ ಸಮಾನ ಅವಕಾಶ ನೀಡಿದ ಪ್ರಜಾಪ್ರಭುತ್ವದ ಮೌಲ್ಯ ನಾವು ಇಂದಿನ ಪೀಳಿಗೆಗೆ ದಾಟಿಸಬೇಕಿದೆ. ಬಸವ ಸಮಿತಿಯ ಈ ಕಾರ್ಯ ಶ್ಲಾಘನೀಯ. ಸರ್ವರೂ ಒಗ್ಗೂಡಿ ಬಸವಣ್ಣನವರ ತತ್ವಸಿದ್ಧಾಂತ ಜಗತ್ತಿಗೆ ಸಾರೋಣ.
>
> ■ ಡಾ.ದಾಕ್ಷಾಯಣಿ ಎಸ್.ಅಪ್ಪಾ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷೆ

ಬಸವಶ್ರೀ ಪ್ರಶಸ್ತಿ ಪ್ರದಾನ

ಪ್ರಗತಿಪರ ಚಿಂತಕ ಆರ್.ಕೆ. ಹುಡಗಿಗೆ 1 ಲಕ್ಷ ರೂ. ವುಳ್ಳ ಬಸವಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಪಿಯುಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಸೃಷ್ಟಿ ಪಾಟೀಲ ವಿಶೇಷ ಸನ್ಮಾನದ ಜೊತೆ 1 ಲಕ್ಷ ರೂ. ಹಾಗೂ ಬಸವರಾಜ ಗಂಗಾಧರ, ಉಮೇಶ ಶೆಟ್ಟಿ ಹಾಗೂ ಸಿದ್ರಾಮಪ್ಪ ದುಲಂಗೆ ಅವರಿಗೆ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದರು.

> ಬಸವಣ್ಣನವರ ವಿಚಾರಧಾರೆ ಹಾಗೂ ವಚನ ಸಂದೇಶಗಳನ್ನು ಯುವಜನತೆಯಲ್ಲಿ ಜಾಗೃತಗೊಳಿಸುವ ನಿಟ್ಟಿನಲ್ಲಿ ಈ ಬಾರಿ ಅತ್ಯಂತ ಅರ್ಥಪೂರ್ಣವಾಗಿ ಬಸವ ಜಯಂತಿ ಆಚರಿಸಲಾಗುತ್ತಿದೆ. ಸಮಿತಿಯು ಯಾರಿಂದಲೂ ದೇಣಿಗೆ ಸಂಗ್ರಹಿಸುತ್ತಿಲ್ಲ.
>
> ■ ಡಾ.ಶರಣಪ್ರಕಾಶ ಪಾಟೀಲ, ಸಚಿವ

ಅಂಬೇಡ್ಕರ್ ಸರ್ವರಿಗೂ ಶಕ್ತಿ: ಹಿಟ್ನಾಳ

ಕೊಪ್ಪಳ: ಸರ್ವರಿಗೂ ಸಮಾನ ಅವಕಾಶಗಳನ್ನು ಸಿಗುವಂತಹ ವ್ಯವಸ್ಥೆಯನ್ನು ಸಂವಿಧಾನದ ಮೂಲಕ ಕಲಿಸಿಕೊಟ್ಟ ಬಾಬಾ ಸಾಹೇಬ್ ಅಂಬೇಡ್ಕರ್ ರವರು ಸರ್ವರಿಗೂ ಶಕ್ತಿಯಾಗಿದ್ದಾರೆ ಎಂದು ಸಂಸದ ಕೆ.ರಾಜಶೇಖರ ಬಸವರಾಜ ಹಿಟ್ನಾಳ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಹಾಗೂ ನಗರಸಭೆ ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಏಪ್ರಿಲ್ 14ರಂದು ನಗರದ ಸಾಹಿತ್ಯ ಭವನದಲ್ಲಿ ಹಮ್ಮಿಕೊಂಡಿದ್ದ ಮಹಾನ್ ಮಾನವತಾವಾದಿ, ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ರವರ 135ನೇ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಅಸಮಾನತೆಯಿಂದ ಕೂಡಿದ್ದ ನಮ್ಮ ದೇಶದಲ್ಲಿ ಸಮಾನತೆಯನ್ನು ತರಲು ಹಾಗೂ ಮೇಲು-ಕೀಳು, ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಶಿಕ್ಷಣ, ಸಂಘಟನೆ, ಹೋರಾಟಗಳ ಮೂಲಕ ದೇಶದಲ್ಲಿ ಸಮ ಸಮಾಜವನ್ನು ನಿರ್ಮಿಸಲು ಡಾ. ಬಿ.ಆರ್. ಅಂಬೇಡ್ಕರ್ ರವರು ಹಲವಾರು ಹೋರಾಟ, ಚಳುವಳಿಗಳ ಮೂಲಕ ಶ್ರಮಿಸಿದ್ದಾರೆ. ಹಿಂದುಳಿದವರು, ಮಹಿಳೆಯರು ಹಾಗೂ ಅಲ್ಪಸಂಖ್ಯಾತರಿಗೆ ಬದುಕನ್ನು ಕಟ್ಟಿಕೊಳ್ಳಲು ಅವರು ರಚಿಸಿದ ಸಂವಿಧಾನವು ನಮ್ಮೆಲ್ಲರಿಗೆ ಒಂದು ಶಕ್ತಿಯಾಗಿದೆ ಎಂದರು. ಅಂಬೇಡ್ಕರ್ ಎಂದರೇ, ಒಂದು ಚಳುವಳಿ, ಸಮಾನತೆ, ಸಮಾನತೆಯ ಬದುಕು ಕಟ್ಟಿಕೊಟ್ಟವರು. ಅವರು ಎಲ್ಲಾ ವರ್ಗದವರಿಗೂ ರಾಜಕೀಯ, ಸಾಮಾಜಿಕ, ಆರ್ಥಿಕ ಸಮಾನತೆಯನ್ನು ನೀಡಿದ್ದಾರೆ. ಇದನ್ನು ನಾವುಗಳು ಸಂವಿಧಾನದ ಪೀಠಿಕೆ ಪ್ರಸ್ತಾವನೆಯಲ್ಲಿ ಸ್ಪಷ್ಟವಾಗಿ ಕಾಣಬಹುದು. ಇಂತಹ ಸಂವಿಧಾನದ ಪೀಠಿಕೆ ಪ್ರಸ್ತಾವನೆಯ ಸ್ಮಾರಕವನ್ನು ಜಿಲ್ಲಾಡಳಿತ ಭವನದ ಆವರಣದಲ್ಲಿ ಇಂದು ಅನಾವರಣ ಮಾಡಲಾಗಿದ್ದು, ಸಂತೋಷದ ವಿಚಾರವಾಗಿದೆ ಎಂದರು.

ವಿಪ ಸದಸ್ಯ ಹೇಮಲತಾ ನಾಯಕ ಮಾತನಾಡಿದರು. ರಾಮಸಾಗರದ ಸರ್ಕಾರಿ ಪ್ರೌಢ ಶಾಲೆಯ ಶಿಕ್ಷಕ ಸುಗ್ಗೇನಹಳ್ಳಿ ರಮೇಶ್ ಅವರು ಡಾ.ಅಂಬೇಡ್ಕರ್ ಕುರಿತು ವಿಶೇಷ ಉಪನ್ಯಾಸ ನೀಡಿದರು. ಎಸ್ಪಿ ಡಾ.ರಾಮ್ ಎಲ್. ಅರಸಿದ್ದಿ, ಡಿಎಫ್‌ಒ ನಿರ್ಮಲಾ, ಸಹಾಯಕ ಆಯುಕ್ತ ಕ್ಯಾ.ಮಹೇಶ್ ಮಾಲಗಿತ್ತಿ, ಜಿಪಂ ಉಪಕಾರ್ಯದರ್ಶಿ ಟಿ.ಕೃಷ್ಣಮೂರ್ತಿ, ಡಾ.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಪುಷ್ಪಲತಾ, ಡಿಡಿಪಿಐ ಜಗದೀಶ ಇದ್ದರು.



ಶೋಷಣೆ, ಅಸಮಾನತೆ ಇನ್ನೂ ಜೀವಂತ



ಸಿಂಧನೂರು: ಪೂರ್ವಗ್ರಹ ಪೀಡಿತರಿಗೆ ಅಂಬೇಡ್ಕರ್ ಅವರು ಅರ್ಥ ಆಗುವುದಿಲ್ಲ. ಇದರಿಂದಾಗಿ ಸಂವಿಧಾನ ಸಂಪೂರ್ಣವಾಗಿ ಅನುಷ್ಠಾನಗೊಂಡಿಲ್ಲ. ಮಂಗಳ ಗ್ರಹಕ್ಕೆ ಕಾಲಿಟ್ಟರೂ, ಅಂಗಳಕ್ಕೆ ಕಾಲಿಡಲು ಅವಕಾಶ ಸಿಗದೇಶೋಷಣೆ, ಅಸಮಾನತೆಜೀವಂತವಾಗಿದೆ ಎಂದು ಜೇವರ್ಗಿಯ ಉಪನ್ಯಾಸಕ ನಿಜಗುಣ ದೊಡ್ಡಮನಿ ಕಳವಳ ವ್ಯಕ್ತಪಡಿಸಿದರು.

ನಗರದ ಟೌನ್ ಹಾಲ್‌ನಲ್ಲಿ ತಾಲೂಕು ಆಡಳಿತ, ನಗರಸಭೆ, ತಾಪಂ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ಆಯೋಜಿಸಿದ್ದ ಸಂವಿಧಾನ ಶಿಲ್ಪಿ,ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು.

1950ರ ಭಾರತದ ಸಂವಿಧಾನ ರಚನೆಗಿಂತ ಮುಂಚೆ ಭಾರತ ಜಾತಿ ವ್ಯವಸ್ಥೆಯ ಭಾರತವಾಗಿತ್ತು. ಧರ್ಮದ ಅಮಲು ತುಂಬಿ,ಲಿಂಗ ತಾರತಮ್ಯದಿಂದ ಕೂಡಿತ್ತು. ದೇಶಕ್ಕೆ ಸಂವಿಧಾನ ಜಾರಿಯಾದ ಮೇಲೆ ದೇಶದಲ್ಲಿದ್ದ ಅಸಮಾನತೆ ರೋಗ ಶೇ.50ರಷ್ಟು ನಿವಾರಣೆಯಾಯಿತು. ಆದರೆ ಈವರೆಗೆ ಸಂಪೂರ್ಣ ಸಂವಿಧಾನ ಅನುಷ್ಠಾನವಾಗದೇ ಆಳುವ ವರ್ಗದಿಂದ ಅದೇ ಶೋಷಣೆ,ಅಸಮಾನತೆ ಮುಂದುವರೆದಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಸೋಮನಗೌಡ ಬಾದರ್ಲಿ ಮಾತನಾಡಿ, ಅಂಬೇಡ್ಕರ್ ಅವರ ಹೋರಾಟ ಮಾದರಿಯಾಗಿದೆ. ಸಂವಿಧಾನ ಇಲ್ಲದಿದ್ದರೆ ಸಾಮಾನ್ಯರು ಅಧಿಕಾರ ಅನುಭವಿಸಲು ಸಾಧ್ಯವಾಗುತ್ತಿದ್ದಿಲ್ಲ. ಅಂಬೇಡ್ಕರ್ ಅವರ ಹೋರಾಟ ಮತ್ತು ಜೀವನ ತತ್ವ ಆದರ್ಶಗಳು ಸಮಾಜಕ್ಕೆ ಮಾದರಿ ಎಂದರು.

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ದೊಡ್ಡ ಬಸವರಾಜ ಮಾತನಾಡಿದರು.

ನಂತರ ತಹಶೀಲ್ದಾರ್ ಅರುಣ್ ಎಚ್ .ದೇಸಾಯಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾಂಗ್ರೆಸ್ ಯುವ ಮುಖಂಡ ವೆಂಕಟರಾವ್ ಬಾದರ್ಲಿ, ನಗರಸಭೆ ಪೌರಾಯುಕ್ತ ಪಾಂಡುರಂಗ ಇಟಗಿ, ಡಿವೈಎಸ್ಪಿ ಜಿ.ಚಂದ್ರಶೇಖರ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರ ಹಿರೇಮಠ, ತಾಪಂ ಇಒ ಚಂದ್ರಶೇಖರ, ತಾಲೂಕು ಮಟ್ಟದ ಅಧಿಕಾರಿಗಳಾದ ಭೀಮಣ್ಣ ವೆಂಕಟೇಶ, ಸಾಬಣ್ಣ ವಗ್ಗಾರ್, ಲಿಂಗಪ್ಪ ಅಂಗಡಿ, ಲಿಂಗನಗೌಡ, ಅಶೋಕಕುಮಾರ ತರರಿದ್ದರು. ಜಯಂತಿ ಹಿನ್ನೆಲೆ ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರ ಭಾವಚಿತ್ರವನ್ನು ಸಾರೋಟಿನಲ್ಲಿ ಇಟ್ಟುಕೊಂಡು ನಗರದ ಪ್ರಮುಖ ಬೀದಿಗಳಲ್ಲಿ ಅದ್ದೂರಿಯಾಗಿ ಮೆರವಣಿಗೆ ನಡೆಸಲಾಯಿತು.

ಹೊಲಿಗೆಯಂತ್ರ ತರಬೇತಿಯ ಸದುಪಯೋಗಕ್ಕೆ ಸಲಹೆ

ಯಲಬುರ್ಗಾ: ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಉಚಿತವಾಗಿ ಹೊಲಿಗೆಯಂತ್ರಗಳನ್ನು ವಿತರಿಸುವ ಮೂಲಕ ಮಹಿಳೆಯರನ್ನು ಆರ್ಥಿಕವಾಗಿ ಸ್ವಾವಲಂಬಿಯನ್ನಾಗಿಸುವ ಉದ್ದೇಶದಿಂದ ಸರ್ಕಾರ ಈ ಸಂಸ್ಥೆಯ ಸಹಭಾಗಿತ್ವದಡಿಯಲ್ಲಿ ಯೋಜನೆಯನ್ನು ಜಾರಿಗೊಳಿಸಿದೆ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ ಜಿಲ್ಲಾ ನಿರ್ದೇಶಕ ರಾಯೇಶ್ವರ ಪೈ ಹೇಳಿದರು.

ತಾಲೂಕಿನ ಬೇವೂರು ಗ್ರಾಮದಲ್ಲಿ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಜಿಲ್ಲಾ ಸಂಸ್ಥೆ ಹಾಗೂ ಶ್ರೀಕೂಡಲ ಸಂಗಮೇಶ್ವರ ವಿದ್ಯಾಭಿವೃದ್ಧಿ ಸಂಸ್ಥೆಯಲ್ಲಿ ನಡೆದ ಉಚಿತ ಮಹಿಳಾ ಹೊಲಿಗೆ ತರಬೇತಿ ಶಿಬಿರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಬಡ ಕುಟುಂಬದ ಜನರಿಗೆ ಹೊಲಿಗೆ ಯಂತ್ರಗಳನ್ನು ವಿತರಿಸುವ ಸ್ವಾವಲಂಬಿ ಯೋಜನೆಯನ್ನು ನಮ್ಮ ಸಂಸ್ಥೆ ಅನುಷ್ಠಾನಗೊಳಿಸಲಾಗುತ್ತಿದ್ದು, ಬಡ ಮಹಿಳೆಯರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು. ಶ್ರೀಕೂಡಲ ಸಂಗಮೇಶ್ವರ ವಿದ್ಯಾಸಂಸ್ಥೆಯ ಸದಸ್ಯ ಕಾರ್ಯದರ್ಶಿ ದ್ಯಾಮಣ್ಣ ಗೊಂದಿ ಪ್ರಾಸ್ತಾವಿಕವಾಗಿ ಮಾತನಾಡಿ, 30 ದಿನಗಳ ಪರಿಯಂತ ಗ್ರಾಮೀಣ ಭಾಗದ ಮಹಿಳೆಯರಿಗೆ ಉಚಿತವಾಗಿ ಹೊಲಿಗೆ ತರಬೇತಿ ನೀಡುತ್ತಿದ್ದು, ರೈತಾಪಿ ವರ್ಗದ ಮಹಿಳೆಯರು ತಮ್ಮ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುವ ಜತೆಗೆ ಬಿಡುವಿನ ಸಮಯದಲ್ಲಿ ಇಂತಹ ಉಪ ಕಸಬುಗಳನ್ನು ಕೈಗೊಳ್ಳುವುದರ ಮೂಲಕ ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಇಂತಹ ತರಬೇತಿಗಳು ಸಹಕಾರಿಯಾಗಿವೆ ಎಂದು ಹೇಳಿದರು. ಡಿಎಸ್‌ಟಿ ಲಕ್ಷ್ಮೀ ಅಂಗಡಿ ಮಾತನಾಡಿದರು. ವನೀತಾ ಕವಳಕೇರಿ, ಪದ್ಮಾವತಿ ಹುಳ್ಳಿ, ಗೀತಾ ಬೊಮ್ಮೋ, ಜ್ಯೋತಿ ಹಳ್ಳಿ, ಶಾಂತಾ ಹಳ್ಳಿ ಮತ್ತಿತರರು ಇದ್ದರು. ಕವಿತಾ ಸಂಗಡಿದರು ಪ್ರಾರ್ಥಿಸಿದರು, ಸರೋಜಮ್ಮ ಮೇಟಿ ಸ್ವಾಗತಿಸಿದರು. ಪ್ರಸಾದ ಆರ್.ಸೆಟ್ಟಿ ನಿರೂಪಿಸಿದರು. ಮಂಜುಳಾ ಮದ್ಲೂರ ವಂದಿಸಿದರು.



ಉತ್ತಮ ಆಡಳಿತ ನೀಡುವಲ್ಲಿ ರಾಜ್ಯ ಸರ್ಕಾರ ವಿಫಲ: ನಾಯಕ

ಮಾನ್ವಿ: ರಾಜ್ಯ ಸರ್ಕಾರವು ರಾಜ್ಯದಲ್ಲಿ ಉತ್ತಮ ಆಡಳಿತವನ್ನು ನೀಡುವಲ್ಲಿ ಹಾಗೂ ರಾಜ್ಯದ ಅಭಿವೃದ್ಧಿ ಕೈಗೊಳ್ಳುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಮಾಜಿ ಸಂಸದ ಬಿ.ವಿ.ನಾಯಕ ಹೇಳಿದರು.

ಪಟ್ಟಣದ ಶ್ರೀಸಂಜೀವರಾಯ ದೇವಸ್ಥಾನದ ಸಭಾಂಗಣದಲ್ಲಿ ಬಿಜೆಪಿ ಮಾನ್ವಿ ಮಂಡಲದ ವತಿಯಿಂದ ನಡೆದ ಪಂ.ದೀನದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ-2026 ಮಂಡಲ ಮಟ್ಟದ ಪ್ರಶಿಕ್ಷಣ ವರ್ಗ ಸಮಾರೋಪ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರದ ದುರಾಡಳಿತದ ವಿರುದ್ಧ ಅಸಮಾಧಾನಗೊಂಡಿದ್ದು ಕೇಂದ್ರದಲ್ಲಿ ಬಿಜೆಪಿ ನೇತೃತ್ವದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಉತ್ತಮ ಆಡಳಿತವನ್ನು ಜನರು ಮೆಚ್ಚಿಕೊಂಡಿದ್ದು, ರಾಜ್ಯದಲ್ಲಿಯು ಕೂಡ ಬಿಜೆಪಿ ನೇತೃತ್ವದ ಸರ್ಕಾರವನ್ನು ಜನರು ಬಯಸುತ್ತಿರುವುದರಿಂದ ಪಕ್ಷದ ಕಾರ್ಯಕರ್ತರು ಕೇಂದ್ರದಲ್ಲಿನ ಬಿಜೆಪಿ ನೇತೃತ್ವದ ಸರಕಾರದ ಸಾಧನೆಗಳನ್ನು, ಪ್ರಗತಿಪರ ಯೋಜನೆಗಳ ಬಗ್ಗೆ ಹಾಗೂ ಪ್ರಧಾನಿ ನರೇಂದ್ರ ಮೋದಿಯವರ ಉತ್ತಮ ಆಡಳಿತದ ಬಗ್ಗೆ ಮನೆ ಮನೆಗೆ ತಲುಪಿಸಬೇಕು ಎಂದು ತಿಳಿಸಿದರು.



ಬಿಜೆಪಿ ಮಾನ್ವಿ ಮಂಡಲ ಅಧ್ಯಕ್ಷರಾದ ವೀರಭದ್ರಗೌಡ ಭೋಗಾವತಿ, ಬಿಜೆಪಿ ಪಕ್ಷದ ಸಿರವಾರ ಮಂಡಲ ಅಧ್ಯಕ್ಷರಾದ ಆರ್.ಕೆ.ಅಮರೇಶಪ್ಪ ಸಾಹುಕಾರ, ಶರಣಪ್ಪ ಗೌಡ ನಕ್ಕುಂದಿ, ಮಲ್ಲಿಕಾರ್ಜುನ್ ಜಕ್ಕಲದಿನಿ, ಕೆ.ನಾಗಲಿಂಗ ಸ್ವಾಮಿ, ಶೈಲಜಾ ಷಡಕ್ಷರಪ್ಪ, ಎಂ.ಬಿಬ್ಬನಗೌಡ, ಗುರುಸಿದ್ದಪ್ಪ ಕಣ್ಣೂರು, ಹನುಮೇಶ ನಾಯಕ ಸೇರಿದಂತೆ ಪ್ರಶಿಕ್ಷಣ ಮಹಾಭಿಯಾನ-2026 ಮಂಡಲ ಮಟ್ಟದ ಪ್ರಶಿಕ್ಷಣ ವರ್ಗದಲ್ಲಿ ನೂರಾರು ಬಿಜೆಪಿ ಕಾರ್ಯಕರ್ತರು ಭಾಗವಹಿಸಿದರು.

ಅಧಿಕಾರಿಗಳ ನಿರ್ಲಕ್ಷ್ಯ: ಹಾಳಾದ ನೀರಿನ ಘಟಕಗಳು

▸ **ಹುಸೇನಸಾಬ ಕಟಗಿ**

ಹನುಮಸಾಗರ: ಸಮೀಪದ ಯರಗೇರ ಗ್ರಾಪಂ ವ್ಯಾಪ್ತಿಯಲ್ಲಿ ಬರುವ ಯರಗೇರ, ಮದ್ನಾಳ, ಮಾವಿನ ಇಟಗಿ, ಗುಡದೂರಕಲ್ಲ ಚಂದ್ರಗಿರಿ, ಗ್ರಾಮದಲ್ಲಿ ಶೇ.99ರಷ್ಟು ಪ್ರಮಾಣದಷ್ಟು ಕುಡಿಯುವ ನೀರಿನ ಘಟಕಗಳು ಹಾಳಾಗಿ ನಿಂತಿವೆ.

ನೀರು ಮಾನವ ಜೀವನದ ಮೂಲಭೂತ ಅಗತ್ಯವಾಗಿದೆ. ಆರೋಗ್ಯಕರ ಜೀವನಕ್ಕೆ ಶುದ್ಧ ಕುಡಿಯುವ ನೀರು ಅತ್ಯಂತ ಮುಖ್ಯವಾಗಿದೆ.

ಗ್ರಾಪಂ ವ್ಯಾಪ್ತಿಯಲ್ಲಿ ಬರುವ ಯರಗೇರ ಮತ್ತು ಮದ್ನಾಳ, ಮಾವಿನ ಇಟಗಿ, ಗ್ರಾಮಗಳಲ್ಲಿ ಅಳವಡಿಸಿದ ಶುದ್ಧ ಕುಡಿಯುವ ನೀರಿನ ಘಟಕಗಳೇ ಇದಕ್ಕೆ ಸಾಕ್ಷಿಯಾಗಿದೆ. ಗ್ರಾಮಗಳಲ್ಲಿ 2014-15 ಸಾಲಿನ ಮತ್ತು 2016-17 ಸಾಲಿನಲ್ಲಿ ಲಕ್ಷಾಂತರ ವೆಚ್ಚದಲ್ಲಿ ನಿರ್ಮಿಸಲಾದ ಶುದ್ಧ ಕುಡಿಯುವ ನೀರಿನ ಘಟಕಗಳು ನಿರ್ವಹಣೆ ಕೊರತೆಯಿಂದ ಹಾಳಾಗಿದೆ. ಫ್ಲೋರೈಡ್ ಮತ್ತು ಕಬ್ಬಿಣದ ಅಂಶವಿರುವ ನೀರಿನ ಸೇವನೆ ಮನುಷ್ಯನ ಆರೋಗ್ಯಕ್ಕೆ ಹಾನಿಕಾರಕವಾಗಿದೆ. ನೀರಿನ ಘಟಕಕ್ಕೆ ಹಣ ನಿಗದಿಗೊಳಿಸಿದ 20 ಲೀಟರ್ 5 ರೂ. ಗೆ ನೀರು ಪೂರೈಕೆ ಮಾಡಬೇಕಿತ್ತು. ಆದರೆ, ನಿರ್ವಹಣೆ ಕೊರತೆಯಿಂದ ದುಸ್ಥಿತಿಗೆ ತಲುಪಿದೆ. ಹಾಗೇ ಮದ್ನಾಳ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವೇ ಮಾಯವಾಗಿದೆ ಇದಕ್ಕೆ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ಸ್ಥಳೀಯರು ಹೇಳುತ್ತಾರೆ.

ಈ ಸಮಸ್ಯೆ ಬಗ್ಗೆ ಹಲವು ಸಲ ಅಧಿಕಾರಿಗಳ ಗಮನಕ್ಕೆ ತಂದರೂಪ್ರಯೋಜನವಾಗಿಲ್ಲ. ಯರಗೇರಗ್ರಾಮದಲ್ಲಿ ಸುಮಾರು 3600 ಅಧಿಕ ಜನಸಂಖ್ಯೆ ಹೊಂದಿರುವ ಈ ಗ್ರಾಮದಲ್ಲಿ ಸುಮಾರು 900 ಅಧಿಕ ಮನೆಗಳಿವೆ. 1100 ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ಮದ್ನಾಳ ಗ್ರಾಮದಲ್ಲಿ 540 ಹೆಚ್ಚು ಮನೆಗಳಿವೆ,1500 ಹೆಚ್ಚು ಜನಸಂಖ್ಯೆ ಹೊಂದಿರುವ ಗುಡದೂರಕಲ್ಲ ಗ್ರಾಮದಲ್ಲಿ 600 ಹೆಚ್ಚು ಮನೆಗಳಿವೆ 700 ನೂರಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ಮಾವಿನ ಇಟಗಿ ಗ್ರಾಮದಲ್ಲಿ, 312ಕ್ಕೂ ಹೆಚ್ಚು ಮನೆಗಳಿವೆ. 560 ಹೆಚ್ಚು ಜನಸಂಖ್ಯೆ ಹೊಂದಿರುವ ಚಂದ್ರಗಿರಿ ಗ್ರಾಮದಲ್ಲಿ 200 ನೂರಕ್ಕೂ ಮನೆಗಳಿರು ಗ್ರಾಮಗಳಲ್ಲಿ ಕುಡಿಯುವ ನೀರಿನ ಘಟಕಗಳು ಪಾಳು ಬಿದ್ದಿರುವುದರಿಂದ ನೀರಿನ ಸಮಸ್ಯೆ ಎದುರಿಸುವಂತಾಗಿದೆ' ಎನ್ನುತ್ತಾರೆ ಗ್ರಾಮದ ಮಹಿಳೆಯರು.



> ತಾಪಂ ಹಾಗೂ ಜಿಪಂ ಮಟ್ಟದಲ್ಲಿ ಈಗಾಗಲೇ ಹೆಚ್ಚಿನ ವೆಚ್ಚ ಇರುವುದರಿಂದ ಅನುದಾನ ಸ್ವಲ್ಪ ಕಡಿಮೆ ಇದೆ. ಈ ಹಿನ್ನೆಲೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳ ದುರಸ್ತಿ ವಿಚಾರದಲ್ಲಿ ತಕ್ಷಣ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಆದರೂ ಮುಂದಿನ ದಿನಗಳಲ್ಲಿ ಅನುದಾನ ಲಭ್ಯವಾದ ನಂತರ ಕ್ರಮ ಕೈಗೊಳ್ಳಲಾಗುವುದು.
>
> ■ ಗಂಗಯ್ಯ ವಸ್ತ್ರದ, ಗ್ರಾಪಂ ಪಿಡಿಒ

> ಸರ್ಕಾರ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ನಿರ್ಮಿಸಿದ ಬಹುತೇಕ ಶುದ್ಧ ನೀರಿನ ಘಟಕಗಳು ಸೂಕ್ತ ನಿರ್ವಹಣೆಯಿಲ್ಲದೆ ಬಾಗಿಲು ಮುಚ್ಚಿವೆ. ಹಲವು ಬಾರಿ ಮನವಿ ಸಲ್ಲಿಸಿದರೂ ಕ್ಯಾರೇ ಎನ್ನದ ಅಧಿಕಾರಿಗಳು ಏನಾದರೂ ನೆಪ ಹೇಳಿ ಜಾರಿಕೊಳ್ಳುತ್ತಾರೆ. ಕೂಡಲೇ ಅವುಗಳನ್ನು ದುರಸ್ತಿಪಡಿಸಿ ಜನರಿಗೆ ಅನುಕೂಲ ಮಾಡಿಕೊಡಬೇಕು.
>
> ■ ದೇವಪ್ಪ ಮೆಣಸಿಗಿ, ಕರ್ನಾಟಕ ಜನದರ್ಶನ ವೇದಿಕೆ ರಾಜ್ಯಾಧ್ಯಕ್ಷ

ಪ್ರಾದೇಶಿಕ ಅಸಮಾನತೆ ಇಂದಿಗೂ ನಿವಾರಣೆಯಾಗಿಲ್ಲ

ರಾಯಚೂರು: ರಾಜ್ಯದಲ್ಲಿನ ಪ್ರಾದೇಶಿಕ ಅಸಮಾನತೆ ಇಂದಿಗೂ ನಿವಾರಣೆಯಾಗಿಲ್ಲ, ಈ ಅಸಮಾನತೆ ನಿವಾರಣೆಗೆ ಇಂದಿನವರೆಗೂ ಪ್ರಮಾಣಿಕ ಪ್ರಯತ್ನವನ್ನು ಮಾಡಲಾಗಿಲ್ಲ. ಉತ್ತರ ಕರ್ನಾಟಕ ಅದರಲ್ಲೂ ವಿಶೇಷವಾಗಿ ಕಲ್ಯಾಣ ಕರ್ನಾಟಕಭಾಗವನ್ನು ನಿರ್ಲಕ್ಷಿಸುತ್ತಲೇ ಬಂದಿರುವ ಕಾರಣಕ್ಕೆ ಅಭಿವೃದ್ಧಿ ಎನ್ನುವುದು ಮರೀಚಿಕೆಯಾಗಿದೆ ಎಂದು ಹೈದರಾಬಾದ್ ಕರ್ನಾಟಕ ಜನಾಂದೋಲನ ಕೇಂದ್ರದ ಸಂಸ್ಥಾಪಕ ಅಧ್ಯಕ್ಷ ರಾಘವೇಂದ್ರ ಕುಷ್ಟಗಿ ಹೇಳಿದರು.

ಬುಧವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಲ್ಯಾಣ ಕರ್ನಾಟಕ ಅಭಿವೃದ್ಧಿಯಲ್ಲಿ ಹಿಂದುಳಿದಿರುವುದಕ್ಕೆ ಮೈಸೂರು ಭಾಗದ ನಾಯಕರ ಪಾತ್ರ ಎಷ್ಟಿದೆಯೋ ಅಷ್ಟೇ ಪಾತ್ರ ಈ ಭಾಗದ ನಾಯಕರದ್ದೂ ಇದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ ನಂತರದಲ್ಲಿ ಅಖಂಡ ಕರ್ನಾಟಕ ರಚನೆ ಸಂದರ್ಭದಲ್ಲಿ ಅಂದಿನ ಮೈಸೂರು ರಾಜ್ಯದಲ್ಲಿನ ಜನತೆ, ಅಭಿವೃದ್ಧಿಯಲ್ಲಿ ಅತ್ಯಂತ ಹಿಂದುಳಿದ ಪ್ರದೇಶವಾಗಿದ್ದ, ದಬ್ಬಾಳಿಕೆಯಿಂದ ಅತ್ಯಂತ ನಿಕೃಷ್ಟವಾಗಿ ಕಂಡುಬರುತ್ತಿದ್ದ, ನಿಜಾಮರ ಆಳ್ವಿಕೆಯಲ್ಲಿದ್ದ ಹೈದರಾಬಾದ್ ಕರ್ನಾಟಕ ಸೇರ್ಪಡೆ ಆದರೆ ಈ ಭಾಗರದ ಅಭಿವೃದ್ಧಿಯೂ ಕುಂಠಿತವಾಗುತ್ತದೆ ಎಂಬ ಕಾರಣ ನೀಡಿ ವಿಲೀನ ಮಾಡಿಕೊಳ್ಳುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದರು. ಈಗಲೂ ಈ ಭಾಗದ ಅಭಿವೃದ್ಧಿಗೆ ವಿರೋಧವನ್ನೇ ಕಾಣಬಹುದಾಗಿದೆ ಎಂದರು.

ಪ್ರಸಕ್ತ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಸರ್ಕಾರ ರಚಿಸಿದ್ದ ಪ್ರೊ.ರಂ.ಗೋವಿಂದರಾವ್ ಸಮಿತಿ ಕಲ್ಯಾಣ ಕರ್ನಾಟಕದಲ್ಲಿನ ಅಭಿವೃದ್ಧಿ ವಿಷಯ ಕುರಿತು ಸಮಗ್ರ ಅಧ್ಯಯನ ನಡೆಸಿ ರಾಜ್ಯದ ವಿಧಾನಸಭೆ ಹಾಗೂ ವಿಧಾನಪರಿಷತ್ತಿನ ಎರಡೂ ಸದನಗಳಲ್ಲಿ ಇತ್ತೀಚೆಗಷ್ಟೇ ಮಂಡನೆ ಮಾಡಲಾಗಿದೆ. ಈ ಸಮಿತಿಯ ವರದಿಯಲ್ಲಿನ ಅಂಕಿ ಅಂಶಗಳನ್ನು ಗಮನಿಸಿದರೆ ಕಲ್ಯಾಣ ಕರ್ನಾಟಕ ಅಭಿವೃದ್ಧಿಯಲ್ಲಿ ಸಂಪೂರ್ಣವಾಗಿ ಹಿಂದುಳಿದಿರುವುದು ಸ್ಪಷ್ಟವಾಗುತ್ತದೆ ಎಂದರು. ಕಲ್ಯಾಣ ಕರ್ನಾಟಕದಲ್ಲಿ ಶಾಸಕರು, ಸಂಸದರು, ವಿಪ ಸದಸ್ಯರು ಸೇರಿ ಅಂದಾಜು 75ದಕ್ಕೂ ಅಧಿಕ ಜನ ಪ್ರತಿನಿಧಿಗಳಿದ್ದಾರೆ. ಪ್ರೊ ಗೋವಿಂದರಾವ್ ಸಮೀತಿ ವರದಿಯ ಪ್ರಕಾರ ಕಲ್ಯಾಣ ಕರ್ಾಟಕ ಹಿಂದುಳಿದಿದೆ ಎಂದು ಸ್ಪಷ್ಟವಾಗು ಉಲ್ಲೇಖಿಸಿದ್ದರೂ ಇವರು ಈ ಕುರಿತು ಚರ್ಚೆಗೆ ಮುಂದಾಗುತ್ತಿಲ್ಲ, ಇವರಿಗೆಲ್ಲ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಬೇಕಾಗಿನೇ ಇಲ್ಲ, ಹೀಗಾಗಿ ಇವರು ಈ ಕುರಿತು ಮಾತನಾಡುವುದಕ್ಕೆ ಮುಂದೆ ಬರುತ್ತಿಲ್ಲ, ರಾಜ್ಯದಲ್ಲಿನ 23 ಹಿಂದುಳಿದ ತಾಲೂಕುಗಳಲ್ಲಿ 20 ತಾಲೂಕುಗಳು ಕಲ್ಯಾಣ ಕರ್ನಾಟಕದ ತಾಲೂಕುಗಳಿವೆ ಎನ್ನುವುದಕ್ಕೆ ನಮಗೆ ನಾಚಿಕೆ ಆಗುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಪ್ರೊ.ಗೋವಿಂದರಾವ್ ವರದಿ ಕುರಿತು ಚರ್ಚಿಸುವುದಕ್ಕೆ.19ರಂದು ಸಂವಾದ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿದೆ. ಇದರಲ್ಲಿ ನಗರ ಶಾಸಕ ಶಿವರಾಜ ಪಾಟೀಲ ಹಾಗೂ ಗ್ರಾಮೀಣ ಶಾಸಕ ಬಸನಗೌಡ ದದ್ದಲ ಸೇರಿದಂತೆ ಇತರರು ಪಾಲ್ಗೊಳ್ಳಲಿದ್ದಾರೆ ಎಂದರು.

ಚಾಮರಸ ಮಾಲೀಪಾಟೀಲ, ಜಾನ್ ವೆಸ್ಲಿ, ನಾಗನಗೌಡ ಹರವಿ, ಬಿ.ಬಸವರಾಜ, ಡಾ.ಶಾರದಾ ಹುಲಿನಾಯಕ ಸೇರಿದಂತೆ ಇತರರಿದ್ದರು.

ಕಿರುಸುದ್ದಿ

ನಾಳೆ ಉಚಿತ ಪ್ರಕೃತಿ ಚಿಕಿತ್ಸಾ ಶಿಬಿರ

ಕೊಟ್ಟೂರು: ಪಟ್ಟಣದ ಚಾನುಕೋಟಿ ಮಠದ ಆವರಣದಲ್ಲಿ ಬಸವ ಜಯಂತಿಯ ಪ್ರಯುಕ್ತ ಕೊಟ್ಟೂರಿನ ಚಾನುಕೋಟಿ ಮಠ ಹಾಗೂ ಹರಪನಹಳ್ಳಿಯ ಜನನಿ ಯೋಗ ಹಾಗೂ ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಏ.17ರಂದು ಉಚಿತ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಚಾನುಕೋಟಿ ಮಠದ ಶ್ರೀಗಳು ಮತ್ತು ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ.ರಾಜೇಶ್ ಪಾದೆಕಲ್ಲು, ಮಾಧ್ಯಮ ಹಾಗೂ ಸಾರ್ವಜನಿಕ ಸಂಪರ್ಕ ಮುಖ್ಯಸ್ಥ ಉದಯಶಂಕರ ಭಟ್ ಮುಂತಾದವರು ಭಾಗವಹಿಸುವರು. ಶಿಬಿರದಲ್ಲಿ ಉಚಿತ ವೈದ್ಯಕೀಯ ಸಮಾಲೋಚನೆ ಮತ್ತು ಆಹಾರ ಸಲಹೆ, ರಕ್ತದಲ್ಲಿನ ಸಕ್ಕರೆ ಅಂಶ ತಪಾಸಣೆ, ಪ್ರಕೃತಿ ಚಿಕಿತ್ಸೆ ಹಾಗೂ ಯೋಗ, ಆಕ್ಯುಪಂಕ್ಚರ್ ,ಆಕ್ಯುಪ್ರೆಶರ್, ಬೊಜ್ಜು ಮತ್ತು ಬೆನ್ನು ನೋವು ಮುಂತಾದ ಸಮಸ್ಯೆಗಳಿಂದ ಬಳಲುವವರು ಶಿಬಿರದ ಪ್ರಯೋಜನ ಪಡೆಯಬಹುದು ಎಂದು ಮಠದ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗಾದಿಗನೂರು: ಗ್ರಾಮ ಪಂಚಾಯಿತಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಗ್ರಾಪಂ ಕಾರ್ಯದರ್ಶಿ ಎನ್.ಬೆನ್ನಪ್ಪನವರು, ಸಿಬ್ಬಂದಿ ಡಾಟಾ ಆಪರೇಟರ್ ಬೈಲಪ್ಪ ಹಾಗೂ ನೀರುಗಂಟಿ ಮಹಾದೇವ ಗ್ರಾಮ ಸ್ವಚ್ಛತಾ ವಾಹನ ಚಾಲಕಿ ಉಷಾ ಮೇಟಿ ಇತರರಿದ್ದರು.

ಪಂಚಮಸಾಲಿ ಪೀಠದ ಟ್ರಸ್ಟಿಗಳು ರಾಜೀನಾಮೆ ನೀಡಲಿ

ಹೂವಿನಹಡಗಲಿ: ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ವಚನಾನಂದ ಶ್ರೀಗಳನ್ನು ಆಂತರಿಕ



ಕಲಹದ ಹಿನ್ನೆಲೆ ಟ್ರಸ್ಟಿಗಳು ಉಚ್ಚಾಟಿಸಿರುವುದು ಖಂಡನೀಯ. ಟ್ರಸ್ಟಿಗಳು ಮೊದಲು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲಿ ಎಂದು ವಿಜಯನಗರ ಜಿಲ್ಲೆಯ ಪಂಚಮಸಾಲಿ ಸಮುದಾಯದ ಮುಖಂಡ ಎಂ.ಬಿ.ಬಸವರಾಜ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮಂಗಳವಾರ ಸಂಜೆ ನಮ್ಮ ಪತ್ರಿಕಾ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಮಠದ ಟ್ರಸ್ಟಿಗಳು ಸರ್ಕಾರದಿಂದ ನೀಡಲಾದ ಅನುದಾನ ಹಾಗೂ ಭಕ್ತರು ನೀಡಿದ ದೇಣಿಗೆಯನ್ನು ದುರ್ಬಳಕೆ ಮಾಡಿಕೊಂಡಿದ್ದು, ತಮ್ಮ ತಪ್ಪುಗಳನ್ನು ಮುಚ್ಚಿಹಾಕಲು ಶ್ರೀಗಳ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿರುವುದು ವಿಷಾದನೀಯ ಸಂಗತಿ ಎಂದು ಹೇಳಿದರು. ವಚನಾನಂದ ಶ್ರೀಗಳು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು ಅನೇಕ ಜನರಿಗೆ ಮಾರ್ಗದರ್ಶನ ನೀಡಿರುವ ಹಿನ್ನೆಲೆ, ಅವರನ್ನು ಈ ರೀತಿ ಏಕಪಕ್ಷೀಯವಾಗಿ ಉಚ್ಚಾಟಿಸುವುದು ನ್ಯಾಯಸಮ್ಮತವಲ್ಲ, ಇತ್ತ ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರುಗಳಿಗೆ ಆಧಾರರಹಿತ ಆರೋಪಗಳನ್ನು ಮಾಡಿ ಸಮಾಜಕ್ಕೆ ಕಳಂಕ ತರುವ ಕೆಲಸ ನಡೆಯುತ್ತಿದೆ ಎಂದು ಹೇಳಿದರು.

ಮುಖ್ಯ ಶಿಕ್ಷಕ ಬಿ.ವಿರುಪಜ್ಜಗೆ ಸ್ವಾಗತ



ಗಾದಿಗನೂರು: ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಗೆ ಹಿರಿಯ ಮುಖ್ಯ ಗುರುಗಳಾಗಿ ಆಗಮಿಸಿದ ಬಿ.ವಿರುಪಜ್ಜ ಅವರಿಗೆ ಶಾಲೆಯ ಎಸ್‌ಡಿಎಂಸಿ ಸದಸ್ಯರು ಮತ್ತು ಸಹ ಶಿಕ್ಷಕರು ಊರಿನ ಗಣ್ಯರು ಸ್ವಾಗತಿಸಿದರು. ಕರ್ನಾಟಕ ಪಬ್ಲಿಕ್ ಶಾಲೆಯ ಹಿರಿಯ ಮುಖ್ಯ ಗುರುಗಳಾದ ಬಿ.ವಿರುಪಜ್ಜನವರು ಮೊದಲು ಇದೆ ಶಾಲೆಯಲ್ಲಿ ಸಹ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದು, ಅನೇಕ ವಿದ್ಯಾರ್ಥಿಗಳಿಗೆ ನೆಚ್ಚಿನ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದರು. ಮುಂದಿನ ದಿನಗಳಲ್ಲಿ ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸಿ ಮುಂದಿನ ದಿನಗಳಲ್ಲಿ ಶಾಲೆಯನ್ನು ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಗುರುತಿಸುವಂತಗಲಿ ಎಂದು ಗ್ರಾಮಸ್ಥರು ಅಭಿಪ್ರಾಯ ವ್ಯಕ್ತಪಡಿಸಿದರು. ಎಸ್‌ಡಿಎಂಸಿ ಸದಸ್ಯರಾದ ಕೆ.ಸ್ವಾಮಿ, ಎನ್.ಗೋವಿಂದಪ್ಪ. ಗ್ರಾಮದ ಮುಖಂಡರಾದ ಎಂ.ಗಾಳೆಪ್ಪ, ಎಂ.ದೇವೇಂದ್ರಪ್ಪ, ಸಿಡಿ ಪೆನ್ನಪ್ಪ ಮತ್ತು ಶಾಲೆಯ ಸಿಬ್ಬಂದಿ ಇತರರಿದ್ದರು.



ಕರೂರು: ಸಮೀಪದ ಉತ್ತನೂರು ಗ್ರಂಥಾಲಯ ಕೇಂದ್ರದಲ್ಲಿ ಏರ್ಪಡಿಸಿದ್ದ ಗ್ರಾಮೀಣ ಮಕ್ಕಳಿಗೆ ಬೇಸಿಗೆ ಶಿಬಿರ ಉದ್ಘಾಟಿಸಲಾಯಿತು. ಉತ್ತನೂರು ಗ್ರಾಪಂ ಪಿಡಿಒ ಶಿವಕುಮಾರ, ಕಾರ್ಯದರ್ಶಿ ಕೆ.ಶಿವಮೂರ್ತಿ, ಶಿಕ್ಷಕರಾದ ಕಿರಣ ಮತ್ತು ಗ್ರಂಥಪಾಲಕ ಚಂದ್ರಶೇಖರ ಮತ್ತಿತರರಿದ್ದರು.

ಕಣ್ಣಿನ ಉಚಿತ ತಪಾಸಣಾ ಶಿಬಿರ

ಸಿರುಗುಪ್ಪ: ಗ್ರಾಮೀಣ ಪ್ರದೇಶದ ಜನರಿಗೆ ಸುಲಭವಾಗಿ ದೃಷ್ಟಿ ದೋಷಗಳನ್ನು ಪತ್ತೆ ಹಚ್ಚಲು ಮತ್ತು ಕಣ್ಣಿನ ಆರೋಗ್ಯವನ್ನು ಉತ್ತೇಜಿಸಲು ಉಚಿತ ಕಣ್ಣಿನ ತಪಾಸಣಾ ಶಿಬಿರ ಉಪಯುಕ್ತವಾಗುತ್ತದೆ ಎಂದು ನೇತ್ರಾ ತಜ್ಞೆ ಸ್ವಾತಿ ಹೇಳಿದರು.

ತಾಲೂಕಿನ ಹಚ್ಚೊಳ್ಳಿ ಗ್ರಾಮ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಅಂಧತ್ವ ನಿಯಂತ್ರಣಾ, ತಾಲೂಕು ವೈದ್ಯಾಧಿಕಾರಿಗಳ ಕಚೇರಿ, ಹಚ್ಚೊಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ, ಶಿವಮೊಗ್ಗ ಶಂಕರ ಕಣ್ಣಿನ ಆಸ್ಪತ್ರೆಯ ಸಹಯೋಗದೊಂದಿಗೆ ಬುಧವಾರ ನಡೆದ ಉಚಿತ ಕಣ್ಣಿನ ತಪಾಸಣಾ ಶಿಬಿರದಲ್ಲಿ ಮಾತನಾಡಿದರು.

ಶಿವಮೊಗ್ಗ ಶಂಕರ ಕಣ್ಣಿನ ಆಸ್ಪತ್ರೆಯ ವೈದ್ಯರು 224 ಜನರ ಆರೋಗ್ಯ ತಪಾಸಣೆ ನಡೆಸಿ ಔಷಧೋಪಚಾರ ನೀಡಿದರು. ಉಚಿತ ಕಣ್ಣಿನ ಪೊರೆ ತಪಾಸಣೆ ನಡೆಸಿ, ಶಸ್ತ್ರ ಚಿಕಿತ್ಸೆಯ ಅಗತ್ಯವುಳ್ಳ 105ಜನರನ್ನು ಏ.18ರಂದು ಆಸ್ಪತ್ರೆಗೆ ಕರೆದೊಯ್ಯಲಾಗುತ್ತದೆ ಎಂದು ಮಾಹಿತಿ ನೀಡಿದರು.

ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ರವಿಕುಮಾರ್, ಸಮುದಾಯ ಆರೋಗ್ಯ ಅಧಿಕಾರಿ ಗಾದಿಲಿಂಗ ನಾಯ್ಕ, ಕಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಎಚ್. ಲಿಂಗರಾಜ ರೆಡ್ಡಿ, ರಾಚೋಟಯ್ಯ, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿಗಳಾದ ಮಹಾಲಕ್ಷ್ಮಿ, ನಜ್ಮ ಮತ್ತು ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.



ಸಿರುಗುಪ್ಪ: ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಡಾ.ಅಂಬೇಡ್ಕರ್ ಜಯಂತ್ಯುತ್ಸವ ನಿಮಿತ್ತ ಮಾಜಿ ಶಾಸಕ ಎಂ.ಎಸ್. ಸೋಮಲಿಂಗಪ್ಪ ಅವರು ಮಂಗಳವಾರ ಡಾ.ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಸಲ್ಲಿಸಿದರು. ಬಿಜೆಪಿ ಕಾರ್ಯಕರ್ತರು, ವಿವಿಧ ಗಣ್ಯರು ಭಾಗವಹಿಸಿದ್ದರು.

ಮಾಜಿ ಶಾಸಕ ಎಂ.ಎಸ್.ಸೋಮಲಿಂಗಪ್ಪ ಜಿಲ್ಲಾಧಿಕಾರಿಗೆ ಆಗ್ರಹ

ವೇದಾವತಿ ನದಿಗೆ ನೀರು ಹರಿಸಿ

ಬಳ್ಳಾರಿ: ಲಕ್ಷಾಂತರ ರೈತರ ಜೀವನಾಡಿ ತುಂಗಭದ್ರಾ ಜಲಾಶಯದ ಎಲ್‌ಎಲ್‌ಸಿ ಕಾಲುವೆ ಮೂಲಕ ವೇದಾವತಿ (ಹಗರಿ ನದಿ) ನದಿಗೆ ನೀರು ಹರಿಸಬೇಕು ಎಂದು ಒತ್ತಾಯಿಸಿ ಸಿರುಗುಪ್ಪ ಕ್ಷೇತ್ರದ ಮಾಜಿ ಶಾಸಕ ಎಂ.ಎಸ್.ಸೋಮಲಿಂಗಪ್ಪ ಹಾಗೂ ತುಂಗಭದ್ರಾ ರೈತ ಸಂಘದ ಅಧ್ಯಕ್ಷ ಡಾ.ಜಿ.ಪುರುಷೋತ್ತಮ ಗೌಡ ಅವರ ನೇತೃತ್ವದ ನಿಯೋಗ ಜಿಲ್ಲಾಧಿಕಾರಿಗೆ ಬುಧವಾರ ಮನವಿ ಸಲ್ಲಿಸಿತು.

ಸಿರುಗುಪ್ಪ ಕ್ಷೇತ್ರದ ಮಾಜಿ ಶಾಸಕ ಎಂ.ಎಸ್. ಸೋಮಲಿಂಗಪ್ಪ ಮಾತನಾಡಿ, ತುಂಗಭದ್ರಾ ಜಲಾಶಯದಿಂದ ಬೇಸಿಗೆ ಬೆಳೆಗೆ ನೀರು ಹರಿಸಿದ ಹಿನ್ನೆಲೆ ಕುಡಿವ ನೀರಿನ ಆಸರೆಯಾದ ಕೆರೆಗಳು, ಹಳ್ಳಗಳು, ಭಾವಿಗಳು ಬತ್ತಿವೆ, ಕೊಳವೆಬಾವಿಗಳು ನೀರಿಲ್ಲದೆ ಬತ್ತುತ್ತಿವೆ, ಹನಿ ನೀರಿಗೂ ಪರದಾಡುವಂತಾಗಿದೆ. ಜನರು ಹಾಗೂ ಜಾನುವಾರುಗಳು ನೀರಿಗಾಗಿ ನಿತ್ಯ ಪರದಾಡುವಂತಾಗಿದೆ. ಕೂಡಲೇ ತುಂಗಭದ್ರಾ ಜಲಾಶಯದ ಮೂಲಕ ಹಗರಿ ನದಿಗೆ ನೀರು ಹರಿಸುವ ಮೂಲಕ ಜನರು ಹಾಗೂ ಜಾನುವಾರುಗಳು ನೀರಿನ ಬವಣೆಯನ್ನು ತಪ್ಪಿಸಬೇಕು ಎಂದು ಒತ್ತಾಯಿಸಿದರು.

ಎಲ್‌ಎಲ್‌ಸಿ ಕಾಲುವೆಯ ಮೊಕ ಗ್ರಾಮದ ಬಳಿಯ ಹಗರಿ ವೇದಾವತಿ ನದಿಗೆ ನೀರು ಬಿಡಲು ಎಲ್ಲ ಅನುಕೂಲತೆಗಳಿವೆ, ಇದರಿಂದ ಜನ ಹಾಗೂ ಜಾನುವಾರುಗಳ ಸಂಕಷ್ಟ ಪರಿಹಾರವಾಗಲಿದೆ. ಜೊತೆಗೆ ವ್ಯಾಪ್ತಿಯ ಬರದನಹಳ್ಳಿ, ಮೊಕ, ಗೊಟುರು, ಬಾಣಪುರ, ಬೆಣಕಲ್, ಕರ್ಚೇಡು, ವಣೆನೂರು, ಯಾರಗುಡಿ, ಬಸರಕೋಡ, ಹಡ್ಲಗಿ, ತಾಳುರ, ಉಳೂರು, ಉತ್ತನೂರು, ಮಾಟಸುಗುರು, ಕುರಿಗನೂರು, ಬೂದಗುಂಪ, ಮೈಲಾಪುರ, ಬಲಕುಂದಿ, ಹಳ್ಳಿಗನೂರು, ಚಾಣುಕ್ಯನೂರು ಸೇರಿದಂತೆ ನಾನಾ ಗ್ರಾಮಗಳು ನದಿ ಪಕ್ಕದಲ್ಲೇ ಇವೆ, ಈ ಹಳ್ಳಿಗಳಿಗೆ ಕಾಲುವೆ ನೀರು ಸಿಗದೇ, ಜನ ಹಾಗೂ ಜಾನುವಾರುಗಳಿಗೆ ನೀರಿನ ಸಂಕಷ್ಟ ಎದುರಾಗಿದೆ. ಜೊತೆಗೆ ಈ ಭಾಗದಲ್ಲಿ ವಿವಿಧ ಕಡೆ ಬೆಳೆದ ನಾನಾ ಬೆಳೆಗಳು ನೀರಿಲ್ಲದೆ ಬಾಡಲಾರಂಬಿಸಿದೆ. ಕೂಡಲೇ ಜಿಲ್ಲಾಧಿಕಾರಿಗಳು ತುಂಗಭದ್ರಾ ಜಲಾಶಯದ ಮುನಿರಾಬಾದ್‌ನ ಜಲಸಂಪನ್ಮೂಲ ಇಲಾಖೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪತ್ರ ಬರೆದು, ಎಲ್‌ಎಲ್‌ಸಿ ಕಾಲುವೆಯಿಂದ ಹಗರಿ ನದಿಗೆ ನೀರು ಹರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ರೈತ ಸಂಘದ ಅಧ್ಯಕ್ಷ ಡಾ.ಜಿ.ಪುರುಷೋತ್ತಮ ಗೌಡ, ರಾಘವೇಂದ್ರ ರೆಡ್ಡಿ, ಸೇರಿದಂತೆ ಇತರರಿದ್ದರು.



ತುಂಗಭದ್ರಾ ಜಲಾಶಯದ ಬಲದಂಡೆಯ ಕೆಳಮಟ್ಟದ ಕಾಲುವೆಗೆ ಜನರಿಗೆ ಹಾಗೂ ಜಾನುವಾರುಗಳಿಗೆ ನೀರು ಹರಿಸಲಾಗಿದೆ. ಈ ನೀರಿನ ಮೂಲಕ ಕೆರೆಗಳಿಗೆ ಗ್ರಾಪಂಗಳು ಹಾಗೂ ರೈತರು ನೀರು ತುಂಬಿಸಿಕೊಳ್ಳುತ್ತಿದ್ದಾರೆ. ಈ ನೀರು ಕೆಳಭಾಗದಲ್ಲಿರುವ ಹಗರಿ ನದಿಯ ವ್ಯಾಪ್ತಿಯ ಹಳ್ಳಿಗಳ ರೈತರಿಗೆ ನೀರು ತಲುಪಿಲ್ಲ, ನಿತ್ಯವೂ ನರಕಯಾತನೆ, ನೀರಿಗಾಗಿ ಹಾಹಾಕಾರ ಮುಂದುವರೆದಿದೆ.

■ ಎಂ.ಎಸ್.ಸೋಮಲಿಂಗಪ್ಪ, ಮಾಜಿ ಶಾಸಕ

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ

ವಿಜಯನಗರ: ಹೊರಗುತ್ತಿಗೆ ನೌಕರರ ವಿವಿಧ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿಶಾಲಾ ಹೊರಗುತ್ತಿಗೆ ನೌಕರರ ಸಂಘದ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಲಾಯಿತು.

ಈ ಕುರಿತು ಜಿಲ್ಲಾಧಿಕಾರಿ ಮೂಲಕ ಕಾರ್ಮಿಕ ಸಚಿವ ಹಾಗೂ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ಅಡಿಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಅಡುಗೆಯವರು, ಸಹಾಯಕರು, ಕಾವಲುಗಾರರು ಮತ್ತು ಕಂಪ್ಯೂಟರ್ ಆಪರೇಟರ್‌ಗಳಾಗಿ ಅನೇಕರು ಕಳೆದ 15-20 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಗುತ್ತಿಗೆ ಏಜೆನ್ಸಿಗಳು ಇಎಸ್‌ಐ ಕಟ್ಟದೇ ನೌಕರರನ್ನು ವಂಚಿಸುತ್ತಿದ್ದು, ಅಂತಹ ಸಂಸ್ಥೆಗಳನ್ನು ಕಪ್ಪು ಪಟ್ಟಿಗೆ ಸೇರಿಸಬೇಕು. ಅವರಿಗೆ ಕನಿಷ್ಠ ವೇತನ, ಸೇವಾ ಭದ್ರತೆಯಿಲ್ಲದೇ ಸಂಕಷ್ಟದಲ್ಲೇ ಜೀವನ ದೂಡುತ್ತಿದ್ದಾರೆ ಎಂದು ದೂರಿದರು.

8 ತಿಂಗಳ ಬಾಕಿ ವೇತನ ಪಾವತಿಸಿ: ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಿರುವ ಹೊರಗುತ್ತಿಗೆ ನೌಕರರಿಗೆ ಕಳೆದ 8 ತಿಂಗಳಿಂದ ಸಂಬಳ ಪಾವತಿಯಾಗಿಲ್ಲ, ಈ ಆರ್ಥಿಕ ಸಂಕಷ್ಟದಿಂದಾಗಿ ನೌಕರ ನಂದೀಶ್ ನಾಯಕ ಹೃದಯಾಘಾತದಿಂದ ಸಾವನ್ನಪ್ಪಿದ್ದು, ಅವರ ಕುಟುಂಬಕ್ಕೆ ತಕ್ಷಣ 10 ಲಕ್ಷ ರೂ. ಪರಿಹಾರ ನೀಡಬೇಕು ಮತ್ತು ವಂಚನೆ ಮಾಡಿರುವ ಸೆಕ್ಯೂರಿಟಿ ಏಜೆನ್ಸಿಗಳ ಮೇಲೆ ಕಾನೂನು ಕ್ರಮ ಜರುಗಿಸಬೇಕು. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಕನ್ನಡ ವಿಶ್ವವಿದ್ಯಾಲಯದ ರಜಾ ಅವಧಿಯಲ್ಲಿ ನೌಕರರಿಗೆ ಕಡ್ಡಾಯವಾಗಿ ವೇತನ ನೀಡಬೇಕು ಎಂದು ಸಂಘವು ಆಗ್ರಹಿಸಿದರು.

ಹೊರಗುತ್ತಿಗೆ ನೌಕರರ ಸಮಸ್ಯೆಗಳ ಕುರಿತು ಚರ್ಚಿಸಲು ಜಿಲ್ಲಾಧಿಕಾರಿ ತಕ್ಷಣವೇ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆ ಕರೆಯಬೇಕು. ಹೊರಗುತ್ತಿಗೆ ನೌಕರರಿಗೆ ಆಗುತ್ತಿರುವ ಕಿರುಕುಳ ಮತ್ತು ವೇತನ ವಿಳಂಬದ ಬಗ್ಗೆ ಚರ್ಚಿಸಿ ನ್ಯಾಯ ಒದಗಿಸಬೇಕು ಎಂದು ಇದೇ ವೇಳೆ ಮನವಿ ಮಾಡಿದರು.

ಜಿಲ್ಲಾಧ್ಯಕ್ಷ ಮರಡಿ ಜಂಬಯ್ಯ ನಾಯಕ, ಜಿಲ್ಲಾ ಮತ್ತು ತಾಲೂಕು ಮಟ್ಟದ ಸಂಘದ ಮುಖಂಡರು ಹಾಗೂ ನೂರಾರು ಸಂಖ್ಯೆಯ ಹೊರಗುತ್ತಿಗೆ ನೌಕರರು ಇದ್ದರು.



ಅಂಬೇಡ್ಕರರಿಂದ ಶ್ರೇಷ್ಠ ಸಂವಿಧಾನ ಕೊಡುಗೆ

ಹಗರಿಬೊಮ್ಮನಹಳ್ಳಿ: ಡಾ.ಬಿ.ಆರ್ ಅಂಬೇಡ್ಕರ್ ಅವರು ರಚಿಸಿದ ಸಂವಿಧಾನವನ್ನು ಜಗತ್ತಿನ ಹಲವು ದೇಶಗಳು ಅನುಕರಣೆ ಮಾಡುತ್ತಿದ್ದು ವಿಶ್ವದಲ್ಲಿಯೇ ಶ್ರೇಷ್ಠ ಸಂವಿಧಾನ ರಚಿಸಿದ ಕೀರ್ತಿ ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ ಎಂದು ನ್ಯಾಯಾಧೀಶರಾದ ಮಧುಸೂಧನ್ ಡಿ.ಕೆ. ತಿಳಿಸಿದರು.


ಬುಧವಾರ ನ್ಯಾಯಾಲಯದಲ್ಲಿ ತಾಲೂಕು ವಕೀಲರ ಸಂಘ ಆಯೋಜಿಸಿದ್ದ ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪ ನಮನ ಸಲ್ಲಿಸಿದರು.

ಬಳಿಕ ಮಾತನಾಡಿ ಕಾನೂನು ಪದವೀಧರರಾಗಿದ್ದ ಅಂಬೇಡ್ಕರ್ ವಿವಿಧ ವಿಷಯಗಳಲ್ಲಿ ಅತ್ಯುತ್ತಮ ಜ್ಞಾನ ಪಡೆದುಕೊಂಡವರಾಗಿದ್ದರು. ಸಂವಿಧಾನ ರಚನೆಯ ಸಂದರ್ಭದಲ್ಲಿ ಬೇರೆ ಬೇರೆ ದೇಶದಲ್ಲಿ ಉತ್ತಮ ಅಂಶಗಳನ್ನು ಎರವಲುವಾಗಿ ಪಡೆದುಕೊಂಡು ನಮ್ಮ ದೇಶದ ನಾಗರಿಕರಿಗೆ ಮತ್ತು ದೇಶದ ಆಡಳಿತಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಉತ್ತಮ ಸಂವಿಧಾನ ರಚಿಸಿ ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕಾಂಗ ನ್ಯಾಯಾಂಗ ಮತ್ತು ಕಾರ್ಯಾಂಗಗಳ ಮಹತ್ವ ಉಲ್ಲೇಖಿಸಿದರು. ಪ್ರಜೆಗಳಿಗೆ ಹಕ್ಕುಗಳನ್ನು ನೀಡಿದರು.ಕರ್ತವ್ಯಗಳನ್ನು ತಿಳಿಸಿದರುಎಲ್ಲಾ ಸಮಾಜದ ಜನರ ಒಳಿತಿಗೆ ಮಹಿಳೆಯರು ಸಮಾನತೆಗಾಗಿ ಮೀಸಲಾತಿ ಕಲ್ಪಿಸಿದರು ಎಂದರು.

ವಕೀಲರ ಸಂಘದ ಅಧ್ಯಕ್ಷ ಕೊಟ್ರೇಶ್ ಶೆಟ್ಟರ್ ಮಾತನಾಡಿ, ಅಂಬೇಡ್ಕರ್ ಒಂದು ದೊಡ್ಡ ಗ್ರಂಥಾಲಯ ಅವರನ್ನು ತಿಳಿದುಕೊಂಡಷ್ಟು ಜ್ಞಾನ ಹೆಚ್ಚುತ್ತೆ ಅಂಬೇಡ್ಕರ್ ಯಾವುದೇ ಒಂದು ಸಮುದಾಯಕ್ಕೆ ಸೀಮಿತಗೊಳಿಸಬೇಡಿ ಎಲ್ಲಾ ವರ್ಗದ ಜನರು ಗೌರವಿಸುವಂತಹ ಮಹಾನ್ ಮಾನವತಾವಾದಿಯಾಗಿದ್ದಾರೆ ಎಂದರು

ಸಿವಿಲ್ ನ್ಯಾಯಾಧೀಶರಾದ ಸೈಯದ್ ಮೊಹಿದ್ದೀನ್ ಶಿಕ್ಷಣ ಸಂಘಟನೆ ಸಮಾನತೆ ಭಾತೃತ್ವ ಭಾವನೆ ಮಾನವೀಯ ಮೌಲ್ಯ ಅಂಬೇಡ್ಕರ್ ಅವರ ತತ್ವ ಆದರ್ಶಗಳನ್ನು ಪಾಲಿಸೋಣ ಎಂದರು.

ವಕೀಲರ ಸಂಘದ ಉಪಾಧ್ಯಕ್ಷ ಬಿ.ಎಮ್. ಆಂಜನೇಯ ಕಾರ್ಯದರ್ಶಿ ಡಿ.ಮಂಜಣ್ಣ ಹಾಗೂ ಜಂಟಿ ಕಾರ್ಯದರ್ಶಿ ಪ್ರಹ್ಲಾದ್ ಕಾಗಿ, ಹಿರಿಯ ವಕೀಲರಾದ ಎಚ್.ಸತ್ಯನಾರಾಯಣ, ಪಿ.ರಮೇಶ್, ಅಕ್ಕಿ ಮಲ್ಲಿಕಾರ್ಜುನ್, ಸಿ.ಬಸವರಾಜ್, ಟಿಜಿಎಂ ಕೊಟ್ರೇಶ್, ಬಾವಿ ಪ್ರಕಾಶ್, ಎಚ್.ಆಂಜನೇಯ ಇತರರಿದ್ದರು.



ಸತತ ಪರಿಶ್ರಮವೇ ಯಶಸ್ಸಿನ ಮಂತ್ರ: ವೇಣುಗೋಪಾಲಜೀ

ಹುಣಸಗಿ: ವಿದ್ಯಾರ್ಥಿಗಳು ಜೀವನದಲ್ಲಿ ಯಶಸ್ಸು ಸಾಧಿಸಲು ಪರಿಶ್ರಮ, ಶಿಸ್ತು ಮತ್ತು ಆತ್ಮವಿಶ್ವಾಸ ಅತಿ ಮುಖ್ಯ ಎಂದು ಯಾದಗಿರಿ ರಾಮಕೃಷ್ಣ ಆಶ್ರಮದ ಗುರುಗಳಾದ ಟಿ.ವೇಣುಗೋಪಾಲ್ ಜೀ ಹೇಳಿದರು.

ಪಟ್ಟಣದ ಎಸ್‌ಕೆ ಪಿಯು ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಪಿಯು ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳ ಸನ್ಮಾನ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಅವರು, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಉತ್ತಮ ಸಾಧನೆ ಮಾಡುವುದಕ್ಕೆ ನಿರಂತರವಾಗಿ ಪ್ರಯತ್ನಿಸಬೇಕು. ಪಾಲಕರ ಪರಿಶ್ರಮಕ್ಕೆ ನಿಮ್ಮ ಸಾಧನೆ ಅವರಿಗೆ ಕೃತಜ್ಞತೆ ಆಗಬೇಕು. ವಿದ್ಯಾರ್ಥಿಗಳಿಗೆ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಂಡು ಸಮಾಜದ ಒಳಿತಿಗಾಗಿ ಕೆಲಸ ಮಾಡುವಂತೆ ಕರೆ ನೀಡಿದರು. ಶಿಕ್ಷಣವು ಕೇವಲ ಅಂಕಗಳಿಗೆ ಸೀಮಿತವಾಗದೆ, ವ್ಯಕ್ತಿತ್ವ ವಿಕಾಸಕ್ಕೂ ಸಹಾಯ ಆಗಬೇಕು ಎಂದು ತಿಳಿಸಿದರು. ನಂತರ ಪಿಯುಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಹಲವಾರು ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯ ಹಂಚಿಕೊಂಡರು.

ವಿಜಯಕುಮಾರ್ ದೇಸಾಯಿ, ನಂದನಗೌಡ ರಾಮನಗೌಡ್ರ, ಬಸನಗೌಡ ಹಣಮರೆಡ್ಡಿ, ಸುರೇಶ್ ರೆಡ್ಡಿ, ಹಿರಿಯ ಪತ್ರಕರ್ತ ರಾಘವೇಂದ್ರ ಜಹಾಗೀರದಾರ, ರವಿಕುಮಾರ ಬಂಟನೂರು, ಕವಿತಾ ದೇಸಾಯಿ, ಸವಿತಾ ಎಸ್.ಪಾಟೀಲ, ಪಾಲಾಕ್ಷಯ್ಯ ಹಿರೇಮಠ, ಶಂಕರಗೌಡ ಗುಂಡಕನಾಳ, ರಾಮಣ್ಣ ಹೂಗಾರ್, ಸಂತೋಷ್ ಮಾರ್ಟಿನ್, ಕಾಲೇಜು ಆಡಳಿತ ಮಂಡಳಿಯ ಸದಸ್ಯರು, ಸಿಬ್ಬಂದಿವರ್ಗ, ಪಾಲಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವಿದ್ಯಾರ್ಥಿನಿ ಈರಮ್ಮ ಸುಂಬಡದ ಸ್ವಾಗತಿಸಿ, ನಿರೂಪಿಸಿದರು.



ನವೋದಯ ಸಂಘದಿಂದ ಅಂಬೇಡ್ಕರ್ ಜಯಂತ್ಯುತ್ಸವ

ಹಗರಿಬೊಮ್ಮನಹಳ್ಳಿ: ಪ್ರಪಂಚದ ಎಲ್ಲ ದೇಶಗಳು ಭಾರತ ದೇಶದ ಸಂವಿಧಾನವನ್ನು ಗೌರವಿಸುತ್ತಾರೆ. ಅಂಥ ಸಂವಿಧಾನವನ್ನು ಕೊಟ್ಟಿರುವಂತ ಮಹಾನ್ ವ್ಯಕ್ತಿ ಡಾ.ಅಂಬೇಡ್ಕರ್ ಎಂದು ಗ್ರಾಪಂ ಸದಸ್ಯ ಎನ್.ನಾಗರಾಜ್ ಹೇಳಿದರು.

ಹಂಪಾಪಟ್ಟಣದ ನವೋದಯ ಯುವಕ ಸಂಘದ ಆಶ್ರಯದಲ್ಲಿ ನಡೆದ ಬಾಬಾ ಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವದಲ್ಲಿ ಮಾತನಾಡಿ, ಅಂಬೇಡ್ಕರ್ ಭಾರತ ದೇಶದ ಪ್ರತಿಯೊಂದು ಜೀವಿಗೂ ಅನ್ವಯಿಸುವಂತೆ ಸಂವಿಧಾನವನ್ನು ಕೊಟ್ಟಿದ್ದಾರೆ ಎಂದರು.

ಇವತ್ತು ಆ ಮಹಾನ್ ವ್ಯಕ್ತಿ ಕೊಟ್ಟಿರುವ ಸಂವಿಧಾನದಿಂದ ನಾವೆಲ್ಲರೂ ಬದುಕುತ್ತಿದ್ದೇವೆ, ನಮ್ಮೆಲ್ಲರ ಬದುಕಿಗಾಗಿ, ನಮ್ಮೆಲ್ಲರ ಸಮಾನತೆಗಾಗಿ ಇರುವ ಸಂವಿಧಾನದ ಆಶಯದಂತೆ ನಾವೆಲ್ಲರೂ ಕೆಲಸ ಮಾಡೋಣ ಎಂದರು.

ಆ ರೀತಿ ಬದುಕಿದಾಗ ಮಾತ್ರ ನಾವು ಸಂವಿಧಾನವನ್ನು ಮತ್ತು ಸಂವಿಧಾನದ ಕರ್ತರಾಗಿರ್ತಕಂತ ಅಂಬೇಡ್ಕರರನ್ನು ಗೌರವಿಸಿದಂತಾಗುತ್ತದೆ ಎಂದರು.

ನವೋದಯ ಯುವಕ ಸಂಘದ ಅಧ್ಯಕ್ಷ ಉಪ್ಪಾರ್ ಹನುಮಂತ, ಗ್ರಾಪಂ ಉಪಾಧ್ಯಕ್ಷ ತಿಪ್ಪಿಗುಂಡಿ ಮಂಜುನಾಥ, ಸದಸ್ಯ ಬಲ್ಲಾಹುಣಿಸಿ ನಾಗರಾಜ್, ಸಿ.ಎಲ್.ಕುಮಾರ್, ಸಿದ್ದರ ಗಾಳೆಪ್ಪ, ಸಿದ್ದರ ಪತ್ರಿಯಲ್ಲಪ್ಪ, ಎಸ್‌ಡಿಎಂಸಿ ಅಧ್ಯಕ್ಷ ವಿ.ಹನುಮಂತ, ವ್ಯವಸಾಯ ಸೇವಾ ಸಹಕಾರದ ಸಂಘದ ಅಧ್ಯಕ್ಷ ಗಾಳೆಮ್ಮನವರ ಹುಲುಗಪ್ಪ, ನಿರ್ದೇಶಕ ಕೆ.ಮಲ್ಲಿಕಾರ್ಜುನ, ಎಚ್.ಅಶೋಕ, ಸೋಮನಾಥ ಭಜಂತ್ರಿ, ನವೋದಯ ಸಂಘದ ಕಾರ್ಯದರ್ಶಿ ಗೊಂದಳಿ ಫಕೀರಪ್ಪ, ಗೊಂದಳಿ ರಾಘವೇಂದ್ರ, ಪೂಜಾರ್ ಸೋಮಣ್ಣ, ಮಾತಾ ಸೇವಾ ಟ್ರಸ್ಟ್ ಅಧ್ಯಕ್ಷ ಜಿ.ಶ್ರೀನಿವಾಸ್ ಶೆಟ್ಟಿ, ಜನನಿ ಸೇವಾ ಟ್ರಸ್ಟ್ ಅಧ್ಯಕ್ಷ ಯು ಕೇಶವಮೂರ್ತಿ, ಹರಿಜನ ಹುಲಗಪ್ಪ, ಬಂಟರ ಸೋಮನಾಥ, ಸಿದ್ದರ ಚಮಲಪ್ಪ, ಮಾರುತಿ, ಎಚ್.ಯಲ್ಲಪ್ಪ ಇದ್ದರು.



ಪಿಯು ಕಾಲೇಜಿನ ವಿದ್ಯಾರ್ಥಿಗಳಿಗೆ ಸನ್ಮಾನ

ಬೀದರ: ಭಾಲ್ಕಿ ತಾಲೂಕಿನ ಹಲಬರ್ಗಾ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ-1ನಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಎಂಟು ವಿದ್ಯಾರ್ಥಿಗಳನ್ನು ಕಾಲೇಜು ವತಿಯಿಂದ ಸನ್ಮಾನಿಸಲಾಯಿತು.

ಇತ್ತಿಚಿಗೆ ನಡೆದ ಕಾರ್ಯಕ್ರಮದಲ್ಲಿ ಅಗ್ರ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಗೌರವ ನೀಡಿ, ಪ್ರತಿಯೊಬ್ಬರಿಗೆ 500ರ ರೂ. ಕಿರು ಕಾಣಿಕೆ ನೀಡಲಾಯಿತು.

ಕಾಲೇಜು ಈ ವರ್ಷ ಒಟ್ಟು 86.36% ಫಲಿತಾಂಶ ದಾಖಲಿಸಿದ್ದು, ಈ ಸಾಧನೆಗೆ ಅವಿರತ ಶ್ರಮಿಸಿ, ವಿದ್ಯಾರ್ಥಿಗಳ ಬಗ್ಗೆ ಅಪಾರ ಕಾಳಜಿ ವಹಿಸಿ ಬೋಧನಾ ಕಾರ್ಯ ನಿರ್ವಹಿಸಿದ ಎಲ್ಲ ಉಪನ್ಯಾಸಕರಿಗೆ ಕಾಲೇಜು ಪ್ರಾಚಾರ್ಯರು ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದ್ದಾರೆ.

ಈ ಬಾರಿ ಅಗ್ರ ಶ್ರೇಣಿಯಲ್ಲಿ 8 ವಿದ್ಯಾರ್ಥಿಗಳು, ಪ್ರಥಮ ದರ್ಜೆಯಲ್ಲಿ 23 ವಿದ್ಯಾರ್ಥಿಗಳು ಹಾಗೂ ದ್ವಿತೀಯ ದರ್ಜೆಯಲ್ಲಿ 7 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಧನ್ನೂರು ಪೊಲೀಸ್ ಠಾಣೆಯ ಪಿಎಸ್‌ಐ ರಾಜಣ್ಣ, ಗ್ರಾಪಂ ಪಿಡಿಒ ಚಂದ್ರಕಾಂತ್ ಫುಲೆ, ಗ್ರಾಪಂ ಅಧ್ಯಕ್ಷೆ ಪದ್ಮಿನಿಬಾಯಿ ಠಾಕೂರ್, ಸದಸ್ಯರಾದ ದತ್ತು ಮೂಲಗೆ, ಶಿವಕುಮಾರ ಪಾಟೀಲ, ಪ್ರೇಮಕುಮಾರ ಪ್ರಭಾ, ಮಾರುತಿ ಸೂರ್ಯವಂಶಿ, ಜಿಲ್ಲಾ ಉಪನ್ಯಾಸಕರ ಸಂಘದ ಅಧ್ಯಕ್ಷ ಓಂಕಾರ ಸೂರ್ಯವಂಶಿ ಹಾಗೂ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ನಿಕಟಪೂರ್ವ ಕಾರ್ಯದರ್ಶಿ ರಾಜಶೇಖರ ಮಂಗಲಗಿ ಉಪಸ್ಥಿತರಿದ್ದರು.

ಕಾಲೇಜಿನ ಪ್ರಾಚಾರ್ಯ ಭಗವಾನ ಬಿರಾದಾರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಅಗ್ರ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು: ಪ್ರಿಯಾಂಕಾ (565 ಅಂಕ, 94.10%), ರೇಷ್ಮಾ (555, 92.5%), ಕೀರ್ತಿ (550, 91.66%), ಯಾಶಾಸಿನ್ (542, 90.33%), ವಿದ್ಯಾರಾಣಿ (527, 87.83%), ಸಾರಿಕಾ (519, 86.5%), ರೇಷ್ಮಾ (515, 85.85%) ಹಾಗೂ ಗುಂಡುಮಣಿ (515, 85.55%) ಉತ್ತಮ ಸಾಧನೆ ತೋರಿದ್ದಾರೆ.



ಡಾ.ಅಂಬೇಡ್ಕರ್ ಜನ್ಮದಿನೋತ್ಸವ

ಹೂವಿನಹಡಗಲಿ: ತಾಲೂಕಿನ ಆಡವಿಮಲ್ಲನಕೇರಿ ಗ್ರಾಮದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಹಾಗೂ ಹಸಿರು ಕ್ರಾಂತಿಯ ಹರಿಕಾರ, ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ ರಾಂ ಅವರ 119ನೇ ಜನ್ಮದಿನೋತ್ಸವ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಸಂಭ್ರಮ ಸಡಗರದಿಂದ ಆಚರಿಸಲಾಯಿತು.

ಡಿಎಸ್‌ಎಸ್ ಸಂಚಾಲಕಿ ಲಲಿತಮ್ಮ ಮಾತನಾಡಿ, ಅಸ್ಪೃಶ್ಯತೆಯ ಕಾರಣಕ್ಕೆ ಕುಡಿಯಲು ನೀರು ಸಿಗದೇ, ಓದುವ ವಿದ್ಯೆ ದೂರವಾಗಿ, ಜನರು ತಮ್ಮ ಹಕ್ಕುಗಳಿಗಾಗಿ ಒದ್ದಾಟ ನಡೆಸುತ್ತಿದ್ದ ಸಂದರ್ಭವನ್ನು ಕಣ್ಣಾರೆ, ಕಂಡು ತಾವೂ ಅದನ್ನು ಅನುಭವಿಸಿ ಮುಂದೆ ಶಿಕ್ಷಣ ಎಂಬ ಸಂಜೀವಿನಿಯ ಮೂಲಕವೇ ದೇಶದ ಜನರಿಗೆ ಅದರಲ್ಲೂ ಶೋಷಿತ ವರ್ಗದ ಜನರಿಗೆ ಸಮಾನ ಹಕ್ಕುಗಳನ್ನು ಒದಗಿಸುವ ಕೆಲಸವನ್ನು ಯಾರಾದರೂ ಮಾಡಿದ್ದರೆ ಅದು ಡಾ.ಅಂಬೇಡ್ಕರ್ ಎಂದು ಹೇಳಿದರು.

ಪಿಎಸ್‌ಐ ಅಬ್ಬಾಸ್, ಶಾಸ್ತ್ರಿಗಳಾದ ಎಚ್.ಎಂ.ಕೊಟ್ರಯ್ಯಸ್ವಾಮಿ, ಗ್ರಾಮದ ಸರ್ವ ದಲಿತ ಮುಖಂಡರು, ಯುವಕರು, ಮಹಿಳೆಯರು, ಮಕ್ಕಳು ಹಾಗೂ ಗ್ರಾಮಸ್ಥರು ಪಾಲ್ಗೊಂಡು ಜಯಂತ್ಯುತ್ಸವವನ್ನು ಯಶಸ್ವಿಗೊಳಿಸಿದರು.



ಕೇಂದ್ರದಿಂದ ಮಹಿಳೆಯರಿಗೆ ಅನೇಕ ಸೌಲಭ್ಯ

ಬಳ್ಳಾರಿ: ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ಮಹಿಳೆಯರಿಗೆ ಅನೇಕ ಸೌಲಭ್ಯಗಳನ್ನು ಕಲ್ಪಿಸಿದೆ. ಮುಂಬರುವ 2029ರ ಲೋಕಸಭೆ ಚುನಾವಣೆಯಲ್ಲಿ ಶೇ.33ರಷ್ಟು ಮಹಿಳಾ ಮೀಸಲಾತಿ ಮೂಲಕ ನಾರಿಶಕ್ತಿ ಸಂಸತ್‌ನಲ್ಲಿ ಶಕ್ತಿಯುತವಾಗಿ ಅಧಿಕಾರಕ್ಕೆ ಬರುವುದು ಪ್ರಧಾನಮಂತ್ರಿ ನರೇಂದ್ರ, ಮೋದಿ ಅವರಿಂದ, ಇದು ಪ್ರಧಾನಿ ಮೋದಿ ಅವರಿಗೆ ಮಹಿಳೆಯರಿಗಿರುವ ಕಾಳಜಿ, ಗೌರವ ಎಂದು ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ್ ಹೇಳಿದರು.

ನಗರದ ಸಂಗನಕಲ್ಲು ರಸ್ತೆಯ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ಮಹಿಳೆಯರಿಗೆ ಮೀಸಲಾತಿ ಜಾರಿಗೆ ತರಲು ಶುಕ್ರವಾರದಿಂದ ಸಂಸತ್ ಅಧಿವೇಶನ ಕರೆದಿದ್ದಾರೆ. ಇದು ಸಂಸತ್‌ನಲ್ಲಿ ಜಾರಿಗೆ ಬರುವುದು ಖಚಿತ ಎಂದರು.

ಮಹಿಳಾ ಮೀಸಲಾತಿ ಮಸೂದೆಗೆ ಲೋಕಸಭೆ, ರಾಜ್ಯಸಭೆಯಲ್ಲಿ ಸಾಕಷ್ಟು ಬಾರಿ ಮಹಿಳಾ ಮೀಸಲಾತಿ ಕುರಿತು ಚರ್ಚೆಗೆ ಬಂದರೂ ಅನುಷ್ಠಾನಕ್ಕೆ ಬಂದಿರಲಿಲ್ಲ. ಆದರೆ, ಸಂಸತ್ ಮತ್ತು ವಿಧಾನಸಭೆಗಳಲ್ಲಿ ಶೇ.33ರಷ್ಟು ಮೀಸಲಾತಿ ದೊರೆಯುವ ಕಾಲ ಸನ್ನಿಹಿತವಾಗಿದೆ. ಈ ಮೊದಲು ಸಂಸತ್‌ನಲ್ಲಿ ಶೇ.4ರಷ್ಟು ಮಹಿಳೆಯರಿದ್ದರು. ಇಲ್ಲಿನ ಬಸವರಾಜೇಶ್ವರಿ, ನಾಗಮ್ಮ ಕೇಶವ ಮೂರ್ತಿ ಅಂಥವರಿಂದ ನಮ್ಮಂತವರು ಪ್ರಭಾವಿತರಾಗಿ ರಾಜಕಾರಣಕ್ಕೆ ಬರಲು ಕಾರಣವಾಯಿತು. ಮಹಿಳಾ ಮೀಸಲಾತಿ ಬಗ್ಗೆ ದೇಶದ ಮಹಿಳೆಯರು ಉತ್ತಮ ಪ್ರತಿಕ್ರಿಯೆ ನೀಡುತ್ತಿದ್ದಾರೆ. ವಿರೋಧ ಪಕ್ಷಗಳ ನಾಯಕರ ವಿರೋಧಗಳ ಮಧ್ಯೆಯೇ ನಮ್ಮ ಎನ್‌ಡಿಎ ಸರ್ಕಾರ ಇದನ್ನು ಅನುಷ್ಠಾನಕ್ಕೆ ತಂದು 2029ರ ಲೋಕಸಭೆ ಚುನಾವಣೆ ವೇಳೆಗೆ ಮಹಿಳೆಯರು ತಮ್ಮ ಶೇ.33 ಮೀಸಲಾತಿ ಸೌಲಭ್ಯವನ್ನು ಪಡೆಯಲಿದ್ದೇವೆ. ಇದು ಅತ್ಯಂತ ಸಂತಸ ಮೂಡಿಸಿದೆ ಎಂದರು.

ಡಾ.ಅರುಣಾ ಕಾಮಿನೇನಿ, ಡಾ.ಸುಧಾ, ನ್ಯಾಯವಾದಿ ವಿಜಯಲಕ್ಷ್ಮೀ, ಮಂಜುನಾಥ್ ಅಲೀವೇಲು, ಸಾಧನಾ ಹಿರೇಮಠ, ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಹಂಪಿ ರಮಣ, ನಿಕಟಪೂರ್ವ ಅಧ್ಯಕ್ಷೆ ಸುಗುಣ ಸೇರಿದಂತೆ ಇತರರಿದ್ದರು.

